
ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಭಾನುವಾರದ ಪುರವಣಿ
ಕಪ್ಪತ್ತಗುಡ್ಡದಲ್ಲಿ ಚಿಂಕಾರಗಳು ಪತ್ತೆಯಾಗಿವೆ, ಕ್ಯಾಮೆರಾ ಟ್ರ್ಯಾಪ್‌ನಲ್ಲಿ ಅಲ್ಲಿನ ಜೀವಸಂಕುಲದ ವೈವಿಧ್ಯ ಸೆರೆಯಾಗಿರುವುದು ಶುಭಸೂಚಕ

ಬೆಂಗಳೂರಲ್ಲಷ್ಟೇ ನೇಮಕಾತಿ ಪರೀಕ್ಷೆ 4A
ಯೋಜನೆ ಮುಂದುವರಿಸಲು ಆದೇಶಕ್ಕೆ ಕಾದಿರುವ ಅಧಿಕಾರಿಗಳು
'ರಾಹುಲ್‌ಗೆ ವಧು ಹುಡುಕಿ' 4B
'ರೈತ ವಿದ್ಯಾನಿಧಿ' ಮೇಲೆ ಕಾರ್ಮೋಡ! 5

ಕೋಟ್ಯಂತರ ಮೊತ್ತದ ವಹಿವಾಟಿನ ಮೇಲೆ ಕಾರ್ಮೋಡ • ನಿಂತ ನೀರಾದ ಕಡಲ ಮಕ್ಕಳ ಬದುಕು

ಮೀನುಗಾರಿಕೆಗೆ 'ಮಳೆಗಾಲ'ದ ಬರೆ

ಅಂಕಿಅಂಶ				
7,283	1,392	14,735	2,11,101	3,06,096
ಟ್ರಾಲರ್ ಬೋಟುಗಳು	ಪರ್ಸಿನ್ ಬೋಟುಗಳು	ನಾಡದೋಣಿಗಳು	ನೋಂದಾಯಿತ ಮೀನುಗಾರರು	ಮೀನುಗಾರಿಕೆಯಲ್ಲಿ ತೊಡಗಿರುವ ಕಾರ್ಮಿಕರು

• ಗಣೇಶ ಚಂದನಶಿವ

ಮಂಗಳೂರು: ಅದು ಜುಲೈ ಎಂಟನೇ ತಾರೀಕು. ತಮಿಳುನಾಡಿನ ರಾಮನಾಥಪುರಂ ಜಿಲ್ಲೆಯ ಉಚ್ಚಿಪ್ಪುಳಿ ಗ್ರಾಮದ ಉದಯ ಕುಮಾರ್ ಅವರ ಮನೆಯಲ್ಲಿ ಸಂಭ್ರಮ. ಕಡಲಿನ ಆಳಕ್ಕೆ ಬಲೆ ಹಾಕಿ ಮೀನು ಹಿಡಿದು ಮಂಗಳೂರಿನ ದಕ್ಕೆಗೆ ತಂದು ಸುರಿಯುವ ಉದಯ ಕುಮಾರ್, ಊರಿಗೆ ಮರಳಿದ್ದಾರೆ. ಇದೇ ಸಂದರ್ಭದಲ್ಲಿ ಹೊಸ ಮನೆಯ ಕೆಲಸ ಪೂರ್ಣಗೊಂಡಿತ್ತು. ಊರಿಡೀ ಸಂಭ್ರಮಿಸಿದ್ದ ಗೃಹಪ್ರವೇಶದ ಖುಷಿಯಲ್ಲಿ ಉದಯ್ ಕುಮಾರ್ 'ಕ್ಯಾಪ್ಟನ್' ಆಗಿರುವ ಬೋಟ್‌ನ ಮಾಲೀಕ, ಮಂಗಳೂರಿನ ರಾಜೇಶ್ ಪುತ್ರನ್ ಅವರೂ ಪಾಲ್ಗೊಂಡಿದ್ದರು.

ಅದೇ ದಿನ, ಅತ್ತ ಛತ್ತೀಸ್‌ಗಡದ ಜಸ್‌ಪುರ್ ಜಿಲ್ಲೆಯ ಬಾರ್ಟೋಲಿ ಗ್ರಾಮದ ಮದುವೆ ಮನೆಯೊಂದನ್ನು ವಿದ್ಯುತ್ ದೀಪಗಳಿಂದ ಅಲಂಕರಿಸುವ ಕೆಲಸದಲ್ಲಿ ತೊಡಗಿದ್ದರು ಮನ್ನು ತಿರ್ಕಿ. ಮಂಗಳೂರಿನ ದಕ್ಕೆಯಲ್ಲಿ ನಾಟು ಎಂಬ ಅಡ್ಡ ಹೆಸರಿನಿಂದ ಕರೆಯಲಾಗುವ ಅವರು ರೊನಾಲ್ಡ್ ಪಿಂಟೊ ಅವರ ಬೋಟ್‌ನಲ್ಲಿ ಮೀನು ಹಿಡಿಯುವ ಕೆಲಸ ಮಾಡುತ್ತಿದ್ದಾರೆ. ಮಂಗಳೂರಿನ ಸಮುದ್ರದಲ್ಲಿ ಮೀನುಗಾರಿಕೆ ಬೋಟ್‌ನ ಕ್ಯಾಪ್ಟನ್ (ಚಾಲಕ) ಆಗಿರುವ ಆಂಧ್ರ ಪ್ರದೇಶದ ನೆಲ್ಲೂರಿನ ನವೀನ್ ರಜೆಯಲ್ಲಿ ಊರಿಗೆ ಹೋದರೂ ಮೀನುಗಾರಿಕೆ ವೃತ್ತಿಯನ್ನೇ ಮಾಡುತ್ತಾರೆ.

ಉಡುಪಿಯ ಮಲ್ಪೆ ಮೀನುಗಾರಿಕಾ ದಕ್ಕೆಯಲ್ಲಿ ಹಲವು ವರ್ಷಗಳಿಂದ ಬೋಟ್‌ಗಳಿಂದ ಮೀನು ಇಳಿಸುವ ಕೆಲಸ ಮಾಡುವ ಕೊಪ್ಪಳದ ಹುಲಿಗೆಪ್ಪ, 'ನಿತ್ಯವೂ ಕನಿಷ್ಠ ₹1,500 ಗಳಿಕೆ ಇದೆ' ಎಂದು ಹೇಳಿ ಖುಷಿಪಡುತ್ತಿದ್ದ ಅವರೀಗ, ಊರಿನಲ್ಲಿ ಕೂಲಿ ಮಾಡುತ್ತಿದ್ದಾರೆ.

ಕಾರವಾರದ ಬೈತಕೋಲದ ಮೀನುಗಾರಿಕೆ ಬಂದರಿನಲ್ಲಿ ಪರ್ಸಿನ್ ಬೋಟ್‌ವೊಂದರ ತಳಪಾಯದಲ್ಲಿ ಕಟ್ಟಿಕೊಂಡಿದ್ದ ಪಾಚಿಯನ್ನು ಕಬ್ಬಿಣದ ಸಲಾಕೆಯಿಂದ ಕೀಳುತ್ತಿದ್ದ ಜಾರ್ಖಂಡ್ ರಾಜ್ಯದ ಹಜಾರಿಬಾಗ್ ಜಿಲ್ಲೆಯ 'ವಿಜಿ', 'ದುಡಿದಷ್ಟು ದಿನ ನಮಗೆ ಆದಾಯ. ಒಂದು ವೇಳೆ ಸಮುದ್ರಕ್ಕೆ ಬಿದ್ದು ಸತ್ತರೆ ಬಿಡಿಗಾಸೂ ಸಿಗದು. ನಮ್ಮೂರಿನ ಒಬ್ಬ ಕಾರ್ಮಿಕರು ಎರಡು ವರ್ಷ ಹಿಂದೆ ಸತ್ತಾಗ ಅವರ ಮನೆಯವರ ಕಷ್ಟ ನೋಡಿದ್ದೇನೆ. ಆದರೆ ಏನು ಮಾಡುವುದು, ಹೊಟ್ಟೆಪಾಡಿಗೆ ಕೆಲಸ ಮಾಡಲೇಬೇಕು' ಎನ್ನುತ್ತ ಕಾಯಕದಲ್ಲಿ ಮಗ್ನರಾದರು.

4ನೇ ಪುಟ ನೋಡಿ

ಒಳನೋಟ
ಮತ್ಸ್ಯೋದ್ಯಮದ ತಳಮಳ
ಪ್ರತಿಕ್ರಿಯಿಸಿ: 9606038256
feedback@prajavani.co.in

> **ಹೊಸ ಸರ್ಕಾರ ಬಂದಿದೆ. ಮುಂದಿನ ಋತುವಿನಲ್ಲಿ ಎಲ್ಲ ಯೋಜನೆಗಳು ಕಾರ್ಯಗತವಾಗಿ ಮೀನುಗಾರರ ಸಮಸ್ಯೆಗಳು ಪರಿಹಾರ ಕಾಣುವ ಭರವಸೆ ಇದೆ**
> **ಚೇತನ್ ಬೆಂಗ್ರೆ,** ಟ್ರಾಲ್ ಬೋಟ್ ಮಾಲೀಕರ ಸಂಘದ ಅಧ್ಯಕ್ಷ, ಮಂಗಳೂರು



ಆಳ ಸಮುದ್ರದಲ್ಲಿ ಮೀನುಗಾರಿಕೆ ನಿರ್ಬಂಧಿಸಿರುವ ಕಾರಣ ಮಂಗಳೂರಿನ ದಕ್ಕೆಯಲ್ಲಿ ಮೀನುಗಾರರು ಬಲೆ ನಿರ್ವಹಣೆಯಲ್ಲಿ ತೊಡಗಿರುವುದು ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್.

ರಾಜ್ಯದಲ್ಲಿ 563 ಹುಲಿಗಳು

ಹುಲಿ ವರದಿ ಬಿಡುಗಡೆ • ಮಧ್ಯಪ್ರದೇಶ ಮತ್ತೆ ನಂ. 1

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ ಹುಲಿಗಳ ಸಂಖ್ಯೆ 700ರಷ್ಟು ಹೆಚ್ಚಾಗಿದ್ದು, ಒಟ್ಟು ಹುಲಿಗಳ ಸಂಖ್ಯೆ 3,682ಕ್ಕೆ ಏರಿದೆ. 563 ಹುಲಿಗಳನ್ನು ಹೊಂದುವ ಮೂಲಕ ಕರ್ನಾಟಕ ರಾಜ್ಯವು ಮತ್ತೆ ಎರಡನೇ ಸ್ಥಾನಕ್ಕೆ ಸಮಾಧಾನಪಟ್ಟುಕೊಂಡಿದೆ.

ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವಾಲಯವು 'ಅಖಿಲ ಭಾರತ ಹುಲಿಗಳ ಅಂದಾಜು-2022' ಕುರಿತ ವಿವರವಾದ ವರದಿಯನ್ನು ಶನಿವಾರ ಬಿಡುಗಡೆ ಮಾಡಿದೆ. ಭಾರತವು ಪ್ರಸ್ತುತ ಪ್ರಪಂಚದ ಸುಮಾರು ಶೇ 75ರಷ್ಟು ಕಾಡು ಹುಲಿಗಳನ್ನು ಹೊಂದಿದೆ.

2018ರ ಗಣತಿಯ ಪ್ರಕಾರ, ಕರ್ನಾಟಕದಲ್ಲಿ 524 ಹುಲಿಗಳು ಇದ್ದವು. ಮೊದಲ ಸ್ಥಾನದಲ್ಲಿದ್ದ ಮಧ್ಯ-ಪ್ರದೇಶದಲ್ಲಿ 526 ಹುಲಿಗಳು ಇದ್ದವು. ಈಗಿನ ವರದಿಯ ಪ್ರಕಾರ, ಮಧ್ಯ ಪ್ರದೇಶದಲ್ಲಿ ಅವುಗಳ ಸಂಖ್ಯೆ 785ಕ್ಕೆ ಜಿಗಿದಿದೆ. ಮೂರನೇ ಸ್ಥಾನದಲ್ಲಿರುವ ಉತ್ತರಾಖಂಡ-ದಲ್ಲಿ 2018ರಲ್ಲಿ 444 ಹುಲಿಗಳು ಇದ್ದರೆ, ಈಗ ಅವುಗಳ ಸಂಖ್ಯೆ 560ಕ್ಕೆ ಏರಿದೆ. ಸಣ್ಣ ರಾಜ್ಯ ಉತ್ತರಾಖಂಡವು ಕರ್ನಾಟಕದ ಸನಿಹಕ್ಕೆ ಬಂದಿದೆ.



ಮಧ್ಯ ಭಾರತ, ಶಿವಾಲಿಕ್ ಬೆಟ್ಟ, ಗಂಗಾ ಬಯಲು ಪ್ರದೇಶಗಳಲ್ಲಿ ಹುಲಿಗಳ ಸಂಖ್ಯೆ ಗಣನೀಯ ಹೆಚ್ಚಳ ಆಗಿದೆ. ಮಧ್ಯಪ್ರದೇಶ, ಉತ್ತರಾಖಂಡ ಹಾಗೂ ಮಹಾರಾಷ್ಟ್ರದಲ್ಲಿ ಅವುಗಳ ಸಂಖ್ಯೆ ಗಮನಾರ್ಹ ಹೆಚ್ಚಳ ಆಗಿದೆ. ಆದರೆ, ಪಶ್ಚಿಮ ಘಟ್ಟದಲ್ಲಿ ಅವುಗಳ ಸಂಖ್ಯೆ ಸ್ಥಳೀಯವಾಗಿ ಕುಸಿತ ಆಗಿದೆ. ಈ ಪ್ರದೇಶದಲ್ಲಿ ಉದ್ದೇಶಿತ ಮೇಲ್ವಿಚಾರಣೆ ಹಾಗೂ ಸಂರಕ್ಷತಾ ಪ್ರಯತ್ನಗಳು ಅಗತ್ಯ ಎಂದು ಪರಿಸರ ಸಚಿವಾಲಯ ಒತ್ತಿ ಹೇಳಿದೆ.

ಕಾರ್ಬೆಟ್ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಅತೀ ಹೆಚ್ಚು ಹುಲಿಗಳು (260) ಇವೆ.

5ನೇ ಪುಟ ನೋಡಿ

ಬಿಜೆಪಿಗೆ ಹೊಸ ತಂಡ: ರಾಷ್ಟ್ರೀಯ ಹುದ್ದೆಯಿಂದ ಸಿ.ಟಿ. ರವಿ ಎತ್ತಂಗಡಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಂಬರುವ ಲೋಕಸಭಾ ಚುನಾವಣೆ ಹಾಗೂ ಐದು ರಾಜ್ಯಗಳ ವಿಧಾನಸಭಾ ಚುನಾವಣೆಯನ್ನು ದೃಷ್ಟಿ-ಯಲ್ಲಿರಿಸಿಕೊಂಡು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಪಕ್ಷದ ಕೇಂದ್ರ ಪದಾಧಿಕಾರಿಗಳ ತಂಡವನ್ನು ಶನಿವಾರ ಪುನರ್ ರಚನೆ ಮಾಡಿದ್ದಾರೆ.

ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹುದ್ದೆಯಿಂದ ಕರ್ನಾಟಕದ ಒಕ್ಕಲಿಗ ನಾಯಕ ಸಿ.ಟಿ.ರವಿ ಅವರನ್ನು ಕೈಬಿಡಲಾಗಿದೆ. ಕರ್ನಾಟಕದವರೇ ಆದ ಮತ್ತೊಬ್ಬ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಬಿ.ಎಲ್. ಸಂತೋಷ್ ಅವರನ್ನು ಹುದ್ದೆಯಲ್ಲಿ ಮುಂದುವರಿಸಲಾಗಿದೆ.



ಸಿ.ಟಿ.ರವಿ

ಮೇ ತಿಂಗಳಲ್ಲಿ ನಡೆದ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ 65 ಸ್ಥಾನಗಳನ್ನು ಗಳಿಸಿ ಬಿಜೆಪಿ ಹೀನಾಯವಾಗಿ ಸೋತಿತ್ತು. ಚುನಾವಣೆ ಮುಗಿದು ಎರಡು ತಿಂಗಳುಗಳು ಕಳೆದರೂ ವಿಧಾನಸಭೆ ಹಾಗೂ ವಿಧಾನ ಪರಿಷತ್‌ನ ವಿರೋಧ ಪಕ್ಷ ನಾಯಕರನ್ನು ಪಕ್ಷದ ಹೈಕಮಾಂಡ್ ನೇಮಕ ಮಾಡಿಲ್ಲ. ರವಿ ಅವರನ್ನು 'ರಾಷ್ಟ್ರೀಯ' ಹುದ್ದೆಯಿಂದ ಕೈ ಬಿಡುವ ಮೂಲಕ ಪಕ್ಷದ ರಾಷ್ಟ್ರೀಯ ನಾಯಕರು ರಾಜ್ಯ ನಾಯಕರಿಗೆ ಮತ್ತೊಮ್ಮೆ ಬಿಸಿ ಮುಟ್ಟಿಸಿದ್ದಾರೆ. ಕೇಂದ್ರ ಪದಾಧಿಕಾರಿಗಳ ಪಟ್ಟಿಯಲ್ಲಿ ಹೊಸದಾಗಿ ರಾಜ್ಯದ ಯಾವುದೇ ನಾಯಕರಿಗೆ ಸ್ಥಾನ ಸಿಕ್ಕಿಲ್ಲ. ಪಕ್ಷದ ಕೇಂದ್ರ ಸಂಸದೀಯ ಮಂಡಳಿಯಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ. ಹಾಗಾಗಿ, ಸದಸ್ಯರಾಗಿ ಬಿ.ಎಸ್.ಯಡಿಯೂರಪ್ಪ ಮುಂದುವರಿ-ಯಲಿದ್ದಾರೆ.

ಬಿ.ಎಲ್.ಸಂತೋಷ್ ಅವರಿಗೆ ಪರಮಾಪ್ತರಾಗಿರುವ ರವಿ ಅವರನ್ನು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿ 2020ರಲ್ಲಿ ನೇಮಕ ಮಾಡಲಾಗಿತ್ತು. ಅವರಿಗೆ ಮಹಾರಾಷ್ಟ್ರ, ತಮಿಳುನಾಡು ಹಾಗೂ ಗೋವಾ ರಾಜ್ಯಗಳ ಉಸ್ತುವಾರಿ ವಹಿಸಲಾಗಿತ್ತು. ಅವರು ವಿಧಾನಸಭಾ ಚುನಾವಣೆಯಲ್ಲಿ (ಚಿಕ್ಕಮಗಳೂರು) ಸೋತಿದ್ದಾರೆ.

5ನೇ ಪುಟ ನೋಡಿ

400 ಸಸಿಗಳನ್ನು ನೆಡುವ 'ಶಿಕ್ಷೆ'

ನವದೆಹಲಿ (ಪಿಟಿಐ): ಪರಸ್ಪರ ಬಡಿದಾಡಿಕೊಂಡು ನಂತರ ವ್ಯಾಜ್ಯ ಬಗೆಹರಿಸಿಕೊಂಡಿದ್ದ ಎರಡು ಕುಟುಂಬಗಳ ಸದಸ್ಯರಿಗೆ, '400 ಸಸಿಗಳನ್ನು ನೆಟ್ಟು ನಿಮ್ಮೊಳಗಿನ 'ನಕಾರಾತ್ಮಕ ಶಕ್ತಿ'ಯನ್ನು ಕೊನೆಗಾಣಿಸಿಕೊಳ್ಳಿ' ಎಂದು ದೆಹಲಿ ಹೈಕೋರ್ಟ್ ಸೂಚಿಸಿದೆ. 6

ಮಣಿಪುರ: 'ಇಂಡಿಯಾ' ಸಂಸದರ ಭೇಟಿ

ಗುವಾಹಟಿ: ಸಂಘರ್ಷಪೀಡಿತ ಮಣಿಪುರ ರಾಜ್ಯದ ವಿವಿಧ ಪ್ರದೇಶಗಳಿಗೆ ಶನಿವಾರ ತೆರಳಿದ್ದ ವಿರೋಧ ಪಕ್ಷಗಳ ಮೈತ್ರಿಕೂಟ 'ಇಂಡಿಯಾ'ದ 18 ಸಂಸದರು, ಸಂತ್ರಸ್ತರನ್ನು ಭೇಟಿಯಾಗಿ ಸಾಂತ್ವನ ಹೇಳಿದ್ದು, ವಸ್ತುಸ್ಥಿತಿಯ ವಿವರ ಪಡೆದರು. 7

ಬೆಂಗಳೂರಿನ ಸೇಂಟ್ ಜಾನ್ಸ್–ಕೆನಡಾದ ಸಂಸ್ಥೆ ಪ್ರಯೋಗ

ಹೃದ್ರೋಗ ತಡೆಗೆ ಒಂದೇ ಮಾತ್ರೆ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೃದಯ ಸಂಬಂಧಿ ನಾಲ್ಕು ಸಮಸ್ಯೆಗಳ ನಿಯಂತ್ರಣಕ್ಕೆ ನಾಲ್ಕು ಮಾತ್ರೆಗಳ ಬದಲು, ಈ ಎಲ್ಲ ಸತ್ವಗಳನ್ನು ಒಳಗೊಂಡ 'ಪಾಲಿಪಿಲ್' ಎಂಬ ಒಂದೇ ಮಾತ್ರೆಯನ್ನು ಇನ್ನು ಬಳಸಬಹುದು.



ನಗರದ ಸೇಂಟ್ ಜಾನ್ಸ್ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಹಾಗೂ ಕೆನಡಾದ ಜನಸಂಖ್ಯಾ ಆರೋಗ್ಯ ಸಂಶೋಧನಾ ಸಂಸ್ಥೆಗಳು ಜಂಟಿಯಾಗಿ ನಡೆಸಿದ ಅಧ್ಯಯನದ ಆಧಾರದ ಮೇಲೆ ವಿಶ್ವ ಆರೋಗ್ಯ ಸಂಸ್ಥೆ ಅಗತ್ಯ ಔಷಧಿಗಳ ಪಟ್ಟಿಯಲ್ಲಿ ಈ ಮಾತ್ರೆಯನ್ನು ಸೇರಿಸಿದೆ. ಇದು ಹೃದ್ರೋಗ ಸಂಬಂಧಿ ಕಾಯಿಲೆಗಳಿಂದ ಸಂಭವಿಸುವ ಮರಣದ ಸಾಧ್ಯತೆಗಳನ್ನು ತಡೆಯುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ನಾಲ್ಕು ಮಾತ್ರೆಗಳು ಸಂಯೋಜನೆಯಲ್ಲಿ ಸಾಮಾನ್ಯ ರಕ್ತದೊತ್ತಡ ಕಡಿಮೆ ಮಾಡುವ ಮೂರು ಔಷಧಗಳು ಮತ್ತು ಕೊಬ್ಬಿನಾಂಶ ನಿಯಂತ್ರಿಸುವ ಒಂದು ಔಷಧವನ್ನು ಒಳಗೊಂಡಿರುತ್ತದೆ.

ಹಲವು ಭಾರತೀಯರು ಅಧಿಕ ರಕ್ತದೊತ್ತಡ ಮತ್ತು ಕೊಬ್ಬಿನಾಂಶಗಳ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಇದನ್ನು ನಿಯಂತ್ರಿಸಲು ಅಧಿಕ ರಕ್ತದೊತ್ತಡ, ರಕ್ತವನ್ನು ತಿಳಿಗೊಳಿಸುವ ಹಾಗೂ ಕೊಬ್ಬಿನಾಂಶ ಕುಗ್ಗಿಸುವುದಕ್ಕೆ ತಮ್ಮ ಜೀವಿತಾವಧಿಯುದ್ದಕ್ಕೂ ಬಹು ಮಾತ್ರೆಗಳನ್ನು ನಿರಂತರವಾಗಿ ತೆಗೆದುಕೊಳ್ಳುತ್ತಿದ್ದಾರೆ. ಅದಕ್ಕಾಗಿ ಅಧಿಕ ಹಣವನ್ನು ವ್ಯಯ ಮಾಡುತ್ತಿದ್ದಾರೆ. ಈ ಎಲ್ಲ ಸತ್ವಗಳನ್ನು ಒಳಗೊಂಡ ಒಂದೇ ಮಾತ್ರೆಯನ್ನು ಬಳಸುವುದರಿಂದ ಖರ್ಚನ್ನು ಕಡಿಮೆ ಮಾಡಲು ಹಾಗೂ ಹೆಚ್ಚು ಸಂಖ್ಯೆಯ ಮಾತ್ರೆಗಳನ್ನು ತೆಗೆದುಕೊಳ್ಳುವ ತೊಂದರೆಯನ್ನು ನಿವಾರಿಸಲು ಸಾಧ್ಯವಾಗಲಿದೆ ಎಂದು ತಜ್ಞರು ಹೇಳಿದ್ದಾರೆ.

'ಪಾಲಿಪಿಲ್ ಮಾತ್ರೆಯನ್ನು ಭಾರತದ ಅಗತ್ಯ ಔಷಧಿಗಳ ಪಟ್ಟಿಯಲ್ಲಿ, ನಂತರ ದೇಶದ ಸಾರ್ವಜನಿಕ ಆರೋಗ್ಯ ಕಾರ್ಯಕ್ರಮಗಳಲ್ಲೂ ಬಳಸುವ ಸಾಧ್ಯತೆ ಇದೆ. ಇದು ಹೊಸ ಔಷಧವಲ್ಲ, ಆದರೆ, ಇದು ಮೊದಲೇ ಇದ್ದ ಔಷಧಗಳ ಸಂಯೋಜನೆ' ಎನ್ನುತ್ತಾರೆ ಸೇಂಟ್ ಜಾನ್ಸ್ ಕಾಲೇಜಿ ಔಷಧ ಮತ್ತು ವೈದ್ಯಕೀಯ ಸಂಶೋಧನೆಯ ಮುಖ್ಯಸ್ಥ ಡಾ ಡೆನಿಸ್ ಕ್ಸೇವಿಯರ್.

ಒಳ ಪುಟ



'ಸಂವಿಧಾನ ಓದು ಕಡ್ಡಾಯಗೊಳಿಸಿ' 5

ಹಾಸ್ಟೆಲ್ ಬಾಡಿಗೆಗೆ ಶೇ 12 ಜಿಎಸ್‌ಟಿ

ನವದೆಹಲಿ (ಪಿಟಿಐ): ಹಾಸ್ಟೆಲ್ ಬಾಡಿಗೆಗೆ ಶೇ 12ರಷ್ಟು ಜಿಎಸ್‌ಟಿ ಅನ್ವಯಿಸಲಿದೆ ಎಂದು ಅಥಾರಿಟಿ ಫಾರ್ ಅಡ್ವಾನ್ಸ್ ರೂಲಿಂಗ್ (ಎಎಆರ್) ಹೇಳಿದೆ. ಇದರಿಂದಾಗಿ ಹಾಸ್ಟೆಲ್ ವಿದ್ಯಾರ್ಥಿಗಳು ಬಾಡಿಗೆ ಪಾವತಿಸುವ ಮೊತ್ತ ಹೆಚ್ಚಾಗಲಿದೆ. ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಎಎಆರ್ ಈ ಸ್ಪಷ್ಟನೆ ನೀಡಿದೆ.

ಹಾಸ್ಟೆಲ್‌ಗಳು ವೈಯಕ್ತಿಕ ವಾಸಕ್ಕೆ ಬಳಸುವ ಮನೆಗಳಲ್ಲ. ಹೀಗಾಗಿ ಜಿಎಸ್‌ಟಿಯಿಂದ ವಿನಾಯಿತಿ ಇಲ್ಲ ಎಂದು ಎಎಆರ್‌ನ ಬೆಂಗಳೂರು ಪೀಠವು ಹೇಳಿದೆ.

ಶ್ರೀ ಸಾಯಿ ಲಕ್ಷುರಿಯಸ್ ಸ್ಟೇ ಎಲ್‌ಎಲ್‌ಪಿ ಕಂಪನಿಯು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಪೀಠವು, ಹಾಸ್ಟೆಲ್, ಕ್ಲಬ್, ಕ್ಯಾಂಪ್‌ಸೈಟ್‌ಗಳು ವಸತಿ ಸೇವೆ ಒದಗಿಸುವುದಕ್ಕೆ ದಿನಕ್ಕೆ ₹1 ಸಾವಿರಕ್ಕಿಂತ ಕಡಿಮೆ ಶುಲ್ಕ ವಿಧಿಸಿದರೆ ಅದಕ್ಕೆ 2022ರ ಜುಲೈ 17ರವರೆಗೆ ಜಿಎಸ್‌ಟಿಯಿಂದ ವಿನಾಯಿತಿ ನೀಡಲಾಗಿತ್ತು ಎಂದು ಹೇಳಿದೆ.

6ನೇ ಪುಟ ನೋಡಿ

ಚಿನಕುರಳಿ
ಪ್ರಕಾಶ್ ಶೆಟ್ಟಿ



ಕೆಂಗೇರಿ– ಚಲ್ಲಘಟ್ಟ ಮೆಟ್ರೊ ಪ್ರಾಯೋಗಿಕ ಸಂಚಾರಕ್ಕೆ ಚಾಲನೆ

ಬೆಂಗಳೂರು: ಮೂರು ದಿನಗಳ ಹಿಂದೆ ಕೆ.ಆರ್.ಪುರ–ಬೈಯಪ್ಪನಹಳ್ಳಿ ನಡುವೆ ಮೆಟ್ರೊ ಪ್ರಾಯೋಗಿಕ ಸಂಚಾರ ಆರಂಭಿಸಿದ್ದ ಬಿಎಂಆರ್‌ಸಿಎಲ್ ಶನಿವಾರ ಕೆಂಗೇರಿ–ಚಲ್ಲಘಟ್ಟ ನಡುವೆ ಪ್ರಾಯೋಗಿಕ ಸಂಚಾರಕ್ಕೆ ಚಾಲನೆ ನೀಡಿದೆ.

ಬೆಳಿಗ್ಗೆ 11.27ರಿಂದ ಸಂಜೆ 4.15ರ ವರೆಗೆ ಹಲವು ಬಾರಿ ರೈಲು ಸಂಚರಿಸಿತು. ರೈಲಿನಲ್ಲಿ ಬಿಎಂಆರ್‌ಸಿಎಲ್ ತಾಂತ್ರಿಕ ತಂಡ ಸಂಚರಿಸಿ ಪರಿಶೀಲಿಸಿತು.

ನೇರಳೆ ಮಾರ್ಗದಲ್ಲಿನ ವಿಸ್ತರಿತ ಕಾಮಗಾರಿ ಇದಾಗಿದ್ದು, ಬೈಯಪ್ಪನಹಳ್ಳಿ –ಕೆ.ಆರ್. ಪುರ ನಡುವೆ 2.5 ಕಿ.ಮೀ. ಹಾಗೂ ಕೆಂಗೇರಿ–ಚಲ್ಲಘಟ್ಟದ ನಡುವೆ 1.9 ಕಿ.ಮೀ ಕಾಮಗಾರಿ ಬಾಕಿ ಉಳಿದಿತ್ತು. ಎರಡೂ ಕಡೆಗಳಲ್ಲಿ ಕಾಮಗಾರಿ ಮುಗಿದಿದೆ. ಕೆಲ ದಿನಗಳು ಪ್ರಾಯೋಗಿಕ ಸಂಚಾರ ನಡೆಸಿ, ಎಲ್ಲ ತಾಂತ್ರಿಕ ತೊಂದರೆಗಳು ಬಗೆಹರಿದ ಬಳಿಕ ಆಗಸ್ಟ್ ಅಂತ್ಯದ ಒಳಗೆ ವಾಣಿಜ್ಯ ಸಂಚಾರ ಆರಂಭಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆಂಧ್ರಪ್ರದೇಶದ ರಾಜ್ಯಪಾಲ ಎಸ್.ಅಬ್ದುಲ್ ನಜೀರ್ ಕರೆ
'ನ್ಯಾಯದ ಭರವಸೆ ಮೂಡಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನೊಂದವರಿಗೆ ನ್ಯಾಯ ಸಿಗಲಿದೆ ಎಂಬ ಭರವಸೆಯನ್ನು ವಕೀಲರು ಮೂಡಿಸಬೇಕು' ಎಂದು ಆಂಧ್ರಪ್ರದೇಶದ ರಾಜ್ಯಪಾಲ ಎಸ್. ಅಬ್ದುಲ್ ನಜೀರ್ ಸಲಹೆ ನೀಡಿದರು.

ರಾಮಯ್ಯ ಕಾನೂನು ಕಾಲೇಜಿನಲ್ಲಿ ಶನಿವಾರ ನಡೆದ ಕಾಲೇಜಿನ ಬೆಳ್ಳಿ ಮಹೋತ್ಸವದಲ್ಲಿ ಅವರು ಮಾತನಾಡಿದರು.

'ಬಡವರ ಪರವಾಗಿ ವಕೀಲರು ವಕಾಲತ್ತು ವಹಿಸಬೇಕು. ಕಾನೂನು ಎಲ್ಲರಿಗೂ ಒಂದೇ ಎಂಬ ಅಭಿಪ್ರಾಯವನ್ನು ಸಾರ್ವಜನಿಕರಲ್ಲಿ ಮೂಡಿಸಬೇಕು. ಕಾನೂನು ಸೇವಾ ಪ್ರಾಧಿಕಾರಕ್ಕೆ ಮತ್ತಷ್ಟು ಬಲ ತುಂಬಬೇಕು' ಎಂದು ಕರೆ ನೀಡಿದರು.

'ಈಗಿನ ಕಾಲಘಟ್ಟದಲ್ಲಿ ಮಹಿಳೆಯರು ಹೆಚ್ಚು ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ. ಲೈಂಗಿಕ ಕಿರುಕುಳದ ಪ್ರಕರಣಗಳೂ ಹೆಚ್ಚುತ್ತಿವೆ. ನೊಂದ ಮಹಿಳೆಯರಿಗೆ ನ್ಯಾಯ ಒದಗಿಸಿಕೊಡಬೇಕು. ಅವರಲ್ಲಿ ನಂಬಿಕೆ ಮೂಡಿಸಿದರೆ, ಕಾನೂನಿನ ಮೇಲೆ ಇತರರಿಗೂ ನಂಬಿಕೆ ಹೆಚ್ಚಾಗುತ್ತದೆ' ಎಂದರು.

ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಬಿ.ವಿ.ನಾಗರತ್ನ ಮಾತನಾಡಿ, 'ರಾಜ್ಯದಲ್ಲಿರುವ ಕಾನೂನು ಸೇವಾ ಪ್ರಾಧಿಕಾರವು ಜನರಿಗೆ ಹತ್ತಿರವಾಗಿ ಕೆಲಸ ಮಾಡಬೇಕು. ನ್ಯಾಯಮೂರ್ತಿಗಳು ಪ್ರಾಧಿಕಾರದ ಮೇಲ್ವಿಚಾರಣೆ ನಡೆಸಬೇಕು. ಜಿಲ್ಲೆ, ತಾಲ್ಲೂಕು ಪ್ರಾಧಿಕಾರದಲ್ಲಿ ಏನು ನಡೆಯುತ್ತಿದೆ. ಜನರಿಂದ ಹಣ ವಸೂಲಿ ಮಾಡಲಾಗುತ್ತಿದೆಯೇ ಎಂಬುದರ ಕುರಿತು ಮೇಲ್ವಿಚಾರಣೆ ನಡೆಸಬೇಕು' ಎಂದರು.

ರಾಮಯ್ಯ ಕಾನೂನು ಕಾಲೇಜಿನ ನಿರ್ದೇಶಕ ಎಂ.ಆರ್. ಆನಂದರಾಮ್ ಮಾತನಾಡಿ, '1995ರಲ್ಲಿ ಕಾನೂನು ಕಾಲೇಜು ಆರಂಭ ಮಾಡಿದ್ದರ ಉದ್ದೇಶವೇ ಸಮಾಜಕ್ಕೆ ಉತ್ತಮ ವಕೀಲರನ್ನು ಸೃಷ್ಟಿಸುವುದಾಗಿತ್ತು. ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡುತ್ತಿದ್ದೇವೆ' ಎಂದು ಹೇಳಿದರು.

ಸುಪ್ರಿಂ ಕೋರ್ಟ್ ನ್ಯಾಯಮೂರ್ತಿ ಅರವಿಂದ್ ಕುಮಾರ್ ಮಾತನಾಡಿ, 'ಯಶಸ್ಸು ಸಾಧಿಸಲು ಅಡ್ಡದಾರಿಗಳು ಇರುವುದಿಲ್ಲ. ಇದನ್ನು ಅರ್ಥ ಮಾಡಿಕೊಳ್ಳಬೇಕು. ವಿದ್ಯಾರ್ಥಿ ಜೀವನದಲ್ಲಿ ಕಷ್ಟಪಟ್ಟರೆ ಭವಿಷ್ಯ ಉತ್ತಮ ವಾಗಿರಲಿದೆ' ಎಂದರು.

ಗೋಕುಲ ಎಜುಕೇಷನ್ ಫೌಂಡೇಷನ್ ಅಧ್ಯಕ್ಷ ಡಾ.ಎಂ.ಆರ್. ಜಯರಾಂ ಮಾತನಾಡಿ, 'ನನ್ನ ತಂದೆ ಬಡ ಕುಟುಂಬಗಳ ಪ್ರತಿಭಾನ್ವಿತ ಮಕ್ಕಳಿಗೆ ಉತ್ತಮ ಶಿಕ್ಷಣ ದೊರೆಯಬೇಕು ಎಂಬ ಹಂಬಲದಿಂದ ಶಿಕ್ಷಣ ಸಂಸ್ಥೆ ಆರಂಭಿಸಿದ್ದರು. ಇಂದು ಒಂದೇ ಕ್ಯಾಂಪಸ್‌ನಲ್ಲಿ 21ಕ್ಕೂ ಹೆಚ್ಚು ವಿದ್ಯಾಸಂಸ್ಥೆಗಳಿವೆ' ಎಂದು ಹೇಳಿದರು.



ಬೆಂಗಳೂರಿನ ರಾಮಯ್ಯ ಕಾನೂನು ಕಾಲೇಜಿನಲ್ಲಿ ಶನಿವಾರ ನಡೆದ ಕಾಲೇಜಿನ ಬೆಳ್ಳಿ ಮಹೋತ್ಸವದಲ್ಲಿ (ಎಡದಿಂದ) ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಬಿ.ವಿ.ನಾಗರತ್ನ, ಆಂಧ್ರಪ್ರದೇಶದ ರಾಜ್ಯಪಾಲ ಎಸ್.ಅಬ್ದುಲ್ ನಜೀರ್, ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಎ.ಎಸ್.ಬೋಪಣ್ಣ ಪಾಲ್ಗೊಂಡಿದ್ದರು.

ನೊಂದ ಹೆಣ್ಣು ಮಕ್ಕಳಿಗೆ ನ್ಯಾಯ ದೊರೆಯಬೇಕಾದರೆ ಹೆಣ್ಣು ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ನ್ಯಾಯಾಧೀಶರಾಗಬೇಕು
ಬಿ.ವಿ.ನಾಗರತ್ನ
ನ್ಯಾಯಮೂರ್ತಿ, ಸುಪ್ರೀಂ ಕೋರ್ಟ್

ನ್ಯಾಯಾಲಯ ಎಂದರೆ ಜನರಲ್ಲಿ ಇನ್ನೂ ಭಯವಿದೆ. ಈ ಭಯ ದೂರ ಮಾಡಬೇಕು. ಅಲ್ಲದೇ ಸಾಮಾನ್ಯರಲ್ಲಿ ಕಾನೂನು ಅರಿವು ಮೂಡಿಸಬೇಕು
ಎಸ್.ಅಬ್ದುಲ್ ನಜೀರ್
ರಾಜ್ಯಪಾಲ, ಆಂಧ್ರಪ್ರದೇಶ

ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಎ.ಎಸ್. ಬೋಪಣ್ಣ, ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಪ್ರಸನ್ನ ಬಿ. ವರಾಳೆ, ಹೈಕೋರ್ಟ್ ನ್ಯಾಯಮೂರ್ತಿ ಜಿ.ನರೇಂದ್ರ, ಗೋಕುಲ ಎಜುಕೇಶನ್ ಫೌಂಡೇಷನ್ ಉಪಾಧ್ಯಕ್ಷ ಎಂ.ಆರ್.ಸೀತಾರಾಂ ಇದ್ದರು.

ವೀರಲೋಕ ಸಂಕ್ರಾಂತಿ ಸ್ಪರ್ಧೆ: ಕಥೆಗಳ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೀರಲೋಕ ಪ್ರತಿಷ್ಠಾನವು 'ಕಥಾ ಸಂಕ್ರಾಂತಿ 2024' ಸ್ಪರ್ಧೆಗೆ ಕಥೆಗಳನ್ನು ಆಹ್ವಾನಿಸಿದೆ.

ಸ್ಪರ್ಧೆಗೆ ಮೊದಲ ಬಹುಮಾನ ₹55 ಸಾವಿರ, ದ್ವಿತೀಯ ಬಹುಮಾನ ₹30 ಸಾವಿರ ಹಾಗೂ ತೃತೀಯ ಬಹುಮಾನ ₹20 ಸಾವಿರ ನಿಗದಿಪಡಿಸಲಾಗಿದೆ. 3 ಬಹುಮಾನಿತ ಮತ್ತು ತೀರ್ಪುಗಾರರು ಮೆಚ್ಚಿದ 7 ಕಥೆಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲಾಗುತ್ತದೆ. ಹತ್ತೂ ಕಥೆಗಳನ್ನು ವಿವಿಧ ಭಾಷೆಗಳಿಗೆ ಅನುವಾದಿಸಿ, ಏಕಕಾಲದಲ್ಲಿ ಬಿಡುಗಡೆ ಮಾಡಲಾಗುತ್ತದೆ ಎಂದು ಪ್ರತಿಷ್ಠಾನದ ಸಂಸ್ಥಾಪಕ ವೀರಕಪುತ್ರ ಶ್ರೀನಿವಾಸ್ ತಿಳಿಸಿದ್ದಾರೆ.

ಸ್ಪರ್ಧೆಗೆ ವಯಸ್ಸಿನ ಮಿತಿಯಿಲ್ಲ. ಮೂರು ಸಾವಿರ ಪದಗಳ ಮಿತಿಯಲ್ಲಿ ಕಥೆಗಳನ್ನು ಬರೆಯಬೇಕು. ಸ್ಪರ್ಧೆಯಲ್ಲಿ ಭಾಗವಹಿಸುತ್ತಿರುವವರು ಈವರೆಗೆ ಕಥಾ ಸಂಕಲನ ಪ್ರಕಟಿಸಿರಬಾರದು. ಕಥೆಗಾರರ ಹೆಸರು, ವಿಳಾಸ, ದೂರವಾಣಿ ವಿವರವನ್ನು ಪ್ರತ್ಯೇಕ ಹಾಳೆಯಲ್ಲಿ ಬರೆಯಬೇಕು. ಸ್ಪರ್ಧೆಗೆ ಕಥೆಯ ಸಾಫ್ಟ್ ಪ್ರತಿಗಳನ್ನು ಮಾತ್ರ ಸ್ವೀಕರಿಸಲಾಗುತ್ತದೆ. ಕಥೆಗಳನ್ನು ಕಳುಹಿಸಲು ಸೆ. 5 ಕೊನೆಯ ದಿನ. ಕಥೆಗಳನ್ನು veeralokakathasankranti@gmail.com ಈ ವಿಳಾಸಕ್ಕೆ ಕಳುಹಿಸಬೇಕು ಎಂದು ತಿಳಿಸಲಾಗಿದೆ. **ಸಂಪರ್ಕಕ್ಕೆ:** 7022122121

ನಿಧನವಾರ್ತೆ

ಪ್ರಸನ್ನ ನಂದೀಶ್



ಬೆಂಗಳೂರು: 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಪತ್ರಿಕೆಗಳ ಪ್ರೊಡಕ್ಷನ್ ವಿಭಾಗದ ಉದ್ಯೋಗಿ ಪ್ರಸನ್ನ ನಂದೀಶ (52) ಅವರು ಅನಾರೋಗ್ಯದಿಂದಾಗಿ ನಗರದಲ್ಲಿ ಶನಿವಾರ ನಿಧನರಾದರು.

ಚಾಮರಾಜನಗರ ಜಿಲ್ಲೆಯ ಕಾಳನಹುಂಡಿ ಗ್ರಾಮದ ಪ್ರಸನ್ನ ನಂದೀಶ್ ಅವರು 36 ವರ್ಷಗಳಿಂದ ಪ್ರೊಡಕ್ಷನ್ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು. ಅವರಿಗೆ ಪತ್ನಿ ಹಾಗೂ ಇಬ್ಬರು ಪುತ್ರರು ಇದ್ದಾರೆ.

'ಸ್ವಗ್ರಾಮ ಕಾಳನಹುಂಡಿಯಲ್ಲಿ ಭಾನುವಾರ (ಜುಲೈ 30) ಅಂತ್ಯಕ್ರಿಯೆ ನಡೆಸಲಾಗುವುದು' ಎಂದು ಕುಟುಂಬದವರು ತಿಳಿಸಿದ್ದಾರೆ.

ಮುನಿಸಂಜೀವಯ್ಯ



ಬೆಂಗಳೂರು: ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಪ್ರಧಾನ ಕಾರ್ಯದರ್ಶಿ, ಕಾಳಿದಾಸ ಸಹಕಾರ ಬ್ಯಾಂಕ್‌ನ ಮಾಜಿ ಅಧ್ಯಕ್ಷ ಎಸ್. ಮುನಿಸಂಜೀವಯ್ಯ (93) ಶುಕ್ರವಾರ ರಾತ್ರಿ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರರು, ಮೂವರು ಪುತ್ರಿಯರಿದ್ದಾರೆ. ಮಲ್ಲೇಶ್ವರದಲ್ಲಿರುವ ನಿವಾಸದಲ್ಲಿ ಭಾನುವಾರ ಬೆಳಿಗ್ಗೆ 7ರಿಂದ 11ರವರೆಗೆ ಅಂತಿಮ ದರ್ಶನಕ್ಕೆ ಅವಕಾಶವಿದೆ. ತುಮಕೂರು ರಸ್ತೆಯ ವಿನಾಯಕನಗರ ನಾಗಸಂದ್ರದಲ್ಲಿ ಮಧ್ಯಾಹ್ನ 2ಕ್ಕೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ನಗರದಲ್ಲಿ ಇಂದು

ಗಾನೋತ್ಸವ: ಮುಖ್ಯ ಅತಿಥಿಗಳು: ಶೃಂಗೇರಿ ಎಚ್.ಎಸ್. ನಾಗರಾಜ್, ಪುತ್ತೂರು ನರಸಿಂಹ ನಾಯಕ್, ಆಯೋಜನೆ: ಗಾನಸುಧ ಮ್ಯೂಸಿಕಲ್ ಅಕಾಡೆಮಿ, ಸ್ಥಳ: ವಿವೇಕ ಸಭಾಂಗಣ, ಜಯನಗರ 4ನೇ ಬಡಾವಣೆ, ಬೆಳಿಗ್ಗೆ 10

ಬೀಜದುಂಡೆ ತಯಾರಿ: ಆಯೋಜನೆ: ಶಾಂತಾ ಕೃಷ್ಣಮೂರ್ತಿ ಫೌಂಡೇಷನ್, ಸ್ಥಳ: ಮಾರಸಂದ್ರ ಮೀಸಲು ಅರಣ್ಯ ಪ್ರದೇಶ, ಯರಪ್ಪನಹಳ್ಳಿ, ಬೆಳಿಗ್ಗೆ 9

ಗುರು ನಮನ: ಶುಭಾ ಧನಂಜಯ ಅವರ ಶಿಷ್ಯವೃಂದ, ಆಯೋಜನೆ: ನಾಟ್ಯಾಂತರಂಗ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 9

'ಸುಗ್ಗಿ 2023' ವಿದ್ಯಾರ್ಥಿ ನಿಲಯದ ವಾರ್ಷಿಕೋತ್ಸವ: ಸಾನ್ನಿಧ್ಯ: ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ, ಮುಖ್ಯ ಅತಿಥಿ: ಡಿ.ವಿ. ಪರಶಿವಮೂರ್ತಿ, ಅಧ್ಯಕ್ಷತೆ: ಎಲ್. ರೇವಣ್ಣಸಿದ್ದಯ್ಯ, ಆಯೋಜನೆ ಹಾಗೂ ಸ್ಥಳ: ಶತಮಾನೋತ್ಸವ ಸ್ಮಾರಕ ಸಭಾಂಗಣ, ರಾವ್ ಬಹದ್ದೂರ್ ಧರ್ಮಪ್ರವರ್ತ ಗುಬ್ಬಿ ತೋಟದಪ್ಪ ಧರ್ಮಸಂಸ್ಥೆ, ಬೆಳಿಗ್ಗೆ 10.30

ರಾಜ್‌ಕುಮಾರ್, ಪುನೀತ್ ರಾಜ್‌ಕುಮಾರ್ ಸ್ಮರಣಾರ್ಥ ನುಡಿ ನಮನ ಹಾಗೂ ಗಾನ ನಮನ: ಮುಖ್ಯ ಅತಿಥಿಗಳು: ರಾಮಲಿಂಗಾರೆಡ್ಡಿ, ಸೌಮ್ಯಾ ರೆಡ್ಡಿ, ಕೆ.ಎಸ್. ರಂಗಪ್ಪ, ಆಯೋಜನೆ: ನಾಡಪ್ರಭು ಕೆಂಪೇಗೌಡ ಪುನೀತ್ ರಾಜ್‌ಕುಮಾರ್ ಕನ್ನಡ ಸೇವಾ ಟ್ರಸ್ಟ್, ಸ್ಥಳ: ಬಿಬಿಎಂಪಿ ಸಮುದಾಯ ಭವನ, ರಾಜೇಂದ್ರನಗರ, ಬೆಳಿಗ್ಗೆ 10.45

'ಮಧುರಮ್ ಮನೋಹರಮ್' ವಾರ್ಷಿಕ ನೃತ್ಯ ಉತ್ಸವ: ಮುಖ್ಯ ಅತಿಥಿ: ಜಿ. ಲಕ್ಷ್ಮಮ್ಮ, ಆಯೋಜನೆ: ಶ್ರೀ ಕೃಷ್ಣ ಕಲಾಲಯ, ಸ್ಥಳ: ತೆಲುಗು ವಿಜ್ಞಾನ ಸಮಿತಿ, ಮಲ್ಲೇಶ್ವರ, ಮಧ್ಯಾಹ್ನ 3

ಅ'ಸಾಮಾನ್ಯ' ಗೀತೆ-ಭಗವದ್ಗೀತೆ ಕನ್ನಡ ಕವಿಗಳು ಕಂಡಂತೆ: ಉಪಸ್ಥಿತಿ: ಎಂ.ಎಂ. ಚಂದ್ರಶೇಖರ, ಶ್ಲೋಕ: ಅಕ್ಷಯ್ ಎಂ. ಭಾರದ್ವಾಜ್, ಶ್ಲೋಕಾರ್ಥ: ನವ್ಯಾ ಪಿ., ವಾಚನ: ಸುಮಾ ಎಚ್.ವಿ., ಗಾಯನ: ಪ್ರಭಾ ಇನಾಂದಾರ್, ಕವಿಗಳು ಕಂಡಂತೆ: ಭ.ರಾ. ವಿಜಯಕುಮಾರ್, ಆಯೋಜನೆ ಹಾಗೂ ಸ್ಥಳ: ಪಂಚಾಮೃತ ಸುಗಮ ಸಂಗೀತ ಅಕಾಡೆಮಿ, ದೊಡ್ಡಬೊಮ್ಮಸಂದ್ರ, ಸಂಜೆ 5.30


ಅನನ್ಯಾ ರಾಜಾರಾಮ್

ಭರತನಾಟ್ಯ ರಂಗಪ್ರವೇಶ: ಅನನ್ಯಾ ರಾಜಾರಾಮ್, ಉಪಸ್ಥಿತಿ: ಚೂಡಾಮಣಿ ನಂದಗೋಪಾಲ್, ಕರುಣಾ ವಿಜಯೇಂದ್ರ, ಆಯೋಜನೆ: ಕಲಾಕ್ಷಿತಿ, ಸ್ಥಳ: ಜೆಎಸ್‌ಎಸ್ ಸಭಾಂಗಣ, ಜಯನಗರ 8ನೇ ಬ್ಲಾಕ್, ಸಂಜೆ 5.30

ರಂಗೋತ್ಸವ 2023: ಉಪಸ್ಥಿತಿ: ಸತೀಶ್, ನಾಟಕಗಳು: 'ಕುಂಟಾ ಕುಂಟಾ ಕುರುವತ್ತಿ', 'ಗಿಲೀಟು ಗಂಡ', ಆಯೋಜನೆ: ರಂಗಾಭರಣ ಕಲಾಕೇಂದ್ರ, ಸ್ಥಳ: ಚಂದ್ರಪ್ರಿಯ ರಂಗಮಂದಿರ, ರಂಗಾಭರಣ ಕಲಾಕೇಂದ್ರ, ಕೆಇಬಿ ಬಡಾವಣೆ, ಸಂಜಯನಗರ, ಸಂಜೆ 6

ಪ್ರವಚನ ವಾಹಿನಿ ಕಾರ್ಯಕ್ರಮ: ಭರತನಾಟ್ಯ: ಚೈತನ್ಯ ಜಿ., ಆಯೋಜನೆ ಮತ್ತು ಸ್ಥಳ: ಸಾಂಸ್ಕೃತಿಕ ಮಂದಿರ, ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

'ನಾತೀರ್ ಪೂಜಾ' ಕೃತಿ ಆಧಾರಿತ ಒಡಿಸ್ಸಿ ನೃತ್ಯ ನಾಟಕ ಪ್ರದರ್ಶನ: ಶರ್ಮಿಳಾ ಮುಖರ್ಜಿ ಮತ್ತು ತಂಡ, ಆಯೋಜನೆ: ಸಂಜಲಿ ಸೆಂಟರ್ ಫಾರ್ ಒಡಿಸ್ಸಿ ಡಾನ್ಸ್, ಸ್ಥಳ: ಬಿಐಸಿ, ದೊಮ್ಮಲೂರು, ಸಂಜೆ 6.30


ಪ್ರಶಸ್ತಿ ಪ್ರದಾನ ಸಮಾರಂಭ

23ನೇ ವಾರ್ಷಿಕೋತ್ಸವ ಸಂಭ್ರಮ

ಯಕ್ಷಗಾನ: 'ಜಾಂಬವತಿ ಕಲ್ಯಾಣ', ಮುಖ್ಯ ಅತಿಥಿಗಳು: ಗುರುರಾಜ ಗಂಟಿಹೊಳೆ, ಡಾ.ಸಿ. ಆರ್. ಚಂದ್ರಶೇಖರ್, ಎಂ. ಮುರಳೀಧರ್ ಹೆಗ್ಡೆ, ಜಯರಾಮ್ ಶೆಟ್ಟಿ, ದತ್ತಾತ್ರೇಯ ಅರಳೀಕಟ್ಟೆ, ಚಿಕ್ಕಣ್ಣ ಯಣ್ಣೆಕಟ್ಟೆ, ಮಂಜುನಾಥ್ ಎನ್. ಗಾಣಿಗ, ಚಂದ್ರಪ್ಪ ಆಳೂರು, 'ರಂಗಸ್ಥಳ ಪ್ರಶಸ್ತಿ' ಪುರಸ್ಕೃತರು: ಅರುವ ಕೊರಗಪ್ಪ ಶೆಟ್ಟಿ, ಕಮಲಶಿಲೆ ಮಹಾಬಲ ದೇವಾಡಿಗ, 'ದತ್ತಿನಿಧಿ ಪ್ರಶಸ್ತಿ' ಪುರಸ್ಕೃತರು: ಹೆಮ್ಮಾಡಿ ರಾಮಚಂದ್ರ ಭಟ್, ಹಾರಾಡಿ ರಮೇಶ ಗಾಣಿಗ, ಮೊಳಹಳ್ಳಿ ಕೃಷ್ಣ ಮೊಗವೀರ, ಕೃಷ್ಣಸ್ವಾಮಿ ಜೋಯಿಸ್, ಯಕ್ಷಗಾನ: 'ಕನಕಾಂಗಿ ಕಲ್ಯಾಣ' ಆಯೋಜನೆ: ರಂಗಸ್ಥಳ ಯಕ್ಷ ಮಿತ್ರ ಕೂಟ, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಮಧ್ಯಾಹ್ನ 2.30

ಇಂದು ಪುಸ್ತಕ ಬಿಡುಗಡೆ

ರೋಹಿಣಿ ನಾಗೇಂದ್ರ ಅವರ 'ನಾರದೀಯ ಸಂಗೀತ' ಪುಸ್ತಕ ಲೋಕಾರ್ಪಣೆ: ಉಮಾಕಾಂತ ಭಟ್ಟ, ಧ್ವನಿ ಮುದ್ರಿಕೆ ಲೋಕಾರ್ಪಣೆ: ಎಂ. ಪ್ರಭಾಕರ ಜೋಶಿ, ಉಪಸ್ಥಿತಿ: ಗಣಪತಿ ಭಟ್ಟ ಯಲ್ಲಾಪುರ, ಅನಂತ ಪದ್ಮನಾಭ ಫಾಟಕ, ಜಬ್ಬಾರ ಸಮೋ, ಗಣಪತಿ ಭಟ್ಟ ಸಂಕದ ಗುಂಡಿ, ತಾಳಮದ್ದಳೆ: 'ಭಕ್ತ ವೀರ ಮಣಿ', ಆಯೋಜನೆ: ಕಲಾಶ್ರೀ ಸಾಂಸ್ಕೃತಿಕ ವೇದಿಕೆ, ಸ್ಥಳ: ವಿಶ್ವೇಶ ತೀರ್ಥ ಸಭಾಭವನ, ಪೂರ್ಣಪ್ರಜ್ಞ ವಿದ್ಯಾಪೀಠ, ಬೆಳಿಗ್ಗೆ 9.45


ಪ್ರಭಾಕರ ಜೋಶಿ

ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ 'ಸಾಗರಘೋಷ' ಪುಸ್ತಕ ಬಿಡುಗಡೆ: ಉದ್ಘಾಟನೆ: ಆರ್. ಗಣೇಶ್, ಅಧ್ಯಕ್ಷತೆ: ಎಂ. ಪ್ರಕಾಶಮೂರ್ತಿ, ಪುಸ್ತಕ ಬಿಡುಗಡೆ: ಮಾರ್ಕಂಡಪುರಂ ಶ್ರೀನಿವಾಸ, ಪುಸ್ತಕದ ಬಗ್ಗೆ ಮಾತು: ಆರ್. ಶೇಷಶಾಸ್ತ್ರಿ, ಆಯೋಜನೆ: ಮಹದೇವಪುರ ಕ್ಷೇತ್ರ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ, ಸ್ಥಳ: ಜನಪದರು ರಂಗಮಂದಿರ, ಅಭಯಾಂಜನೇಯ ದೇವಾಲಯ ಆವರಣ, ನಿಂಬೆಕಾಯಿಪುರ, ಸಂಜೆ 4



ಅಬ್ಬಾ ಹುಲಿ

ಅಂತರರಾಷ್ಟ್ರೀಯ ಹುಲಿ ದಿನಾಚರಣೆ ಅಂಗವಾಗಿ 'ಆರ್ಟ್ ಕಲ್ಚರಲ್ ಎಜುಕೇಷನಲ್ ಎನ್‌ಲೈಟ್ ಫೌಂಡೇಷನ್' ನಗರದಲ್ಲಿ ಶನಿವಾರ ಆಯೋಜಿಸಿದ್ದ 'ಸೇವ್ ಟೈಗರ್' ಅಭಿಯಾನದಲ್ಲಿ ಡಾನ್ ಬಾಸ್ಕೊ ಸಂಸ್ಥೆಯ ವಿದ್ಯಾರ್ಥಿಗಳು ಹುಲಿ ಮುಖವಾಡ ಧರಿಸಿ, ಹುಲಿ ಸಂರಕ್ಷಣೆ ಕುರಿತು ಜಾಗೃತಿ ಮೂಡಿಸಿದರು.

- ಪ್ರಜಾವಾಣಿ ಚಿತ್ರ/ರಂಜು ಪಿ.

'ಎಲ್ಲರ ಪರಂಪರೆಗೆ ಕೆಲವರ ವಾರಸುದಾರಿಕೆ ಸಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಮಾಯಣ, ಮಹಾಭಾರತದ ಕತೆ, ಪಾತ್ರಗಳು ಸ್ಥಳೀಯತೆ, ಕಾಲಕ್ಕೆ ತಕ್ಕಂತೆ ಬದಲಾವಣೆಗೆ ಒಳಪಡುತ್ತಾ ಬಂದಿರುವುದು ಪರಂಪರೆಯ ಒಂದು ಭಾಗ. ಎಲ್ಲರೂ ಸೇರಿ ಕಟ್ಟಿದ ಅಂತಹ ಶ್ರೇಷ್ಠ ಪರಂಪರೆಗೆ ಕೆಲವರು ತಾವೇ ವಾರಸುದಾರರು ಎನ್ನುವಂತೆ ನಡೆದುಕೊಳ್ಳುತ್ತಿದ್ದಾರೆ ಎಂದು ಲೇಖಕ ಪುರುಷೋತ್ತಮ ಬಿಳಿಮಲೆ ಹೇಳಿದರು.

ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಪುರುಷೋತ್ತಮ ದಾಸ್ ಹೆಗ್ಗಡೆ ಅವರು ಬರೆದ ಎರಡು ಸಂಪುಟಗಳನ್ನು ಒಳಗೊಂಡ 'ಪುರುಷೋತ್ತಮಾಯಣ' ಕಾದಂಬರಿ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಭಾರತದ ಎರಡು ಮಹಾಕಾವ್ಯಗಳು ಆಯಾಭಾಷೆ, ಪ್ರದೇಶ, ಸಂಸ್ಕೃತಿಗೆ ಅನುಗುಣವಾಗಿ ನಿರಂತರವಾಗಿ ಮರುಹುಟ್ಟು ಪಡೆದಿವೆ. ದೇಶದ 19,569 ಭಾಷೆಗಳಲ್ಲೂ ರಾಮಾಯಣ, ಮಹಾಭಾರತದ ಕಥೆಗಳಿವೆ. ಪಾತ್ರಗಳ ಗುಣಾವಗುಣಗಳು ಬದಲಾಗಿವೆ. ಕೆಲ ಕತೆಗಳಲ್ಲಿ ವಸ್ತ್ರಾಪಹರಣ ಕೃಷ್ಣನ ಕೆಲಸವಾದರೆ, ಕೆಲ ಪ್ರದೇಶಗಳಲ್ಲಿ ಅದು ವಾಯುಪುತ್ರ ಭೀಮನೆಂದು ಬಿಂಬಿತವಾಗಿದೆ. ದಲಿತ ಸಮುದಾಯಕ್ಕೆ ಪ್ರತ್ಯೇಕ ರಾಮಾಯಣವಿದೆ ಎಂದರು.


ನಗರದಲ್ಲಿ ಶನಿವಾರ 'ಪುರುಷೋತ್ತಮಾಯಣ' ಕಾದಂಬರಿಯನ್ನು ಮಾಜಿ ಸಚಿವ ಎಚ್.ಎಂ. ರೇವಣ್ಣ ಬಿಡುಗಡೆ ಮಾಡಿದರು. ಸಾಹಿತಿ ಪುರುಷೋತ್ತಮ ಬಿಳಿಮಲೆ, ಚಿಂತಕ ಜಿ.ರಾಮಕೃಷ್ಣ, ಲೇಖಕ ಪುರುಷೋತ್ತಮ ದಾಸ್ ಹೆಗ್ಗಡೆ, ಕನಕ ಗುರುಪೀಠದ ಸಿದ್ದರಾಮಾನಂದಪುರಿ ಸ್ವಾಮೀಜಿ, ಮಾಜಿ ಸಚಿವ ಆರ್.ಕೃಷ್ಣಪ್ಪ ಇದ್ದರು – ಪ್ರಜಾವಾಣಿ ಚಿತ್ರ

ದೆಹಲಿಯ ಜೆಎನ್‌ಯುವು ಸಾಹಿತಿ ಎ.ಕೆ. ರಾಮಾನುಜನ್ ಅವರ ರಾಮಾಯಣವನ್ನು ಪಠ್ಯವಾಗಿದ್ದಕ್ಕೆ ಎಬಿವಿಪಿ ಕಾರ್ಯಕರ್ತರು ಪ್ರತಿಭಟನೆ ಮಾಡಿದ್ದರು. ಅವರ ಸಾಹಿತ್ಯವನ್ನು ಅಧ್ಯಯನ ಮಾಡುವ ಅವಕಾಶ ವಿದ್ಯಾರ್ಥಿಗಳಿಗೆ ಇಲ್ಲವಾಯಿತು. ರಾಮಾಯಣಕ್ಕೆ ಹೊಸದನ್ನು ಸೇರಿಸಲು, ವಿಮರ್ಶೆಗೆ ಒಳಪಡಿಸಲು ಯಾರು ಅಧಿಕಾರಕೊಟ್ಟರು ಎಂದು ಕೇಳುವವರಿಗೆ 'ನಮ್ಮನ್ನು ಪ್ರಶ್ನಿಸಲು ನಿಮಗೆ ಅಧಿಕಾರ ಕೊಟ್ಟವರು ಯಾರು' ಎಂದು ಮರುಪ್ರಶ್ನಿಸುವ ಮೂಲಕ ಸೃಜನಶೀಲ ಲೇಖಕರ ಪರ ನಿಲ್ಲಬೇಕು ಎಂದರು.

ಪುರುಷೋತ್ತಮ ದಾಸ್ ಹೊರ ತಂದಿರುವ ರಾಮಾಯಣ ವೈಜ್ಞಾನಿಕ ನೆಲೆಗಟ್ಟಿನಲ್ಲಿ ವಿಶ್ಲೇಷಿಸುವ ಅಪರೂಪದ ಗದ್ಯಕೃತಿ. ಆ ಮೂಲಕ ರಾಮಾಯಣದ ಪುನರ್‌ರಚನೆಯಲ್ಲಿ ಮತ್ತೊಂದು ಇತಿಹಾಸ ನಿರ್ಮಿಸಿದ್ದಾರೆ ಎಂದು ಶ್ಲಾಘಿಸಿದರು.

ಚಿಂತಕ ಜಿ.ರಾಮಕೃಷ್ಣ ಮಾತನಾಡಿದರು. ನಿವೃತ್ತ ಎಂಜಿನಿಯರ್ ನಿಂಗಪ್ಪ, ಪ್ರಕಾಶಕ ಎನ್.ಪ್ರಕಾಶ್ ಇದ್ದರು.

ಜಿಲ್ಲಾವಾರು ಮಾಹಿತಿ

	ಉಡುಪಿ	ಉತ್ತರ ಕನ್ನಡ	ದಕ್ಷಿಣ ಕನ್ನಡ
ಕಳೆದ 5 ವರ್ಷಗಳಲ್ಲಿ ಕಡಲಿನಲ್ಲಿ ಮೃತಪಟ್ಟವರು	27	127	13
ಕುಟುಂಬಗಳಿಗೆ ಪರಿಹಾರ ವಿತರಣೆ	6	58	7
ವಿತರಿಸಿದ ಪರಿಹಾರದ ಮೊತ್ತ	₹36 ಲಕ್ಷ	₹3.48 ಕೋಟಿ	₹42 ಲಕ್ಷ
ಬಾಕಿ ಇರುವ ಪ್ರಕರಣಗಳು	21	69	6



ಮೀನುಗಾರಿಕೆಗೆ ‘ಮಳೆಗಾಲ’ದ ಬರೆ





ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಆಳ ಸಮುದ್ರ ಮೀನುಗಾರಿಕೆ ನಿರ್ಬಂಧ ಹಿನ್ನೆಲೆಯಲ್ಲಿ ಮಂಗಳೂರಿನ ದಕ್ಕೆಯ ನಿರ್ವಹಣಾ ಘಟಕದಲ್ಲಿ ದೋಣಿಗಳಿಗೆ ಬಣ್ಣ ಬಳಿಯುತ್ತಿರುವುದು

ಒಂದನೇ ಪುಟದಿಂದ..

ಕರ್ನಾಟಕದ ಕರಾವಳಿಯ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಮೀನುಗಾರಿಕೆ ಪ್ರಧಾನ ಉದ್ಯೋಗ. ಪ್ರತಿ ವರ್ಷ ಮಳೆಗಾಲದ ಸಂದರ್ಭದಲ್ಲಿ ಸಮುದ್ರ ಪ್ರಕ್ಷುಬ್ಧಗೊಂಡಿರುತ್ತದೆ. ಇದು ಮೀನುಗಳ ಸಂತಾನೋತ್ಪತ್ತಿ ಅವಧಿಯೂ ಹೌದು. ಹೀಗಾಗಿ ಆಳಸಮುದ್ರ ಹಾಗೂ ಯಾಂತ್ರಿಕೃತ ಬೋಟ್ ಬಳಸಿ ಮೀನುಗಾರಿಕೆ ನಡೆಸುವುದಕ್ಕೆ ನಿಷೇಧ ವಿಧಿಸಲಾಗುತ್ತದೆ. ಅರಬ್ಬಿ ಸಮುದ್ರದಲ್ಲಿ ಜೂನ್ 1ರಿಂದ ಜುಲೈ 31ರವರೆಗೆ ಈಗ ಮೀನುಗಾರಿಕೆಗೆ ನಿಷೇಧದ ಕಾಲ. (ಸಮುದ್ರದಲ್ಲಿ ಅಲೆಗಳ ಅಬ್ಬರ ಜೋರಾಗಿದ್ದರೆ, ನಿಷೇಧ ಇನ್ನೂ 15 ದಿನ ವಿಸ್ತರಣೆಯಾಗುತ್ತದೆ) ಹೀಗಾಗಿ ಮೀನುಗಾರಿಕೆ ದಕ್ಕೆಗಳಲ್ಲಿಯ ಚಟುವಟಿಕೆಗಳು ಮಗ್ಗಲು ಬದಲಿಸಿವೆ. ನೂರಾರು ನಾಟಿಕಲ್ ಮೈಲಿ ದೂರ ಕ್ರಮಿಸಿ 10–15ದಿನ ಸಮುದ್ರದಲ್ಲೇ ಇದ್ದು ಬೀಸಿದ ಬಲೆಗೆ ಬಿದ್ದ ಮೀನುಗಳನ್ನು ಬೋಟ್‌ನಲ್ಲಿ ತುಂಬಿಕೊಂಡು ಬಂದು ಅವುಗಳನ್ನು ಇಳಿಸುವ ಧಾವಂತ, ಅನ್‌ಲೋಡಿಂಗ್ ಮಾಡುವವರ ಕಲರವ, ಮೀನುಗಳ ರಾಶಿ, ಅಲ್ಲೇ ಖರೀದಿಸಿ ಗ್ರಾಹಕರಿಗೆ ಮಾರಾಟ ಮಾಡುವವರ ಭರಾಟೆ, ಪ್ಯಾಕಿಂಗ್ ಮತ್ತು ಸಾಗಾಟಕ್ಕೆ ಬಳಸಲು ಐಸ್ ಗುಡ್ಡೆ, ಸಾಲು ಸಾಲು ಲಾರಿಗಳು... ಹೀಗೆ ಗಿಜಿಗುಡುತ್ತಿದ್ದ ದಕ್ಕೆಗಳಲ್ಲಿ ಈಗ ಕಾಣಸಿಗುವುದು ಬೆರಳೆಣಿಕೆಯಷ್ಟು ಜನರು ಮಾತ್ರ.

ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕದ ಕಾರ್ಮಿಕರು, ಆಂಧ್ರ, ತಮಿಳುನಾಡು ಕಾರ್ಮಿಕರು ಇಲ್ಲಿ ದುಡಿಯುತ್ತಾರೆ. ಇತ್ತೀಚಿನ ವರ್ಷಗಳಲ್ಲಿ ಉತ್ತರ ಭಾರತದ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದಾರೆ. ಹೊರರಾಜ್ಯದ ಬಹುಪಾಲು ಕಾರ್ಮಿಕರು ದುಡಿಮೆಗೆ ಸಿಗುವುದು ವರ್ಷದಲ್ಲಿ ಒಂಬತ್ತು ತಿಂಗಳು ಮಾತ್ರ. ಬೋಟ್ ನಿಲ್ಲಿಸಲು ದಕ್ಕೆಗಳಲ್ಲಿ ಜಾಗ ಸಿಗುವುದಿಲ್ಲ ಎಂದು ನಿಷೇಧದ ಅವಧಿಗಿಂತ ಕೆಲ ದಿನ ಮುಂಚೆಯೇ ಬೋಟ್‌ಗಳನ್ನು ಲಂಗರು ಹಾಕಲಾಗುತ್ತದೆ. ಕಾರ್ಮಿಕರು ವಾಪಸ್ ಬರುವುದು ಆಗಸ್ಟ್ ಮಧ್ಯಭಾಗದಲ್ಲಿ. ಮೀನುಗಾರಿಕೆ ಆರಂಭಿಸುವ ಮುನ್ನ ‘ಸಮುದ್ರ ಪೂಜೆ’ ಮಾಡುವ ಸಂಪ್ರದಾಯ ಇದ್ದು, ಇದು ಮುಗಿದ ಮೇಲೆಯೇ ಹೊರಗಿನ ಕಾರ್ಮಿಕರು ಬರುವುದು.

ಪರ್ಸಿನ್ ಬೋಟ್‌ಗಳಲ್ಲಿ ಸಾಮಾನ್ಯವಾಗಿ 20ರಿಂದ 40 ಮಂದಿ ಮೀನುಗಾರಿಕೆಗೆ ತೆರಳುತ್ತಾರೆ. ಅವರಲ್ಲಿ ನಾಲ್ಕೈದು ಮಂದಿ ಸ್ಥಳೀಯರಿದ್ದರೆ, ಉಳಿದ ಬಹುತೇಕ ಮಂದಿ ಉತ್ತರ ಭಾರತದವರು. ಹೀಗಾಗಿ ರಾಜ್ಯದ ಕರಾವಳಿ ಭಾಗದ ಮೀನುಗಾರಿಕಾ ಬಂದರುಗಳಲ್ಲಿ ಬಿಹಾರ, ಒಡಿಶಾ, ಜಾರ್ಖಂಡ್, ಛತ್ತೀಸಗಡ ರಾಜ್ಯದ ಕಾರ್ಮಿಕರೇ ಹೆಚ್ಚು.

ನಾಡದೋಣಿ ಮೀನುಗಾರಿಕೆಗೆ ನಿಷೇಧ ಅನ್ವಯಿಸುವುದಿಲ್ಲ. ಸ್ಥಳೀಯ ಮೀನುಗಾರರು ಈಗ ನಾಡದೋಣಿ ಮೀನುಗಾರಿಕೆಯಲ್ಲಿ ತೊಡಗಿದ್ದಾರೆ. ಇನ್ನು ಹಲವರು ಬಲೆ ಹಾಗೂ ಬೋಟ್‌ಗಳ ರಿಪೇರಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇನ್ನು ಕೆಲವರು ಕೃಷಿ ಚಟುವಟಿಕೆಯಲ್ಲಿ ತೊಡಗಿದ್ದಾರೆ. ದಕ್ಕೆಯಲ್ಲಿ ಮೀನು ಇಳಿಸಲು ನೆರವಾಗುವ ಮಹಿಳೆಯರ ಪೈಕಿ ಕೆಲವರು ಈಗ ಮೀನು ಕತ್ತರಿಸಿಕೊಡುವ ಕಾಯಕದಲ್ಲಿ ತೊಡಗಿದ್ದಾರೆ.

‘ನಮ್ಮ ಬದುಕು ಏನಿದ್ದರೂ ಇಲ್ಲೇ. ಮೀನುಗಾರಿಕೆ ಇದ್ದಾಗ ಕೆಲಸಕ್ಕೇನೂ ತೊಂದರೆ ಇಲ್ಲ. ಆದರೆ ನಿಷೇಧದ ಎರಡು ತಿಂಗಳು ಕಳೆಯುವುದು ತುಂಬ ಕಷ್ಟ. ಮೀನು ಸ್ವಚ್ಛಗೊಳಿಸಿ ಕತ್ತರಿಸಿಕೊಟ್ಟರೆ ಪ್ರತಿ ಗ್ರಾಹಕರು ₹10 ಕೊಡುತ್ತಾರೆ. ಅದೇ ಈಗಿನ ನಮ್ಮ ವರಮಾನ’ ಎಂದು ಮಳೆಗಾಲದ ಸಂಕಷ್ಟ ತೆರೆದಿಡುತ್ತಾರೆ ಮಂಗಳೂರಿನ ದಕ್ಕೆಯಲ್ಲಿಯ ಕಾರ್ಮಿಕ ಮಹಿಳೆ.

ಹಲವರು ದುಡಿಮೆಯ ಹಣದಲ್ಲೇ ಉಳಿತಾಯ ಮಾಡಿ ಎರಡು ತಿಂಗಳು ಕುಟುಂಬದವರೊಟ್ಟಿಗೆ ಕಳೆಯುತ್ತಾರೆ. ಆದರೆ ಅಂಕೋಲದ ಚೇತನ್ ಖಾರ್ವಿ ಅವರಂಥ ಮೀನುಗಾರರಿಗೆ ಎರಡು ತಿಂಗಳು ಸಂಕಷ್ಟದ ಸಮಯ. ಆಳಸಮುದ್ರದಲ್ಲಿ ಮೀನುಗಾರಿಕೆ ಮಾಡುವ ಕಾರ್ಮಿಕರು ‘ವಾರ್ಷಿಕ ರಜೆ’ಯಲ್ಲಿ ಊರಿಗೆ ತೆರಳುವಾಗ ಬೋಟ್ ಮಾಲೀಕರು ಒಂದಿಷ್ಟು ಹಣ ಕೊಡುತ್ತಾರಾದರೂ ಊರಿನಲ್ಲಿ ಬದಲಿ ವ್ಯವಸ್ಥೆ ಮಾಡಿಕೊಳ್ಳದೇ ಇದ್ದರೆ ಜೀವನ ಸಾಗಿಸುವುದು ಕಷ್ಟ. ಈ ಕಾರಣದಿಂದಲೇ ಚೇತನ್, ಅವರಂಥವರು ಮೀನುಗಾರಿಕೆ ಆದಷ್ಟು ಬೇಗ ಪುನರಾರಂಭ ಆಗಲಿ ಎಂದು ಕಾಯುತ್ತಿದ್ದರೆ, ಮನ್ನು ತಿರ್ಕಿಯವರಂಥವರು ‘ಮಂಗಳೂರಿಗೆ ಬಂದರೆ ಮೀನುಗಾರಿಕೆ ಖುಷಿ ನೀಡುತ್ತದೆ, ಊರಿಗೆ ಮರಳಿದರೆ ಡೆಕೊರೇಷನ್‌ನಲ್ಲಿ ಸಂತಸ ಕಾಣುತ್ತೇನೆ’ ಎಂದು ಹೇಳಿ ನಗೆ ಬೀರುತ್ತಾರೆ.

ಎಲ್ಲ ವಯೋಮಾನದವರಿಗೂ ಅವರ ಶ್ರಮಕ್ಕೆ ಅನುಸಾರ ಕೂಲಿ ತಂದುಕೊಡುವ ವೃತ್ತಿ ಇದು. ಹೀಗಾಗಿ ಹೆಚ್ಚು ಹೆಚ್ಚು ಕಾರ್ಮಿಕರನ್ನು ಇದು ಸೆಳೆಯುತ್ತಿದೆ. ಸ್ನೇಹಿತನೊಂದಿಗೆ ಮಂಗಳೂರು ದಕ್ಕೆಯಲ್ಲಿ ನಿಂತಿದ್ದ ಬಿಹಾರದ ಯುವಕ ಪರಮೇಶ್, ‘ಎರಡು ವರ್ಷಗಳಿಂದ ಇಲ್ಲಿ ಮೀನುಗಾರಿಕೆ ಸಂಸ್ಕರಣೆಯಲ್ಲಿ ದುಡಿಯುತ್ತಿದ್ದೇವೆ. ವಾರಕ್ಕೆ ₹ 9 ಸಾವಿರದ ವರೆಗೂ ಕೂಲಿ ತೆಗೆದುಕೊಂಡಿದ್ದಿದೆ. ರಜೆಯ ಅವಧಿಯಲ್ಲಿ ಊರಲ್ಲಿ ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದೆ. ಈಗ ಅಲ್ಲಿಯೂ ಕೆಲಸ ಇಲ್ಲ. ಹೀಗಾಗಿ ಬೇಗ ವಾಪಸಾಗಿದ್ದೇನೆ’ ಎಂದು ತನ್ನನ್ನು ಕೆಲಸಕ್ಕೆ ಕರೆದೊಯ್ಯುವವರನ್ನು ಹುಡುಕಲಾರಂಭಿಸಿದರು.

‘ಸಮುದ್ರದ ಮಧ್ಯೆಯೇ ನಮ್ಮ ಜೀವನ ಮತ್ತು ಜೀವ. ಬಿಸಿಲು, ಗಾಳಿಗೆ ಎದೆಯೊಡ್ಡಿ ಬೃಹತ್ ಮೀನುಗಳ ದಾಳಿಯ ಆತಂಕವನ್ನೂ ಮೀರಿ ಜೀವವನ್ನೇ ಪಣಕ್ಕಿಟ್ಟು ಮಾಡುವ ಕೆಲಸಕ್ಕೆ ಸೂಕ್ತ ಪ್ರತಿಫಲ ಸಿಗುತ್ತದೆಯಾದರೂ ಆರೋಗ್ಯ, ಜೀವನ ಭದ್ರತೆ ಇಲ್ಲ’ ಎಂಬುದು ಕಾರ್ಮಿಕರಾದ ಉದಯ್ ಕುಮಾರ್, ಮನ್ನು ತಿರ್ಕಿ, ನವೀನ್ ಅವರ ವೇದನೆ.

ಮೀನುಗಾರರಿಗೆ ಮನೆ ನಿರ್ಮಿಸಿಕೊಡುವ ಮತ್ಸ್ಯಾಶ್ರಯ ಯೋಜನೆ, ಮೀನುಗಾರಿಕೆ ವೇಳೆ ಮೃತರಾದವರ ಕುಟುಂಬಕ್ಕೆ ಪರಿಹಾರ ಇತ್ಯಾದಿ ಯೋಜನೆಗಳು ರಾಜ್ಯದಲ್ಲಿ ಜಾರಿಯಲ್ಲಿವೆ. ಆದರೆ, ಹೊರರಾಜ್ಯದಿಂದ ಬಂದವರಿಗೆ ಮತ್ತು ಅವರ ಕುಟುಂಬದವರಿಗೆ ಇದ್ಯಾವುದೂ ಅನ್ವಯವಾಗುವುದಿಲ್ಲ. ರಾಜ್ಯದ ಮೀನುಗಾರರಿಗೂ ಇದರ ಲಾಭ ಪಡೆಯಲು ಅನೇಕ ಅಡ್ಡಿ. ಹೀಗಾಗಿ ಮೀನುಗಾರರ ಬದುಕು ‘ಆರಕ್ಕೆ ಏರುವ’ ಕಾಲ ಇನ್ನೂ ಸನ್ನಿಹಿತವಾಗಿಲ್ಲ.

‘ಬೋಟ್ ನಿರ್ವಹಣೆ, ಕೂಲಿ, ತೆರಿಗೆ ಮುಂತಾದವನ್ನೆಲ್ಲ ಕಳೆದು ನಮಗೂ ಸಿಗುವುದು ಅತ್ಯಲ್ಪ ಲಾಭ. ಚೀನಾದಿಂದ ದೊಡ್ಡ ಯಂತ್ರಗಳು, ಸಾಗರ ಜೀವವೈವಿಧ್ಯವನ್ನು ವಿನಾಶದ ಅಂಚಿಗೆ ತೆಗೆದುಕೊಂಡು ಹೋಗುತ್ತಿರುವ ಅಪಾಯಕಾರಿ ಬಲೆಗಳು ಬಂದ ಮೇಲಂತೂ ನಿಯತ್ತಿನಿಂದ ಈ ವೃತ್ತಿ ಮಾಡುವವರ ಪಾಡು ಹೇಳತೀರದು’ ಎಂದು ಬೋಟ್ ಮಾಲೀಕರೂ ಅಳಲು ತೋಡಿಕೊಳ್ಳುತ್ತಾರೆ.



ಪರ್ಸಿನ್ ಬೋಟ್ ದುರಸ್ತಿಗೆ ಪ್ರತಿ 2 ವರ್ಷಕ್ಕೊಮ್ಮೆ ಕನಿಷ್ಠ 5 ರಿಂದ ₹15 ಲಕ್ಷದವರೆಗೆ ವ್ಯಯಿಸಬೇಕು. ಮೀನುಗಾರಿಕೆ ಚಟುವಟಿಕೆ ಉತ್ತಮವಾಗಿ ಇರದಿದ್ದರೆ ದೊಡ್ಡ ಆರ್ಥಿಕ ಹೊಡೆತ ಎದುರಿಸಬೇಕಾಗುತ್ತದೆ.

ಅಭಿಷೇಕ ದುರ್ಗೇಕರ, ಕಾರವಾರ ಪರ್ಸಿನ್ ಬೋಟ್ ಮಾಲೀಕ



ಬೋಟುಗಳಲ್ಲಿ ದುಡಿಯುವ ಹೊರರಾಜ್ಯದ ಕಾರ್ಮಿಕರು ಸೂಕ್ತ ದಾಖಲೆಗಳನ್ನು ಸಲ್ಲಿಸುವುದಿಲ್ಲ. ಅವರಿಗೆ ಗುರುತಿನ ಕಾರ್ಡ್ ನೀಡಲು ತಾಂತ್ರಿಕ ಸಮಸ್ಯೆಗಳಿವೆ. ಇದರಿಂದ ದುರಂತದ ಸಮಯದಲ್ಲಿ ಅವರಿಗೆ ಪರಿಹಾರ ಒದಗಿಸುವುದು ಕಷ್ಟ.

ಬಬಿನ್ ಬೋಪಣ್ಣ

ಜಂಟಿ ನಿರ್ದೇಶಕ, ಮೀನುಗಾರಿಕೆ ಇಲಾಖೆ, ಕಾರವಾರ



ಊಟ, ವಸತಿಗೆ ಸಮಸ್ಯೆ ಇಲ್ಲ. ಆದರೆ ಉಳಿದ ಮೀನುಗಾರರಂತೆ ನಮಗೂ ಸರ್ಕಾರದ ಸೌಲಭ್ಯಗಳನ್ನು ಒದಗಿಸಿದರೆ ಅನುಕೂಲ ಆಗುತ್ತದೆ. ಆಳಸಮುದ್ರದಲ್ಲಿ, ಜೀವಭಯದಲ್ಲಿ ಕೆಲಸ ಮಾಡುವ ಸ್ಥಿತಿಯಿದೆ.

ಅಭಯ್ ಖಜೋರ್, ಜಾರ್ಖಂಡ್‌ನ ಮೀನುಗಾರಿಕೆ ಕಾರ್ಮಿಕ

ಮಂಗಳೂರು ದಕ್ಕೆಯೊಂದರಲ್ಲೇ ಈ ಮೀನುಗಾರಿಕೆಯ ಹಂಗಾಮಿನಲ್ಲಿ ಮೀನು ಮಾರಾಟ ಮತ್ತು ರಫ್ತಿನಿಂದ ₹4,150 ಕೋಟಿಗೂ ಹೆಚ್ಚು ವಹಿವಾಟು ಆಗಿದೆ. ಪ್ರತಿ ವರ್ಷ ಈ ಮೊತ್ತ ಹೆಚ್ಚುತ್ತಲೇ ಇದೆ. ಕಳೆದ ವರ್ಷ ₹3,946 ಕೋಟಿ ಮೊತ್ತದ ವಹಿವಾಟು ನಡೆದಿದ್ದರೆ 2020 ಮತ್ತು 21ರಲ್ಲಿ ಕ್ರಮವಾಗಿ ₹1,760 ಕೋಟಿ ಮತ್ತು ₹2,090 ಕೋಟಿ ವಹಿವಾಟಿಗೆ ದಕ್ಕೆ ಸಾಕ್ಷಿಯಾಗಿದೆ. ಆದರೆ ಇದರ ಪ್ರಯೋಜನ ಪಡೆದುಕೊಳ್ಳುವವರು ಕೆಲವರು ಮಾತ್ರ ಎಂಬ ದುಗುಡ ಮೀನುಗಾರರಲ್ಲಿ ಮಾತ್ರವಲ್ಲ, ಬೋಟ್ ಮಾಲೀಕರಲ್ಲೂ ಇದೆ.

ಬದಲಾಗುವ ದಕ್ಕೆ– ಬಂದರು ಚಹರೆ

ಆಳ ಸಮುದ್ರ ಮೀನುಗಾರಿಕೆ ಸಂದರ್ಭದಲ್ಲಿ ಮೀನುಗಾರಿಕೆ ಕೆಲಸಗಾರರು, ಮೀನು ಖರೀದಿಸುವವರು ಮತ್ತು ಸಾಗಿಸುವವರಿಂದ ಗಿಜಿಗುಡುತ್ತಿರುವ ಬಂದರು ಮತ್ತು ದಕ್ಕೆಯ ಚಹರೆ ಟ್ರಾಲ್ ಬೋಟ್ ಮೀನುಗಾರಿಕೆ ನಿಷೇಧವಾಗುತ್ತಿದ್ದಂತೆ ಬದಲಾಗಿದೆ. ಬೋಟ್‌ಗಳು ದಕ್ಕೆಯಲ್ಲಿಲಂಗರು ಹಾಕಿವೆ. ಬೋಟ್ ಬಿಲ್ಡಿಂಗ್ ಯಾರ್ಡ್‌ನಲ್ಲಿ ಬೋಟ್‌ಗಳ ದುರಸ್ತಿ ಕಾರ್ಯ ನಡೆದಿದೆ. ಬಲೆ ಹೆಣೆಯುವ ಮತ್ತು ಹರಿದ ಬಲೆಯನ್ನು ಸರಿಪಡಿಸುವ ಕಾರ್ಯವೂ ಜೋರಾಗಿ ನಡೆದಿದೆ.

‘ಬೋಟ್ ಶುಚಿಗೊಳಿಸುವ, ಬಲೆ ರಿಪೇರಿ ಕೆಲಸ ಗೊತ್ತಿರುವವರು ಇಲ್ಲೇ ಇದ್ದು ಆ ಕಾರ್ಯದಲ್ಲಿ ತೊಡಗಿಸಿಕೊಳ್ಳುತ್ತೇವೆ’ ಎಂದು ಜಾರ್ಖಂಡ್‌ನ ರಾಂಚಿ ಜಿಲ್ಲೆಯ ಕಾರ್ಮಿಕ ಅಭಯ್ ಖಜೋರ್ ಹೇಳುತ್ತಾರೆ. ಮಂಗಳೂರಿನ ರಾಬರ್ಟ್, ‘30 ವರ್ಷಗಳಿಂದ ಇಲ್ಲಿ ಕೆಲಸ ಮಾಡುತ್ತಿದ್ದೇನೆ. ಎರಡು ತಿಂಗಳು ಬಲೆ ರಿಪೇರಿ, ಬೋಟ್ ಸ್ವಚ್ಛತೆಯ ಹೊಣೆ. ಎಲ್ಲ ಕೆಲಸ ಗೊತ್ತಿರುವ ನನ್ನಂತಹವರಿಗೆ ಇಡೀ ವರ್ಷ ದುಡಿಮೆ ಇದ್ದೇ ಇರುತ್ತದೆ’ ಎನ್ನುತ್ತಾರೆ.

ಮಂಗಳೂರು ದಕ್ಕೆಯಲ್ಲಿ ಬೋಟ್‌ಗೆ ಬಣ್ಣ ಬಳಿಯುತ್ತಿದ್ದ ಉಕ್ಕಡಗಾತ್ರಿಯ ಬಸವರಾಜ, ‘ನಾನು ಸುಮಾರು 15 ವರ್ಷಗಳಿಂದ ಮಲ್ಪೆ ದಕ್ಕೆಯಲ್ಲಿ ಪೇಂಟಿಂಗ್ ವೃತ್ತಿಯಲ್ಲಿ ತೊಡಗಿದ್ದೇನೆ. ಮೂರು ಬೋಟ್‌ಗಳಿಗೆ ಬಣ್ಣ ಬಳಿಯಲು ಇಲ್ಲಿಗೆ ಜನರನ್ನು ಕರೆಸಿಕೊಂಡಿದ್ದಾರೆ. ಈ ಎರಡು ತಿಂಗಳು ನಮಗೆ ಬಿಡುವಿಲ್ಲದ ಕೆಲಸ’ ಎನ್ನುತ್ತಾರೆ.

ಮಂಗಳೂರಿನಲ್ಲಿ 63 ಐಸ್ ಘಟಕಗಳು ಇದ್ದು 11 ಶೈತ್ಯಾಗಾರ, 14 ಫಿಶ್ ಮಿಲ್‌ಗಳು ಇವೆ. ಇಲ್ಲೆಲ್ಲ ಈ ಎರಡು ತಿಂಗಳು ನವೀಕರಣ ಕಾರ್ಯ ನಡೆಯುತ್ತದೆ. ನಗರದಲ್ಲಿರುವ 10 ರಫ್ತು ಕಂಪನಿಗಳಲ್ಲಿ ನಿರಂತರ ಕೆಲಸ ನಡೆಯುತ್ತಿರುತ್ತದೆ. ಮೀನುಗಾರಿಕೆ ನಿಷೇಧದ ಕೆಲವು ದಿನ ಆಗಾಗಲೇ ಹಿಡಿದ ಮೀನು ಸಂಸ್ಕರಿಸಿ ಕಳುಹಿಸುವ ಕೆಲಸ ನಡೆದರೆ ನಂತರ ತಮಿಳುನಾಡು ಮತ್ತು ಆಂಧ್ರದಿಂದ ಬರುವ ಮೀನುಗಳ ಶೇಖರಣೆ ಮತ್ತು ರಫ್ತು ಕಾರ್ಯ ನಡೆಯುತ್ತದೆ. ಬಂಗಾಳ ಕೊಲ್ಲಿಯಲ್ಲಿ ಅರಬ್ಬಿ ಸಮುದ್ರಕ್ಕಿಂತ ಎರಡು ತಿಂಗಳು ಮೊದಲೇ ನಿಷೇಧ ಆರಂಭವಾಗಿರುತ್ತದೆ. ಹೀಗಾಗಿ ನಿಷೇಧದ ಸಂದರ್ಭದಲ್ಲಿ ಪಶ್ಚಿಮ ಕರಾವಳಿ ಭಾಗದ ಜನರಿಗೂ ಕಂಪನಿಗಳಿಗೂ ಪೂರ್ವ ಕರಾವಳಿಯ ಮೀನು ಯಥೇಚ್ಛವಾಗಿ ಲಭಿಸುತ್ತದೆ. ಪರ್ಸಿನ್ ಬೋಟ್ ಮತ್ತು ನಾಡದೋಣಿಗಳಲ್ಲಿ ತೆರಳಿ ಹಿಡಿಯುವ ಮೀನು ಕೂಡ ಜೂನ್–ಜುಲೈ ತಿಂಗಳಲ್ಲಿ ಇಲ್ಲಿನವರ ಕೈ ಹಿಡಿಯುತ್ತದೆ. ಪರ್ಸಿನ್ ಬೋಟ್‌ಗಳಲ್ಲಿ ಹಿಡಿಯುವ ಮೀನಿಗೆ ವಿದೇಶದಲ್ಲಿ ಹೆಚ್ಚು ಬೇಡಿಕೆ ಇದೆ ಎಂದು ಬೋಟ್ ಮಾಲೀಕ ಡೊನಾಲ್ಡ್ ಪಿಂಟೊ ಹೇಳುತ್ತಾರೆ.

ಬೋಟ್ ದುರಸ್ತಿ ದೊಡ್ಡ ಸವಾಲು

ದುರಸ್ತಿ ಯಾರ್ಡ್‌ನಲ್ಲಿ ಬೋಟ್‌ಗಳ ದುರಸ್ತಿಯ ಕೆಲಸ ಹಗಲು–ರಾತ್ರಿ ನಡೆಯುತ್ತಿರುತ್ತದೆ. ಹೆಚ್ಚು ಹಾಳಾಗಿದ್ದರೆ ಪ್ರತಿ ಬೋಟ್ ದುರಸ್ತಿಗೆ ₹ 6 ಲಕ್ಷದಷ್ಟು ಖರ್ಚಾಗುತ್ತದೆ. ಬೋಟ್, ಬಲೆ ಮುಂತಾದವುಗಳ ದುರಸ್ತಿ ಮಾಡಿ ಮತ್ತೊಮ್ಮೆ ಬಳಕೆಗೆ ಸಿದ್ಧಗೊಳಿಸಬೇಕಾದರೆ ಪ್ರತಿ ವರ್ಷ ಪ್ರತ್ಯೇಕವಾಗಿ ಒಂದಿಷ್ಟು ಹಣ ತೆಗೆದಿರಿಸಬೇಕಾಗುತ್ತದೆ ಎನ್ನುತ್ತಾರೆ ಟ್ರಾಲ್ ಬೋಟ್ ಮತ್ತು ಪರ್ಸಿನ್ ಬೋಟ್‌ಗಳ ಮಾಲೀಕರು.

‘ದುರಸ್ತಿ, ಪೇಂಟಿಂಗ್, ಬಲೆ ರಿಪೇರಿ ಎಲ್ಲ ಮುಗಿಸಿ ಸಮುದ್ರಕ್ಕೆ ಬೋಟ್ ಇಳಿಸುವಾಗ ಹಾಕುವ ಭಾರಿ ಪ್ರಮಾಣದ ಡೀಸೆಲ್ ಇತ್ಯಾದಿಗಳಿಗೆ ಕನಿಷ್ಠ ₹10 ಲಕ್ಷ ಬೇಕಾಗುತ್ತದೆ. ಇದರ ನಡುವೆ ಮೀನುಗಾರರು ಮತ್ತು ಇತರ ಕಾರ್ಮಿಕರ ಕ್ಷೇಮವನ್ನೂ ನೋಡಿಕೊಳ್ಳಬೇಕಾಗುತ್ತದೆ. ಹೀಗಾಗಿ ಬೋಟ್ ಮಾಲೀಕರಿಗೂ ಮೀನುಗಾರಿಕೆ ಭಾರಿ ಲಾಭ ತಂದುಕೊಡುವ ಉದ್ಯಮವೇನಲ್ಲ’ ಎನ್ನುತ್ತಾರೆ ಮಂಗಳೂರಿನ ಟ್ರಾಲ್ ಬೋಟ್ ಮಾಲೀಕರ ಸಂಘದ ಅಧ್ಯಕ್ಷ ಚೇತನ್ ಬೇಂಗ್ರೆ.

‘ಬಲೆ ಹೆಣೆಯಲು ಸರಿಯಾದ ಜಾಗ ಇಲ್ಲ. ದಕ್ಕೆ ಸಮೀಪದಲ್ಲಿ ಹರಡಿರುವ ವಿಶಾಲವಾದ ಪ್ರದೇಶದಲ್ಲಿ ಟೆಂಟ್ ಹಾಕಿಕೊಡಬೇಕು ಎಂಬ ಬೇಡಿಕೆ ಇರಿಸಿ ವರ್ಷಗಳೇ ಕಳೆದಿವೆ. ಬಲೆಗಳನ್ನು ಸುರಕ್ಷಿತವಾಗಿ ಇರಿಸುವುದಕ್ಕೂ ಅನುಕೂಲಕರ ವಾತಾವರಣ ಇಲ್ಲ’ ಎಂದು ದೂರುತ್ತಾರೆ ಡೊನಾಲ್ಡ್ ಪಿಂಟೊ.

‘ಮಂಗಳೂರು ಬಂದರಿನ ಮೂರನೇ ಹಂತದ ಕಾಮಗಾರಿಗೆ ಅನುಮೋದನೆ ಲಭಿಸಿದರೆ ಮಾತ್ರ ಬಲೆ ನೇಯ್ಗೆಗೆ ಶೆಡ್ ನಿರ್ಮಾಣ ಮಾಡಲು ಸಾಧ್ಯ. ಅಲ್ಲಿಯವರೆಗೆ ಈಗಿನ ಪರಿಸ್ಥಿತಿಯೇ ಮುಂದುವರಿಯಲಿದೆ’ ಎಂಬುದು ಮೀನುಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಕೆ.ಹರೀಶ್ ಕುಮಾರ್ ಅವರ ವಿವರಣೆ.

● **ಪೂರಕ ಮಾಹಿತಿ:** ವಿಕ್ರಂ ಕಾಂತಿಕೆರೆ (ಮಂಗಳೂರು), ಗಣಪತಿ ಹೆಗಡೆ (ಕಾರವಾರ), ಬಾಲಚಂದ್ರ ಎಚ್. (ಉಡುಪಿ)

2 ತಿಂಗಳಲ್ಲಿ ದಕ್ಕಿದ್ದು 20 ದಿನ ಮಾತ್ರ

ಕರಾವಳಿಯಲ್ಲಿ ಸಾಂಪ್ರದಾಯಿಕ ನಾಡದೋಣಿ ಮೀನುಗಾರಿಕೆ ಮಳೆಯೊಂದಿಗಿನ ಅದೃಷ್ಟದ ಆಟದಂತೆ. ಸಮಯಕ್ಕೆ ಸರಿಯಾಗಿ ವ್ಯಾಪಕ ಮಳೆಯಾದರೆ ಮೀನಿನ ಸುಗ್ಗಿಯಾಗುತ್ತದೆ. ಬದಲಾಗಿ, ಚಂಡಮಾರುತದ ಅಬ್ಬರವೇ ಹೆಚ್ಚಾದರೆ ಮೀನಿಗೆ ಬರ ಎದುರಾಗುತ್ತದೆ.

ಆಳಸಮುದ್ರ ಮೀನುಗಾರಿಕೆಗೆ ನಿರ್ಬಂಧವಿದ್ದ ಈ ಎರಡು ತಿಂಗಳಲ್ಲಿ ಸಾಂಪ್ರದಾಯಿಕ ನಾಡದೋಣಿ ಮೀನುಗಾರಿಕೆಗೆ ಮಾತ್ರ ಅವಕಾಶ ಇರುತ್ತದೆ. ಈ ಅವಧಿಯಲ್ಲಿ ಮುಂಗಾರು ಪ್ರವೇಶವಾಗಿ ಕಡಲಿನಲ್ಲಿ ಚಂಡಮಾರುತ ಕಾಣಿಸಿಕೊಂಡು ನಾಲ್ಕೈದು ದಿನಗಳ ಬಳಿಕ ಸಾಂಪ್ರದಾಯಿಕ ನಾಡದೋಣಿ ಮೀನುಗಾರಿಕೆಗೆ ಚಾಲನೆ ಸಿಗುತ್ತದೆ. ಈ ವರ್ಷ ಜಿಲ್ಲೆಗೆ ಮುಂಗಾರು ತಡವಾಗಿ ಪ್ರವೇಶವಾಗಿರುವುದು ಹಾಗೂ ಬಿಪೊರ್‌ಜಾಯ್ ಚಂಡಮಾರುತದ ಪರಿಣಾಮ ಜೂನ್ ಬದಲಾಗಿ ಜುಲೈ 11ಕ್ಕೆ ಮೀನುಗಾರಿಕೆ ಆರಂಭವಾಗಿದೆ. ಅಂದರೆ, 2 ತಿಂಗಳಲ್ಲಿ ನಾಡದೋಣಿ ಮೀನುಗಾರಿಕೆಗೆ ದಕ್ಕಿರುವುದು 20 ದಿನಗಳು ಮಾತ್ರ.

ಯಾಂತ್ರಿಕ ಮೀನುಗಾರಿಕೆಗೆ ಆರಂಭವಾಗುತ್ತಿದ್ದಂತೆ ದಕ್ಕೆಗೆ (ದೋಣಿ ನಿಲುಗಡೆ ಪ್ರದೇಶ) ದೋಣಿಗಳ ಪ್ರವೇಶ ಕಷ್ಟವಾಗುವುದರಿಂದ ನಾಡದೋಣಿ ಮೀನುಗಾರಿಕೆ ನಿಲ್ಲಿಸಬೇಕಾಗುತ್ತದೆ ಎಂದು ಬೇಸರ ವ್ಯಕ್ತಪಡಿಸುತ್ತಾರೆ ಉಡುಪಿಯ ನಾಡದೋಣಿ ಮಾಲೀಕರ ಸಂಘದ ಅಧ್ಯಕ್ಷ ಸುಂದರ್ ಸಾಲ್ಯಾನ್.


ಸದ್ಯ ಜೂನ್ 1ರಿಂದ ಜುಲೈ 30ರವರೆಗೆ ನಾಡದೋಣಿ ಮೀನುಗಾರಿಕೆ ಅವಕಾಶವಿದ್ದು ಈ ಅವಧಿಯನ್ನು ಜೂನ್ 15ರಿಂದ ಆಗಸ್ಟ್ 15ರವರೆಗೆ ವಿಸ್ತರಿಸಿದರೆ ನಾಡದೋಣಿ ಮೀನುಗಾರಿಕೆಗೆ ಹೆಚ್ಚಿನ ಅವಧಿ ಸಿಗಲಿದೆ. ಈ ಸಂಬಂಧ ಸರ್ಕಾರಕ್ಕೂ ಮನವಿ ಸಲ್ಲಿಸಲಾಗಿದೆ. ಆದರೆ, ಗುಜರಾತ್‌ನಿಂದ ಕೇರಳದವರೆಗೂ ಒಂದೇ ನಿಯಮವಿದ್ದು ಅವಧಿ ಬದಲಿಸುವುದು ಕಷ್ಟ ಎಂಬ ಉತ್ತರ ದೊರೆತಿದೆ. ನಾಡದೋಣಿ ಮೀನುಗಾರರ ಹಿತದೃಷ್ಟಿಯಿಂದ ಸರ್ಕಾರ ಮನವಿಗೆ ಸ್ಪಂದಿಸಬೇಕು ಎಂಬುದು ಅವರ ಮನವಿ.



ಕಾರವಾರದ ಬೈತಕೋಲದ ಮೀನುಗಾರಿಕಾ ಬಂದರಿನಲ್ಲಿ ಕಾರ್ಮಿಕರು ಪರ್ಸಿನ್ ಬೋಟ್ ದುರಸ್ತಿ ಮಾಡುತ್ತಿರುವುದು

ಪ್ರಜಾವಾಣಿ ಚಿತ್ರ:ದಿಲೀಪ್ ರೇವಣಕರ್

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 30-7-1998

● **ಕಾವೇರಿ ಜಲವಿವಾದ ಪರಿಹಾರಕ್ಕೆ ಕೇಂದ್ರದ ಪರಿಷ್ಕೃತ ಯೋಜನೆ**

ನವದೆಹಲಿ, ಜುಲೈ 29 (ಪಿಟಿಐ)– ಕಾವೇರಿ ವಿವಾದಕ್ಕೆ ಪರಿಹಾರ ಕಂಡುಹಿಡಿಯುವ ಯತ್ನವಾಗಿ ಕೇಂದ್ರ ಸರ್ಕಾರ ಕಾವೇರಿ ನ್ಯಾಯಮಂಡಳಿ ಮಧ್ಯಂತರ ತೀರ್ಪು ಜಾರಿಗೆ ಪರಿಷ್ಕೃತ ಕರಡು ಯೋಜನೆಯೊಂದನ್ನು ಆರಂಭಿಸಿದೆ.

1997ರಲ್ಲಿ ರೂಪಿಸಲಾದ ಮೂಲ ಯೋಜನೆಯಲ್ಲಿರುವ ಕೆಲವು ವಿವಾದಿತ ಅಂಶಗಳನ್ನು ಕೈಬಿಡಲು ನಿರ್ಧರಿಸಲಾಗಿದೆ.

50 ವರ್ಷಗಳ ಹಿಂದೆ

ಸೋಮವಾರ, 30-7-1973

● **ಭಾರತ– ಪಾಕ್ ನಡುವೆ ಸುದೀರ್ಘ ಮಾತುಕತೆ: ಹಕ್ಸರ್ ಆಶಾವಾದ**

ರಾವಲ್ಪಿಂಡಿ, ಜುಲೈ 29– ಮತ್ತಷ್ಟು ಸುತ್ತು ಮಾತುಕತೆ ನಡೆಯುವ ಸಾಧ್ಯತೆಯ ಆಶಾವಾದದೊಡನೆ ಭಾರತ ಮತ್ತು ಪಾಕಿಸ್ತಾನದ ನಿಯೋಗಗಳ ನಡುವಣ ಈಗಿನ ಸರಣಿ ಮಾತುಕತೆಯ ದೀರ್ಘಾಧಿವೇಶನ ಇಂದು ಇಲ್ಲಿ ಅಂತ್ಯವಾಯಿತು.

‘ನಾನು ಇನ್ನೂ ಆಶಾವಾದಿಯಾಗಿದ್ದೇನೆ. ಅಲ್ಲದೇ ನಾನು ಇನ್ನೂ ಆಶಾವಾದದಲ್ಲೇ ಇದ್ದೇನೆ’ ಎಂದು ಉಭಯ ದೇಶಗಳ ನಿಯೋಗದ ನಡುವೆ ಬೆಳಿಗ್ಗೆ ಎರಡೂವರೆ ಗಂಟೆ ಮಾತುಕತೆ ಬಳಿಕ ಭಾರತೀಯ ನಿಯೋಗದ ನಾಯಕ ಪಿ.ಎನ್. ಹಕ್ಸರ್ ತಿಳಿಸಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಭಾನುವಾರ ಜುಲೈ 30, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಅಧಿಕ ಶ್ರಾವಣ ಶುದ್ಧ ದ್ವಾದಶಿ ಗಂ. 10-35 ನಕ್ಷತ್ರ: ಮೂಲ ಗಂ. 21-33 ಯೋಗ: ಐಂದ್ರ ಗಂ. 06-34 ನಂತರ ವೈಧೃತಿ ಗಂ. 27-01 ಕರಣ: ಬಾಲವ ಗಂ. 10-35, ಕರ್ಕಾಟಕ ಮಾಸದ 13 ನೇ ದಿನ, ಮಳೆನಕ್ಷತ್ರ: ಪುಷ್ಯ 3. ರಾಹುಕಾಲ: ಸಾಯಂಕಾಲ 04-30 - 06-00
ಸೂರ್ಯೋದಯ: 06-19 ಸೂರ್ಯಾಸ್ತ: 06-55
ಮುಸ್ಲಿಂ ದಿನಾಂಕ: 11 ಮೊಹರಮ್
ಅದೃಷ್ಟ ಸಂಖ್ಯೆ: 7, 10

ಮೇಷ: ನಿಮಗೆ ಬೇಕೆನ್ನಿಸಿದ ಕಾಲಕ್ಕೆ ಸ್ವಜನರ ಸಹಾಯ ಸಿಗದಾಗುವುದು. ಇತರರ ಸಹಾಯವನ್ನು ಅಪೇಕ್ಷಿಸುವುದಕ್ಕಿಂತ ನಿಮ್ಮ ಕೆಲಸವನ್ನು ಆದಷ್ಟು ನೀವೇ ಮಾಡಿಕೊಳ್ಳುವುದು ಉತ್ತಮ. ಹೂಡಿಕೆಯು ಬುದ್ಧಿವಂತಿಕೆಯಿಂದಾಗಲಿ.

ವೃಷಭ: ಸಂಪಾದನೆ ಮಾಡಲು ಹೊಸ ಮೂಲವೊಂದನ್ನು ಕಲ್ಪಿಸಿಕೊಳ್ಳುವಿರಿ. ಕಾರ್ಯವು ಮಧ್ಯದಲ್ಲಿ ನಿಲ್ಲುವ ಸಾಧ್ಯತೆ ಇರುವುದರಿಂದ ದೃಢವಾದ ನಿರ್ಧಾರ ಮಾಡಿದ ನಂತರವಷ್ಟೇ ಹೊಸ ಕಾರ್ಯಾರಂಭ ಮಾಡುವುದು ಒಳ್ಳೆಯದು.

ಮಿಥುನ: ಹಳೆಯ ಕೆಲಸವನ್ನೇ ಹೊಸ ಹಾಗೂ ಗ್ರಾಹಕರನ್ನು ಸೆಳೆಯುವಂಥ ನಿಯಮಗಳನ್ನು ಹಾಕಿಕೊಂಡು ಪುನಃ ಪ್ರಾರಂಭ ಮಾಡುವಿರಿ. ಧಾರ್ಮಿಕ ಕಾರ್ಯಕ್ರಮವನ್ನು ಸ್ವತಃ ಮಾಡುವಿರಿ ಅಥವಾ ಭಾಗವಹಿಸುವಿರಿ.

ಕರ್ಕಾಟಕ: ರಾಜಕೀಯ ವ್ಯಕ್ತಿಗಳಿಗೆ ಬಂದ ಹೊಸ ಜವಾಬ್ದಾರಿಯಲ್ಲಿ ಜನಾನುರಾಗ ಹೆಚ್ಚಿಸಿಕೊಳ್ಳುವುದು ಅನಿವಾರ್ಯವಾಗುವುದು. ಚರ ಆಸ್ತಿಯನ್ನು ಸಂಪಾದನೆ ಮಾಡುವ ಕನಸು ಈಡೇರುವ ಅವಕಾಶಗಳು ಇರುತ್ತವೆ.

ಸಿಂಹ: ನಿಮ್ಮ ನಿಷ್ಕಪಟ ಸಮಾಜ ಸೇವೆಯನ್ನು ಕುಟುಂಬದವರು ಹಾಗೂ ಸಮಾಜದವರು ಗುರುತಿಸಿ ಶ್ಲಾಘಿಸುವರು. ಅನೇಕ ಕಡೆಯಿಂದ ಸಹಾಯ ದೊರೆಯುವುದು. ಮಕ್ಕಳ ಆರೋಗ್ಯ ಹದಗೆಡಬಹುದು.

ಕನ್ಯಾ: ಜಾಹಿರಾತುಗಳಲ್ಲಿ ತೋರಿಸಿದ್ದನ್ನು ಪರಿಶೀಲಿಸದೆ ಹಣವ್ಯಯ ಮಾಡಿದಲ್ಲಿ ಮೋಸ ಹೋಗುವುದು ಕಟ್ಟಿಟ್ಟ ಬುತ್ತಿ. ಪ್ರಬುದ್ಧತೆಯಿಂದ ಪತಿ ಪತ್ನಿಯರ ನಡುವೆ ಸಾಮರಸ್ಯ ಹೆಚ್ಚುತ್ತದೆ.

ತುಲಾ: ದೂರದ ಪ್ರಯಾಣದ ಮೊದಲು ಅಲ್ಲಿನ ಸ್ಥಿತಿಗತಿಗಳನ್ನು ಬಲ್ಲವರಿಂದ ವಿಚಾರಿಸುವುದು ಸೂಕ್ತ. ಸ್ಪರ್ಧಾತ್ಮಕ ಪರೀಕ್ಷೆಗಾಗಿ ತಯಾರಾಗುತ್ತಿರುವವರು ಯಾವುದೇ ಸಣ್ಣ ವಿಷಯಗಳನ್ನು ಸಹ ನಿರ್ಲಕ್ಷ್ಯ ಮಾಡುವಂತಿಲ್ಲ.

ವೃಶ್ಚಿಕ: ಯಾವುದರಲ್ಲಾದರೂ ಗೆಲುವನ್ನು ಬಯಸುತ್ತಿದ್ದರೆ ನಿಮ್ಮ ಆಲಸ್ಯತನ ಬಿಟ್ಟು ಗುರಿ ತಲುಪಲು ಶ್ರಮಿಸಬೇಕು. ಹಿರಿಯರೊಂದಿಗೆ ವಿನಯವನ್ನು ಬಿಟ್ಟು ಮಾತನಾಡಿದಲ್ಲಿ ನಿಮ್ಮ ಗೌರವವನ್ನು ನೀವೇ ಕಳೆದುಕೊಳ್ಳುವಿರಿ.

ಧನು: ನಿಮ್ಮ ಎದುರು ನಿಮ್ಮ ಸಹೋದರ ಸಹೋದರಿಯರನ್ನು ಹೊಗಳಿದ ಕಾರಣ ಮುನಿಸಿಕೊಳ್ಳುವ ಸಾಧ್ಯತೆ ಇದೆ. ಗೃಹಿಣಿಯರು ದೇವರಿಗೆ ವಿಶೇಷ ಪೂಜೆ ನಡೆಸುವ ಮೂಲಕ ಪುಣ್ಯ ಸಂಪಾದನೆಯನ್ನು ಮಾಡುವಿರಿ.

ಮಕರ: ನೀವು ಮಾಡಿದ ಹಳೇ ತಪ್ಪುಗಳನ್ನೇ ಮತ್ತೆ ಮತ್ತೆ ಹೇಳುವ ಮೂಲಕ ನಿಮ್ಮನ್ನು ಘಾಸಿಗೊಳಿಸುವ ಜನರು ನಿಮಗೆ ಇಂದು ಎದುರಾಗಬಹುದು. ಅನವಶ್ಯಕ ಕೆಲಸಗಳನ್ನು ಮಾಡಿ ದಿನವನ್ನು ಹಾಳು ಮಾಡದಿರಿ.

ಕುಂಭ: ಪ್ರಭಾವಿ ವ್ಯಕ್ತಿಗಳ ಸಹಾಯ ಬಳಸಿಕೊಂಡು ನಿಮ್ಮ ಉದ್ಯೋಗದಲ್ಲಿ ಬರಬಹುದಾದ ಸಮಸ್ಯೆಗಳನ್ನು ನಿವಾರಿಸಿಕೊಳ್ಳುವ ಯೋಚನೆಯನ್ನು ನಡೆಸುವಿರಿ. ವ್ಯಾಪಾರದಲ್ಲಿ ಅತ್ಯಂತ ಸ್ಪರ್ಧೆ ಇರುವುದು.

ಮೀನ: ಮೋಸದಿಂದಾಗಿ ಬೇರೆಯವರ ಕೈ ಸೇರಿದ ನಿಮ್ಮ ಹಣ ಹಿಂತಿರುಗುವ ಸೂಚನೆಗಳು ಕಾಣುತ್ತವೆ. ಪತ್ತೇದಾರಿ ಕೆಲಸ ಮಾಡುವವರು ಕಾನೂನು ಬಾಹಿರವಾದ ಮಾರ್ಗಗಳನ್ನು ಅನುಸರಿಸದಂತೆ ಕೆಲಸ ಮಾಡಿ.

ಪದಬಂಧ 5395


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಕರದೊಳಗಿರುವ ಬಂಗಾರ (4)
3.ಕಾಲು ನಡಿಗೆಯಿಂದ ಸಾಗುವವನು (4)
5.ತಾರ ನುಡಿಸಿದ ತಂತಿವಾದ್ಯ (3)
6.ದೇವತೆಗಳಿರುವ ಜಗತ್ತು (4)
8.ಜೀರ್ಣಾಂಗವಿದು (3)
10.ನಡುವೆ ಕೀ ಹಿಡಿದಿರುವ ಲಾಯರ್! (3)
12.ಈ ತರ ತಮ್ಮನಿಗೆ ತೋರಿದ ಭೇದಭಾವ (4)
15.ಅನೇಕ ಚಿಕ್ಕ ಚಿಕ್ಕ ಮನೆಗಳುಳ್ಳ ಅವಾರ (3)
16.ಕನ್ನಡಿಗ ಧರಿಸಿರುವ ಹೆಲ್ಮೆಟ್! (4)
17.ಒಂದು ಸಂಖ್ಯೆಯನ್ನು ಇನ್ನೊಂದರಿಂದ ಗುಣಿಸುವುದು (4)

ಮೇಲಿಂದ ಕೆಳಕ್ಕೆ

1.ಇನ್ನೂ ಕರು ಹಾಕದ ಹಸು (3)
2.ವಿಷಯಾಸಕ್ತನಿವನು (3)
3.ಪಾದರಸವನ್ನು ಹೀಗೂ ಕರೆವರು (3)
4.ಪುಢಾರಿ ಹತ್ತಿರವೇ ವೈರಿ ಇದ್ದಾನಲ್ಲಾ? (2)
7.ಬೆಳ್ಳಿ ಹಬ್ಬವಿದು (5)
9.ಬೆಲೆಯುಳ್ಳ ಮಣಿಗಳನ್ನು ಕುಂದಣಿಸಿದ್ದು (5)
11.ರಾಮನ ಮಗನು ಹಿಡಿದಿರುವ ಉಪ್ಪು (3)
12.ಈ ತರ ಒಣಗಿದ ವಸ್ತು ಕಾಣುತ್ತಿದೆ (3)
13.ಸರ ನೋಡಿದ್ದಕ್ಕೆ ಈ ಹೊಟ್ಟೆಕಿಚ್ಚೇ? (3)
14.ಒಟ್ಟಿಲು ಅಥವಾ ಗುಂಪು ಎಂದರೂ ಸರಿ (2)



5394ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪದಕ 3.ಪ್ರಧಾನ
5.ವರ್ಗೀಕರಣ 6.ಶರ
8.ನಾಕ 9.ಅಂಕೆ
10.ಕದ 14.ಗಾಳಿಗೋಪುರ
15.ಕಲತಿ 16.ಹಾರೈಕೆ

ಮೇಲಿಂದ ಕೆಳಕ್ಕೆ:
1.ಪರವಶ 2.ಕವಲು
3.ಪ್ರಣವ 4.ನಕ್ಷತ್ರಿಕ
7.ರವಿಕೆ 8.ನಾವಿಕ
9.ಅಂಗಾರಕ 11.ದಬ್ಬಾಳಿಕೆ
12.ಸಂಗಾತಿ 13.ವರಹಾ

ಸುಡೊಕು 5781

			4		3	9	6	
		8						5
		3	5		8	7	2	1
		9						7
	3	7	1	8	6	4	5	
8						2	1	
6		5		2				4
3						5		2
	8	2		5			7	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5780 ಸುಡೊಕು

3	4	8	2	7	9	6	5	1
9	6	1	5	8	3	2	7	4
5	7	2	1	6	4	3	9	8
6	9	4	7	3	5	1	8	2
2	8	5	6	9	1	7	4	3
1	3	7	4	2	8	9	6	5
8	5	9	3	1	6	4	2	7
7	1	6	8	4	2	5	3	9
4	2	3	9	5	7	8	1	6

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಮೊಬೈಲ್–ವಾಟ್ಸ್‌ಆ್ಯಪ್ ಕರೆಗಳ ಜಾಡು ಭೇದಿಸಿದ ಸಿಸಿಬಿ

300 ಜಿ.ಬಿ ದತ್ತಾಂಶ ಪುರಾವೆ

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಸ್ಫೋಟಕ್ಕೆ ಸಂಚು ರೂಪಿಸಿದ್ದ ಶಂಕಿತ ಉಗ್ರರಿಂದ ಜಪ್ತಿ ಮಾಡಿರುವ 12 ಮೊಬೈಲ್‌ಗಳಿಂದ ಸುಮಾರು 300 ಜಿ.ಬಿ (ಗಿಗಾಬೈಟ್) ದತ್ತಾಂಶವನ್ನು ಸಿಸಿಬಿ ಪೊಲೀಸರು ಹೊರಗೆ ತೆಗೆಸಿದ್ದು (ರಿಟ್ರೀವ್), ಪ್ರಕರಣಕ್ಕೆ ಪೂರಕವಾಗಿರುವ ತಾಂತ್ರಿಕ ಪುರಾವೆ ಸಂಗ್ರಹಿಸಿದ್ದಾರೆ.

ಶಂಕಿತರಾದ ಸೈಯದ್ ಸುಹೇಲ್ ಖಾನ್, ಜಾಹೀದ್ ತಬ್ರೇಜ್, ಸೈಯದ್ ಮುದಾಸೀರ್ ಪಾಷಾ, ಮಹಮ್ಮದ್ ಫೈಜಲ್ ರಬ್ಬಾನಿ (30) ಹಾಗೂ ಮೊಹಮ್ಮದ್ ಉಮರ್‌ನನ್ನು ಬಂಧಿಸಿರುವ ಪೊಲೀಸರು, ಇವರೆಲ್ಲರ ಮೊಬೈಲ್ ಕರೆಗಳ ಜಾಡು ಭೇದಿಸಿದ್ದಾರೆ.

ಸುಲ್ತಾನ್‌ಪಾಳ್ಯದ ಮನೆಯೊಂದರ ಮೇಲೆ ಜುಲೈ 18ರಂದು ದಾಳಿ ಮಾಡಿದ್ದ ಪೊಲೀಸರು, 7 ನಾಡ ಪಿಸ್ತೂಲ್, 45 ಗುಂಡುಗಳು, 4 ವಾಕಿಟಾಕಿ ಮಾದರಿಯ ಟ್ರಿಗರ್, 12 ಮೊಬೈಲ್, ಡ್ಯಾಗರ್ ಹಾಗೂ 4 ಗ್ರೆನೇಡ್‌ಗಳನ್ನು ಜಪ್ತಿ ಮಾಡಿದ್ದರು. ಮೊಬೈಲ್‌ಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿರುವ ಪೊಲೀಸರು, ಅಳಿಸಿ ಹಾಕಿದ್ದ ಹಾಗೂ ಚಾಲ್ತಿಯಲ್ಲಿದ್ದ 300 ಜಿ.ಬಿ ದತ್ತಾಂಶವನ್ನು ತಜ್ಞರ ಮೂಲಕ ಹೊರ ತೆಗೆಸಿದ್ದಾರೆ.

'ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿದ್ದ ಬಾಂಬ್ ಸ್ಫೋಟದ ಅಪರಾಧಿ ಟಿ. ನಾಸೀರ್, ಭಯೋತ್ಪಾದನಾ ಕೃತ್ಯಕ್ಕೆ ಜೈಲಿನಲ್ಲಿಯೇ ಸಂಚು ರೂಪಿಸಿ, ಶಂಕಿತರ ಜೊತೆ ಜೈಲಿನಿಂದಲೇ ಮೊಬೈಲ್‌ನಲ್ಲಿ ಮಾತನಾಡುತ್ತಿದ್ದ. ಸ್ಫೋಟಕ್ಕೆ ಸಿದ್ಧತೆ ಮಾಡಿಕೊಳ್ಳುವಂತೆ ನಿರ್ದೇಶನ ನೀಡುತ್ತಿದ್ದ. ಬೇಸಿಕ್ ಮೊಬೈಲ್‌ನಿಂದ ಸಾಮಾನ್ಯ ಕರೆ ಹಾಗೂ ಸ್ಮಾರ್ಟ್ ಮೊಬೈಲ್‌ನಿಂದ ವಾಟ್ಸ್‌ಆ್ಯಪ್, ಇತರೆ ಆ್ಯಪ್ ಬಳಸಿ ಕರೆ ಮಾಡಿರುವುದು ಗೊತ್ತಾಗಿದೆ' ಎಂದು ಮೂಲಗಳು ಹೇಳಿವೆ.

'ವಿದೇಶದ ಗ್ರೆನೇಡ್'

'ಶಂಕಿತ ಉಗ್ರ ಜಾಹೀದ್ ತಬ್ರೇಜ್‌ನ ಕೊಡಿಗೇಹಳ್ಳಿಯ ಮನೆಯಲ್ಲಿ ಸಿಕ್ಕಿರುವ 4 ಗ್ರೆನೇಡ್‌ಗಳನ್ನು ವಿದೇಶದಿಂದ ಕೊರಿಯರ್ ಮೂಲಕ ತರಿಸಲಾಗಿತ್ತೆಂಬ ಮಾಹಿತಿ ತನಿಖೆಯಿಂದ ಗೊತ್ತಾಗಿದೆ' ಎಂದು ಮೂಲಗಳು ಹೇಳಿವೆ.

'ನಾಸೀರ್, ಜುನೇದ್, ವಿದೇಶದಲ್ಲಿರುವ ವ್ಯಕ್ತಿಗಳಿಂದ ಕೊರಿಯರ್ ಮೂಲಕ ಭಾರತಕ್ಕೆ ಗ್ರೆನೇಡ್ ತರಿಸಿದ್ದರು. ಸಲ್ಮಾನ್ ಎಂಬಾತ ಅದೇ ಗ್ರೆನೇಡ್‌ಗಳನ್ನು ನೆಲಮಂಗಲ ಟೋಲ್‌ಗೇಟ್ ಬಳಿ ಜಾಹೀದ್‌ಗೆ ಕೊಟ್ಟಿದ್ದ' ಎಂದು ತಿಳಿಸಿವೆ.

'ಬಾಂಬ್ ಸ್ಫೋಟದ ಸುಳಿವು ಕೊಟ್ಟ ಕರೆ'

'ಬಾಂಬ್ ಸ್ಫೋಟಿಸಲು ಹಾತೊರೆಯುತ್ತಿದ್ದ ಟಿ. ನಾಸೀರ್, ಜೈಲಿನಿಂದ ಜುಲೈ 16 ಹಾಗೂ 17ರಂದು ಶಂಕಿತ ಉಗ್ರ ಮಹಮ್ಮದ್ ಉಮರ್‌ಗೆ ಹಲವು ಬಾರಿ ಕರೆ ಮಾಡಿದ್ದ. 'ನಾವೆಲ್ಲರೂ ಸೇರಿ ಧರ್ಮ ರಕ್ಷಿಸಬೇಕಿದೆ. ಭಾರತವನ್ನು ಇಸ್ಲಾಂ ರಾಷ್ಟ್ರ ಮಾಡಬೇಕಿದೆ. ಎಲ್ಲ ಸ್ಫೋಟಕ ಸಿದ್ಧವಾಗಿಟ್ಟುಕೊಳ್ಳಿ. ಬಾಂಬ್ ಸ್ಫೋಟಿಸಬೇಕಾದ ಸ್ಥಳ ಹೇಳುವೆ' ಎಂದಿದ್ದ. ಈ ಬಗ್ಗೆ ಗೊತ್ತಾಗುತ್ತಿದ್ದಂತೆ ಪೊಲೀಸರು, ಜುಲೈ 18ರಂದು ಸುಲ್ತಾನ್‌ಪಾಳ್ಯದ ಮನೆ ಮೇಲೆ ದಾಳಿ ಮಾಡಿದ್ದರು. ಇದರಿಂದಾಗಿ ದೊಡ್ಡ ಅನಾಹುತ ತಪ್ಪಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಕೋಡ್ ಬಳಕೆ

'ಟಿ. ನಾಸೀರ್ ಹಾಗೂ ಶಂಕಿತ ಉಗ್ರರು, ಸಂಭಾಷಣೆ ಸಂದರ್ಭದಲ್ಲಿ ತಮ್ಮದೇ ಕೋಡ್‌ಗಳನ್ನು ಬಳಸಿದ್ದಾರೆ. ಅವುಗಳ ಅರ್ಥವೇನು ಎಂಬುದನ್ನು ಶಂಕಿತರ ಮೂಲಕ ತಿಳಿಯಲಾಗುತ್ತಿದೆ. ಸ್ಫೋಟಕ ಖರೀದಿ ವ್ಯವಹಾರ, ಸ್ಫೋಟಕ ಸಂಗ್ರಹ ಹಾಗೂ ಸ್ಫೋಟದ ಸ್ಥಳಗಳನ್ನು ಗುರುತಿಸುವ ವಿಚಾರವಾಗಿ ಕೋಡ್ ಬಳಸಿ ಮಾತನಾಡಿರುವ ಅನುಮಾನವಿದೆ' ಎಂದು ಮೂಲಗಳು ತಿಳಿಸಿವೆ.

'ಶಂಕಿತರಾದ ಸೈಯದ್ ಮುದಾಸೀರ್ ಪಾಷಾ ಹಾಗೂ ಮಹಮ್ಮದ್ ಉಮರ್, ಡ್ರಗ್ಸ್ ಮಾರಾಟದಲ್ಲಿ ಸಕ್ರಿಯರಾಗಿದ್ದ ಮಾಹಿತಿ ಇದೆ. ಈ ಸಂಬಂಧ ಮುದಾಸೀರ್‌ನ ಪ್ರಿಯತಮೆ ಹೇಳಿಕೆ ನೀಡಿದ್ದು, ಪರಿಶೀಲಿಸಲಾಗುತ್ತಿದೆ' ಎಂದು ಹೇಳಿವೆ.

ಬೆಂಗಳೂರಲ್ಲಷ್ಟೇ ನೇಮಕಾತಿ ಪರೀಕ್ಷೆ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇರುವ ಪ್ರಾಂಶುಪಾಲರ (ಗ್ರೇಡ್-1) ಹುದ್ದೆಗಳ ನೇಮಕಾತಿಗೆ ಭಾನುವಾರ (ಜುಲೈ 30) ಪರೀಕ್ಷೆ ನಡೆಯುತ್ತಿದ್ದು, ಬೆಂಗಳೂರಲ್ಲಷ್ಟೇ ಕೇಂದ್ರಗಳನ್ನು ನಿಗದಿ ಮಾಡಿರುವುದರಿಂದ ದೂರದ ಜಿಲ್ಲೆಗಳಿಂದ ಬರುವವರಿಗೆ ತೊಂದರೆಯಾಗಿದೆ ಎಂದು ಅಭ್ಯರ್ಥಿಗಳು ದೂರಿದ್ದಾರೆ.

ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇದ್ದ 310 ಪ್ರಾಂಶುಪಾಲರ ಹುದ್ದೆಗಳಿಗೆ ನೇರ ಪರೀಕ್ಷೆಗಳ ಮೂಲಕ ಮೊದಲ ಬಾರಿ ಭರ್ತಿ ಮಾಡಲಾಗುತ್ತಿದೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಮಾರ್ಚ್ 2022ರಲ್ಲಿ ಅಧಿಸೂಚನೆ ಹೊರಡಿಸಿತ್ತು. ನಿಗದಿಯಾಗಿದ್ದ ಪರೀಕ್ಷೆಗಳನ್ನು ಎರಡು ಬಾರಿ ತಾಂತ್ರಿಕ ಕಾರಣಗಳಿಂದ ಮುಂದೂಡಲಾಗಿತ್ತು. ಅಂತಿಮವಾಗಿ ಇದೇ ಭಾನುವಾರ ಪರೀಕ್ಷೆ ನಿಗದಿಯಾಗಿದ್ದರೂ, ವಿಜಯಪುರ, ಬೆಳಗಾವಿ, ಕಲಬುರಗಿ, ಬೀದರ್ ಸೇರಿದಂತೆ ದೂರ ಪ್ರದೇಶಗಳ ಅಭ್ಯರ್ಥಿಗಳು ಬೆಂಗಳೂರಿಗೇ ಬಂದು ಪರೀಕ್ಷೆ ಬರೆಯಬೇಕಿದೆ.

'ಪರೀಕ್ಷೆಗೆ ಸಿದ್ಧತೆ ನಡೆಸಿರುವ ಮಧ್ಯೆಯೇ ಸರ್ಕಾರಿ ಪದವಿ ಕಾಲೇಜುಗಳ ಬೋಧಕ ಸಿಬ್ಬಂದಿಯ ವರ್ಗಾವಣೆ ಪ್ರಕ್ರಿಯೆ ನಡೆಯುತ್ತಿದೆ. ಜುಲೈ 29ರಂದು ಸರ್ಕಾರಿ ರಜಾ ದಿನವಾದರೂ ವರ್ಗಾವಣೆ ಪಟ್ಟಿಯಲ್ಲಿದ್ದ (ಪತಿ, ಪತ್ನಿ ಕೋಟಾ) ನಮಗೆ ಕಾಲೇಜು ಶಿಕ್ಷಣ ಇಲಾಖೆ ಸಂಜೆ 6ರವರೆಗೂ ಕೌನ್ಸೆಲಿಂಗ್ ನಡೆಸಿದೆ. ಬೆಂಗಳೂರಿನ ಶೇಷಾದ್ರಿಪುರಂ ಸ್ವತಂತ್ರ ಪದವಿಪೂರ್ವ ಕಾಲೇಜಿನಲ್ಲಿನ ಕೇಂದ್ರದಲ್ಲಿ ಪ್ರಾಂಶುಪಾಲರ ಹುದ್ದೆಗೆ ಪರೀಕ್ಷೆಗೆ ಬರೆಯಬೇಕಿದೆ. ಬೆಳಿಗ್ಗೆ 10.30ರಿಂದ ಪರೀಕ್ಷೆಗಳು ಆರಂಭವಾಗಲಿವೆ. ಬೀದರ್‌ನಿಂದ 680 ಕಿ.ಮೀ ಪ್ರಯಾಣ ಮಾಡಬೇಕಿದೆ. ಕಲಬುರಗಿಯಲ್ಲೇ ಪರೀಕ್ಷಾ ಕೇಂದ್ರ ತೆರೆದಿದ್ದರೆ ಅನುಕೂಲವಾಗುತ್ತಿತ್ತು' ಎನ್ನುತ್ತಾರೆ ಪದವಿ ಕಾಲೇಜಿನಲ್ಲಿ 20 ವರ್ಷ ಸೇವೆ ಸಲ್ಲಿಸಿರುವ ಪ್ರಾಧ್ಯಾಪಕಿ.

ಬೆಂಗಳೂರಿನ ಕೇಂದ್ರ ಕಚೇರಿ ಸೇರಿದಂತೆ ಕಲಬುರಗಿ, ಧಾರವಾಡ, ಮೈಸೂರು, ಮಂಗಳೂರು ಹಾಗೂ ಶಿವಮೊಗ್ಗ ನಗರಗಳಲ್ಲಿ ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ಕಚೇರಿಗಳಿವೆ. ಎಲ್ಲ ಆರೂ ನಗರಗಳಲ್ಲೂ ಹೆಚ್ಚುವರಿ ಪರೀಕ್ಷಾ ಕೇಂದ್ರಗಳನ್ನು ತೆರೆದಿದ್ದರೆ ಅನುಕೂಲವಾಗುತ್ತಿತ್ತು ಎನ್ನುವುದು ಬಹುತೇಕ ಆಕಾಂಕ್ಷಿಗಳ ಬೇಡಿಕೆ.

ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರ ಹುದ್ದೆಗಳಿಗೆ ಕಾಯಂ ನೇಮಕ ಪ್ರಕ್ರಿಯೆ ಹಲವು ದಶಕಗಳಿಂದಲೂ ನಿಯಮಿತವಾಗಿ ನಡೆದಿಲ್ಲ. ಸೇವಾ ಹಿರಿತನದ ಆಧಾರದ ಮೇಲೆ ಹಲವು ಪ್ರಾಧ್ಯಾಪಕರಿಗೆ 2008–2009ನೇ ಸಾಲಿನಲ್ಲಿ ಪ್ರಾಂಶುಪಾಲರ ಹುದ್ದೆಗಳಿಗೆ ಬಡ್ತಿ ನೀಡಲಾಗಿತ್ತು. ಒಂದು ಸಾವಿರ ವಿದ್ಯಾರ್ಥಿಗಳಿಗಿಂತ ಕಡಿಮೆ ಇರುವ ಹಾಗೂ ಒಂದು ಸಾವಿರಕ್ಕಿಂತ ಹೆಚ್ಚಿರುವ ಕಾಲೇಜುಗಳನ್ನು ವಿಂಗಡಿಸಿ ಗ್ರೇಡ್-1 ಹಾಗೂ ಗ್ರೇಡ್-2 ಪ್ರಾಂಶುಪಾಲರು ಎಂದು ಪರಿಗಣಿಸಿ ಬಡ್ತಿಗೆ ಪರಿಗಣಿಸಲಾಗಿತ್ತು. ಅಂದು ಪ್ರಾಂಶುಪಾಲರಾಗಿ ಬಡ್ತಿ ಹೊಂದಿದ್ದ ಎಲ್ಲರೂ ನಿವೃತ್ತರಾಗಿದ್ದಾರೆ.

ಪ್ರಸ್ತುತ 400ಕ್ಕೂ ಹೆಚ್ಚು ಕಾಲೇಜುಗಳಲ್ಲಿ ಪ್ರಾಂಶುಪಾಲರ ಹುದ್ದೆಗಳು ಖಾಲಿ ಇವೆ. ಆಯಾ ಕಾಲೇಜುಗಳಲ್ಲಿರುವ ಹಿರಿಯ ಪ್ರಾಧ್ಯಾಪಕರೇ ಪ್ರಭಾರ ಜವಾಬ್ದಾರಿ ನಿಭಾಯಿಸುತ್ತಿದ್ದಾರೆ.

ಅಂಕಿ ಅಂಶ

430 ರಾಜ್ಯದ ಸರ್ಕಾರಿ ಪದವಿ ಕಾಲೇಜುಗಳು

310 ಭರ್ತಿ ಮಾಡಲಾಗುವ ಪ್ರಾಂಶುಪಾಲರ ಹುದ್ದೆಗಳು

1,395 ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು

ಬಡ್ತಿ ದೊರಕದೇ ನಿವೃತ್ತಿ

ಪ್ರಾಂಶುಪಾಲರ ಹುದ್ದೆಗಳಿಗೆ ಒಂದೂವರೆ ದಶಕ ಬಡ್ತಿ ನೀಡದ ಕಾರಣ ಸಾವಿರಕ್ಕೂ ಹೆಚ್ಚು ಪ್ರಾಧ್ಯಾಪಕರು ಪ್ರಾಂಶುಪಾಲರ ಹುದ್ದೆ ದೊರಕದೆ ನಿವೃತ್ತರಾಗಿದ್ದಾರೆ. ಅಧಿಸೂಚನೆ ಹೊರಡಿಸಿದ ನಂತರವೂ 15 ವರ್ಷಗಳ ಸೇವಾನುಭವ, ಪಿಎಚ್‌.ಡಿ. ಮತ್ತಿತರ ಎಲ್ಲ ಅರ್ಹತೆ ಇದ್ದ 142 ಪ್ರಾಧ್ಯಾಪಕರು ನಿವೃತ್ತರಾಗಿದ್ದಾರೆ. ಅಲ್ಪ ಅವಧಿಗಾದರೂ ಕಾಯಂ ಪ್ರಾಂಶುಪಾಲರಾಗಲು ನಿವೃತ್ತಿ ಹಂಚಿನಲ್ಲಿರುವ ಹಲವರು ಪರೀಕ್ಷೆ ಎದುರಿಸುತ್ತಿದ್ದಾರೆ. ಖಾಸಗಿ, ಅನುದಾನಿತ ಕಾಲೇಜುಗಳ ಪ್ರಾಧ್ಯಾಪಕರಿಗೂ ಪರೀಕ್ಷೆ ಬರೆಯಲು ಅವಕಾಶ ನೀಡಲಾಗಿದೆ.

ಪರೀಕ್ಷೆಗೆ ಕಡಿಮೆ ಸಂಖ್ಯೆಯ ಅಭ್ಯರ್ಥಿಗಳಿರುವುದರಿಂದ ಬೆಂಗಳೂರಿನಲ್ಲೇ 5 ಕೇಂದ್ರಗಳನ್ನು ತೆರೆಯಲಾಗಿದೆ. ಒಂದೇದಿನ ಪರೀಕ್ಷೆ ನಡೆಯುವುದರಿಂದ ತೊಂದರೆ ಆಗದು.

ಎಸ್.ರಮ್ಯಾ, ಕಾರ್ಯನಿರ್ವಾಹಕ ನಿರ್ದೇಶಕಿ, ಕೆಇಎ



ಫ್ರೆಂಡ್‌ಷಿಪ್‌ಗೆ ಬೆಳ್ಳಿ ಪದಕ...

ಫೋಟೊಗ್ರಾಫಿಕ್ ಸೊಸೈಟಿ ಆಫ್ ಅಮೆರಿಕ (ಪಿಎಸ್‌ಎ) ವತಿಯಿಂದ ನಡೆದ ಪಿಎಸ್‌ಎ ಅಂತರ ಕ್ಲಬ್‌ಗಳ ಛಾಯಾಗ್ರಹಣ ಸ್ಪರ್ಧೆಯ ಫ್ರೆಂಡ್‌ಷಿಪ್ ವಿಭಾಗದಲ್ಲಿ ಬೆಳ್ಳಿ ಪದಕ ಪಡೆದ ಕೊಪ್ಪಳದ ಪ್ರಕಾಶ ಕಂದಕೂರ ತೆಗೆದ ಚಿತ್ರ

ಛಾಯಾಗ್ರಹಣ: ಕಂದಕೂರಗೆ ಪ್ರಶಸ್ತಿ



ಪ್ರಕಾಶ ಕಂದಕೂರು

ಕೊಪ್ಪಳ: ಫೋಟೊಗ್ರಾಫಿಕ್ ಸೊಸೈಟಿ ಆಫ್ ಅಮೆರಿಕ (ಪಿಎಸ್‌ಎ) ವತಿಯಿಂದ ನಡೆದ 2022–23ನೇ ಸಾಲಿನ ಪಿಎಸ್‌ಎ ಅಂತರ ಕ್ಲಬ್‌ಗಳ ಛಾಯಾಗ್ರಹಣ ಸ್ಪರ್ಧೆಯಲ್ಲಿ ಇಲ್ಲಿನ ಛಾಯಾಗ್ರಾಹಕ ಪ್ರಕಾಶ ಕಂದಕೂರ ಅವರಿಗೆ 2 ಬೆಳ್ಳಿ ಪದಕಗಳು ಲಭಿಸಿವೆ.

ಸ್ಪರ್ಧೆಯ ಮೊನೋಕ್ರೋಮ್ ವಿಭಾಗದಲ್ಲಿ ಅವರ 'ಫ್ರೆಂಡ್‌ಷಿಪ್' ಶೀರ್ಷಿಕೆಯ ಚಿತ್ರ ಹಾಗೂ ಫೋಟೊ ಜರ್ನಲಿಸಂ ವಿಭಾಗದಲ್ಲಿ 'ದಿ ಫಿಯರ್' ಶೀರ್ಷಿಕೆಯ ಚಿತ್ರಕ್ಕೆ ಪದಕಗಳು ಬಂದಿವೆ.

ಪ್ರತಿ ವಿಭಾಗದಲ್ಲಿಯೂ ಒಟ್ಟು 3 ಸುತ್ತಿನಲ್ಲಿ ತೀರ್ಪು ನೀಡಲಾಗುತ್ತಿದೆ. ಹಾಗಾಗಿ ಇದು ಅತ್ಯಂತ ಕಠಿಣವಾದ ಸ್ಪರ್ಧೆ ಎಂದೇ ಎನಿಸಿಕೊಂಡಿದೆ. ಈ ಬಾರಿ ಪ್ರಪಂಚದ ವಿವಿಧ ದೇಶಗಳ ಸುಮಾರು 100 ಛಾಯಾಗ್ರಹಣ ಸಂಸ್ಥೆಗಳು ಸ್ಪರ್ಧೆಯಲ್ಲಿದ್ದವು. ಪ್ರಕಾಶ ಕಂದಕೂರ ಬೆಂಗಳೂರಿನ ಯೂತ್ ಫೋಟೊಗ್ರಾಫಿಕ್ ಸೊಸೈಟಿಯನ್ನು ಪ್ರತಿನಿಧಿಸಿದ್ದರು.

ನಾನು ಕ್ಷಮೆ ಕೇಳಿಲ್ಲ: ಬಿ.ಆರ್. ಪಾಟೀಲ ಸ್ಪಷ್ಟನೆ

ಕಲಬುರಗಿ: 'ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ನಾನು ಯಾರ ಕ್ಷಮೆಯನ್ನೂ ಕೇಳಿಲ್ಲ. ನನ್ನ ಮಾತಿಗೆ ಈಗಲೂ ಬದ್ಧನಾಗಿದ್ದೇನೆ' ಎಂದು ಆಳಂದ ಶಾಸಕ ಬಿ.ಆರ್. ಪಾಟೀಲ ಸ್ಪಷ್ಟಪಡಿಸಿದರು.

ಪತ್ರ ಬರೆದ ಶಾಸಕರು ಕ್ಷಮೆ ಕೇಳಿದ್ದಾರೆ ಎಂದು ಗೃಹಸಚಿವ ಡಾ. ಜಿ. ಪರಮೇಶ್ವರ ಅವರು ಹೇಳಿಕೆ ನೀಡಿದ್ದರು. ಈ ಕುರಿತು 'ಪ್ರಜಾವಾಣಿ'ಯೊಂದಿಗೆ ಮಾತನಾಡಿದ ಶಾಸಕ ಪಾಟೀಲ, 'ಕ್ಷಮೆ ಕೇಳುವವರು ಕೇಳಿರಬಹುದು. ನಾನಂತೂ ಯಾವುದೇ ಅಪರಾಧ ಮಾಡಿಲ್ಲ. ಕ್ಷಮೆ ಕೇಳುವ ಹೇಡಿತನವೂ ನನ್ನಲ್ಲಿಲ್ಲ' ಎಂದು ಹೇಳಿದರು.

'ಪತ್ರದಲ್ಲಿ ಯಾವ ಅಂಶಗಳನ್ನು ಹೇಳಿದ್ದೇನೆಯೋ ಅದಕ್ಕೆ ಈಗಲೂ ಬದ್ಧನಾಗಿದ್ದೇನೆ' ಎಂದರು.



ಪಾಟೀಲ

'ಮೊದಲಿನಿಂದಲೂ ರೈತ ಹೋರಾಟದಲ್ಲಿ ಇದ್ದೇನೆ. ಹೀಗಾಗಿ, ಬಳ್ಳಾರಿಯಲ್ಲಿ ನಡೆಯುತ್ತಿರುವ ರೈತ ಹೋರಾಟಕ್ಕೆ ರಾಕೇಶ್ ಟಿಕಾಯತ್ ಬರುತ್ತಿದ್ದು, ಅದರಲ್ಲಿ ಭಾಗವಹಿಸುತ್ತೇನೆ. ಮಣಿಪುರದಲ್ಲಿ ನಡೆಯುತ್ತಿರುವ ಜನಾಂಗೀಯ ಹಿಂಸಾಚಾರದ ಪರಿಸ್ಥಿತಿ ಅರಿಯಲು ಅಲ್ಲಿಗೂ ಭೇಟಿ ನೀಡುತ್ತಿದ್ದೇನೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗೃಹಲಕ್ಷ್ಮಿ ಯೋಜನೆಗೆ ಕಲಬುರಗಿಯಲ್ಲಿ ಆಗಸ್ಟ್ 5ರಂದು ಚಾಲನೆ ನೀಡಲಿದ್ದು, ಆ ಕಾರ್ಯಕ್ರಮದಲ್ಲಿ ಭಾಗವಹಿಸುತ್ತೇನೆ' ಎಂದು ತಿಳಿಸಿದರು.

'ಶಾಸಕರ ಪತ್ರವನ್ನು ಸಿ.ಎಂ ಹರಿದಿಲ್ಲ'

ಬೆಂಗಳೂರು: 'ಗುರುವಾರ ನಡೆದ ಶಾಸಕಾಂಗ ಪಕ್ಷದ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚನ್ನಗಿರಿ ಶಾಸಕ ಬಸವರಾಜ್ ಶಿವಗಂಗ ನೀಡಿದ ಪತ್ರವನ್ನು ಹರಿದುಹಾಕಿದ್ದಾರೆ ಎಂಬುದರಲ್ಲಿ ಸತ್ಯಾಂಶವಿಲ್ಲ' ಎಂದು ಮುಖ್ಯಮಂತ್ರಿಯವರ ಸಚಿವಾಲಯ ತಿಳಿಸಿದೆ.

'ಬಸವರಾಜ್ ಶಿವಗಂಗ ಶಾಸಕಾಂಗ ಪಕ್ಷದ ಸಭೆಗೆ ಪತ್ರವೊಂದನ್ನು ತಂದಿದ್ದರು. ಆದರೆ, ಅದನ್ನು ಅವರು ಮುಖ್ಯಮಂತ್ರಿಯವರಿಗೆ ನೀಡಿರಲಿಲ್ಲ. ಅದನ್ನು ಮುಖ್ಯಮಂತ್ರಿಯವರು ಹರಿದುಹಾಕಲೂ ಇಲ್ಲ' ಎಂದು ಮುಖ್ಯಮಂತ್ರಿ ಕಚೇರಿ ಮೂಲಗಳು ಸ್ಪಷ್ಟಪಡಿಸಿವೆ.


'ಕೆಲಸಮಾಡಿಸಿಕೊಳ್ಳಲುಅನುಕೂಲವಾಗುವಂತೆ ನಮ್ಮನ್ನೇ (ಶಾಸಕರನ್ನು) ಸಚಿವರ ವಿಶೇಷಾಧಿಕಾರಿಯಾಗಿ ನೇಮಿಸಿ' ಎಂಬ ವ್ಯಂಗ್ಯಭರಿತ ಕೋರಿಕೆಯುಳ್ಳ ಪತ್ರವನ್ನು ಬಸವರಾಜ್ ಮುಖ್ಯಮಂತ್ರಿಯವರಿಗೆ ನೀಡಿದ್ದರು. ಅದನ್ನು ಸಿದ್ದರಾಮಯ್ಯ ಹರಿದುಹಾಕಿದ್ದರು' ಎಂದು 'ಪ್ರಜಾವಾಣಿ'ಯ ಶನಿವಾರದ ಸಂಚಿಕೆಯಲ್ಲಿ ಪ್ರಕಟವಾಗಿತ್ತು.

'ಒಳಮೀಸಲು ಜಾರಿಗೆ ಪ್ರಕ್ರಿಯೆ ಆರಂಭ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿಯ ಜನರಿಗೆ ಒಳ ಮೀಸಲಾತಿ ಕಲ್ಪಿಸುವುದಕ್ಕೆ ಪೂರಕವಾಗಿ ಸಂವಿಧಾನದ 341ನೇ ಪರಿಚ್ಛೇದಕ್ಕೆ ತಿದ್ದುಪಡಿ ತರುವ ಪ್ರಕ್ರಿಯೆ ಆರಂಭವಾಗಿದೆ ಎಂದು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ರಾಜ್ಯ ಸಚಿವ ಎ. ನಾರಾಯಣಸ್ವಾಮಿ ತಿಳಿಸಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಒಳ ಮೀಸಲಾತಿಗೆ ಸಂಬಂಧಿಸಿದಂತೆ ನಾನು ರಾಜ್ಯ ಸಭೆಯಲ್ಲಿ ನೀಡಿದ್ದ ಉತ್ತರವನ್ನು ಆಧರಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸ್‌ನ ಹಲವರು ಟೀಕಿಸಿದ್ದಾರೆ. ಸಂವಿಧಾನದಲ್ಲಿ ಇರುವುದನ್ನು ನಾನು ತಿರುಚಿ ಹೇಳುವಂತಿಲ್ಲ' ಎಂದರು.



ಎ.ನಾರಾಯಣ ಸ್ವಾಮಿ

ಸಂವಿಧಾನದ 341ನೇ ಪರಿಚ್ಛೇದಕ್ಕೆ ತಿದ್ದುಪಡಿ ತಂದರೆ ಮಾತ್ರ ಒಳ ಮೀಸಲಾತಿ ಸಂವಿಧಾನಬದ್ಧವಾಗುತ್ತದೆ. ರಾಜ್ಯದಲ್ಲಿ ಒಳ ಮೀಸಲಾತಿ ಜಾರಿಗೆ ನಿರ್ಧರಿಸಿದ್ದ ಹಿಂದಿನ ಸರ್ಕಾರ, ಅದಕ್ಕೆ ಪೂರಕವಾಗಿ ಸಂವಿಧಾನ ತಿದ್ದುಪಡಿಗೆ ಕೋರಿಕೆ ಸಲ್ಲಿಸಿತ್ತು. ಆಂಧ್ರಪ್ರದೇಶ, ಪಂಜಾಬ್, ಮಹಾರಾಷ್ಟ್ರ ಸೇರಿದಂತೆ ಹಲವು ರಾಜ್ಯಗಳು ಇದೇ ಬೇಡಿಕೆ ಸಲ್ಲಿಸಿವೆ. ಕೇಂದ್ರ ಸರ್ಕಾರ ಸಂವಿಧಾನದ 241ನೇ ಪರಿಚ್ಛೇದದ ತಿದ್ದುಪಡಿಗೆ ಪ್ರಕ್ರಿಯೆ ಆರಂಭಿಸಿದೆ. ಪರಿಶಿಷ್ಟ ಜಾತಿ ಜನ ಸಂಖ್ಯೆ ಇಲ್ಲದಿರುವ ರಾಜ್ಯಗಳು ಈ ಪ್ರಸ್ತಾವಕ್ಕೆ ನಕಾರಾತ್ಮಕ ಉತ್ತರ ನೀಡಿವೆ. ಏಳು ರಾಜ್ಯಗಳು ತಿದ್ದುಪಡಿಯನ್ನು ಬೆಂಬಲಿಸಿವೆ ಎಂದು ವಿವರಿಸಿದರು.

ಮುಖಂಡರಾದ ಗೋವಿಂದ ಕಾರಜೋಳ, ಹಾಲಪ್ಪ ಆಚಾರ್, ಸಚ್ಚಿದಾನಂದಮೂರ್ತಿ, ಎಸ್‌ಸಿ ಮೋರ್ಚಾ ರಾಜ್ಯ ಘಟಕದ ಅಧ್ಯಕ್ಷ ಛಲವಾದಿ ನಾರಾಯಣಸ್ವಾಮಿ ಇದ್ದರು.

‘ರಾಹುಲ್‌ಗೆ ವಧು ಹುಡುಕಿ’

ಮಗನ ಮದುವೆ ಕುರಿತು ಪ್ರಸ್ತಾಪಿಸಿದ ಮಹಿಳೆಯರಿಗೆ ಸೋನಿಯಾ ಮನವಿ

ನವದೆಹಲಿ (ಪಿಟಿಐ): ರಾಹುಲ್ ಗಾಂಧಿ ಅವರಿಗೆ ವಧು ಹುಡುಕುವ ಜವಾಬ್ದಾರಿಯನ್ನು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು ಹರಿಯಾಣದ ರೈತ ಮಹಿಳೆಯರಿಗೆ ವಹಿಸಿದ್ದಾರೆ!

ಹೌದು, ರಾಹುಲ್ ಗಾಂಧಿ ಆಹ್ವಾನದ ಮೇರೆಗೆ ಸೋನಿಯಾ ಗಾಂಧಿ ನಿವಾಸಕ್ಕೆ ಆಗಮಿಸಿದ್ದ ರೈತ ಮಹಿಳೆಯರು, ‘ರಾಹುಲ್‌ಗೆ ಮದುವೆ ಮಾಡಿ’ ಎಂದು ಹೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ಸೋನಿಯಾ ಗಾಂಧಿ, ‘ನೀವೇ ವಧು ಹುಡುಕಿ’ ಎಂದು ತಿಳಿಸಿದರು. ರಾಹುಲ್ ಕೂಡ ‘ನನ್ನ ಮದುವೆ ಆಗಲಿದೆ’ ಎಂದು ಪ್ರತಿಕ್ರಿಯಿಸಿದರು.

ಜುಲೈ 8ರಂದು ಹರಿಯಾಣದ ಸೋನಿಪತ್ ಜಿಲ್ಲೆಯ ಮದಿನಾಗೆ ದಿಢೀರ್ ಭೇಟಿ ನೀಡಿದ್ದ ರಾಹುಲ್, ಕೃಷಿ ಭೂಮಿಯಲ್ಲಿ ಕೆಲಸ ಮಾಡುತ್ತಿದ್ದ ರೈತರೊಂದಿಗೆ ಕಾಲ ಕಳೆದಿದ್ದರು. ಕೆಸರಿನ ಗದ್ದೆಯಲ್ಲಿ ನಿಂತು ಭತ್ತದ ನಾಟಿ ಮಾಡಿದ್ದರು, ಟ್ರ್ಯಾಕ್ಟರ್ ಚಲಾಯಿಸಿದ್ದರು. ಮಹಿಳೆಯರು ಕಟ್ಟಿಕೊಂಡು ಬಂದಿದ್ದ ಬುತ್ತಿಯನ್ನು ಸವಿದಿದ್ದರು. ಈ ಸಂದರ್ಭದಲ್ಲಿ ‘ಇದುವರೆಗೂ ರಾಷ್ಟ್ರ ರಾಜಧಾನಿ ನೋಡಿಲ್ಲ’ ಎಂದಿದ್ದ ಮಹಿಳೆಯರಿಗೆ ‘ದೆಹಲಿ ದರ್ಶನ’ ಮಾಡಿಸುವ ಭರವಸೆ ನೀಡಿದ್ದರು.

ತಮ್ಮ ಮಾತಿನಂತೆ ನಡೆದುಕೊಂಡ ರಾಹುಲ್ ಮಹಿಳೆಯರನ್ನು ತಮ್ಮ ತಾಯಿಯ ನಿವಾಸಕ್ಕೆ ಆಹ್ವಾನಿಸಿ ಭೋಜನ ವ್ಯವಸ್ಥೆ ಮಾಡಿದ್ದರು. ರೈತ ಮಹಿಳೆಯರು ಗಾಂಧಿ ಕುಟುಂಬದೊಂದಿಗೆ ಆತ್ಮೀಯವಾಗಿ ಕಾಲ ಕಳೆದರು. ಮಹಿಳೆಯೊಬ್ಬರು ರಾಹುಲ್ ಅವರಿಗೆ ಸಿಹಿ ತಿನ್ನಿಸಿದರು.



ವಧು ಹುಡುಕಿ... ಹರಿಯಾಣದಿಂದ ಬಂದಿದ್ದ ರೈತ ಮಹಿಳೆಯರೊಂದಿಗೆ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಶನಿವಾರ ನವದೆಹಲಿಯ ತಮ್ಮ ನಿವಾಸದಲ್ಲಿ ಭೋಜನ ಸವಿಯುತ್ತಾ ಚರ್ಚಿಸಿದರು. ಪ್ರಿಯಾಂಕಾ ಗಾಂಧಿ ಇದ್ದರು

ಈ ವೇಳೆ ಪ್ರಿಯಾಂಕಾ ಗಾಂಧಿ, ‘ರಾಹುಲ್ ನನಗಿಂತ ತುಂಟ. ಆದರೆ ನಾನೇ ಬೈಸಿಕೊಳ್ಳುತ್ತಿದ್ದೆ’ ಎಂದು ಬಾಲ್ಯದ ಕ್ಷಣಗಳನ್ನು ಮೆಲುಕು ಹಾಕಿದರು.

ರೈತ ಮಹಿಳೆಯರೊಂದಿಗೆ ಕಾಲ ಕಳೆದ ಅನ್ಯೋನ್ಯ ಕ್ಷಣಗಳ ವಿಡಿಯೊವನ್ನು ರಾಹುಲ್ ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದು, ‘ವಿಶೇಷ ಅತಿಥಿಗಳೊಂದಿಗಿನ ಈ ದಿನ ಅಮ್ಮನಿಗೆ, ನನಗೆ ಮತ್ತು ಪ್ರಿಯಾಂಕಾಗೆ ಅತ್ಯಂತ ಸ್ಮರಣೀಯ. ಸೋನಿಪತ್ ರೈತ ಸಹೋದರಿಯರಿಗೆ ‘ದೆಹಲಿ ದರ್ಶನ’ ಮಾಡಿಸಿ ಅವರೊಂದಿಗೆ ಭೋಜನ ಸವಿದೆವು. ದೇಸೀ ತುಪ್ಪ, ಸಿಹಿಯಾದ ಲಸ್ಸಿ, ಉಪ್ಪಿನಕಾಯಿ, ಮೊಗೆದಷ್ಟೂ ಪ್ರೀತಿ ನೀಡಿ ಬೆಲೆಕಟ್ಟಲಾಗದ ಉಡುಗೊರೆ ನೀಡಿದರು’ ಎಂದು ತಿಳಿಸಿದ್ದಾರೆ.

ಪಾಶ್ಚಾತ್ಯ ಆಹಾರ ಪದ್ಧತಿ ಅಳವಡಿಕೆಯಿಂದ ಆರೋಗ್ಯ ಸಮಸ್ಯೆ: ಏಮ್ಸ್

ಶೇ 38ರಷ್ಟು ಜನರಲ್ಲಿ ‘ಫ್ಯಾಟಿ ಲಿವರ್’

ನವದೆಹಲಿ (ಪಿಟಿಐ): ಅಲ್ಕೋಹಾಲ್ ಸೇವಿಸದ ಭಾರತೀಯರ ಪೈಕಿ ಶೇ 38 ಜನರಲ್ಲಿ ಫ್ಯಾಟಿ ಲಿವರ್ (ಪಿತ್ತ ಜನಕಾಂಗದಲ್ಲಿ ಕೊಬ್ಬು ಸೇರಿಕೊಳ್ಳುವುದು) ಕಾಯಿಲೆ ಇದೆ ಎಂದು ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಏಮ್ಸ್) ನಡೆಸಿರುವ ಅಧ್ಯಯನದಿಂದ ತಿಳಿದುಬಂದಿದೆ.

ಈ ವಿದ್ಯಮಾನ ವಯಸ್ಕರಿಗೆ ಮಾತ್ರ ಸೀಮಿತವಾಗಿಲ್ಲ, ಶೇ 35ರಷ್ಟು ಮಕ್ಕಳಲ್ಲಿಯೂ ಈ ತೊಂದರೆ ಇದೆ ಎಂದೂ ಅಧ್ಯಯನ ಹೇಳಿದೆ. ‘ಜರ್ನಲ್ ಆಫ್ ಕ್ಲಿನಿಕಲ್ ಅಂಡ್ ಎಕ್ಸ್‌ಪರಿಮೆಂಟಲ್ ಹೆಪಟಾಲಜಿ’ ಎಂಬ ನಿಯತಕಾಲಿಕದಲ್ಲಿ ಕಳೆದ ವರ್ಷ ಜೂನ್‌ನಲ್ಲಿ ಈ ಅಧ್ಯಯನ ವರದಿ ಪ್ರಕಟವಾಗಿದೆ.

ಈ ಕಾಯಿಲೆಯನ್ನು ‘ನಾನ್ ಅಲ್ಕೋಹಾಲಿಕ್ ಫ್ಯಾಟಿ ಲಿವರ್ ಡಿಸೀಸ್’ (ಎನ್‌ಎಎಫ್‌ಎಲ್‌ಡಿ) ಎಂದು ಕರೆಯಲಾಗುತ್ತದೆ. ಯಾವುದೇ ಲಕ್ಷಣಗಳು ಗೋಚರಿಸದ ಕಾರಣ ಆರಂಭಿಕ ಹಂತದಲ್ಲಿ ಈ ಕಾಯಿಲೆ ಪತ್ತೆಯಾಗುವುದಿಲ್ಲ. ಕ್ರಮೇಣ ಉಲ್ಬಣಿಸಿ, ರೋಗಿಗಳಲ್ಲಿ ತೀವ್ರ ತೊಂದರೆಗೆ ಕಾರಣವಾಗುತ್ತದೆ.

ಸದ್ಯ ‘ಫ್ಯಾಟಿ ಲಿವರ್’ ಕಾಯಿಲೆಗೆ ಅನುಮೋದಿತ ಪರಿಣಾಮಕಾರಿ ಚಿಕಿತ್ಸೆ ಇಲ್ಲ. ಆದರೆ, ಆರೋಗ್ಯಕರ ಜೀವನಶೈಲಿ ಮತ್ತು ಆಹಾರ ಪದ್ಧತಿ ಅಳವಡಿಕೆಯಿಂದ ಈ ಕಾಯಿಲೆಯಿಂದ ಹೊರಬರಬಹುದು.

ಡಾ.ಅನೂಪ್ ಸರಾಯ್,
ಗ್ಯಾಸ್ಟ್ರೋಎಂಟರಾಲಜಿ ವಿಭಾಗದ ಮುಖ್ಯಸ್ಥ, ಏಮ್ಸ್

‘ಎನ್‌ಎಎಫ್‌ಎಲ್‌ಡಿ’ಗೆ ಕಾರಣಗಳು



- ಪಾಶ್ಚಾತ್ಯ ಆಹಾರಪದ್ಧತಿ ಅನುಕರಣೆ
- ಅತಿಯಾದ ಫಾಸ್ಟ್‌ಫುಡ್‌ಗಳ ಸೇವನೆ
- ಹಣ್ಣುಗಳು ಮತ್ತು ತರಕಾರಿಗಳ ಸೇವನೆ ಕಡಿಮೆ ಮಾಡುವುದು
- ಅನಾರೋಗ್ಯಕರ ಮತ್ತು ವ್ಯಾಯಾಮ ಇರದ ಜೀವನಶೈಲಿ
- ಅಂಗಡಿಗಳಲ್ಲಿ ಸುಲಭವಾಗಿ ಸಿಗುವ (ಒವರ್ ದಿ ಕೌಂಟರ್) ಔಷಧಗಳ ಸೇವನೆಯೂ ಕೆಲವೊಮ್ಮೆ ಪಿತ್ತಜನಕಾಂಗಕ್ಕೆ ಹಾನಿ ಮಾಡುವುದು

ಪರಿಹಾರಗಳೇನು

- ಆರೋಗ್ಯಕರ ಜೀವನ ಶೈಲಿ ಅಳವಡಿಕೆ
- ಬೊಜ್ಜು ಇರುವವರು ತೂಕ ಕಡಿಮೆ ಮಾಡಿಕೊಳ್ಳುವುದು
- ಜಂಕ್ ಮತ್ತು ಸಕ್ಕರೆ ಅಂಶ ಇರುವ ಆಹಾರಗಳ ಮಿತ ಸೇವನೆ
- ನಿಯಮಿತ ವ್ಯಾಯಾಮ

ಎಸ್‌ಯುವಿಯಲ್ಲಿ ಉತ್ತರ ಪುಟಗಳ ತಂದ ಅರ್ಜಿದಾರ

ಕೋವಿಡ್ ವೇಳೆ ವಿನಿಯೋಗಿಸಿರುವ ಅನುದಾನದ ಕುರಿತು ಮಾಹಿತಿ ಹಕ್ಕು ಕಾಯ್ದೆ (ಆರ್‌ಟಿಐ) ಅಡಿಯಲ್ಲಿ ಕೇಳಿದ್ದ ಪ್ರಶ್ನೆ

40 ಸಾವಿರ ಪುಟಗಳ ಉತ್ತರ!

ಇಂದೋರ್ (ಪಿಟಿಐ): ಕೋವಿಡ್ ಸಾಂಕ್ರಾಮಿಕದ ವೇಳೆ ವಿನಿಯೋಗಿಸಿರುವ ಅನುದಾನದ ಕುರಿತು ಮಾಹಿತಿ ಹಕ್ಕು ಕಾಯ್ದೆ (ಆರ್‌ಟಿಐ) ಅಡಿಯಲ್ಲಿ ಕೇಳಿದ್ದ ಪ್ರಶ್ನೆಗೆ ಬರೋಬ್ಬರಿ 40 ಸಾವಿರ ಪುಟಗಳ ಉತ್ತರ ನೀಡಲಾಗಿದ್ದು, ಇದನ್ನು ನೋಡಿ ಪ್ರಶ್ನೆ ಕೇಳಿದ್ದ ಮಧ್ಯಪ್ರದೇಶದ ಇಂದೋರ್‌ನ ಧರ್ಮೇಂದ್ರ ಶುಕ್ಲಾ ದಂಗಾಗಿದ್ದಾರೆ.



‘ಕೋವಿಡ್ ಸಾಂಕ್ರಾಮಿಕ ಸಂದರ್ಭದಲ್ಲಿ ಔಷಧ, ಉಪಕರಣ ಮತ್ತಿತರ ವಸ್ತುಗಳನ್ನು ಖರೀದಿಸಿರುವುದಕ್ಕೆ ಸಂಬಂಧಿಸಿದ ಟೆಂಡರ್ ಮತ್ತು ಬಿಲ್ ಪಾವತಿ ಕುರಿತು ಇಂದೋರ್‌ನ ಮುಖ್ಯ ವೈದ್ಯಕೀಯ ಮತ್ತು ಆರೋಗ್ಯ ಅಧಿಕಾರಿಗೆ (ಸಿಎಂಎಚ್‌ಒ) ಕೇಳಿದ ಪ್ರಶ್ನೆಗೆ ಈ ಉತ್ತರ ಲಭಿಸಿದೆ’ ಎಂದು ಶುಕ್ಲಾ ಅವರು ತಿಳಿಸಿದ್ದಾರೆ.


ಒಂದು ತಿಂಗಳೊಳಗೆ ಉತ್ತರ ಲಭಿಸದ ಕಾರಣ ಧರ್ಮೇಂದ್ರ ಅವರು ಮೇಲ್ಮನವಿ ಅಧಿಕಾರಿ ಡಾ. ಶರದ್ ಗುಪ್ತಾ ಅವರಿಗೆ ಅರ್ಜಿ ಸಲ್ಲಿಸಿದ್ದರು. ಪರಿಶೀಲನೆ ನಡೆಸಿದ ಅವರು ಯಾವುದೇ ಶುಲ್ಕ ಪಡೆಯದೆ ಮಾಹಿತಿ ನೀಡುವಂತೆ ನಿರ್ದೇಶನ ನೀಡಿದ್ದರು. ಹೀಗಾಗಿ ಶುಕ್ಲಾ ಅವರು ಉತ್ತರದ ಪ್ರತಿ ಪುಟಕ್ಕೆ ನಿಗದಿತ ₹2 ಅನ್ನು ಪಾವತಿಸಿಲ್ಲ.

‘ನನಗೆ ನೀಡಿರುವ ದಾಖಲೆಯನ್ನು ತರಲು ನಾನು ಎಸ್‌ಯುವಿ ವಾಹನವನ್ನು ಕೊಂಡೊಯ್ದಿದ್ದೆ ಅದರಲ್ಲಿ ಚಾಲಕನ ಆಸನವನ್ನು ಬಿಟ್ಟು ಉಳಿದೆಡೆ ದಾಖಲೆಗಳನ್ನು ತುಂಬಿಸಿಕೊಂಡು ಬಂದೆ’ ಎಂದಿದ್ದಾರೆ.

ಸಕಾಲಕ್ಕೆ ಮಾಹಿತಿ ನೀಡದೆ ರಾಜ್ಯದ ಬೊಕ್ಕಸಕ್ಕೆ ₹80 ಸಾವಿರ ನಷ್ಟ ಉಂಟು ಮಾಡಿರುವ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಸೂಚಿಸಲಾಗಿದೆ ಎಂದು ಡಾ. ಶರದ್ ಗುಪ್ತಾ ತಿಳಿಸಿದ್ದಾರೆ.

ಸನತ್‌ಕುಮಾರ ಬೆಳಗಲಿಗೆ ರಾಷ್ಟ್ರೀಯ ಮಾಧ್ಯಮಶ್ರೀ ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಪತ್ರಕರ್ತ ಸನತ್‌ಕುಮಾರ ಬೆಳಗಲಿ ಅವರಿಗೆ ಮಹಾರಾಷ್ಟ್ರದ ಕನ್ನಡಿಗ ಪತ್ರಕರ್ತರ ಸಂಘದ (ಕಪಸಮ) ಕೆ.ಟಿ.ವೇಣುಗೋಪಾಲ್ ಕಪಸಮ ರಾಷ್ಟ್ರೀಯ ಮಾಧ್ಯಮಶ್ರೀ–2023 ಪ್ರಶಸ್ತಿ ಲಭಿಸಿದೆ.

ಕಪಸಮ ಪ್ರತಿನಿಧಿ ಮತ್ತು ದಿ. ಕೆ.ಟಿ. ವೇಣುಗೋಪಾಲ್ ಕುಟುಂಬದ ಈ ಪ್ರಶಸ್ತಿಯು ₹ 25 ಸಾವಿರ ನಗದು, ಪ್ರಶಸ್ತಿಪತ್ರ ಮತ್ತು ಸ್ಮರಣಿಕೆ ಒಳಗೊಂಡಿದೆ ಎಂದು ಸಂಘದ ಅಧ್ಯಕ್ಷ ರೋನ್ಸ್ ಬಂಟ್ವಾಳ್ ತಿಳಿಸಿದ್ದಾರೆ.

ಮುಂಬೈಯಲ್ಲಿ ಆಗಸ್ಟ್ 6ರಂದು ಬೆಳಿಗ್ಗೆ 11.30ಕ್ಕೆ ನಡೆಯುವ ಸಂಘದ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ತಿಳಿಸಿದ್ದಾರೆ.

ಅಪ್ರಾಪ್ತ ವಯಸ್ಸಿನ ಮೂವರಿಂದ ಬಾಲಕಿ ಮೇಲೆ ಅತ್ಯಾಚಾರ

ಉಜ್ಜೈನಿ (ಪಿಟಿಐ): 15 ವರ್ಷದ ಬಾಲಕಿ ಮೇಲೆ ಅಪ್ರಾಪ್ತ ವಯಸ್ಸಿನ ಮೂವರು ಅತ್ಯಾಚಾರ ಎಸಗಿ, ನಂತರ ಕೃತ್ಯದ ವಿಡಿಯೊವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿರುವ ಘಟನೆ ಮಧ್ಯಪ್ರದೇಶದ ಉಜ್ಜೈನಿಯಲ್ಲಿ ನಡೆದಿದೆ ಎಂದು ದೂರು ದಾಖಲಾಗಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಬಾಲಕರನ್ನು ವಶಕ್ಕೆ ಪಡೆಯಲಾಗಿದೆ, ಇನ್ನೊಬ್ಬನಿಗಾಗಿ ಶೋಧ ಮುಂದುವರಿದಿದೆ ಎಂದು ಪೊಲೀಸರು ಶನಿವಾರ ಮಾಹಿತಿ ನೀಡಿದ್ದಾರೆ.

ಲಸುದಿಯಾ ಜೈಸಿಂಗ್ ಗ್ರಾಮದಲ್ಲಿ ಈ ಕೃತ್ಯ ನಡೆದಿದೆ.

ಸಾಮಾಜಿಕ ಜಾಲತಾಣಗಳಲ್ಲಿ ಶುಕ್ರವಾರ ವಿಡಿಯೊ ಹಂಚಿಕೆಯಾದ ನಂತರ ತನಿಖೆ ಆರಂಭಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

‘ಭಾರತೀಯ ದಂಡ ಸಂಹಿತೆ (ಐಪಿಸಿ) ಮತ್ತು ಮಕ್ಕಳ ವಿರುದ್ಧ ಲೈಂಗಿಕ ಅಪರಾಧ ತಡೆ ಕಾಯ್ದೆ (ಪೋಕ್ಸೊ) ಅಡಿಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಘಟನೆ ಕುರಿತ ಹೆಚ್ಚಿನ ಮಾಹಿತಿಗೆ ತನಿಖೆ ನಡೆಸಲಾಗುತ್ತಿದೆ’ ಎಂದು ಬಿರ್ಲಾ ಗ್ರಾಮ ಪೊಲೀಸ್ ಠಾಣೆ ಉಸ್ತುವಾರಿ ಕರಣ್ ಸಿಂಗ್ ತಿಳಿಸಿದ್ದಾರೆ.

ಸೌಹಾರ್ದಕ್ಕೆ ಹೆಸರಾದ ಐತಿಹಾಸಿಕ ಊರು ವಾಗಣಗೇರಿ

ಇಲ್ಲಿ ದಾರ್ಶನಿಕರ ವೃತ್ತ, ನಾಮಫಲಕ ಇಲ್ಲ!

• ಅಶೋಕ ಸಾಲವಾಡಗಿ

ಸುರಪುರ (ಯಾದಗಿರಿ ಜಿಲ್ಲೆ): ತಾಲ್ಲೂಕಿನ ವಾಗಣಗೇರಿ ಸುರಪುರ ಸಂಸ್ಥಾನದ ಮೊದಲ ರಾಜಧಾನಿ. ಸುರಪುರದಿಂದ 8 ಕಿ.ಮೀ ದೂರದಲ್ಲಿರುವ ಈ ಊರಿನಲ್ಲಿ ಯಾವುದೇ ದಾರ್ಶನಿಕರ, ರಾಷ್ಟ್ರನಾಯಕರ ಹೆಸರಿನಲ್ಲಿ ವೃತ್ತ, ಕಟ್ಟೆ, ನಾಮಫಲಕ, ಪುತ್ಥಳಿ ಇಲ್ಲ.

ಇಲ್ಲಿ ಆಳ್ವಿಕೆ ನಡೆಸಿದ ಸುರಪುರ ಗೋಸಲ ದೊರೆಗಳ ಆರಾಧ್ಯ ದೈವ ವೇಣುಗೋಪಾಲ. ವಾಗಣಗೇರಿ ಕೋಟೆಯಲ್ಲಿ ವೇಣುಗೋಪಾಲ ದೇವಸ್ಥಾನವಿದೆ. ಸಹಜವಾಗಿ ಗ್ರಾಮಸ್ಥರೆಲ್ಲರೂ ಈ ದೇವರ ಆರಾಧಕರು.

ಗ್ರಾಮ ಪಂಚಾಯಿತಿ ಕೇಂದ್ರ ಸ್ಥಾನ ವಾಗಣಗೇರಿ. ತಾಲ್ಲೂಕು ಪಂಚಾಯಿತಿ ಕ್ಷೇತ್ರವೂ ಹೌದು. ಊರಿನ ಜನಸಂಖ್ಯೆ ಅಂದಾಜು 5 ಸಾವಿರ ಇದೆ. ಬಸ್ ನಿಲ್ದಾಣದ ಹತ್ತಿರ ವೇಣುಗೋಪಾಲ ಹೆಸರಿನಲ್ಲಿ ಮಾತ್ರ ಏಕೈಕ ನಾಮಫಲಕ ಇದೆ. ಹೀಗಾಗಿ ಈ ಊರಿನಲ್ಲಿ ದಾರ್ಶನಿಕರ ನಾಮಫಲಕಗಳಿಗೆ ಅವಮಾನ, ವೃತ್ತಕ್ಕೆ ಧಕ್ಕೆ ಇತರ ಕಲಹಗಳು ಉಂಟಾಗಿಲ್ಲ. ಆಗುವುದೂ ಇಲ್ಲ. ಗ್ರಾಮ ಈ ದಿಸೆಯಲ್ಲಿ ಸೌಹಾರ್ದದಿಂದ ಇದ್ದು ಇತರರಿಗೆ ಮಾದರಿಯಾಗಿದೆ.

ಸಾಮಾನ್ಯವಾಗಿ ಎಲ್ಲ ಜಾತಿಯವರೂ ತಮ್ಮ ಜಾತಿಯವರ ದಾರ್ಶನಿಕರ ನಾಮಫಲಕ, ಪುತ್ಥಳಿ ಕೂಡಿಸಲು ಬಯಸುತ್ತಾರೆ. ಈ ಸಂಬಂಧ ಏರ್ಪಡುವ ಸಮಸ್ಯೆಗಳನ್ನು ಪರಿಹರಿಸಲು ಅಧಿಕಾರಿಗಳು ಪರದಾಡುವುದನ್ನು ಕಾಣುತ್ತೇವೆ. ಗ್ರಾಮದಲ್ಲಿ ಕುರುಬ, ವಾಲ್ಮೀಕಿ, ಮರಾಠಾ, ಉಪ್ಪಾರ, ಪರಿಶಿಷ್ಟ ಜಾತಿ, ಕಬ್ಬಲಿಗ, ಲಿಂಗಾಯತ, ಮುಸ್ಲಿಂ, ಬ್ರಾಹ್ಮಣ ಎಲ್ಲಾ ಜಾತಿ ಜನಾಂಗದವರಿದ್ದಾರೆ. ಆದರೆ, ಇದುವರೆಗೂ ಯಾವ ಜಾತಿಯವರೂ ತಮ್ಮ ಪುಣ್ಯಪುರುಷರ, ದಾರ್ಶನಿಕರ ಕಟ್ಟೆ, ಪುತ್ಥಳಿ, ನಾಮಫಲಕ ಅಳವಡಿಸದಿರುವುದು ವೈಶಿಷ್ಟ್ಯ.

ವೃತ್ತ, ಕಟ್ಟೆ, ನಾಮಫಲಕ, ಪುತ್ಥಳಿ ಸಂಬಂಧ ಅಲ್ಲಲ್ಲಿ ಉಂಟಾಗುತ್ತಿದ್ದ ಘರ್ಷಣೆಗಳು, ಪ್ರತಿಭಟನೆಗಳನ್ನು ಸೂಕ್ಷ್ಮವಾಗಿ ಗಮನಿಸಿದ ಗ್ರಾಮದ ಹಿರಿಯರು 30 ವರ್ಷಗಳ ಹಿಂದೆಯೇ ಗ್ರಾಮಸ್ಥರ ಸಭೆ ಸೇರಿಸಿ ನಿರ್ಣಯ ತೆಗೆದುಕೊಂಡರು. ‘ಗ್ರಾಮದಲ್ಲಿ ವೇಣುಗೋಪಾಲಸ್ವಾಮಿ ನಾಮಫಲಕ ಬಿಟ್ಟು ಬೇರೆ ಇಲ್ಲ. ನೆಮ್ಮದಿಯಿಂದ ಇದ್ದೇವೆ. ಇದನ್ನು ಮುಂದುವರಿಸೋಣ. ಯಾವುದೇ ಪುತ್ಥಳಿ, ವೃತ್ತ, ಕಟ್ಟೆ, ನಾಮಫಲಕ ಹಾಕುವುದು ಬೇಡ’ ಎಂದು ತೆಗೆದುಕೊಂಡ ನಿರ್ಣಯಕ್ಕೆ ಗ್ರಾಮಸ್ಥರು ಈಗಲೂ ಬದ್ಧರಾಗಿ ನಡೆದುಕೊಳ್ಳುತ್ತಿದ್ದಾರೆ.

ನಿರ್ಣಯದಂತೆ ಆಯಾ ದಾರ್ಶನಿಕರ, ರಾಷ್ಟ್ರನಾಯಕರ ಜಯಂತಿಗಳನ್ನು ಗ್ರಾಮ ಪಂಚಾಯಿತಿ ಕಾರ್ಯಾಲಯದಲ್ಲಿ ಮಾತ್ರ ಆಚರಿಸುತ್ತಾರೆ. ಜಯಂತಿಯಲ್ಲಿ ಜಾತಿಭೇದವಿಲ್ಲದೆ ಎಲ್ಲರೂ ಭಾಗ ವಹಿಸುತ್ತಾರೆ. ಆಸಕ್ತರು ಸಿಹಿ ಹಂಚುತ್ತಾರೆ. ಶುಭಾಶಯ ಕೋರಿ ಮನೆಗೆ ತೆರಳುತ್ತಾರೆ.



ಸುರಪುರ ತಾಲ್ಲೂಕಿನ ವಾಗಣಗೇರಿ ಗ್ರಾಮದಲ್ಲಿರುವ ವೇಣುಗೋಪಾಲಸ್ವಾಮಿ ನಾಮಫಲಕ



30 ವರ್ಷಗಳ ಹಿಂದೆ ತೆಗೆದುಕೊಂಡ ನಿರ್ಣಯಣಕ್ಕೆ ಗ್ರಾಮಸ್ಥರು ಬದ್ಧರಾಗಿ ನಡೆದುಕೊಳ್ಳುತ್ತಿರುವುದು ನನಗೆ ಸಂತಸ ನೀಡಿದೆ. ಇದು ಹೀಗೆಯೇ ಮುಂದುವರಿಯಬೇಕು

ಭೀಮರಾಯ ಮಾಸ್ಟರ್
ಗ್ರಾಮದ ಹಿರಿಯ



ನಮ್ಮ ದೇಶ ಜಾತ್ಯತೀತವಾಗಿದೆ. ಎಲ್ಲ ಸಮುದಾಯದವರು ಅಣ್ಣ–ತಮ್ಮಂದಿರಂತೆ ಬಾಳಿದರೆ ಗ್ರಾಮ ಸ್ವರ್ಗವಾಗುತ್ತದೆ. ನನ್ನ ವಾಗಣಗೇರಿ ನನಗೆ ಹೆಮ್ಮೆ.

ಯಂಕೋಬಗೌಡ ಮಾಲಿಪಾಟೀಲ
ಗ್ರಾಮದ ಹಿರಿಯ

ಜಾತ್ಯತೀತ ತತ್ವದ ಅರಸರು

ಸುರಪುರದ ದೊರೆಗಳು ಜಾತ್ಯತೀತ ತತ್ವ ಅನುಸರಿಸಿಕೊಂಡು ಬಂದಿದ್ದರು. ತಮ್ಮ ಆಸ್ಥಾನದಲ್ಲಿ ಎಲ್ಲ ಹುದ್ದೆಗಳಲ್ಲಿ ಎಲ್ಲ ಜಾತಿಯವರಿಗೆ ಪ್ರಾತಿನಿಧ್ಯ ನೀಡಿದ್ದರು. ಮಂದಿರಗಳನ್ನು ಕಟ್ಟಿಸಿದ ಹಾಗೆ ಮಸೀದಿಗಳನ್ನೂ ಕಟ್ಟಿಸಿಕೊಟ್ಟಿದ್ದಾರೆ. ರಾಜರ ಈ ಭ್ರಾತೃತ್ವ ಸಿದ್ಧಾಂತವನ್ನು ವಾಗಣಗೇರಿ ಗ್ರಾಮಸ್ಥರು ಅನುಸರಿಸುತ್ತಿದ್ದಾರೆ.

10ನೇ ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನದಲ್ಲಿ ಸಾಹಿತಿ ಪೋತೆ ಪ್ರತಿಪಾದನೆ

‘ಸಂವಿಧಾನ ಓದು ಕಡ್ಡಾಯಗೊಳಿಸಿ’

ಪ್ರಜಾವಾಣಿ ವಾರ್ತೆ



ವಿಜಯಪುರ ನಗರದಲ್ಲಿ ಶನಿವಾರ ಆಯೋಜಿಸಲಾಗಿದ್ದ 10ನೇ ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನದ ಅಂಗವಾಗಿ ನಡೆದ ಮೆರವಣಿಗೆಯ ಸಾರೋಟಿನಲ್ಲಿ ಸಾಗಿದ ಸಮ್ಮೇಳನದ ಸರ್ವಾಧ್ಯಕ್ಷ ಪ್ರೊ.ಎಚ್‌.ಟಿ.ಪೋತೆ ಮತ್ತು ಅವರ ಪತ್ನಿ ಜನರತ್ತ ಕೈಬೀಸಿ, ಕೃತಜ್ಞತೆ ಸಲ್ಲಿಸಿದರು –ಪ್ರಜಾವಾಣಿ ಚಿತ್ರ

ವಿಜಯಪುರ: ‘ವೈದ್ಯಕೀಯ, ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಸಂವಿಧಾನ ಓದು ಕಡ್ಡಾಯಗೊಳಿಸಬೇಕು. ಶೋಷಿತ ವರ್ಗದ ಸಾಹಿತ್ಯ ಹಾಗೂ ಬುದ್ಧ, ಬಸವ, ಅಂಬೇಡ್ಕರ್ ಚಿಂತನೆ ಮನವರಿಕೆ ಮಾಡಿಕೊಡಬೇಕು. ಇದರಿಂದ ಅವರಲ್ಲಿ ಮಾನವೀಯ ಸಂಬಂಧಗಳು ಬೆಸೆಯಲು ಸಾಧ್ಯ’ ಎಂದು ಸಾಹಿತಿ ಎಚ್‌.ಟಿ.ಪೋತೆ ಪ್ರತಿಪಾದಿಸಿದ್ದಾರೆ.

ದಲಿತ ಸಾಹಿತ್ಯ ಪರಿಷತ್ತು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಶ್ರಯದಲ್ಲಿ ನಗರದ ಕಂದಗಲ್ ಹನುಮಂತರಾಯ ರಂಗಮಂದಿರದಲ್ಲಿ ಶನಿವಾರ ಆರಂಭಗೊಂಡ 10ನೇ ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ‘ದಲಿತ ಸಾಹಿತ್ಯ, ಸಂಸ್ಕೃತಿಗೆ ಆದ್ಯತೆ ನೀಡಬೇಕು’ ಎಂದು ಆಗ್ರಹಿಸಿದರು.

‘ನವ ಬೌದ್ಧರಿಗಾಗಿ ಪ್ರತ್ಯೇಕ ನಿಗಮ ಸ್ಥಾಪಿಸುವುದರ ಜೊತೆಗೆ ಡಾ. ಬಿ.ಆರ್.ಅಂಬೇಡ್ಕರ್ ಸಾಹಿತ್ಯ ಅಕಾಡೆಮಿ ಅಸ್ತಿತ್ವಕ್ಕೆ ತರಬೇಕು’ ಎಂದು ಸಾಹಿತಿ ಪ್ರೊ. ಎಚ್‌.ಟಿ.ಪೋತೆ ಒತ್ತಾಯಿಸಿದರು.

‘ದಲಿತ ಚಳವಳಿಯ ಹೋರಾಟಗಾರರು ಹಾಗೂ ಚಿಂತಕರ ಜೀವನಚರಿತ್ರೆ ಪ್ರಕಟಣೆಗೆ ಅನುದಾನ ನೀಡಬೇಕು. ಸಫಾಯಿ ಕರ್ಮಚಾರಿ ಕೆಲಸಕ್ಕೆ ಮನುಷ್ಯರ ಬದಲು ಯಂತ್ರೋಪಕರಣ ಬಳಸಬೇಕು. ಸಫಾಯಿ ಕರ್ಮಚಾರಿಗಳಿಗೆ ಪರ್ಯಾಯ ಉದ್ಯೋಗ ಕಲ್ಪಿಸಬೇಕು’ ಎಂದರು.

‘ಸಂವಿಧಾನ ಸುಡುವುದು, ಮಹಾತ್ಮ ಗಾಂಧಿಯ ಅಣಕು ಹತ್ಯೆ ಮಾಡುವಂತಹ ಶಕ್ತಿಗಳಿಗೆ ಬುದ್ಧಿ ಕಲಿಸಬೇಕು. ದಲಿತ, ಶೋಷಿತ, ಮಹಿಳಾ ಸಮುದಾಯದಲ್ಲಿ ಶಕ್ತಿ ತುಂಬಲು ಬುದ್ಧ, ಬಸವ, ಅಂಬೇಡ್ಕರ್ ವಿಚಾರಗಳನ್ನು ಹೆಚ್ಚು ಪ್ರಚಾರ ಮಾಡುವ ಕಾರ್ಯವು ಸರ್ಕಾರ ಮತ್ತು ಜನರಿಂದ ಆಗಬೇಕು’ ಹೇಳಿದರು.

‘ದೇವಾಲಯಗಳು ಅಸಮಾನತೆಯ ಕೇಂದ್ರಗಳಾಗಿ ನೆಲೆ ನಿಂತಿದ್ದು ಸಾಮಾಜಿಕ ವಿಘಟನೆಗೆ, ಸಂಘರ್ಷಕ್ಕೆ ಕಾರಣ ಆಗುತ್ತಿದೆ. ಇಂಥದ್ದನ್ನು ಸರ್ಕಾರ ಪೋಷಿಸಬಾರದು. ಮುಕ್ತ ಪ್ರವೇಶದ ಜೊತೆಗೆ ಮೀಸಲಾತಿ ನಿಯಮ ದೇವಾಲಯದಲ್ಲೂ ಜಾರಿಗೊಳಿಸಬೇಕು’ ಎಂದರು.

‘ಭಾರತ ಪ್ರಕಾಶಿಸುತ್ತಿದೆ’, ‘ಸಬಕಾ ಸಾಥ್ ಸಬಕಾ ವಿಕಾಸ್’ ಎಂಬ ಘೋಷ ವಾಕ್ಯಗಳು ವಿಜೃಂಭಿಸುತ್ತಿವೆ. ಆದರೆ, ಬಡತನ ಎಲ್ಲ ಸಮುದಾಯಗಳಲ್ಲೂ ಯಥಾಸ್ಥಿತಿಯಿದೆ. ಮಣಿಪುರದಲ್ಲಿ ಬುಡಕಟ್ಟು ಸಮುದಾಯದ ಮಹಿಳೆಯ ಬೆತ್ತಲೆ ಮೆರವಣಿಗೆ ನಡೆದರೂ ಇದರ ವಿರುದ್ಧ ದೇಶದ ಪ್ರಜ್ಞಾವಂತ ಮಹಿಳೆಯರು, ಚಿಂತಕಿಯರು, ಸಾಹಿತಿಗಳು ಧ್ವನಿ ಎತ್ತದಿರುವುದು ನಾಚಿಕೆಗೇಡು’ ಎಂದು ಕಳವಳ ವ್ಯಕ್ತಪಡಿಸಿದರು.

ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಸಮ್ಮೇಳನ ಉದ್ಘಾಟಿಸಿ ಮಾತನಾಡಿದರು. ‘ದಲಿತ ಸಾಹಿತ್ಯ ಎಂಬುದು ಜೀವನಾನುಭವ ಒಳಗೊಂಡ ಅರ್ಥಪೂರ್ಣ ನೈಜ ಸಾಹಿತ್ಯ’ ಎಂದರು.

ಇದಕ್ಕೂ ಮುನ್ನ ಪ್ರೊ. ಎಚ್‌.ಟಿ.ಪೋತೆ ದಂಪತಿಯನ್ನು ಸಾರೋಟಿನಲ್ಲಿ ಕೂರಿಸಿ, ಜಾನಪದ ಕಲಾತಂಡಗಳ ಜೊತೆ ಮೆರವಣಿಗೆ ಮಾಡಲಾಯಿತು. ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದ ಸಾಹಿತ್ಯಾಸಕ್ತರು ಮೆರವಣಿಗೆಯಲ್ಲಿ ಪಾಲ್ಗೊಂಡರು.

‘ದೇವರ ಚಿತ್ರಗಳನ್ನು ಕಿತ್ತೆಸೆಯಿರಿ’

‘ಅಡುಗೆ ಮನೆಯಲ್ಲಿ ಒಂದೇ ಸೌಟನ್ನು ಸಸ್ಯಾಹಾರಕ್ಕೆ, ಮಾಂಸಾಹಾರಕ್ಕೆ ಬಳಸಬಾರದು’ ಎಂಬ ಲೇಖಕಿ ಸುಧಾಮೂರ್ತಿ ಅವರ ಹೇಳಿಕೆಗೆ ಪ್ರೊ. ಎಚ್‌.ಟಿ.ಪೋತೆ ಆಕ್ಷೇಪ ವ್ಯಕ್ತಪಡಿಸಿದರು.

‘ನಿಮ್ಮ (ಸುಧಾಮೂರ್ತಿ) ಮನೆಯಲ್ಲಿ ಪೂಜಿಸುವ ದೇವಾನುದೇವತೆಗಳು ಯಾವ ಪ್ರಾಣಿಗಳ ಮೇಲೆ ಕೂತಿವೆ. ಅವು ಮಾಂಸಾಹಾರಿ ಪ್ರಾಣಿಗಳಲ್ಲವೇ? ಅಂತಹ ದೇವರ ಚಿತ್ರಗಳನ್ನು ಮನೆಯಲ್ಲಿ ಏಕೆ ಇಟ್ಟಿದ್ದೀರಿ, ಕಿತ್ತೆಸೆಯಿರಿ’ ಎಂದು ಸವಾಲು ಹಾಕಿದರು.

ರಾಜ್ಯದ ದಲಿತ ಸಾಹಿತ್ಯವನ್ನು ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ವಚನ ಪಿತಾಮಹಾ ಫ.ಗು. ಹಳಕಟ್ಟಿ ಸಂಶೋಧನಾ ಕೇಂದ್ರದ ಮೂಲಕ ಪ್ರಕಟಿಸುವ ಯೋಜನೆ ಕೈಗೆತ್ತಿಕೊಳ್ಳಲಾಗುವುದು

ಎಂ.ಬಿ.ಪಾಟೀಲ
ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ

ರಾಜ್ಯದಲ್ಲಿ ಮೇಲ್ವರ್ಗದ ಸಾಹಿತಿ, ಚಿಂತಕರ ಹೆಸರಲ್ಲಿ ಪ್ರತಿಷ್ಠಾನಗಳು ಇವೆ. ಆದರೆ, ದಲಿತ ಸಾಹಿತಿಗಳು, ಚಿಂತಕರ ಹೆಸರಲ್ಲಿ ಒಂದು ಪ್ರತಿಷ್ಠಾನವೂ ಇಲ್ಲ. ಸರ್ಕಾರವೇ ಸ್ಥಾಪಿಸಬೇಕು


ಪ್ರೊ. ಎಚ್‌.ಟಿ.ಪೋತೆ, ಸರ್ವಾಧ್ಯಕ್ಷ, 10ನೇ ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನ

ಪೋತೆ, ಇಂದುಮತಿ ಸೇರಿ ಆರು ಮಂದಿಗೆ ‘ಕಸಾಪ ದತ್ತಿ ಪ್ರಶಸ್ತಿ’

ಪ್ರಜಾವಾಣಿ ವಾರ್ತೆ



ಇಂದುಮತಿ ಲಮಾಣಿ



ಕೋಟಿಗಾನಹಳ್ಳಿ ರಾಮಯ್ಯ



ಕಾ.ವೆಂ. ಶ್ರೀನಿವಾಸಮೂರ್ತಿ



ಅರ್ಜುನ ಗೊಳಸಂಗಿ



ನಾಗರಾಜ ಹೆತ್ತೂರು

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು ನೀಡುವ ‘ಡಾ. ಸಿದ್ದಲಿಂಗಯ್ಯ ಸಾಹಿತ್ಯ ದತ್ತಿ ಪ್ರಶಸ್ತಿ’ಗೆ ಎಚ್‌. ಟಿ. ಪೋತೆ, ಇಂದುಮತಿ ಲಮಾಣಿ ಸೇರಿ ಆರು ಮಂದಿ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ತಲಾ ₹ 10 ಸಾವಿರ ನಗದು ಒಳಗೊಂಡಿದೆ. ದಲಿತ ಸಾಹಿತ್ಯದಲ್ಲಿ ಗಣನೀಯ ಸಾಧನೆ ಮಾಡಿದ ಸಾಹಿತ್ಯ ಸಾಧಕರಿಗೆ ಈ ಪ್ರಶಸ್ತಿ ನೀಡಲಾಗುತ್ತದೆ.

2018ನೇ ಸಾಲಿಗೆ ಕೋಲಾರದ ಕೋಟಿಗಾನಹಳ್ಳಿ ರಾಮಯ್ಯ, 2019ನೇ ಸಾಲಿಗೆ ಕಲಬುರಗಿಯ ಎಚ್‌.ಟಿ. ಪೋತೆ, 2020ನೇ ಸಾಲಿಗೆ ವಿಜಯಪುರದ ಇಂದುಮತಿ ಲಮಾಣಿ, 2021ನೇ ಸಾಲಿಗೆ ಬೆಂಗಳೂರಿನ ಕಾ.ವೆಂ. ಶ್ರೀನಿವಾಸಮೂರ್ತಿ, 2022ನೇ ಸಾಲಿಗೆ ಗದಗದ ಅರ್ಜುನ ಗೊಳಸಂಗಿ ಹಾಗೂ 2023ನೇ ಸಾಲಿಗೆ ಹಾಸನದ ನಾಗರಾಜ ಹೆತ್ತೂರು ಆಯ್ಕೆಯಾಗಿದ್ದಾರೆ.

ವೈದ್ಯರ ಪರವಾನಗಿ: ಆದೇಶ ವಜಾ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಟ್ಟಡ ನಿರ್ಮಾಣದ ನಿಯಮಾವಳಿ ಉಲ್ಲಂಘಿಸಿದ ಆರೋಪದ ಮೇಲೆ ವೃತ್ತಿಪರ ವೈದ್ಯರ ಪರವಾನಗಿ ರದ್ದುಪಡಿಸಿದ್ದ ಕಲ್ಕತ್ತ ಹೈಕೋರ್ಟ್‌ನ ಆದೇಶವನ್ನು ಸುಪ್ರೀಂ ಕೋರ್ಟ್ ಶನಿವಾರ ವಜಾಗೊಳಿಸಿದೆ.

ಹೈಕೋರ್ಟ್‌ನ ಆದೇಶ ಪ್ರಶ್ನಿಸಿ ಅರ್ಜಿದಾರ ಗೋಸ್ಥೋ ಬಿಹಾರಿ ದಾಸ್ ಎಂಬುವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಸಂಜಯ್ ಕರೋಲ್ ಅವರಿದ್ದ ವಿಭಾಗೀಯ ನ್ಯಾಯಪೀಠವು, ಈ ಆದೇಶ ಹೊರಡಿಸಿದೆ. ನ್ಯಾಯಾಲಯಗಳು ನ್ಯಾಯಾಂಗ ನಿಂದನೆ ಪ್ರಕರಣಗಳ ವಿಚಾರಣೆ ನಡೆಸುವಾಗ ಅತಿಸೂಕ್ಷ್ಮವಾಗಿ ವರ್ತಿಸಬಾರದು. ಕಾಯ್ದೆಯ ಪರಿಮಿತಿಯಲ್ಲಿಯೇ ಕಾರ್ಯ ನಿರ್ವಹಿಸಬೇಕು ಎಂದು ಪೀಠ ಹೇಳಿತು.

‘ವೃತ್ತಿಪರ ವೈದ್ಯರಿಗೆ ಪರವಾನಗಿ ನೀಡುವ, ಅಮಾನತುಪಡಿಸುವ ಮತ್ತು ರದ್ದುಪಡಿಸುವ ಅಧಿಕಾರವು ರಾಷ್ಟ್ರೀಯ ವೈದ್ಯಕೀಯ ಆಯೋಗದ ಕಾಯ್ದೆ 2019ರ ಅಡಿ ರಚಿಸಿರುವ ಸಮಿತಿಗಷ್ಟೇ ಇದೆ. ವೈದ್ಯರ ದುರ್ನಡತೆ ಕಂಡುಬಂದರೆ ಶಿಕ್ಷಿಸುವ ಅಧಿಕಾರವೂ ಸಮಿತಿಗಷ್ಟೇ ಇದೆ’ ಎಂದು ಅರ್ಜಿದಾರರು ವಾದಿಸಿದ್ದರು.

ಶೌಚಾಲಯದಲ್ಲಿ ವಿಡಿಯೊ ಚಿತ್ರೀಕರಣ ಪ್ರಕರಣ: ತನಿಖಾಧಿಕಾರಿ ಬದಲು

ಪ್ರಜಾವಾಣಿ ವಾರ್ತೆ

ಉಡುಪಿ: ಇಲ್ಲಿಯ ನೇತ್ರಜ್ಯೋತಿ ಪ್ಯಾರಾ ಮೆಡಿಕಲ್ ಕಾಲೇಜಿನ ಶೌಚಾಲಯದಲ್ಲಿ ನಡೆದಿದೆ ಎನ್ನಲಾದ ವಿಡಿಯೊ ಚಿತ್ರೀಕರಣ ಪ್ರಕರಣದ ತನಿಖಾಧಿಕಾರಿಯನ್ನು ಬದಲಿಸಲಾಗಿದೆ.

ಕುಂದಾಪುರ ವಿಭಾಗದ ಡಿವೈಎಸ್‌ಪಿ ಬೆಳ್ಳಿಯಪ್ಪ ಅವರಿಗೆ ಪ್ರಕರಣದ ತನಿಖೆಯ ನೇತೃತ್ವ ವಹಿಸಲಾಗಿದೆ. ತನಿಖಾ ತಂಡದಲ್ಲಿ ಮಹಿಳಾ ಪಿಎಸ್‌ಐಗಳು ಇದ್ದಾರೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹಾಕೆ ಅಕ್ಷಯ್ ಮಚ್ಛೀಂದ್ರ ತಿಳಿಸಿದರು.

ಹಿಂದೆ ಮಲ್ಪೆ ಠಾಣೆಯ ಇನ್‌ಸ್ಪೆಕ್ಟರ್ ಮಂಜುನಾಥ ಗೌಡ ಪ್ರಕರಣದ ತನಿಖಾಧಿಕಾರಿಯಾಗಿದ್ದರು.

ಕಾಂಗ್ರೆಸ್ ವಾಗ್ದಾಳಿ: ‘ಬಿಜೆಪಿ ನಾಯಕರು ಆರೋಪ ಮಾಡುತ್ತಿರುವಂತೆ ನೇತ್ರಜ್ಯೋತಿ ಕಾಲೇಜಿನಲ್ಲಿ ಯಾವ ಘಟನೆಯೂ ನಡೆದಿಲ್ಲ. ಕುಚೋದ್ಯ ಹಾಗೂ ವಿದ್ಯಾರ್ಥಿ ಸಹಜವಾದ ನಡವಳಿಕೆಗಳಿಂದ ತಪ್ಪಾಗಿದ್ದು ತಪ್ಪಿತಸ್ಥ ವಿದ್ಯಾರ್ಥಿನಿಯರ ವಿರುದ್ಧ ನಿಯಮಗಳ ಪ್ರಕಾರ ಕ್ರಮ ಜರುಗಿಸಲಾಗಿದೆ ಎಂದು ಕಾಲೇಜಿನ ಆಡಳಿತ ಮಂಡಳಿ ಸ್ಪಷ್ಟವಾಗಿ ಹೇಳಿದೆ. ಆದರೂ, ಉಡುಪಿ ಶಾಸಕ ಯಶ್‌ಪಾಲ್ ಸುವರ್ಣ ಪ್ರಕರಣದಲ್ಲಿ ಸ್ವತಃ ವಿಚಾರಣೆ ನಡೆಸಿ ತೀರ್ಪು ನೀಡಿದ್ದಾರೆ’ ಎಂದು ಕಾಂಗ್ರೆಸ್ ವಕ್ತಾರ ಸುಧೀರ್ ಕುಮಾರ್ ಮರೋಳಿ ವ್ಯಂಗ್ಯವಾಡಿದರು.

ಮಣಿಪುರ ಗಲಭೆ ಖಂಡಿಸಿ ಶನಿವಾರ ನಗರದಲ್ಲಿ ಕಾಂಗ್ರೆಸ್ ಹಮ್ಮಿಕೊಂಡಿದ್ದ ಪ್ರತಿಭಟನಾ ಸಭೆಯಲ್ಲಿ ಮಾತನಾಡಿದ ಅವರು, ‘ವರ್ಷದ ಹಿಂದೆ ವಿದ್ಯಾಸಂಸ್ಥೆಗಳನ್ನು ಗುರಿಯಾಗಿಸಿಕೊಂಡು ಯಶ್‌ಪಾಲ್ ಸೃಷ್ಟಿಸಿದ ಹಿಜಾಬ್ ಗೊಂದಲದಿಂದ ಎಲ್ಲ ಜಾತಿ, ಧರ್ಮಗಳ ವಿದ್ಯಾರ್ಥಿಗಳು ಬೀದಿಗೆ ಬರುವಂತಾಯಿತು, ತರಗತಿ ವಂಚಿತರಾಗಬೇಕಾಯಿತು’ ಎಂದು ದೂರಿದರು.

‘ಗುಣಮಟ್ಟದ ಶಿಕ್ಷಣದಿಂದ ಜಾಗತಿಕವಾಗಿ ಗುರುತಿಸಿಕೊಂಡಿರುವ ಉಡುಪಿಯನ್ನು ಶಿಲಾಯುಗದತ್ತ ಕೊಂಡೊಯ್ಯಲಾಗುತ್ತಿದೆ. ಹೊರ ಜಿಲ್ಲೆ, ಹೊರ ರಾಜ್ಯ ಹಾಗೂ ವಿದೇಶಗಳಿಂದ ವಿದ್ಯಾರ್ಥಿಗಳು ಉಡುಪಿಗೆ ಬರುತ್ತಿಲ್ಲ. ಉದ್ಯಮಿಗಳು ಕಾಲಿಡಲು ಹೆದರುವಂತಹ ಪರಿಸ್ಥಿತಿ ನಿರ್ಮಾಣ ಮಾಡಲಾಗುತ್ತಿದೆ’ ಎಂದು ವಾಗ್ದಾಳಿ ನಡೆಸಿದರು.

‘ಜಿಲ್ಲೆಯ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಕಡಿಮೆಯಾದರೆ, ಉದ್ಯಮಕ್ಕೆ ತೊಂದರೆಯಾದರೆ ಯಶ್‌ಪಾಲ್ ಸುವರ್ಣ ಅವರೇ ನೇರ ಹೊಣೆ. ಉಡುಪಿ ಶಾಸಕರಿಗೆ ನೈತಿಕತೆ ಇದ್ದರೆ, ಕ್ಷೇತ್ರದ ಜನರ ಮೇಲೆ ಪ್ರೀತಿ ಇದ್ದರೆ ಸಂಸದೆ ಶೋಭಾ ಕರಂದ್ಲಾಜೆ ಅವರೊಂದಿಗೆ ಹೆದ್ದಾರಿ ಗುಂಡಿಗಳಲ್ಲಿ ಬಾಳೆ ಗಿಡ ನೆಟ್ಟು ಹೋರಾಟ ಮಾಡಲಿ. ಉಡುಪಿಯ ಅಭಿವೃದ್ಧಿ, ಸಂಸ್ಕೃತಿ, ಮಮತೆ, ಪ್ರಜ್ಞೆಯ ವಿರೋಧಿಯಾಗಿ ನಡೆದುಕೊಳ್ಳಬಾರದು’ ಎಂದು ಮರೋಳಿ ಮನವಿ ಮಾಡಿದರು.

‘ಹೆಣದ ಮೇಲೂ ಬಿಜೆಪಿ ರಾಜಕೀಯ’

ಮಂಡ್ಯ: ಉಡುಪಿ ಕಾಲೇಜಿನಲ್ಲಿ ವಿಡಿಯೊ ಚಿತ್ರೀಕರಣ ಕುರಿತ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ‘ಬಿಜೆಪಿ ಮುಖಂಡರು ಹೆಣದ ಮೇಲೂ ರಾಜಕೀಯ ಮಾಡುತ್ತಾರೆ. ಅದೇ ಅವರ ಕೆಲಸ. ಆರೋಪಿಗಳ ವಿರುದ್ಧ ಪೊಲೀಸರು ಎಫ್‌ಐಆರ್ ಹಾಕಿದ್ದು ಕಾನೂನು ಕ್ರಮ ಜರುಗಿಸಲಿದ್ದಾರೆ. ಈ ಬಗ್ಗೆ ನಾನು ಮಾತನಾಡುವುದಿಲ್ಲ’ ಎಂದರು. ಮಂಡ್ಯ ಸಮೀಪದ ಶ್ರೀನಿವಾಸಪುರ ಗೇಟ್ ಬಳಿ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ ಪರಿಶೀಲಿಸಿದ ಬಳಿಕ ಅವರು ಮಾತನಾಡಿದರು.

ಪ್ರತಿಭಟನೆಯಲ್ಲಿ ಭಾಗಿಯಾದ ವಿದ್ಯಾರ್ಥಿನಿಗೆ ಅಶ್ಲೀಲ ಸಂದೇಶ: ದೂರು

ಉಡುಪಿ: ಕಾಲೇಜಿನ ಶೌಚಾಲಯದಲ್ಲಿ ನಡೆದಿದೆ ಎನ್ನಲಾದ ವಿಡಿಯೊ ಚಿತ್ರೀಕರಣ ಘಟನೆ ಖಂಡಿಸಿ ಈಚೆಗೆ ಎಬಿವಿಪಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿನಿಗೆ ಇನ್‌ಸ್ಟಾಗ್ರಾಂ ಮೂಲಕ ಅಶ್ಲೀಲ ಸಂದೇಶ ಕಳುಹಿಸಿದ ಆರೋಪದ ಮೇಲೆ ಜಿಗರ್‌ಕೋಬ್ರಾ ಹೆಸರಿನ ಖಾತೆದಾರನ ವಿರುದ್ಧ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ವಿದ್ಯಾರ್ಥಿನಿ ಪ್ರತಿಭಟನೆಯಲ್ಲಿ ಭಾಗವಹಿಸಿ ಮಾತನಾಡಿದ್ದನ್ನು ಸಹಿಸಲಾಗದೆ ಭಯ ಹುಟ್ಟಿಸುವ, ಕೆಟ್ಟ ಹಾಗೂ ಅಶ್ಲೀಲ ಸಂದೇಶಗಳನ್ನು ಇನ್‌ಸ್ಟಾಗ್ರಾಂ ಖಾತೆಯಲ್ಲಿ ಹಾಕಲಾಗಿದೆ. ಇದರಿಂದ ನೊಂದ ವಿದ್ಯಾರ್ಥಿನಿ ದೂರು ನೀಡಿದ್ದು ಆರೋಪಿ ವಿರುದ್ಧ ಐಟಿ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಶಾಸಕ ಶಾಂತಿಭಂಗ ಉಂಟುಮಾಡುವ ಪ್ರಯತ್ನ ನಡೆಸುತ್ತಿದ್ದಾರೆ. ಮಣಿಪುರ ಹಿಂಸೆ ಬಗ್ಗೆ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಮೌನ ವಹಿಸಿರುವುದು ಏಕೆ?

ಕೆ.ಹರೀಶ್ ಕುಮಾರ್
ದಕ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ

ಹರಿದಾಡಿದ ವಿಡಿಯೊ: ವಿದ್ಯಾರ್ಥಿಗಳಿಬ್ಬರ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ದಾವಣಗೆರೆ: ನಗರದ ಪದವಿ ಕಾಲೇಜೊಂದರ ಕಟ್ಟಡದ ಟೆರೆಸ್ ಮೇಲೆ ಕಳೆದಿದ್ದ ಖಾಸಗಿ ಕ್ಷಣಗಳ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದರಿಂದ ಮನನೊಂದು ವಿದ್ಯಾರ್ಥಿಗಳಿಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ವಿಡಿಯೊ ಬಹಿರಂಗವಾಗಿರುವ ವಿಚಾರ ತಿಳಿದು ಆತಂಕಗೊಂಡಿದ್ದ ವಿದ್ಯಾರ್ಥಿನಿ ಶುಕ್ರವಾರ ಆತ್ಮಹತ್ಯೆ ಮಾಡಿಕೊಂಡಿದ್ದರು. ಆಕೆಯ ಪ್ರಿಯಕರ ಶನಿವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಸಂಬಂಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ವಿದ್ಯಾರ್ಥಿಗಳಿಬ್ಬರ ಪಾಲಕರು ಪತ್ಯೇಕವಾಗಿ ದೂರು ನೀಡಿದ್ದಾರೆ. ಅವುಗಳ ಆಧಾರದಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ. ಪ್ರಕರಣದ ತನಿಖೆ ಆರಂಭಿಸಲಾಗಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಅರುಣ್ ತಿಳಿಸಿದ್ದಾರೆ.

ಯುವಕ ಹಾಗೂ ಯುವತಿ ಪರಸ್ಪರ ಪ್ರೀತಿಸುತ್ತಿದ್ದರು. ಇವರು ಎರಡು ತಿಂಗಳ ಹಿಂದೆ ಕಾಲೇಜಿನ ಕಟ್ಟಡದ ಟೆರೆಸ್ ಮೇಲೆ ಖಾಸಗಿ ಕ್ಷಣ ಕಳೆಯುತ್ತಿರುವುದನ್ನು ಕೆಲವರು ಬೇರೆ ಕಟ್ಟಡದಲ್ಲಿ ಕುಳಿತು ನೋಡಿದ್ದರು. ಆ ದೃಶ್ಯಗಳನ್ನು ತಮ್ಮ ಮೊಬೈಲ್ ಕ್ಯಾಮೆರಾದ ಮೂಲಕ ಚಿತ್ರೀಕರಿಸಿದ್ದರು. ಆ ವಿಡಿಯೊ ಶುಕ್ರವಾರ ಬೆಳಿಗ್ಗೆಯಿಂದ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು.

ರಾಷ್ಟ್ರೀಯ ಹುದ್ದೆಯಿಂದ ಸಿ.ಟಿ. ರವಿ ಎತ್ತಂಗಡಿ

ಒಂದನೇ ಪುಟದಿಂದ...

ಹೊಣೆಯಿಂದ ಕೈಬಿಟ್ಟ ಬೆನ್ನಲ್ಲೇ ರವಿ ಅವರು ಟ್ವೀಟ್ ಮಾಡಿ, ‘ಈ ಜವಾಬ್ದಾರಿ ನನಗೆ ಬಹಳಷ್ಟು ಅನುಭವ ಮತ್ತು ಬದುಕಿಗೆ ಹೊಸ ಆಯಾಮಗಳನ್ನು ನೀಡಿದೆ. ಬೂತ್ ಮಟ್ಟದ ಕಾರ್ಯಕರ್ತನಿಂದ ಹಿಡಿದು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸ್ಥಾನದವರೆಗಿನ ನನ್ನ ಪಯಣದಲ್ಲಿ ನಿರಂತರವಾಗಿ ಕಾರ್ಯಕರ್ತನ ಭಾವದಲ್ಲಿ ಕೆಲಸ ಮಾಡಿದ್ದೇನೆ. ಇನ್ನು ಮುಂದೆಯೂ ಅದೇ ಭಾವದಿಂದ, ಪಕ್ಷ ನೀಡಿದ ಜವಾಬ್ದಾರಿಯನ್ನು ಕಾಯಾ ವಾಚಾ ಮನಸಾ ನಡೆಸುತ್ತೇನೆ’ ಎಂದು ತಿಳಿಸಿದ್ದಾರೆ.

ಅಧ್ಯಕ್ಷ ಸ್ಥಾನದ ಆಕಾಂಕ್ಷಿ: ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರ ಅಧಿಕಾರಾವಧಿ ಮುಗಿದು ಹಲವು ತಿಂಗಳು ಕಳೆದಿವೆ. ರಾಜ್ಯ ಘಟಕಕ್ಕೆ ಹೊಸ ಸಾರಥಿಯ ನೇಮಕಕ್ಕೆ ಹೈಕಮಾಂಡ್ ಕಸರತ್ತು ನಡೆಸುತ್ತಿದೆ. ಲಿಂಗಾಯತ ನಾಯಕರನ್ನು ವಿಧಾನಸಭೆಯ ವಿರೋಧ ಪಕ್ಷದ ನಾಯಕರನ್ನಾಗಿ ನೇಮಿಸಿದರೆ, ರಾಜ್ಯ ಘಟಕಕ್ಕೆ ಒಕ್ಕಲಿಗ ನಾಯಕರನ್ನು ಪರಿಗಣಿಸುವ ಸಾಧ್ಯತೆ ಇದೆ. ಈ ಸ್ಥಾನಕ್ಕೆ ಸಿ.ಟಿ.ರವಿ ಪ್ರಬಲ ಆಕಾಂಕ್ಷಿ. ಜತೆಗೆ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಮಲ್ಲೇಶ್ವರ ಶಾಸಕ ಸಿ.ಎನ್.ಅಶ್ವತ್ಥನಾರಾಯಣ, ಪದ್ಮನಾಭನಗರ ಶಾಸಕ ಆರ್. ಅಶೋಕ ಹೆಸರುಗಳೂ ಮುಂಚೂಣಿಯಲ್ಲಿವೆ. ಶೋಭಾ ಅಥವಾ ರವಿ ಪೈಕಿ ಒಬ್ಬರನ್ನು ಅಧ್ಯಕ್ಷರನ್ನಾಗಿ ನೇಮಿಸಲು ವರಿಷ್ಠರು ಒಲವು ಹೊಂದಿದ್ದಾರೆ. ಆದರೆ, ಶೋಭಾ ಅವರು ಸದ್ಯದ ಸನ್ನಿವೇಶದಲ್ಲಿ ರಾಜ್ಯ ರಾಜಕಾರಣಕ್ಕೆ ತೆರಳಲು ಹೆಚ್ಚು ಉತ್ಸುಕರಾಗಿಲ್ಲ ಎಂದು ಮೂಲಗಳು ಹೇಳಿವೆ.

ವಿಶ್ರಾಂತ ಕುಲಪತಿ ಉಪಾಧ್ಯಕ್ಷ: 9 ಪ್ರಧಾನ ಕಾರ್ಯದರ್ಶಿಗಳ ಪೈಕಿ, ರವಿ ಸೇರಿದಂತೆ ಇಬ್ಬರಿಗೆ ಕೊಕ್ ನೀಡಲಾಗಿದೆ. ಅಲೀಗಢ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ತಾರಿಕ್ ಮನ್ಸೂರ್ ಅವರನ್ನು ಉಪಾಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ. ಅವರು ಅತೀ ಹಿಂದುಳಿದ (ಪಸ್ಮಾಂಡ) ಮುಸ್ಲಿಮ್ ಸಮುದಾಯದವರು. ಅವರು ವಿಧಾನ ಪರಿಷತ್ ಸದಸ್ಯರೂ ಹೌದು.

ಏಪ್ರಿಲ್‌ನಲ್ಲಿ ಪಕ್ಷಕ್ಕೆ ಸೇರ್ಪಡೆಯಾದ ಅನಿಲ್ ಆ್ಯಂಟನಿ ಅವರನ್ನು ರಾಷ್ಟ್ರೀಯ ಕಾರ್ಯದರ್ಶಿಯನ್ನಾಗಿ ನೇಮಿಸಲಾಗಿದೆ. ಅವರು ಗಾಂಧಿ ಕುಟುಂಬಕ್ಕೆ ಆಪ್ತರಾಗಿರುವ ಹಿರಿಯ ಕಾಂಗ್ರೆಸಿಗ ಎ.ಕೆ. ಆ್ಯಂಟನಿ ಅವರ ಪುತ್ರ. ತೆಲಂಗಾಣ ರಾಜ್ಯ ಘಟಕದ ಮಾಜಿ ಅಧ್ಯಕ್ಷ ಬಂಡಿ ಸಂಜಯ್ ಕುಮಾರ್ ಅವರಿಗೆ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹುದ್ದೆಗೆ ‘ಬಡ್ತಿ’ ನೀಡಲಾಗಿದೆ.

ಅಸ್ಸಾಂನ ಸಂಸದ ದಿಲೀಪ್ ಸೈಕಿಯಾ ಅವರನ್ನು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹುದ್ದೆಯಿಂದ ಕೈಬಿಡಲಾಗಿದೆ. ಉಳಿದ 7 ನಾಯಕರು ಸ್ಥಾನ ಉಳಿಸಿಕೊಂಡಿದ್ದಾರೆ. ಉಪಾಧ್ಯಕ್ಷ ಹುದ್ದೆಯಿಂದ ಕೇಂದ್ರದ ಮಾಜಿ ಸಚಿವ ರಾಧಾಮೋಹನ್ ಸಿಂಗ್, ಕಾರ್ಯದರ್ಶಿ ಹುದ್ದೆಯಿಂದ ಉತ್ತರ ಪ್ರದೇಶದ ಸಂಸದರಾದ ವಿನೋದ್ ಸೋಂಕರ್, ಹರೀಶ್ ದ್ವಿವೇದಿ ಹಾಗೂ ಸುನಿಲ್ ದಿಯೋಡರ್ ಅವರಿಗೆ ಕೊಕ್ ನೀಡಲಾಗಿದೆ.

ಛತ್ತೀಸಗಢದ ರಾಜ್ಯಸಭಾ ಸದಸ್ಯ ಸರೋಜ್ ಪಾಂಡೆ ಅವರನ್ನು ಉಪಾಧ್ಯಕ್ಷರನ್ನಾಗಿ ಮಾಡಲಾಗಿದ್ದು, ಪಶ್ಚಿಮ ಬಂಗಾಳದ ಸಂಸದ ದಿಲೀಪ್ ಘೋಷ್ ಅವರನ್ನು ಕೈಬಿಡಲಾಗಿದೆ. ಛತ್ತೀಸಗಢದ ಬುಡಕಟ್ಟು ನಾಯಕಿ ಲತಾ ಉಸೆಂಡಿ ಅವರನ್ನು ಉಪಾಧ್ಯಕ್ಷ ಸ್ಥಾನಕ್ಕೆ ಏರಿಸಲಾಗಿದೆ. ಕೆಲವೇ ತಿಂಗಳಲ್ಲಿ ನಡೆಯಲಿರುವ ಅಲ್ಲಿನ ವಿಧಾನಸಭಾ ಚುನಾವಣೆಯ ಮೇಲೆ ಕಣ್ಣಿಟ್ಟು ಈ ನೇಮಕ ಮಾಡಲಾಗಿದೆ.

ನಡ್ಡಾ ಅವರು ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳ ಜತೆಗೆ ಶುಕ್ರವಾರ ಸುಮಾರು ನಾಲ್ಕು ಗಂಟೆ ಸುದೀರ್ಘ ಸಭೆ ನಡೆಸಿದ್ದರು. ಲೋಕಸಭಾ ಚುನಾವಣೆ ಹಾಗೂ ವಿಧಾನಸಭಾ ಚುನಾವಣೆಗೆ ಮುನ್ನ ಸಂಘಟನೆ ಬಲಪಡಿಸುವ ಕುರಿತು ಚರ್ಚಿಸಿದ್ದರು.

ಏಳು ತಿಂಗಳಲ್ಲಿ ಕಳ್ಳಬೇಟೆಗೆ 112 ಹುಲಿ ಬಲಿ!


ಪ್ರಜಾವಾಣಿ ವಾರ್ತೆ

ಮುಂಬೈ: ದೇಶದಲ್ಲಿ ಹುಲಿಗಳ ಸಂಖ್ಯೆ ವೃದ್ಧಿಸಿರುವ ಸುದ್ದಿ ಹೊರಬಿದ್ದ ಬೆನ್ನಲ್ಲೇ ಪ್ರಸಕ್ತ ವರ್ಷದ ಜನವರಿಯಿಂದ ಜುಲೈವರೆಗಿನ ಏಳು ತಿಂಗಳ ಅವಧಿಯಲ್ಲಿ 112 ಹುಲಿಗಳು ಕಳ್ಳಬೇಟೆಗೆ ಬಲಿಯಾಗಿರುವ ಸಂಗತಿ ಬಯಲಾಗಿದೆ.

ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ (ಎನ್‌ಟಿಸಿಎ) ಅಂಕಿ–ಅಂಶಗಳನ್ನು ಆಧರಿಸಿ ವನ್ಯಜೀವಿ ಸಂರಕ್ಷಣಾ ಕಾರ್ಯದಲ್ಲಿ ತೊಡಗಿರುವ ಸ್ವಯಂ ಸೇವಾ ಸಂಸ್ಥೆಯಾದ ವೈಲ್ಡ್‌ಲೈಫ್ ಟ್ರಸ್ಟ್ ಆಫ್ ಇಂಡಿಯಾ (ಡಬ್ಲ್ಯುಟಿಐ) ಈ ಮಾಹಿತಿ ನೀಡಿದೆ.

ಅಲ್ಲದೇ, ಕಳೆದ ಐದು ವರ್ಷಗಳಲ್ಲಿ ಅಕ್ರಮ ವನ್ಯಜೀವಿ ವ್ಯಾಪಾರಕ್ಕೆ ಭಾರತದಲ್ಲಿ 114 ಹುಲಿಗಳು ಬಲಿಯಾಗಿವೆ ಎಂದು ಡಬ್ಲ್ಯುಟಿಐ ಹೇಳಿಕೆಯಲ್ಲಿ ತಿಳಿಸಿದೆ.

ದೇಶದಲ್ಲಿ ಹುಲಿಗಳ ಸಂಖ್ಯೆ




ರಾಜ್ಯದಲ್ಲಿ ಹೆಚ್ಚಳ



ಪ್ರಜಾವಾಣಿ ಗ್ರಾಫಿಕ್ಸ್: ಕಣಕಾಲಮಠ

ಯಾವ ಉದ್ಯಾನದಲ್ಲಿ ಎಷ್ಟು ಹುಲಿ



ರಾಜ್ಯವಾರು ಹುಲಿಗಳ ಸಂಖ್ಯೆ

ರಾಜ್ಯ	ಸಂಖ್ಯೆ	ರಾಜ್ಯ	ಸಂಖ್ಯೆ
ಬಿಹಾರ	54	ಗೋವಾ	5
ಉತ್ತರಾಖಂಡ	560	ಕರ್ನಾಟಕ	563
ಉತ್ತರ ಪ್ರದೇಶ	205	ಕೇರಳ	213
ಆಂಧ್ರಪ್ರದೇಶ	65	ತಮಿಳುನಾಡು	306
ತೆಲಂಗಾಣ	21	ಅರುಣಾಚಲ ಪ್ರದೇಶ	9
ಛತ್ತೀಸಗಢ	17	ಅಸ್ಸಾಂ	227
ಜಾರ್ಖಂಡ್	1	ಮಿಜೊರಾಂ	0
ಮಧ್ಯಪ್ರದೇಶ	785	ಮೇಘಾಲಯ	0
ಮಹಾರಾಷ್ಟ್ರ	444	ಪಶ್ಚಿಮ ಬಂಗಾಳ	2
ಒಡಿಶಾ	20	ಈಶಾನ್ಯ ರಾಜ್ಯಗಳು, ಬ್ರಹ್ಮಪುತ್ರ	236
ರಾಜಸ್ಥಾನ	88	ಸುಂದರಬನ	101

ರಾಜ್ಯದಲ್ಲಿ 563 ಹುಲಿಗಳು

ಒಂದನೇ ಪುಟದಿಂದ...

ಎರಡನೇ ಸ್ಥಾನದಲ್ಲಿ ರಾಜ್ಯದ ಬಂಡೀಪುರ (150) ಹಾಗೂ ನಾಗರಹೊಳೆ (141) ಸಂರಕ್ಷಿತ ಪ್ರದೇಶಗಳು ಇವೆ.

ಹುಲಿ ಯೋಜನೆಯ 50 ವರ್ಷಗಳ ಸಂಭ್ರಮಾಚರಣೆ ಅಂಗವಾಗಿ ಮೈಸೂರಿನಲ್ಲಿ ಏಪ್ರಿಲ್ 9ರಂದು ನಡೆದ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ‘ಹುಲಿ ವರದಿ–2022’ ಬಿಡುಗಡೆ ಮಾಡಿದ್ದರು. ಕ್ಯಾಮೆರಾ ಟ್ರ್ಯಾಪ್ ಆಧಾರದಲ್ಲಿ ದೇಶದಲ್ಲಿ ಕನಿಷ್ಠ 3,167 ಹುಲಿಗಳು ಇವೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿತ್ತು. ಈ ದತ್ತಾಂಶವನ್ನು ವೈಲ್ಡ್‌ಲೈಫ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಹೆಚ್ಚಿನ ವಿಶ್ಲೇಷಣೆ ನಡೆಸಿ ಸಮಗ್ರ ವರದಿ ಸಿದ್ಧಪಡಿಸಿದೆ. ಕ್ಯಾಮರಾ ಟ್ರ್ಯಾಪ್ ಹಾಗೂ ಕ್ಯಾಮೆರಾ ಟ್ರ್ಯಾಪ್ ಆಗದ ಹುಲಿಗಳ ಇರುವಿಕೆ ಪ್ರದೇಶಗಳಿಂದ ಸಂಗ್ರಹಿಸಿದ ದತ್ತಾಂಶಗಳ ವಿಶ್ಲೇಷಣೆ ನಡೆಸಲಾಗಿದೆ. ಇದರ ಪ್ರಕಾರ, ಹುಲಿಗಳ ಸಂಖ್ಯೆಯ ಗರಿಷ್ಠ ಮಿತಿ ಅಂದಾಜು 3,925 ಹಾಗೂ ಅವುಗಳ ಸರಾಸರಿ ಸಂಖ್ಯೆ 3,682. ವಾರ್ಷಿಕ ಶೇ 6.1ರಷ್ಟು ಬೆಳವಣಿಗೆ ಆಗಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	112.35	13,164	3,155
ಹಾರಂಗಿ	2,859	2,856.91	6,420	3,600
ಕಬಿನಿ	2284.00	2,282.87	3,970	3,500
ಹೇಮಾವತಿ	2,922	2,912.50	7,166	200
ಲಿಂಗನಮಕ್ಕಿ	1,819	1,786.30	19,807	3,372.18
ಸೂಪಾ (ಮೀ)	564	543.90	19,497	00
ಮಾಣಿ	595	580.20	2,388	00
ತುಂಗಭದ್ರಾ	1,633	1,621.80	90,793	930
ಮಲಪ್ರಭಾ	2079.5	2,062.70	6,201	194
ಘಟಪ್ರಭಾ	2175	2,150.95	22,413	1,010
ಭದ್ರಾ	186	160.9	13,659	187
ಆಲಮಟ್ಟಿ (ಮೀ)	519.6	517.46	1,40,948	1,19,780
ನಾರಾಯಣಪುರ (ಮೀ)	492.25	491.37	77,500	76,000

*ನೆಲಮಟ್ಟದಿಂದ

ಯೋಜನೆ ಮುಂದುವರಿಸಲು ಆದೇಶಕ್ಕೆ ಕಾದಿರುವ ಅಧಿಕಾರಿಗಳು

‘ರೈತ ವಿದ್ಯಾನಿಧಿ’ ಮೇಲೆ ಕಾರ್ಮೋಡ!

• ಎಂ. ಮಹೇಶ, ಸಂಧ್ಯಾ ಹೆಗಡೆ

ಮೈಸೂರು/ಮಂಗಳೂರು: ರೈತರ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವಾಗಲು ಬಿಜೆಪಿ ನೇತೃತ್ವದ ಸರ್ಕಾರ ಜಾರಿಗೊಳಿಸಿದ್ದ ‘ಮುಖ್ಯಮಂತ್ರಿ ರೈತ ವಿದ್ಯಾನಿಧಿ ಯೋಜನೆ’ಯ ಮೇಲೆ ಕಾರ್ಮೋಡ ಕವಿದಿದೆ. ಪ್ರಸಕ್ತ ಸಾಲಿನಲ್ಲಿ ಮುಂದುವರಿ ಸಬೇಕೋ, ಬೇಡವೋ ಎಂಬ ಬಗ್ಗೆ ಕಾಂಗ್ರೆಸ್ ನೇತೃತ್ವದ ಸರ್ಕಾರದಿಂದ ಯಾವುದೇ ನಿರ್ದೇಶನ ಬಂದಿಲ್ಲ.

2021-22ನೇ ಸಾಲಿನಿಂದ ಯೋಜನೆಯನ್ನು ಜಾರಿಗೊಳಿಸಲಾಗಿತ್ತು. ಹಿಂದಿನ ಸಾಲಿನವರೆಗೂ ಚಾಲ್ತಿಯಲ್ಲಿತ್ತು. 19 ಲಕ್ಷ ವಿದ್ಯಾರ್ಥಿಗಳು ಪ್ರಯೋಜನ ಪಡೆದುಕೊಂಡಿದ್ದರು. ‘ಯೋಜನೆಯನ್ನು ಈ ಸರ್ಕಾರ ರದ್ದುಪಡಿಸಿದೆ’ ಎಂದು ಬಿಜೆಪಿ ಆರೋಪಿಸಿದೆ. ‘ಸರ್ಕಾರದಿಂದ ಅಧಿಕೃತ ನಿರ್ದೇಶನ ಬಂದಿಲ್ಲ’ ಎಂದು ಕೃಷಿ ಇಲಾಖೆಯ ಅಧಿಕಾರಿಗಳು ಹೇಳುತ್ತಿದ್ದಾರೆ. ಈ ಯೋಜನೆ ಮುಂದುವರಿಸಬೇಕು ಮತ್ತು ಮೊತ್ತ ಹೆಚ್ಚಿಸಬೇಕು ಎಂದು ವಿದ್ಯಾರ್ಥಿಗಳು ಒತ್ತಾಯಿಸುತ್ತಿದ್ದಾರೆ.

2021–22ನೇ ಸಾಲಿನಲ್ಲಿ 10.44 ಲಕ್ಷ ವಿದ್ಯಾರ್ಥಿಗಳಿಗೆ ಒಟ್ಟು ₹464 ಕೋಟಿ ವಿತರಣೆಯಾಗಿದ್ದರೆ, 2022–23ನೇ ಸಾಲಿನಲ್ಲಿ 8.56 ಲಕ್ಷ ವಿದ್ಯಾರ್ಥಿಗಳಿಗೆ ₹375 ಕೋಟಿ ವಿತರಣೆಯಾಗಿದೆ.

ಕೃಷಿ ಇಲಾಖೆ ಮೂಲಕ ಅನುಷ್ಠಾನಗೊಂಡಿರುವ ಈ ಯೋಜನೆಯಡಿ ಮೊದಲ ವರ್ಷ ವಿದ್ಯಾರ್ಥಿಗಳು ತಾವು ಕಲಿಯುವ ಶಿಕ್ಷಣ ಸಂಸ್ಥೆ ಮೂಲಕ ದಾಖಲೆಗಳನ್ನು ಸಲ್ಲಿಸಬೇಕಾಗಿತ್ತು. 2022ನೇ ಸಾಲಿನಲ್ಲಿ ನೇರವಾಗಿ ಸ್ಕಾಲರ್‌ಷಿಪ್ ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಲು ಸರ್ಕಾರ ಅವಕಾಶ ಕಲ್ಪಿಸಿತ್ತು.

ರೈತರ ಮಕ್ಕಳು ಶಿಕ್ಷಣ ಮುಂದುವರಿಸಬೇಕೆಂಬ ಆಶಯದಿಂದ ಪಿಯುಸಿ ಹಂತದಿಂದ ವೃತ್ತಿಪರ ಕೋರ್ಸ್, ಸ್ನಾತಕೋತ್ತರ ಪದವಿವರೆಗಿನ ವಿದ್ಯಾರ್ಥಿಗಳಿಗೆ ₹2,500ರಿಂದ ಗರಿಷ್ಠ ₹11ಸಾವಿರದವರೆಗೆ ನೀಡಲಾಗುತ್ತಿದೆ.

‘ಪದವಿ ಓದುವಾಗ ₹5,000 ವಿದ್ಯಾರ್ಥಿವೇತನ ದೊರೆತಿತ್ತು. ಈಗ ಸ್ನಾತಕೋತ್ತರ ಪದವಿ ಓದುತ್ತಿದ್ದು, 2022–23ನೇ ಸಾಲಿನ ವಿದ್ಯಾರ್ಥಿ ವೇತನ ₹10ಸಾವಿರ ಕಳೆದ ಮಾರ್ಚ್‌ನಲ್ಲೇ ಖಾತೆಗೆ ಜಮಾ ಆಗಿದೆ. ಇದರಿಂದ ಶೈಕ್ಷಣಿಕ ವೆಚ್ಚಕ್ಕೆ ಪಾಲಕರಿಂದ ಹಣ ಕೇಳುವ ಪ್ರಮೇಯ ತಪ್ಪುತ್ತದೆ. ರೈತರ ಮಕ್ಕಳಲ್ಲಿ ಹೆಚ್ಚಿನವರು ಬಿಪಿಎಲ್ ಕಾರ್ಡ್ ಹೊಂದಿದವರೇ ಇರುತ್ತಾರೆ. ಹೀಗಾಗಿ, ವಿದ್ಯಾನಿಧಿ ಯೋಜನೆಯಿಂದ ತುಂಬಾ ಅನುಕೂಲವಾಗಿದ್ದು, ಈಗಿನ ಸರ್ಕಾರ ಈ ಮೊತ್ತ ಹೆಚ್ಚಳ ಮಾಡಬೇಕು’ ಎಂದು ಮಂಗಳೂರಿನ ವಿದ್ಯಾರ್ಥಿ ಶಂಕರ್ ಓಬಳಬಂಡಿ ವಿನಂತಿಸಿದರು.

‘ವಿಧಾನಸಭೆ ಚುನಾವಣೆ ಘೋಷಣೆಯಾಗುವ ಕೆಲದಿನಗಳ ಮೊದಲು ನಮ್ಮ ಬ್ಯಾಂಕ್ ಖಾತೆಗೆ ಈ ಸಾಲಿನ ರೈತ ವಿದ್ಯಾನಿಧಿ ಮೊತ್ತ ಜಮಾ ಆಗಿದೆ. ಪದವಿ ವಿದ್ಯಾರ್ಥಿಗಳಿಗೆ ನೀಡುವ ₹5,000 ಮೊತ್ತವನ್ನು ಹೆಚ್ಚಳ ಮಾಡಿದರೆ ಅನುಕೂಲ’ ಎಂದು ನಗರದ ಕಾಲೇಜಿನ ಬಿ.ಎ ದ್ವಿತೀಯ ವರ್ಷದ ವಿದ್ಯಾರ್ಥಿ ಶಂಕರ್ ಯಮನೂರ ಒತ್ತಾಯಿಸಿದರು.

ಕೃಷಿಕರ ಮಕ್ಕಳಿಗೆ ನೀಡುವ ‘ರೈತ ವಿದ್ಯಾನಿಧಿ’ ವಿದ್ಯಾರ್ಥಿವೇತನ ಯೋಜನೆಯು ಮುಂದುವರಿದಿದ್ದು, ಅದರ ರೂಪರೇಷೆ ಇನ್ನಷ್ಟೇ ಸಿದ್ಧವಾಗಬೇಕಾಗಿದೆ

ಪುತ್ರ ಜಿ.ಟಿ
ಕೃಷಿ ನಿರ್ದೇಶಕರು, ಕೃಷಿ ಇಲಾಖೆ

ಯೋಜನೆ ಕುರಿತು ಅನಿಶ್ಚಿತತೆ ಇರುವುದರಿಂದ ರಾಜ್ಯದ 11 ಲಕ್ಷ ರೈತ ಕುಟುಂಬದ ವಿದ್ಯಾರ್ಥಿಗಳಿಗೆ ಪ್ರತಿ ವರ್ಷ ₹ 438.69 ಕೋಟಿ ದೊರೆಯುವುದು ತಪ್ಪಬಹುದು

ಈರಣ್ಣ ಕಡಾಡಿ
ಅಧ್ಯಕ್ಷ, ರಾಜ್ಯ ಬಿಜೆಪಿ ರೈತ ಮೋರ್ಚಾ

ಯೋಜನೆ ಅನುಷ್ಠಾನದ ಕುರಿತು ಸರ್ಕಾರದಿಂದ ಆದೇಶ ಬಂದಿಲ್ಲ. ಈ ಸಾಲಿನ ಕಾರ್ಯಕ್ರಮಗಳ ಪಟ್ಟಿಯಲ್ಲೂ ಸೇರಿಲ್ಲ

ಬಿ.ಎಸ್.ಚಂದ್ರಶೇಖರ್
ಜಂಟಿ ನಿರ್ದೇಶಕ, ಕೃಷಿ ಇಲಾಖೆ, ಮೈಸೂರು

PROPERTY CORNER ಕ್ಲಾಸಿಫೈಡ್ಸ್

ATTENTION BUILDERS
Please contact for
- Project start to completion - advisory
- Project execution and PMC
- Onsite training

A K Enterprises
Proprietor: K Arulnathan BE, MBA
e-mail: arulnathan.k@gmail.com
M: +91 96633 95826

3 BHK DUPLEX HOUSE FOR SALE



OMBR LAYOUT
Banasawadi
Bangalore, Granite Floor, fully furnished, 15 Year old Building, 600 sqft BDA Site. good location
Contact: Owner :
98866 03232

ff21 ನೀವು ಉತ್ತಮ ಬಾಡಿಗೆ ಆದಾಯವನ್ನು ಹುಡುಕುತ್ತಿರುವಿರಾ? WHERE FRIENDS BECOME FAMILY

FF21 ಬೆಂಗಳೂರಿನ ಪ್ರಮುಖ ಪ್ರೀಮಿಯಂ ಸಹ-ವಾಸಿಸುವ (Co-living) ಸ್ಥಳವಾಗಿದೆ ಬೆಂಗಳೂರಿನ ಹೈಟೆಕ್ ವಲಯಗಳ ಬಳಿ ಬಾಡಿಗೆಗೆ ಆಸ್ತಿಗಳನ್ನು ಹುಡುಕುತ್ತಿದೆ

FF21 ಸೈನ್ ಅಪ್ ಮಾಡಲು ನೋಡುತ್ತಿದೆ:
- BTS ಪ್ರಾಪರ್ಟೀಸ್ 5000 ಚದರ ಅಡಿ + ಭೂಮಿ
- ನಿರ್ಮಾಣ ಹಂತದಲ್ಲಿದೆ ಅಥವಾ 100+ ಕೊಠಡಿಗಳೊಂದಿಗೆ ಹೊಸದಾಗಿ ನಿರ್ಮಿಸಲಾದ ಗುಣಲಕ್ಷಣಗಳು
- 25000 ಚದರ ಅಡಿಗಳಷ್ಟು ನಿರ್ಮಿಸಿದ ಪ್ರದೇಶದೊಂದಿಗೆ ಬೆಚ್ಚಗಿನ ಶೆಲ್ ವಾಣಿಜ್ಯ ಗುಣಲಕ್ಷಣಗಳು

lಆಸಕ್ತ ಭೂಮಾಲೀಕರು, ದಯವಿಟ್ಟು ನಮ್ಮನ್ನು ಈ ಮೂಲಕ ಸಂಪರ್ಕಿಸಿ:
+91 90196 80252
bizdev-bldg@ff21.in

FF21 ಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಗಾಗಿ ನಮ್ಮ ವೆಬ್‌ಸೈಟ್ www.ff21.in ಗೆ ಭೇಟಿ ನೀಡಿ

PRM/KA/RERA/1251/446/PR/110722/005059
DS-MAX SENATE
BOOK YOUR DREAM HOME IN BANGALORE'S MOST HAPPENING LOCATION
BEGUR
10 MINS. FROM SILK BOARD (MADIWALA)
Rs. 36.72 - 52.29 Lacs*
BBMP APPROVED, LUXURIOUS 1 & 2-BHK APARTMENTS
8880 003 003
www.dsmaxproperties.com



EVEN **KORAMANGALA** IS 20 MINS. DRIVE FROM HERE*
*T & C Apply
FEW OF OUR TRENDING PROJECTS
SARJAPURA | MYSORE ROAD | THANISANDRA | CHANDAPURA | HENNUR
K R PURAM | ELECTRONIC CITY | TUMKUR ROAD | BANASHANKARI

REQUIRED
Urgently required Raw Material Storage Yard Building of are around 10,000 to 12,000 sq.ft on Lease Basis in Bidadi Industrial Area, Ramanagara Taluk and District.
Please Contact:
Mr. Chandra Poorna
9900478724
9880572725

COMMERCIAL LAND FOR SALE
Land for sale measuring about 10000 sqft at Magadi Chord road junction facing East to Chord road West to 40ft road.
BBMP A khatha with clear titles.
Call: **9663177966, 9845143379.**

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Anjanapura

40X60 BDA Site for Sale at Anjanapura 5th G Block, 60 Feet Road, Contact: 9945427003

Arkavathi Layout

30X30 Arkavathi Layout 2nd Block North east Corner Next to Greenfield School. USR -7019770736/ 8951614989.

ARKAVATHI LAYOUT 20x30, 7th block 3 sites, 20x30 3rd block, 30x40, 20x30 15th block. USR-7019770736/ 8951614989.

Banashankari

30x40 SITE SALE



BSK 6th STAGE, 10th BLOCK, BDA NORTH FACING, PLOT FOR SALE 30x40, 1st ALLOTTE, CLEAR TITLE. Rs. 90 Lac, Negotiable **8088799686, 9611105595**

BSK 6TH Stage, 4th 'B' Block, 50x80 East Site 7,500/- Owner meeting, Mahalaxmi Enterprise -9845144365

BANASHANKARI 6TH Stage 5th Block North East Corner 850 Square feet BDA Action Site For Sale. Contact: 9845298419

BANASHANKARI 6TH Stage, 40x60, 60" Road 20x30,30x40, 50x80, Residential /Commercial Sites Sale :9916817739

'AVAILABLE 'AND Wanted Banashankari 6th Stage, Anjanapura, BDA And BBMP Sites,20X30,30X40,40X60, 50X80,Contact:9900097239

'BANASHANKARI' 6TH Stage, 3rd Block,30x40,West Facing BDA Site Good Location Contact :9900097239

"AVAILABLE AND" Wanted Banashankari 6th Stage, 20x30, 30x40, 40x60, 50x80, Corner Properties Also Availabe: 9901033573

30X40, 40X60 Available Sale Both or East Face in Banashankari 6th Stage. Call: MANOJ 9731410616

AVAILABLE BDA Sites Banashankari 6th Stage,Anjanapura,20x30, 30x40,40x60,50x80, Genuine Buyers Contact: 9686804914 /9148484444

SALE BSK 6th stage 9th Block 30x40 East Facing 65 Lakh Also 40x60 East Facing 4th Block 2.cr and 20x30 48 lakh Negotiable 9945373839, 9620041313

SHREE RENUKAMBA Enterprises Banashankari 6th Stage, BDA Sites Buying /Selling,20x30,30x40,40x60, 50x80 :9880770498

BTM Layout

BTM 4TH Stage 2nd Block 40x60, 30x40, 30x50, 50x100 BDA approved layout. USR- 7019770736/ 8951614989.

Bannerghatta Road

40X60 SITE SALE NORTH Facing HG 26 Nandanavana Residential Layout, Bannerghatta, NO Brokers. 9448421431, 9739364554.

Domlur

DOMLUR 40x60 west suitable P.G, Apartment, Semi-Commercial, Residential also, 40x83, 25x37. USR- 7019770736/ 8951614989.

Electronic City

SITE FOR SALE Electronic City Near Chandapur- KHB 2nd Phase C Sector Suryanagara 30x50 Bangalore. 9980816305

Hosur Road

SALE: 1530SQ.FT A-Khata Site (North facing), attached to Oxford MedicalCollege, Yadavanahalli, Hosur Road. 3850/-sq.ft. Owner: 8762019900/ 8548908505

Jakkur

SALE MCECHS Layout 30X40 30X50 12500/- Winfield 30X50 10000 Arkavathi 30x40 7000/- 20X30 8000/- 9449970278

Jalahalli

SITES FOR SALE BAGALGUNTE, DC CONVERTED, BUILT TO SUITABLE VILLAS, NEAR BY NAGASANDRA METRO: 7996656677

Jayanagar

JAYANAGAR 7TH Block, 40x60 North 4th 'T' Block 40x60 East & North Facing Houses. J.P.Nagar 3rd Phase North Facing 40x60 1st Phase 45x60. 94484-83699

JAYANAGAR 3RD BLOCK 10th 'B' Main Road Near Cosmopolitan Club 40×50 West Facing Vacant Site Sale: 9845075792

J P Nagar

SALE 30X40 East Facing JP Nagar 9th phase 4th "A" Block 8750/ square Feet also 30x40 South 7500/- Near Kanakpura Road 9945373839, 9620041313

SALE BDA JPNAGAR 8th phase 2nd Block 40x60 west Facing Commercial site Rate 11250/- per sqft. 9620041313, 9945373839

JPNAGAR 8TH Phase, Royal County BDA Site Sale, 30x50, S/F, 9000/- Negotioble: 9538680364 / 9513004587

OLD HOUSE For Sale 27x58 South Facing JP Nagar 1st Phase, Sarakki Main Road.- 9845030368

Koramangala

SALE 50X80 NORTH RESIDENTIAL PLOT KORAMANGALA 1ST BLOCK, SERIOUS BUYERS PLEASE CONTACT: RAMESH HK 9844104958

KORAMANGALA 60x90 1st block, 3rd Block 7300 sft Corner, 50x80 4th Block. USR -7019770736/ 8951614989.

Kanakapura Road

KANAKAPURA ROAD Kaggalipura BMRDA Approved 'E'Khata 30x40 E/F, 30X50 W/F, 3000/- Negotioble : 9740150364/9986146147

M G Road And Around

4000 SQFT residential plot for sale on MG Road. Call 9663766492. Brokers excuse.

Kempegowda Layout

BDA SITES For Sale @ Kempegowda Layout 20x30, 30x40, 40x60 6363496142 9845555666

Magadi Road

30X40 WF BBMP A' Katha 40ft Road Rs. 8750/- Negotiable Magadi Road BEL Layout: 9916826976

Mysore

SITE FOR SALE 100'x80' North facing Adipampa Road, Mysore, suitable for complex, hospital, flats.Contact: 9901628999.

Nagarabhavi

BDA 30X50 Site Sale Nagarabhavi 2nd Stage 9th Block, 10,500/-.Sqft. BDA`Allottee, Brokers Excuse. Genuine Buyers Only Call:OWNER 7483814977.

30X40 WEST, Semi Commercial Site Sale. Near Deepa Complex, 80 Feet Road, Rs.13,000/-. Sqft. 9980409820.

"NAGARABHAVI BDA Complex 20x30 East, 30x40 North 40 feet Road BDA Site, Immediate Registration. 9448432633"

Rajajinagar

SITE FOR Sale Rajajinagar 6th Block, 12th BMain, 30x40 feet, 3.25cr Negotiable Contact: 9886184614/ 9986659291

Rajarajeshwari Nagar

BDA & RERA



RERA No. : PRM/KA/RERA/1251/310/PR/191222/005541
TRILOK VILLAS AND APARTMENTS Premium **PLOTS** at Kenchanahalli @ R.R. Nagar **9008880994, 9900199564 & 9972399993**

'A' KHATA Property for Sale in RajarajeshwariNagar 30x40 and 40x60, East facing. Call: 9448288522

Ramamurthy Nagar

30X50 SOUTH Facing site with DC converted land in BBMP limit at Riches Garden (Manjunath Nagar) Ramamurthy Nagar with till date doc, 30 Ft Road, Price-8000 per sqft Nego. Call-9845002388. 9945602388.

Vishweshwariah Layout

"VISHVESHWARAIAH 4TH-BLOCK BDA Two sites for sale 30x40 North face, Good location. Contact: 8618934679"

SALE 30X40 VISHVESWARAIAH LAYOUT 4th Block South Facing 78 lakh Negotiable 9945373839, 9620041313

Flat

Banashankari

FLATS FOR SALE



RERA No : PRM/KA/RERA/1251/310/PR/220722/005096
MARS THE PLANET 2, 2.5, 3 BHK Flat Located @ BSK 3rd Stage opp to Tata Promont, **8792155802 9972399993 & 9880625336**

KATHRIGUPPE MAIN road 2ndfloor 2BHK flat SALE 900sft west-facing 48,00,000/-negotiable. ABHILASHA CONSULTANT. 9480565758

Basaveshwaranagar

"MAGADI MAIN Road ready to occupy 3BHK 1315.Sfqt 8600000/-, 2BHK 1050.Sqft 6800000/- with occupancy certificate. 9845286505"

Bannerghatta Road

SALE MANTRI woodlands BG road 3 Bhk duplex 2000 sqft fully loaded rate 1.2 cr full white. 9886425997

Jigani

DLF MAIDEN Heights, Jigani, Bangalore 2 BHK Flat No.C041 Fourth Floor Sale Area 1000 Sq.ft. Call:-9899869329,9810054005

J P Nagar

SOBHA DEWFLOWER Excellent 4 BHK East Facing, Sobha Tulip 3 BHK Flats For Sale 9845760178

NEW FLATS for Sale, J.P.Nagar`near Tippu Circle,2`BHK &.3 BHK, 39,00,000/-& 45,00,000/`,(Low Price) Completion`in 3 months`Bank Loan will`be approved`(only Muslims)Contact- Simha: 9036706304 Shahzad: 6364062086.

SALE OVER 8 Year, Semi-furnished 2 BHK Flat 1080 Sq.ft. with Roofed Car-parking. JPNagar 5th Phase 9986763007.

Kengeri

1BHK BDA FLAT EAST FACING RS. 15L, 2BHK RS. 40L, 3 BHK RS. 60L: 9886201690.

Kumaraswamy Layout

3-BHK E/F A-Khata Flat 2250Sqft Fully Teak Wood Italian Marbles 2-Carparking 1.6Cr Kumaraswamy Layout 15F Bustand- 9611144096

Kanakapura Road

2-BHK FLATS Sale 1265-Sqft E/F Full Interiors Off Kanakpura Road Konankunte Near Junior Delhi Public School- 9343722162

Vijayanagar

THREE BEDROOM FLAT, Area-1470 sft including Balcony, Carparking, Rate:8200/Sft (Negotiable) at Saraswathinagar, Vijayanagar, Bangalore. (Broker excuse)- 9880100828.

House

Girinagar

40X60, 4-BHK Duplex Independent House For Sale, with Garden Space and Covered Car Parking. 9620204588

J P Nagar

SALE JPNAGAR 2nd Phase 30x50 West`Facing BDA-Site With old House Behind Woody's Hotel 3.4cr Maximum-White. Sunil 9845201710

SALE 30X40 Duplex House, 45x62 Two Unit House, 30x40, 40x60 Sites @ J.P.Nagar 1st Phase: 9845030349

SALE J.P.NAGAR 5th Phase, 30x40 North, old house, BDA good location, 2,45,00,000/- Suraj Realtors -9845232711

Nagarabhavi

HOUSE FOR Sale in Dgroup layout Nagarabhavi G+2 rental house (30X40)contact-9900444944,9844262220

Sadashiva Nagar

PROPERTY SALE. 2 'Hari Krupa' 3rd Cross Lower Palace Orchards. 1550 Sq ft. 9591932764

Uttarahalli

3 BHK House for sale in Maruti Layout Vasantapura, Uttarahalli, Bangalore. Contact owner - 9591299944

Vishweshwariah Layout

"30X40 4BHK TRIPLEX with Lift Brand new-House for Sale.at Vishveshwaraiah 3rd Block-near Amma Ashram 40'ft wide-Road, Opp.Park. 9448682467/ 8217537292"

Agricultural Land Converted

Kanakapura Road

SALE/ PURACHASE Kanakapura Road, Mysore Road, Airport Road 5 to 50 Acres Agriculture, Industrial Land & Farm Houses. 94492-42977/ 94484-83699

Agricultural Land

Magadi Road

LAND SALE: 1Acre 8 Guntas near Gudemaranahalli, Magadi Main Road, Suitable: Farm House. 9611135365.

North

72 ACRES farm land, 11 borewells, drip irrigation, farmhouse, beautiful location gadag district contact 9000092222

Ramanagar

AGRICULTURAL LANDS Sale Near Ramanagar 1.5-Acre and 3-Acres 55,00,000/- PerAcre Clear Title. Contact- 9900115519

Commercial Land

Yelahanka

"YELAHANKA NEW TOWN 2 Acres East facing 60 feet Road Conversion BBMP 'A' katha Land Sale. 9379776189"

Hasiru Bhoomi Your Own Weekend Farm
CALL FOR MORE DETAILS : **+91 8147873745**
FARM LANDS FOR SALE IN NORTH BENGALURU
JUST **18KM FROM YELAHANKA NEW TOWN**
www.hasirubhoomi.com

Commerical

Banashankari

COMMERCIAL BDA



SITE FOR SALE 100 ft. Main Road, BSK 6th Stage, 4th Block 25x30, North Face, opposite to Shoba Apartment, Rs. 21000/- sft nego. **Ramesh - 9845286583**

Commercial Street

COMMERCIAL PROPERTY for Sale- Commercial Street prime location 1134 sqft, first cross. Contact: 9902736284

Jayamahal

JAYAMAHAL NANDIDURGA Road Commercial Corner Prime Property, Prime Location Sale Measuring 7500 sft Contact: 7829203369

Farm House/ Land/ Resorts

Kanakapura Road

KANAKAPURA TO Mysore Road, Farm Land Five Gunta, Sale, Clear titles, going cheap. 8660514834/ 9342410224

Mysore Road

12000 SQFT Farm Land with Fencing from Bangalore Mysore Highway 6kms Near Channapatna Total 22L: 9845169300

Residential/ Commercial

Sadashiva Nagar

PREMIUM RESIDENTAL VACANT PLOT OPP PARK ACROSS SADASHIVANAGAR SWIMMING POOL CONTACT OWNER 9844018823

Villas/Bunglows

Electronic City

EXCELLENT VILLA HOUSE FOR SALE. Gated & fully secured, 5Km's from ELECTRONIC CITY, close to D'MART. 3BHK all attached Bathroom, 2 Halls. Club house, swimming pool. 1.75cr negotiable, for Bank Loan, Clear Title- 9900231679, 7795904842

Joint Development

Tumkur

FARM LAND JD 177 Acres. Tumkur, Out Rate 69cr. JD advance 10cr. Ratio 50/50. 9980577227.

RENTAL PROPERTIES

Accommodation Available

Commercial

COMMERCIAL BUILDING for Rent, Ground floor 1500 sqft, 2nd 1000 sqft, 3rd 1000 sqft. Hoysala Circle, Kengeri Upanagara. Contact: 9449218890

OFFICE PREMISES Rent #33 Swiss Complex Mezzanine Floor M-1, 840 Sqft Race Course Road, Bangalore- 560001 Call: 9845081411/08029521081

***AVAILABLE FOR** RENT* RPC Layout near Swimming pool 2600 sqft Commercial 4floor Building. Call: 8867569333

Accommodation Wanted

House

WANTED INDEPENDENT House 2/3 BHK for rent Kengeri, RR Nagar, Nagarabhavi. (Brokers excuse)- 8762251217

REAL ESTATE BUYING

Sites

Anjanapura

WANTED BDA Site Anjanapura, Banashankari 6th Stage, Vishweshwaraiah layout & any BDA Katha, JP.Nagar 8 & 9 phase immediate settlement. genuine Sellers Contact: 9902038118, 9449060605

WANTED BDA Site any measurement Anjanapura, Banashankari 6th Stage, JP.Nagar 8th/ 9th Phase, NarayanaNagar, Contact: 9880300791

Hosur Road

"SURYA-CITY KHB Wanted 20x30,30x40, 40x60,50x80 Any dimensions Site-for Immediate Settlement. Genuine Sellers Contact. "Krishna"- 9886294610"

Multiple Locations

ANJANAPURA-ARKAVATHI, Banashankari 6th Stage, Vishweswaraiah Layout, Kempegowda Layout. Any BDA Sites Wanted Contact: SAPTHAGIRI. 9900268073, 9448068073.

Vishweshwariah Layout

"REQUIRED NAGARABHAVI, Vishveshwaraiah, Kempegowda Layout 20x30, 30x40, 40x60, 50x80 Sites, Contact Genuine sellers only. 9846268611"

WANTED RESIDENTIAL Sites in Nagarbhavi 40x60, Vishweshwaraiah Layout 50x80 BDA 8th Block Contact: 9035151657

Industrial & Factory

Airport Road

OFFERED: INVESTMENT opportunity in the warehousing industry. 10 year horizon, MNC Tenant. Strictly whatsapp only: 8237918906

Devanahalli

DODDABALLAPURA LOOKING for One Acres of Land for Industrial Purpose. Contact: 9342851377

MORE Classifieds Ads on Subsequent Pages

DH ಪ್ರಜಾವಾಣಿ
BOOK YOUR REAL ESTATE



AD IN DECCAN HERALD ALL KARNATAKA & PRAJAVANI ALL KARNATAKA

@ 800/-* Per Sqcm Single Column
@ 900/-* Per Sqcm Multi Column
conditions apply*

For More Details Contact:
9845114560 | 9731810277 | 9901641752 | 9886213331
080- 45557163 | 45557164
dhclassifieds@deccanherald.co.in www.dhclassifieds.com

ಶಸ್ತ್ರಚಿಕಿತ್ಸೆ ಸಂಬಂಧ ನಗರದ ಆಸ್ಪತ್ರೆಗಳಿಗೆ ಭೇಟಿ ನೀಡುವವರ ಸಂಖ್ಯೆ ಹೆಚ್ಚಳ

ಸಿಲಿಕಾನ್ ಸಿಟಿ ಆರೋಗ್ಯ ವೃದ್ಧಿಗೆ 'ಸರ್ಜರಿ'

• ವರುಣ ಹೆಗಡೆ

ಬೆಂಗಳೂರು: ವಿವಿಧ ಕಾಯಿಲೆಗಳಿಗೆ ಶಸ್ತ್ರ ಚಿಕಿತ್ಸೆ ಸಂಬಂಧ ನಗರದ ಆಸ್ಪತ್ರೆಗಳಿಗೆ ಭೇಟಿ ನೀಡುವವರ ಸಂಖ್ಯೆಯಲ್ಲಿ ಭಾರಿ ಹೆಚ್ಚಳವಾಗಿದ್ದು, ವಿದೇಶಿಗರು ಕೂಡ ಹೃದಯ ಸಂಬಂಧಿ ಸಮಸ್ಯೆ, ಮೂಳೆ ಮುರಿತ, ಮೂತ್ರಪಿಂಡ ಸಮಸ್ಯೆಯಂತಹ ಕಾಯಿಲೆಗಳಿಗೆ ಶಸ್ತ್ರಚಿಕಿತ್ಸೆಗೆ ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲಿಗೆ ಬರಲಾರಂಭಿಸಿದ್ದಾರೆ. ಇದರಿಂದಾಗಿ ವೈದ್ಯರ ಪ್ರಕಾರ ಆಸ್ಪತ್ರೆಗಳ ಆದಾಯದಲ್ಲಿಯೂ ಶೇ 30 ರಷ್ಟು ಹೆಚ್ಚಳವಾಗಿದೆ.

ಬೆಂಗಳೂರು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಲು ಇಲ್ಲಿನ ಆಸ್ಪತ್ರೆಗಳು ಕೂಡ ಕಾರಣ. ಇಲ್ಲಿನ ವೈದ್ಯಕೀಯ ಚಿಕಿತ್ಸೆಗೆ ಜಾಗತಿಕ ಮಟ್ಟದಲ್ಲಿ ಮನ್ನಣೆ ದೊರೆತಿದೆ. ಇದರಿಂದಾಗಿ ಹೊರ ರಾಜ್ಯದ ಜತೆಗೆ ಹೊರ ದೇಶದಿಂದಲೂ ರೋಗಿಗಳು ಶಸ್ತ್ರಚಿಕಿತ್ಸೆಗಳಿಗೆ ಬರುತ್ತಿದ್ದಾರೆ. ಹೀಗಾಗಿ, ಆಸ್ಪತ್ರೆಗಳಲ್ಲಿ ರೋಗಿಗಳ ಸಂಖ್ಯೆ ಹೆಚ್ಚಳವಾಗುತ್ತಿದೆ. ಇಲ್ಲಿನ ಬಹುತೇಕ ಖಾಸಗಿ ಆಸ್ಪತ್ರೆಗಳು ಅತ್ಯಾಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡಿದ್ದು, ರೋಬೋಟಿಕ್ ಶಸ್ತ್ರ-ಚಿಕಿತ್ಸೆಗಳಿಗೆ ಆದ್ಯತೆ ನೀಡುತ್ತಿವೆ. ಇದರಿಂದಾಗಿ ರೋಗಿಗಳ ಚಿಕಿತ್ಸಾ ಅವಧಿ ಕಡಿತವಾಗುತ್ತಿದ್ದು, ಬೇಗ ಚೇತರಿಸಿಕೊಳ್ಳುತ್ತಿದ್ದಾರೆ.

2020ರಲ್ಲಿ ಕೋವಿಡ್ ಕಾಣಿಸಿಕೊಂಡ ಬಳಿಕ ಅಂತರರಾಷ್ಟ್ರೀಯ ಪ್ರಯಾಣಕ್ಕೆ ನಿರ್ಬಂಧ ವಿಧಿಸಿದ ಪರಿಣಾಮ ವಿದೇಶಿ ರೋಗಿಗಳಿಗೆ ಚಿಕಿತ್ಸೆ ಪಡೆಯಲು ನಗರಕ್ಕೆ ಬರಲು ತೊಡಕುಗಳು ಎದುರಾಗಿದ್ದವು. ಎರಡು ವರ್ಷಗಳ ನಂತರ ನಿರ್ಬಂಧಗಳನ್ನು ಸಡಿಲಿಸಿದ ಬಳಿಕ ವಿದೇಶಿ ರೋಗಿಗಳ ಸಂಖ್ಯೆಯೂ ಏರಿಕೆ ಕಂಡಿದೆ. ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ (ಫನಾ) ಪ್ರಕಾರ ಕಳೆದೊಂದು ವರ್ಷದಲ್ಲಿ 50 ಸಾವಿರಕ್ಕೂ ಅಧಿಕ ವಿದೇಶಿಗರು ಇಲ್ಲಿನ ಖಾಸಗಿ ಆಸ್ಪತ್ರೆಗಳಿಗೆ ಭೇಟಿ ನೀಡಿದ್ದಾರೆ.



ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ವೈದ್ಯರು ಶಸ್ತ್ರಚಿಕಿತ್ಸೆ ನಡೆಸುತ್ತಿರುವುದು

ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಕಳೆದ ವರ್ಷ 1,608 ಬೈಪಾಸ್ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. 2020ರಲ್ಲಿ 798 ಹಾಗೂ 2021ರಲ್ಲಿ 1,352 ಬೈಪಾಸ್ ಶಸ್ತ್ರಚಿಕಿತ್ಸೆ ನಡೆಸಲಾಗಿತ್ತು. ಅದೇ ರೀತಿ, ಕಳೆದ ವರ್ಷ 894 ಹೃದಯದ ಕವಾಟ ಬದಲಿ ಶಸ್ತ್ರ-ಚಿಕಿತ್ಸೆ ನಡೆಸಲಾಗಿದ್ದು, ಈ ಸಂಖ್ಯೆ 2020ರಲ್ಲಿ 403 ಹಾಗೂ 2021ರಲ್ಲಿ 846 ಇದೆ. 2020ರಲ್ಲಿ 1927 ಇದ್ದ ಹೃದಯ ಶಸ್ತ್ರಚಿಕಿತ್ಸೆ, 2022ರಲ್ಲಿ 4,586ಕ್ಕೆ ತಲುಪಿದೆ. ಯುರೋಪಿನ ಹಾರ್ಟ್ ಜರ್ನಲ್ ಈ ಹಿಂದೆ ಜಯದೇವ ಹೃದ್ರೋಗ ಆಸ್ಪತ್ರೆಯನ್ನು 'ವಿಶ್ವದ ಶ್ರೇಷ್ಠ ಹೃದಯ ಕೇಂದ್ರ' ಎಂದು ಬಣ್ಣಿಸಿ, ಅಮೆರಿಕದ ಪ್ರಜೆಯೊಬ್ಬರು 10 ವರ್ಷಗಳ ಹಿಂದೆ ಕೇವಲ ₹ 92 ಚಿಕಿತ್ಸಾ ವೆಚ್ಚ ಪಾವತಿಸಿದ್ದನ್ನು ಉಲ್ಲೇಖಿಸಿತ್ತು.

ಕ್ಯಾನ್ಸರ್‌ಗೆ ಸಂಬಂಧಿಸಿದ ಶಸ್ತ್ರಚಿಕಿತ್ಸೆಗೆ ಆಫ್ರಿಕಾ ದೇಶಗಳಿಂದಲೂ ಇಲ್ಲಿಗೆ ರೋಗಿಗಳು ಬರುತ್ತಿದ್ದಾರೆ. ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಸರ್ಜಿಕಲ್ ಆಂಕೊಲಾಜಿ ವಿಭಾಗವು 2021ರಲ್ಲಿ 2,164 ಶಸ್ತ್ರಚಿಕಿತ್ಸೆಗಳನ್ನು ನಡೆಸಿತ್ತು. ಕಳೆದ ವರ್ಷ ಈ ಸಂಖ್ಯೆ ಮೂರು ಸಾವಿರದ ಗಡಿ ದಾಟಿದೆ. ಮಣಿಪಾಲ್ ಆಸ್ಪತ್ರೆಯಲ್ಲಿ 2021ರಲ್ಲಿ 273 ರೋಬೋಟಿಕ್ ಶಸ್ತ್ರಚಿಕಿತ್ಸೆ ನಡೆಸಲಾಗಿತ್ತು. 2022ರಲ್ಲಿ ಇದು 300ರ ಗಡಿ ದಾಟಿದೆ. ಫೋರ್ಟಿಸ್ ಆಸ್ಪತ್ರೆಯಲ್ಲಿ ತಿಂಗಳಿಗೆ ಸರಾಸರಿ 45ರಿಂದ 50 ಶಸ್ತ್ರಚಿಕಿತ್ಸೆಗಳನ್ನು ನಡೆಸಲಾಗು-ತ್ತಿದೆ. ಅಪೋಲೋ ಆಸ್ಪತ್ರೆಯಲ್ಲಿಯೂ ಕಳೆದ ವರ್ಷಕ್ಕೆ ಹೋಲಿಸಿದಲ್ಲಿ ಶಸ್ತ್ರಚಿಕಿತ್ಸೆಗಳು ಈ ವರ್ಷ ಶೇ 30ರಷ್ಟು ಹೆಚ್ಚಳವಾಗಿದೆ.

400ಕ್ಕೂ ಅಧಿಕ ಆಸ್ಪತ್ರೆ: ಫನಾ ಅಡಿ ನಗರದಲ್ಲಿ 400ಕ್ಕೂ ಅಧಿಕ ಆಸ್ಪತ್ರೆಗಳು ಸೇವೆ ನೀಡುತ್ತಿವೆ. ಮಣಿಪಾಲ್, ಆಸ್ಟರ್, ಅಪೋಲೊ, ಫೋರ್ಟಿಸ್, ಕೊಲಂಬಿಯಾ ಏಷ್ಯಾ, ನಾರಾಯಣ ಹೆಲ್ತ್ ಸಿಟಿ, ಎಚ್‌.ಸಿ.ಜಿ, ಎಂ.ಎಸ್. ರಾಮಯ್ಯ, ಸಕ್ರಾ ವರ್ಲ್ಡ್, ನಾರಾಯಣ ಹೃದಯಾಲಯ, ನಾರಾಯಣ ನೇತ್ರಾಲಯ ಸೇರಿ ಪ್ರಮುಖ ಖಾಸಗಿ ಆಸ್ಪತ್ರೆಗಳು ಅತ್ಯಾಧುನಿಕ ವೈದ್ಯಕೀಯ ಸೌಲಭ್ಯ ಹೊಂದಿವೆ. ಇದರಿಂದಾಗಿ ಇಲ್ಲಿನ ವೈದ್ಯಕೀಯ ಸಮೂಹವು ಹೆಚ್ಚಿನ ಸಂಖ್ಯೆಯಲ್ಲಿ ವಿದೇಶಿಗರಿಗೆ ಚಿಕಿತ್ಸೆ ಒದಗಿಸುತ್ತಿವೆ.

ವಿದೇಶದಿಂದ ಚಿಕಿತ್ಸೆಗಾಗಿ ಬರುವವರಲ್ಲಿ ಹೆಚ್ಚಿನವರು ಆಫ್ರಿಕಾ, ಮಧ್ಯಪೂರ್ವ ದೇಶಗಳು, ಬಾಂಗ್ಲಾದೇಶ, ಅಫ್ಗಾನಿಸ್ತಾನ, ಶ್ರೀಲಂಕಾದ-ವರಾಗಿದ್ದಾರೆ. ವಿದೇಶಗಳಿಗೆ ಹೋಲಿಸಿದಲ್ಲಿ ಇಲ್ಲಿ ರೋಗಿಗಳು ಚಿಕಿತ್ಸೆಗೆ ಕಾಯುವ ಅವಧಿ ಕಡಿಮೆಯಿದ್ದು, ವೈದ್ಯಕೀಯ ವೆಚ್ಚವೂ ಬೇರೆ ದೇಶಗಳಿಗೆ ಹೋಲಿಸಿದಲ್ಲಿ ಕಡಿಮೆಯಿದೆ. ಇದರಿಂದಾಗಿ ಅಮೆರಿಕದಂತಹ ಮುಂದುವರಿದ ದೇಶದಿಂದಲೂ ಇಲ್ಲಿಗೆ ರೋಗಿಗಳು ಬರುತ್ತಿದ್ದಾರೆ.

'2020 ಹಾಗೂ 2021ರಲ್ಲಿ ಕೋವಿಡ್ ಪ್ರಕರಣಗಳಿಗೆ ಆದ್ಯತೆ ನೀಡಿದ್ದೆವು. ಆ ಸಂದರ್ಭದಲ್ಲಿ ಕೆಲವು ಶಸ್ತ್ರಚಿಕಿತ್ಸೆಗಳನ್ನು ಮುಂದೂಡಲಾಗಿತ್ತು. 2022ರ ಬಳಿಕ ಶಸ್ತ್ರಚಿ-ಕಿತ್ಸೆಗಳಿಗೆ ಆದ್ಯತೆ ನೀಡಲಾಗಿದೆ. ಪ್ರಮುಖವಾಗಿ ರೋಬೋಟಿಕ್ ಶಸ್ತ್ರಚಿಕಿತ್ಸೆಗೆ ಹೆಚ್ಚಿನ ಬೇಡಿಕೆ ಉಂಟಾಗಿದ್ದು, ಬಹುತೇಕ ಮಂದಿ ಈ ರೀತಿಯ ಶಸ್ತ್ರಚಿಕಿತ್ಸೆಗೆ ಒಲವು ತೋರುತ್ತಿದ್ದಾರೆ' ಎಂದು ಫೋರ್ಟಿಸ್ ಆಸ್ಪತ್ರೆ ವೈದ್ಯಕೀಯ ನಿರ್ದೇಶಕಿ ಡಾ. ಪ್ರಿಯಾ ಗೌತಮ್ ತಿಳಿಸಿದರು.

ವಿದೇಶಿಗರು ಶಸ್ತ್ರಚಿಕಿತ್ಸೆಗೆ ಬರಲು ಕಾರಣಗಳು

- ಶಸ್ತ್ರಚಿಕಿತ್ಸೆಗೆ ಕಾಯುವ ಅವಧಿ ಕಡಿಮೆ
- ವಿದೇಶಗಳಿಗೆ ಹೋಲಿಸಿದರೆ ವೈದ್ಯಕೀಯ ವೆಚ್ಚ ಕಡಿಮೆ
- ರೋಗಿಗಳಿಗೆ ಉತ್ತಮ ಆರೈಕೆ
- ರೋಗಿಗಳ ಬೇಡಿಕೆಗಳಿಗೆ ಸ್ಪಂದನೆ
- ಅತ್ಯಾಧುನಿಕ ಸೌಲಭ್ಯ ಹೊಂದಿದ ಆಸ್ಪತ್ರೆಗಳು
- ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸೇರಿ ಉತ್ತಮ ಸಾರಿಗೆ ಸಂಪರ್ಕ
- ವೈದ್ಯಕೀಯ ವೀಸಾ ಪಡೆಯುವುದು ಸುಲಭ
- ವಿವಿಧ ದರ್ಜೆಯ ಆತಿಥ್ಯ ಕೇಂದ್ರಗಳು ಲಭ್ಯ



ವಿದೇಶಗಳಿಗೆ ಹೋಲಿಸಿದಲ್ಲಿ ಕಡಿಮೆ ವೆಚ್ಚದಲ್ಲಿ ಗುಣಮಟ್ಟದ ಚಿಕಿತ್ಸೆ ಸಿಗುತ್ತದೆ. ಆದ್ದರಿಂದ ವಿದೇಶಿಗರು ಹೆಚ್ಚಿನ ಸಂಖ್ಯೆಯಲ್ಲಿ ಶಸ್ತ್ರಚಿಕಿತ್ಸೆಗೆ ಬರುತ್ತಿದ್ದಾರೆ. ಕಳೆದೊಂದು ವರ್ಷದಿಂದ ಶಸ್ತ್ರಚಿಕಿತ್ಸೆ ಹೆಚ್ಚಳವಾಗಿದೆ.

ಡಾ.ಸಿ.ಎನ್. ಮಂಜುನಾಥ್
ಜಯದೇವ ಹೃದ್ರೋಗ ಆಸ್ಪತ್ರೆ ನಿರ್ದೇಶಕ




ಇಲ್ಲಿ ಪ್ರಾಯೋಗಿಕ ಕಲಿಕೆಗೆ ಆದ್ಯತೆ ನೀಡಲಾಗುತ್ತದೆ. ವೈದ್ಯರು ನೈಪುಣ್ಯತೆ ಹೊಂದಿದ್ದಾರೆ. ಚಿಕಿತ್ಸಾ ವೆಚ್ಚವೂ ಕಡಿಮೆಯೆಂಬ ಕಾರಣಕ್ಕೆ ವಿದೇಶಿಗರೂ ಶಸ್ತ್ರಚಿಕಿತ್ಸೆಗೆ ಬರುತ್ತಿದ್ದಾರೆ.

ಡಾ.ಎಸ್. ಶ್ರೀನಿವಾಸ್, ಭಾರತೀಯ ವೈದ್ಯಕೀಯ ಸಂಘದ ಕರ್ನಾಟಕ ಶಾಖೆಯ ಚುನಾಯಿತ ಅಧ್ಯಕ್ಷ

ಹೊರರೋಗಿಗಳ ಸಂಖ್ಯೆಯೂ ಹೆಚ್ಚಳ

ಕಳೆದೊಂದು ವರ್ಷದಿಂದ ನಗರದಲ್ಲಿ ಹೊರರೋಗಿಗಳ ಸಂಖ್ಯೆಯಲ್ಲಿಯೂ ಗಣನೀಯ ಏರಿಕೆಯಾಗಿದೆ. ವಾಣಿವಿಲಾಸ ಆಸ್ಪತ್ರೆಯಲ್ಲಿ 300ರ ಆಸುಪಾಸಿನಲ್ಲಿದ್ದ ಹೊರರೋಗಿಗಳ ಸಂಖ್ಯೆ, ಈಗ 500ರ ಗಡಿ ಸಮೀಪಿಸಿದೆ. ಜಯದೇವ ಹೃದ್ರೋಗ ಆಸ್ಪತ್ರೆಗೆ 2,100ರಿಂದ 2,200 ಮಂದಿ ಭೇಟಿ ನೀಡುತ್ತಿದ್ದು, ಈ ಸಂಖ್ಯೆ ಹಿಂದೆ 1,600 ರಷ್ಟಿತ್ತು. ಕಿದ್ವಾಯಿ ಆಸ್ಪತ್ರೆಗೆ 1,850ರಿಂದ 1,900 ಹೊರರೋಗಿಗಳು ಭೇಟಿ ನೀಡುತ್ತಿದ್ದಾರೆ. ಈ ಮೊದಲು 1,700ರಷ್ಟು ಮಂದಿ ಹೊರರೋಗಿಗಳು ಬರುತ್ತಿದ್ದರು. ಅದೇ ರೀತಿ, ಕೆ.ಸಿ ಜನರಲ್ ಆಸ್ಪತ್ರೆಗೆ 950ರಿಂದ 1,000, ವಿಕ್ಟೋರಿಯಾ ಆಸ್ಪತ್ರೆಗೆ 1,200ರಿಂದ 1,300 ರೋಗಿಗಳು ಭೇಟಿ ನೀಡುತ್ತಿದ್ದಾರೆ.



ನಗರದಲ್ಲಿ ಶುಕ್ರವಾರ ಆರಂಭವಾದ 'ಐಐಟಿಎಂ' ಪ್ರವಾಸೋದ್ಯಮ ಮೇಳವನ್ನು ಸಚಿವ ಎಚ್‌.ಕೆ. ಪಾಟೀಲ್ ವೀಕ್ಷಿಸಿದರು. ಸ್ಪಿಯರ್ ಟ್ರಾವೆಲ್ ಮೀಡಿಯಾದ ನಿರ್ದೇಶಕ ರೋಹಿತ್ ಹಾನಗಲ್, ಪಂಜಾಬ್ ಪ್ರವಾಸೋದ್ಯಮ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಾಕಿ ಗುಪ್ತ ಭಂಡಾರಿ, ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿಯ ವ್ಯವಸ್ಥಾಪಕ ನಿರ್ದೇಶಕ ಅನಿಲ್ ಕುಮಾರ್ ಸಾಹು ಇದ್ದರು

ಪ್ರವಾಸೋದ್ಯಮ: ₹300 ಕೋಟಿ ಹೂಡಿಕೆಗೆ ಒಪ್ಪಿಗೆ- ಎಚ್‌.ಕೆ. ಪಾಟೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರವಾಸೋದ್ಯಮ ಇಲಾಖೆಯ ಉನ್ನತಾಧಿಕಾರ ಸಮಿತಿಯು ರಾಜ್ಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ₹300 ಕೋಟಿಗಳ ಬಂಡವಾಳ ಹೂಡಿಕೆ ಪ್ರಸ್ತಾವಕ್ಕೆ ಅನುಮೋದನೆ ನೀಡಿದೆ' ಎಂದು ಪ್ರವಾಸೋದ್ಯಮ ಸಚಿವ ಎಚ್‌.ಕೆ. ಪಾಟೀಲ ತಿಳಿಸಿದರು.

ಅರಮನೆ ಮೈದಾನದ ತ್ರಿಪುರ ವಾಸಿನಿ ಸಭಾಂಗಣದಲ್ಲಿ ಶುಕ್ರವಾರ ಆರಂಭವಾದ ಮೂರು ದಿನಗಳ ಇಂಡಿಯಾ ಇಂಟರ್ ನ್ಯಾಷನಲ್ ಟ್ರಾವೆಲ್ ಮಾರ್ಟ್ ಪ್ರವಾಸೋದ್ಯಮ ಮೇಳ ಉದ್ಘಾಟಿಸಿ ಮಾತನಾಡಿದ ಅವರು, 'ಖಾಸಗಿ ಹೂಡಿಕೆಯಿಂದ ರಾಜ್ಯದಲ್ಲಿ ಪ್ರವಾಸೋದ್ಯಮ ಚಟುವ-ಟಿಕೆಗಳಿಗೆ ಉತ್ತೇಜನ ದೊರೆಯಲಿದೆ' ಎಂದರು.

ಸ್ಪಿಯರ್ ಟ್ರಾವೆಲ್ ಮೀಡಿಯಾ ನಿರ್ದೇಶಕ ರೋಹಿತ್ ಹಂಗಲ್ ಇದ್ದರು.

'ಸ್ಪಿಯರ್ ಟ್ರಾವೆಲ್ ಮೀಡಿಯಾ ಕಂಪನಿ 'ಇಂಡಿಯಾ ಇಂಟರ್‌ನ್ಯಾಶನಲ್ ಟ್ರಾವೆಲ್ ಮಾರ್ಟ್' (ಐಐಟಿಎಂ) ಆಯೋಜಿಸಿದೆ.

ಮೇಳದಲ್ಲಿ ದೇಶದ ವಿವಿಧ ಭಾಗ ಗಳಿಂದ ಟ್ರಾವೆಲ್ ಏಜೆಂಟರು ಹಾಗೂ ಟೂರ್ ಆಪರೇಟರ್‌ಗಳು, ಹೋಟೆಲ್-ರೆಸಾರ್ಟ್, ರಾಷ್ಟ್ರೀಯ ಪ್ರವಾಸೋದ್ಯಮ ಸಂಸ್ಥೆ, ತಂತ್ರಜ್ಞಾನ ವೇದಿಕೆ, ಆನ್‌ಲೈನ್ ಟ್ರಾವೆಲ್ ಪೋರ್ಟಲ್ ಪ್ರತಿನಿಧಿಗಳು ಭಾಗವಹಿಸಿದ್ದಾರೆ.

ಕಳೆದ 23 ವರ್ಷಗಳಿಂದ ಮೇಳ ನಡೆಯುತ್ತಿದ್ದು, ಈ ಬಾರಿಯ ಮೇಳದಲ್ಲಿ ಕರ್ನಾಟಕ, ರಾಜಸ್ಥಾನ, ಮಹಾರಾಷ್ಟ್ರ, ಕೇರಳ, ಬಿಹಾರ, ಉತ್ತರಪ್ರದೇಶ, ಪಂಜಾಬ್, ತಮಿಳುನಾಡು, ಛತ್ತೀಸ್‌ಗಡ ಸೇರಿದಂತೆ 22 ರಾಜ್ಯಗಳು ಭಾಗವಹಿಸಿವೆ.

ಜತೆಗೆ, ಮಲೇಷ್ಯಾ, ವಿಯೆಟ್ನಾಂ, ಥಾಯ್ಲೆಂಡ್, ನೇಪಾಳ, ದುಬೈ, ಟರ್ಕಿ, ಸಿಂಗಾಪುರ ಸೇರಿದಂತೆ 15ಕ್ಕೂ ಹೆಚ್ಚು ದೇಶಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದಾರೆ.

ಇ–ಕಾಮರ್ಸ್ ವಂಚನೆ: ₹ 1 ಲಕ್ಷ ಕಳೆದುಕೊಂಡ ಮಾಜಿ ಸೈನಿಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೆಜಾನ್ ಇ- ಕಾಮರ್ಸ್ ಜಾಲತಾಣದಲ್ಲಿ ಕಾಯ್ದಿರಿಸಿದ್ದ ವಸ್ತುವನ್ನು ಮರಳಿಸಿ ಹಣ ವಾಪಸು ಪಡೆಯಲು ಪ್ರಯತ್ನಿಸಿದ್ದ ಮಾಜಿ ಸೈನಿಕರೊಬ್ಬರು ₹ 1 ಲಕ್ಷ ಕಳೆದುಕೊಂಡಿದ್ದು, ಈ ಸಂಬಂಧ ಸೈಬರ್ ಕ್ರೈಂ ಠಾಣೆಗೆ ದೂರು ನೀಡಿದ್ದಾರೆ.

'ಹಲಸೂರು ಠಾಣೆ ವ್ಯಾಪ್ತಿಯಲ್ಲಿ ವಾಸವಿರುವ ಮಾಜಿ ಸೈನಿಕರೊಬ್ಬರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಅಮೆಜಾನ್ ಜಾಲತಾಣದಲ್ಲಿ ಆನ್‌ಲೈನ್ ಮೂಲಕ ₹ 5,499 ಪಾವತಿಸಿದ್ದ ಮಾಜಿ ಸೈನಿಕ, ಧ್ವನಿವರ್ಧಕ ಕಾಯ್ದಿರಿಸಿದ್ದರು. ತಾಂತ್ರಿಕ ಕಾರಣಗಳಿಂದ ಬುಕ್ಕಿಂಗ್ ರದ್ದಾಗಿತ್ತು. ಮೂರು ದಿನದೊಳಗೆ ಬ್ಯಾಂಕ್ ಖಾತೆಗೆ ಹಣ ವಾಪಸು ಬರುವುದಾಗಿ ಸಂದೇಶ ಬಂದಿತ್ತು.'

'ನಿಗದಿತ ದಿನದಂದು ಹಣ ವಾಪಸು ಬಂದಿರಲಿಲ್ಲ. ಗೂಗಲ್‌ನಲ್ಲಿ ದೊರೆತಿದ್ದ ಅಮೆಜಾನ್ ಸಹಾಯವಾಣಿಗೆ ದೂರುದಾರ ಕರೆ ಮಾಡಿದ್ದರು. ಆದರೆ, ಪ್ರತಿಕ್ರಿಯೆ ಬಂದಿರಲಿಲ್ಲ. ಕೆಲ ನಿಮಿಷಗಳ ನಂತರ ದೂರುದಾರರಿಗೆ ಕರೆ ಮಾಡಿದ್ದ ಆರೋಪಿ, 'ನಾನು ಅಮೆಜಾನ್ ಪ್ರತಿನಿಧಿ. ನಿಮ್ಮ ಹಣ ವಾಪಸು ಕಳುಹಿಸುತ್ತೇನೆ. ನಾವು ಸೂಚಿಸುವ ಆ್ಯಪ್‌ವೊಂದನ್ನು ಮೊಬೈಲ್‌ನಲ್ಲಿ ಇನ್‌ಸ್ಟಾಲ್ ಮಾಡಿಕೊಳ್ಳಿ' ಎಂದಿದ್ದ. ಅದನ್ನು ನಂಬಿ ದೂರುದಾರ, ಆ್ಯಪ್ ಇನ್‌ಸ್ಟಾಲ್ ಮಾಡಿಕೊಂಡಿದ್ದರು. ಇದಾದ ನಂತರ, ಖಾತೆಯಿಂದ ಹಂತ ಹಂತವಾಗಿ ₹ 1 ಲಕ್ಷ ವರ್ಗಾವಣೆ ಆಗಿದೆ. ಆರೋಪಿ ನಂಬರ್ ಸಹ ಸ್ವಿಚ್ ಆಫ್ ಆಗಿದೆ' ಎಂದು ಪೊಲೀಸ್ ಮೂಲಗಳು ಮಾಹಿತಿ ನೀಡಿವೆ.

ತಾಯಿ ಜೊತೆ ಸಲುಗೆ ಶಂಕೆ: ಅಡುಗೆ ತಯಾರಕ ಕೊಲೆ



ರವಿ ಭಂಡಾರಿ

ಬೆಂಗಳೂರು: ಮಾಗಡಿ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ರವಿ ಭಂಡಾರಿ (44) ಅವರನ್ನು ಕೊಲೆ ಮಾಡಲಾಗಿದ್ದು, ಕೃತ್ಯ ಎಸಗಿರುವ ಆರೋಪಿ ರಾಹುಲ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

'ಬಸವೇಶ್ವರ ನಗರದ ಕೆಎಚ್‌ಬಿ ಕಾಲೊನಿಯಲ್ಲಿರುವ ಪೇಯಿಂಗ್ ಗೆಸ್ಟ್ ಕಟ್ಟಡದಲ್ಲಿ ಅಡುಗೆ ಕೆಲಸ ಮಾಡುತ್ತಿದ್ದ ರವಿ ಅವರನ್ನು ಶುಕ್ರವಾರ ಮಧ್ಯಾಹ್ನ ಕೊಲೆ ಮಾಡಲಾಗಿದೆ. ಕೃತ್ಯದ ಬಳಿಕ ಆರೋಪಿ ರಾಹುಲ್ ಪರಾರಿ ಯಾಗಿದ್ದಾನೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ರವಿ ಭಂಡಾರಿ ಸಂಬಂಧಿ ಸುರೇಶ್ ಕೊಲೆ ಬಗ್ಗೆ ದೂರು ನೀಡಿದ್ದಾರೆ. ರಾಹುಲ್ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದು ತಿಳಿಸಿವೆ.

ತಿಂಗಳ ಹಿಂದೆಯಷ್ಟೇ ನಗರಕ್ಕೆ ಬಂದಿದ್ದರು: 'ಉಡುಪಿಯ ರವಿ, ಪತ್ನಿ ಹಾಗೂ ಮಗನ ಜೊತೆ ವಾಸವಿದ್ದರು. ಮದ್ಯವ್ಯಸನಿಯಾಗಿದ್ದ ಅವರು, ತಮ್ಮೂರಿನಲ್ಲಿ ಕೆಲಸವಿಲ್ಲದೇ ಓಡಾಡುತ್ತಿದ್ದರು. ಬೆಂಗಳೂರಿನಲ್ಲಿ ಪೇಯಿಂಗ್ ಗೆಸ್ಟ್ ಕಟ್ಟಡ ನಿರ್ವಹಣೆ ಮಾಡುತ್ತಿದ್ದ ಸುರೇಶ್, ಸಂಬಂಧಿ ರವಿ ಅವರನ್ನು ತಿಂಗಳ ಹಿಂದೆಯಷ್ಟೇ ನಗರಕ್ಕೆ ಕರೆತಂದಿದ್ದರು' ಎಂದು ಮೂಲಗಳು ಹೇಳಿವೆ.

'ಸುರೇಶ್ ಪಿ.ಜಿ.ಯಲ್ಲಿ ರವಿ ಅಡುಗೆ ಕೆಲಸ ಮಾಡುತ್ತಿದ್ದರು. ಅಡುಗೆ ಸಹಾಯಕಿಯಾಗಿ ಮಹಿಳೆಯೊಬ್ಬರು ಕೆಲಸ ಮಾಡುತ್ತಿದ್ದರು. ಅದೇ ಮಹಿಳೆಯ ಮಗ ರಾಹುಲ್, ರವಿ ಅವರನ್ನು ಕೊಂದಿದ್ದಾನೆ' ಎಂದು ತಿಳಿಸಿವೆ.

ಸಲುಗೆ ನೋಡಿ ಕೃತ್ಯ: 'ರವಿ ಅವರು ಅಡುಗೆ ಸಹಾಯಕಿ ಮಹಿಳೆ ಜೊತೆ ಹೆಚ್ಚು ಮಾತನಾಡುತ್ತಿದ್ದರು. ಸಲುಗೆ ಇಟ್ಟುಕೊಳ್ಳಲು ಯತ್ನಿಸುತ್ತಿದ್ದರೆಂಬ ಮಾಹಿತಿ ಇದೆ. ಇದನ್ನು ನೋಡಿ ಕೋಪಗೊಂಡಿದ್ದ ರಾಹುಲ್, ಕೊಲೆಗೆ ಸಂಚು ರೂಪಿಸಿದ್ದ' ಎಂದು ಹೇಳಿವೆ.

'ರಾಜಾಜಿನಗರ 6ನೇ ಹಂತದ ಗೋಪಾಲಪುರ ರಸ್ತೆಯ ಮನೆಯಲ್ಲಿ ರಾಹುಲ್ ವಾಸವಿದ್ದ. ರವಿಗೆ ಕರೆ ಮಾಡಿದ್ದ ರಾಹುಲ್, ಮಾತನಾಡಬೇಕೆಂದು ಹೇಳಿ ಶುಕ್ರವಾರ ಮಧ್ಯಾಹ್ನ ತನ್ನ ಮನೆಗೆ ಕರೆಸಿಕೊಂಡಿದ್ದ. ಅದೇ ಮನೆಯಲ್ಲಿ ರವಿ ಮೇಲೆ ಹಲ್ಲೆ ಮಾಡಿ, ಎದೆಗೆ ಚಾಕುವಿನಿಂದ ಇರಿದಿದ್ದ. ತೀವ್ರ ರಕ್ತಸ್ರಾವದಿಂದ ರವಿ ಸ್ಥಳದಲ್ಲೇ ಮೃತಪಟ್ಟಿದ್ದರು. ಬಳಿಕ, ರಾಹುಲ್ ಪರಾರಿಯಾಗಿದ್ದಾನೆ' ಎಂದು ತಿಳಿಸಿವೆ.

'ರಾಹುಲ್ ಮನೆಗೆ ಹೊರಟಿದ್ದಾಗ ರವಿ, ಸಂಬಂಧಿ ಸುರೇಶ್‌ಗೆ ವಿಷಯ ತಿಳಿಸಿದ್ದರು. ಸಂಜೆಯಾದರೂ ವಾಪಸು ಬಾರದಿದ್ದರಿಂದ ಅನುಮಾನಗೊಂಡ ಸುರೇಶ್, ಅಡುಗೆ ಸಹಾಯಕಿ ಮಹಿಳೆ ಜೊತೆ ಮನೆಗೆ ಹೋಗಿದ್ದರು. ಅವಾಗಲೇ ಅವರಿಗೆ ಮನೆಯಲ್ಲಿ ಮೃತದೇಹ ಕಂಡಿತ್ತು. ರಾಹುಲ್‌ಗೆ ಕರೆ ಮಾಡಿದಾಗ, ಮೊಬೈಲ್ ಸ್ವಿಚ್ ಆಫ್ ಆಗಿತ್ತು' ಎಂದು ಮೂಲಗಳು ಹೇಳಿವೆ.

ರಸ್ತೆ ವಿಭಜಕಕ್ಕೆ ಕಾರು ಡಿಕ್ಕಿ: ಚಾಲಕ ಸಾವು

ಅಪರಾಧ ಸುದ್ದಿ

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯಲ್ಲಿ ಗುರುವಾರ ತಡರಾತ್ರಿ ಅಪಘಾತ ಸಂಭವಿಸಿದ್ದು, ಕಾರು ಚಾಲಕ ವರುಣ್ ಬಿ.ಆರ್. (28) ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

'ಸಂಜಯ್ ನಗರದ ನಿವಾಸಿ ವರುಣ್, ಕಂಪನಿಯೊಂದರ ಉದ್ಯೋಗಿ. ನಗರದಿಂದ ವಿಮಾನ ನಿಲ್ದಾಣದತ್ತ ಕಾರಿನಲ್ಲಿ ಹೊರಟಿದ್ದ ವೇಳೆ ಈ ಅವಘಡ ಸಂಭವಿಸಿದೆ. ಅಪಘಾತದಲ್ಲಿ ಇನ್ನೊಂದು ಕಾರಿನ ಚಾಲಕ ಬಿ. ಸಂಜಯ್ ತೀವ್ರ ಗಾಯಗೊಂಡಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಚಿಕ್ಕಜಾಲ ಸಂಚಾರ ಠಾಣೆ ಪೊಲೀಸರು ತಿಳಿಸಿದರು.

'ವರುಣ್ ಅತಿ ವೇಗ ಹಾಗೂ ನಿರ್ಲಕ್ಷ್ಯದಿಂದ ಕಾರು ಚಲಾಯಿಸಿದ್ದರು. ಹುಣಸಮಾರನಹಳ್ಳಿ ಮೇಲ್ಸೇತುವೆ ಬಳಿಯ ಡೌನ್ ರ‍್ಯಾಂಪ್ ಸಮೀಪ ರಸ್ತೆ ವಿಭಜಕಕ್ಕೆ ಕಾರು ಗುದ್ದಿತ್ತು. ಅದಾದ ಬಳಿಕ ಮುಂದಕ್ಕೆ ನುಗ್ಗಿ ಪಕ್ಕದ ರಸ್ತೆಗೆ ಹೋಗಿದ್ದ ಕಾರು, ಎದುರಿಗೆ ಬರುತ್ತಿದ್ದ ಇನ್ನೊಂದು ಕಾರಿಗೆ ಡಿಕ್ಕಿ ಹೊಡೆದಿತ್ತು' ಎಂದು ಹೇಳಿದರು.

'ಅಪಘಾತದಿಂದಾಗಿ ಜಖಂಗೊಂಡಿದ್ದ ಕಾರಿನೊಳಗೆ ವರುಣ್ ಸಿಲುಕಿಕೊಂಡಿದ್ದರು. ಅಲ್ಲಿಯೇ ಅವರು ತೀವ್ರ ಗಾಯಗೊಂಡು ಮೃತಪಟ್ಟಿದ್ದಾರೆ. ಇನ್ನೊಂದು ಕಾರಿನಲ್ಲಿದ್ದ ಸಂಜಯ್, ದೀಪಂ ಕ್ಯಾಬ್ ಚಾಲಕ. ಅವರು ವಿಮಾನ ನಿಲ್ದಾಣದಿಂದ ಸಿಂಗಸಂದ್ರಕ್ಕೆ ಹೊರಟಿದ್ದರು. ಸಂಜಯ್ ನೀಡಿರುವ ದೂರು ಆಧರಿಸಿ ವರುಣ್ ವಿರುದ್ಧ ಕ್ರಮ ಜರುಗಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಡ್ರೋನ್ ಹಾರಾಟ: ಇಬ್ಬರ ಬಂಧನ

ಬೆಂಗಳೂರು: ವಿಧಾನಸೌಧ ಪೂರ್ವ ಪ್ರವೇಶ ದ್ವಾರದ ಬಳಿ ಅಕ್ರಮವಾಗಿ ಡ್ರೋನ್ ಹಾರಿಸಿ ವಿಡಿಯೊ ಚಿತ್ರೀಕರಣ ಮಾಡುತ್ತಿದ್ದ ಇಬ್ಬರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ಕಾರ್ಯಕ್ರಮ ಸಂಘಟನೆ ಕಂಪನಿಯೊಂದರ ಉದ್ಯೋಗಿಗಳಾದ ಅರುಣ್ ಹಾಗೂ ಬಾಬು ಅವರು ಶುಕ್ರವಾರ (ಜುಲೈ 28) ಬೆಳಿಗ್ಗೆ ವಿಧಾನಸೌಧದ ಪೂರ್ವ ಪ್ರವೇಶ ದ್ವಾರದ ಬಳಿ ಡ್ರೋನ್ ಹಾರಿಸಿದ್ದರು. ಅದನ್ನು ನೋಡಿದ್ದ ಗಸ್ತು ಸಿಬ್ಬಂದಿ, ಇಬ್ಬರನ್ನೂ ವಶಕ್ಕೆ ಪಡೆದು ಠಾಣೆಗೆ ಕರೆತಂದಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ವಿಧಾನಸೌಧ ಹಾಗೂ ಹೈಕೋರ್ಟ್ ಸುತ್ತಮುತ್ತ ಡ್ರೋನ್ ಹಾರಾಟ ನಿಷೇಧಿಸಲಾಗಿದೆ. ನಿಯಮ ಉಲ್ಲಂಘಿಸಿ ಆರೋಪಿಗಳು ಡ್ರೋನ್ ಹಾರಿಸುತ್ತಿದ್ದರು. ಅತಿಕ್ರಮ ಪ್ರವೇಶ ಮತ್ತು ನಿರ್ಲಕ್ಷ್ಯದ ಆರೋಪದಡಿ ಇಬ್ಬರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳ-ಲಾಗಿದೆ.'

'ಕಂಪನಿ ಸ್ಥಾಪಿಸಿ 15 ವರ್ಷವಾಗಿದ್ದು, ಅದರ ನೆನಪಿಗಾಗಿ ವಿಶೇಷ ವಿಡಿಯೊ ಸಿದ್ಧಪಡಿಸ ಲಾಗುತ್ತಿದೆ. ಈ ವಿಡಿಯೊಗೆ ವಿಧಾನಸೌಧದ ದೃಶ್ಯ ಅಗತ್ಯವಿತ್ತು. ಹೀಗಾಗಿ, ಡ್ರೋನ್ ಮೂಲಕ ದೃಶ್ಯ ಸೆರೆಹಿಡಿಯಲಾಗು-ತ್ತಿದೆ' ಎಂದು ಆರೋಪಿಗಳು ಹೇಳಿಕೆ ನೀಡಿದ್ದಾರೆ. ಠಾಣೆ ಜಾಮೀನು ಮೇಲೆ ಆರೋಪಿಗಳನ್ನು ಬಿಟ್ಟು ಕಳುಹಿಸಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸಂಚಾರ ದಟ್ಟಣೆ ಜಂಕ್ಷನ್‌ಗಳಲ್ಲಿ ಸ್ಕೈವಾಕ್, ಎಲಿವೇಟೆಡ್ ವಾಕ್‌ವೇ: ಐಎಸ್‌ಇಸಿ ವರದಿ

ಎಲಿವೇಟೆಡ್ ಮೇಲ್ಸೇತುವೆ: ಮರುಚಿಂತನೆಗೆ ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸಂಚಾರ ದಟ್ಟಣೆ ನಿಯಂತ್ರಣಕ್ಕೆ ಬಿಬಿಎಂಪಿ ಪ್ರಸ್ತಾಪಿಸಿರುವ ಎಲಿವೇಟೆಡ್ ಮೇಲ್ಸೇತುವೆಗಳನ್ನು ಮರು ಚಿಂತನೆ ನಡೆಸಿ, ವಿಸ್ತೃತವಾದ ಯೋಜನಾ ವರದಿಯನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಬೇಕು ಎಂದು ಐಎಸ್‌ಇಸಿ ವರದಿಯಲ್ಲಿ ಸಲಹೆ ನೀಡಲಾಗಿದೆ.

ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರದದ ಐಎಸ್‌ಇಸಿ, 'ಪರಿಸರ ಸಮಸ್ಯೆಗಳು ಮತ್ತು ದಟ್ಟಣೆ: ಬೆಂಗಳೂರು ಅಭಿವೃದ್ಧಿಗೆ ಸುಸ್ಥಿರ ಪರಿಹಾರಗಳ ವಿಕಸನ' ಎಂಬ ಅಧ್ಯಯನ ವರದಿಯಲ್ಲಿ ಜಂಕ್ಷನ್‌ಗಳಿಗೆ ಅನುಗುಣವಾಗಿ ಅಲ್ಪಾವಧಿ ಹಾಗೂ ದೀರ್ಘಾವಧಿಯಲ್ಲಿ ಕೈಗೊಳ್ಳಬೇಕಾದ ಕಾಮಗಾರಿಗಳ ಸಲಹೆ ನೀಡಲಾಗಿದೆ.

ಬಿಬಿಎಂಪಿ ಪ್ರಸ್ತಾಪಿ, ಡಿಪಿಆರ್ ಸಿದ್ಧ-ಗೊಳಿಸಿರುವ ಕನಕಪುರ ರಸ್ತೆಯಿಂದ ಬನಶಂಕರಿವರೆಗೆ ಎಲಿವೇಟೆಡ್ ರಸ್ತೆಯನ್ನು ನಿರ್ಮಿಸಬಹುದು. ಕನಕಪುರ ರಸ್ತೆಯಿಂದ ಬನಶಂಕರಿ ಟಿಟಿಎಂಸಿ ಮತ್ತು ಇಳಿಯಾಸನಗರದಿಂದ ಜೆಪಿ ಸಾರಕ್ಕಿರಸ್ತೆ ಸಂಪರ್ಕಿಸುವ ಎಲಿವೇಟೆಡ್ ಮೇಲ್ಸೇತುವೆಗಳನ್ನು ಸಾರಕ್ಕಿ ಜಂಕ್ಷನ್‌ನಿಂದ ನಿರ್ಮಿಸಬಹುದು ಎಂದು ವರದಿ ಹೇಳಿದೆ.

ಗೊರಗುಂಟೆಪಾಳ್ಯ ಜಂಕ್ಷನ್ ಸುತ್ತ ಮುತ್ತ ಮಾರ್ಗ ಬದಲಾಯಿಸುವುದರಿಂದ ಶೇ 23 ರಷ್ಟು ದಟ್ಟಣೆ ಕಡಿಮೆ ಯಾಗುತ್ತದೆ. ಜೊತೆಗೆ ಬಿಬಿಎಂಪಿ ಪ್ರಸ್ತಾಪಿಸಿರುವ ಎಲಿವೇಟೆಡ್ ರಸ್ತೆ ಮತ್ತು ಮೇಲ್ಸೇತುವೆಗಳ ವಿವರಗಳನ್ನು ಡಿಪಿಆರ್ ಮರು ಪರಿಶೀಲಿಸಿದ ನಂತರ ಅನುಷ್ಠಾನಗೊಳಿಸಬೇಕು. ಮ್ಯಾನುಯಲ್ ಟ್ರಾಫಿಕ್ ಸಿಗ್ನಲ್‌ನಿಂದ ದಟ್ಟಣೆಗೆ ಅನುಗುಣವಾಗಿ ಚಾಲಿತವಾಗುವ ಅಡಾಪ್ಟೀವ್ ಟ್ರಾಫಿಕ್ ಸಿಗ್ನಲ್ ಅಳವಡಿಸಿಕೊಳ್ಳುವುದರಿಂದ ಸಂಚಾರ ಸಾಕಷ್ಟು ಸುಗಮವಾಗಲಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.



ತುಮಕೂರು ರಸ್ತೆಯ ಗೊರಗುಂಟೆಪಾಳ್ಯ ಜಂಕ್ಷನ್ ಬಳಿ ಕಂಡು ಬಂದ ಸಂಚಾರ ದಟ್ಟಣೆ –ಪ್ರಜಾವಾಣಿ ಚಿತ್ರ/ ರಂಜು ಪಿ

ಪಾದಚಾರಿಗಳಿಗೆ ಅನುಕೂಲ ಕಲ್ಪಿಸಲು ಡೇರಿ ವೃತ್ತದಲ್ಲಿ ₹8 ಲಕ್ಷ ವೆಚ್ಚದಲ್ಲಿ ಎಲಿವೇಟೆಡ್ ವಾಕ್‌ವೇ, ಗೊರಗುಂಟೆಪಾಳ್ಯ ಮೆಟ್ರೊ ನಿಲ್ದಾಣದಲ್ಲಿ ಇಂಟಿಗ್ರೇಟೆಡ್ ಎಲಿವೇಟೆಡ್ ವಾಕ್‌ವೇಸ್, ಸಿಲ್ಕ್ ಬೋರ್ಡ್ ಜಂಕ್ಷನ್‌ನಲ್ಲಿ ಎಲಿವೇಟೆಡ್ ವಾಕ್‌ವೇ, ಕುಮಾರಸ್ವಾಮಿ ಲೇಔಟ್ ಜಂಕ್ಷನ್‌ನಲ್ಲಿ ಹೊರ ವರ್ತುಲ ರಸ್ತೆ ಮೂಲಕ ದಯಾನಂದ ಸಾಗರ ಕಾಲೇಜು ರಸ್ತೆ ಮತ್ತು ಬನಶಂಕರಿ ಟಿಟಿಎಂಸಿ ರಸ್ತೆಯನ್ನು ಸಂಪರ್ಕಿಸುವಂತೆ 'ಸಿ- ಆಕಾರದ ಎಲಿವೇಟೆಡ್ ಸ್ಕೈವಾಕ್ ಅನ್ನು ₹15 ಲಕ್ಷ ವೆಚ್ಚದಲ್ಲಿ ನಿರ್ಮಿಸಬಹುದು ಎಂದಿದೆ.

ಟಿನ್ ಫ್ಯಾಕ್ಟರಿ ಜಂಕ್ಷನ್‌ನಲ್ಲಿರುವ ಸ್ಕೈವಾಕ್ ಹಾಗೂ ಬಿಎಂಆರ್‌ಸಿಎಲ್ ಹೊಸದಾಗಿ ನಿರ್ಮಿಸುತ್ತಿರುವ ಸ್ಕೈವಾಕ್‌ನಲ್ಲೇ ಪಾದಚಾರಿಗಳು ಓಡಾಡಬೇಕು. ಇಲ್ಲದಿದ್ದರೆ ದಂಡ ವಿಧಿಸುವ 'ಜೇವಾಕ್ ಫೈನ್ಸ್' ವ್ಯವಸ್ಥೆಯನ್ನು ಬೆಂಗಳೂರು ಸಂಚಾರ ಪೊಲೀಸರು ಅನುಷ್ಠಾನಗೊಳಿಸಬೇಕು. ಬೀದಿ ಬದಿ ವ್ಯಾಪಾರಿಗಳು ನಿಯಂತ್ರಿಸುವುದರಿಂದ ಸಂಚಾರ ಸುಗಮವಾಗುತ್ತದೆ.

ಹೆಬ್ಬಾಳ ಜಂಕ್ಷನ್‌ನಲ್ಲಿ ಉತ್ತಮ ಪಾದಚಾರಿ ಸೌಲಭ್ಯ ಕಲ್ಪಿಸಬೇಕು. ಜಂಕ್ಷನ್ ಅನ್ನು ಪ್ರಸ್ತುತ ವಾಹನ ದಟ್ಟಣೆಗೆ ಅನುಗುಣವಾಗಿ ಮರುವಿನ್ಯಾಸಗೊಳಿ-ಸಬೇಕು. ಹೆಚ್ಚುವರಿ ಪಥ ನಿರ್ಮಾಣ ಮಾಡಬಹುದು ಎಂದು ಅಧ್ಯಯನ ವರದಿಯಲ್ಲಿ ತಿಳಿಸಲಾಗಿದೆ.

'ಒಟ್ಟು ₹56 ಕೋಟಿ ಅಗತ್ಯ'

ಐಎಸ್‌ಇಸಿ ಅಧ್ಯಯನ ಕರಡು ವರದಿ ಪ್ರಕಾರ, ನಗರದ 10 ಜಂಕ್ಷನ್‌ಗಳಲ್ಲಿ ಸಂಚಾರ ದಟ್ಟಣೆ ಕಡಿಮೆ ಮಾಡಲು ಅಲ್ಪಾವಧಿ ಯೋಜನೆಗಳಲ್ಲಿ ಒಟ್ಟು ₹56 ಕೋಟಿ ಅಗತ್ಯವಾಗಿರುತ್ತದೆ. ಸಿಎಂಟಿಐ ಜಂಕ್ಷನ್‌ನಲ್ಲಿ ಸುರಂಗ ಮಾರ್ಗಕ್ಕೆ ₹7 ಕೋಟಿ ಅಗತ್ಯವಾಗಿದ್ದು, ಕಣ್ತಪ್ಪಿನಿಂದ ₹700 ಕೋಟಿ ಎಂದು ಪತ್ರದಲ್ಲಿ ನಮೂದಾಗಿದೆ. ಅನುಬಂಧದಲ್ಲಿ ವಿವರವಾದ ಮಾಹಿತಿ ಇದೆ. ಅಲ್ಲದೆ, ಒಟ್ಟು ಪಾದಚಾರಿ ಮಾರ್ಗದ ಅಗತ್ಯ 8.92 ಕಿ.ಮೀ ಬದಲು 8.25 ಕಿ.ಮೀಯಾಗಿದೆ. 10 ಜಂಕ್ಷನ್‌ಗಳಲ್ಲಿ ವಿವಿಧ ಕಾಮಗಾರಿಗಳಿಗೆ ₹25 ಕೋಟಿ ಅಗತ್ಯವನ್ನು ವಿವರಿಸಲಾಗಿದೆ ಎಂದು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ತಿಳಿಸಿದ್ದಾರೆ.

ವಿಜ್ಞಾನದ ಬೆಳವಣಿಗೆಯಿಂದ ಚಂದ್ರನತ್ತ ಪಯಣ: ಕಿರಣ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಜ್ಞಾನ ಮತ್ತು ತಂತ್ರಜ್ಞಾನ ಬೆಳೆದಂತೆ ಮಾನವನ ಕೈಗಳಿಗೆ ಹೊಸ ಹೊಸ ಸಾಧನಗಳು ದೊರೆಯುತ್ತಿವೆ. ಇದರಿಂದಾಗಿಯೇ ಈಗ ನಾವು ಚಂದ್ರನ ಹತ್ತಿರ ಹೋಗುತ್ತಿದ್ದೇವೆ' ಎಂದು ವಿಜ್ಞಾನಿ ಹಾಗೂ ಜವಾಹರಲಾಲ್ ನೆಹರೂ ತಾರಾಲಯದ ಅಧ್ಯಕ್ಷ ಎ.ಎಸ್. ಕಿರಣ್ ಕುಮಾರ್ ತಿಳಿಸಿದರು.

ನವಕರ್ನಾಟಕ ಪ್ರಕಾಶನ ನಗರದಲ್ಲಿ ಶನಿವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಬಿ.ಎಸ್. ಶೈಲಜಾ ಹಾಗೂ ಟಿ.ಆರ್. ಅನಂತರಾಮು ಅವರು ಸಂಪಾದಿಸಿರುವ 'ಖಗೋಳ ದರ್ಶನ' ಕೃತಿ ಬಿಡುಗಡೆ ಮಾಡಿ, ಮಾತನಾಡಿದರು.

'ಮನುಷ್ಯ ಹಿಂದಿನ ಕಾಲದಲ್ಲಿ ರಾತ್ರಿ ವೇಳೆ ಆಕಾಶವನ್ನು ಕುತೂಹಲದಿಂದ ವೀಕ್ಷಿಸುತ್ತಿದ್ದ. ಕಣ್ಣಿಗೆ ಕಾಣಿಸಿದ್ದನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡುತ್ತಿದ್ದ. ವಿಜ್ಞಾನದ ಬೆಳವಣಿಗೆಯಿಂದಾ-ಗಿ ಕಣ್ಣಿಗೆ ಕಾಣದ್ದನ್ನೂ ಈಗ ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತಿ-ದೆ. 'ಚಂದ್ರಯಾನ–3' ದೇಶದ ಮಹತ್ವಾಕಾಂಕ್ಷಿ ಯೋಜನೆಯಾಗಿದ್ದು, ಬಾಹ್ಯಾಕಾಶ ನೌಕೆಯನ್ನು ಚಂದ್ರನ ಕಕ್ಷೆಗೆ ಸೇರಿಸುವ ಕಾರ್ಯ ಆ.1ರಂದು ಆರಂಭವಾಗಲಿದೆ. ವಿಜ್ಞಾನ ಬೆಳೆಯುತ್ತಿರುವ ವೇಗದಲ್ಲಿಯೇ ಮನುಷ್ಯನೂ ಬೆಳೆಯುತ್ತಿದ್ದಾನೆ. ನೂತನ ಕಾಲಘಟ್ಟದ ವಿಚಾರವನ್ನು ತಿಳಿದುಕೊಳ್ಳುವ ಆತನ ಹುಮ್ಮಸ್ಸು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ' ಎಂದು ಹೇಳಿದರು.



ಕಾರ್ಯಕ್ರಮದಲ್ಲಿ ಎ.ಎಸ್‌. ಕಿರಣ್ ಕುಮಾರ್ ಅವರು 'ಖಗೋಳ ದರ್ಶನ' ಕೃತಿಯನ್ನು ಬಿಡುಗಡೆ ಮಾಡಿದರು. (ಎಡದಿಂದ) ಪುಸ್ತಕದ ಸಂಪಾದಕಿ ಬಿ.ಎಸ್‌. ಶೈಲಜಾ, ಎಂ.ಆರ್‌.ಎನ್‌.ಮೂರ್ತಿ, ಟಿ.ಆರ್‌. ಅನಂತರಾಮು ಮತ್ತು ಪ್ರಕಾಶಕ ಎ. ರಮೇಶ ಉಡುಪ ಇದ್ದಾರೆ –ಪ್ರಜಾವಾಣಿ ಚಿತ್ರ

ವಿಜ್ಞಾನ ಲೇಖಕ ಟಿ. ಆರ್. ಅನಂತರಾಮು, 'ಸಮಾಜಕ್ಕೆ ವಿಜ್ಞಾನವನ್ನು ಸರಿಯಾದ ರೀತಿಯಲ್ಲಿ ನೀಡಿದರೆ ಅದು ತಲುಪುತ್ತದೆ. ನಮ್ಮ ರಾಜ್ಯದಲ್ಲಿ ವಿಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಸಂಶೋಧನೆಗಳು ನಡೆಯುತ್ತಿ-ದ್ದರೂ, ವಿಜ್ಞಾನ ಬರಹಗಾರರ ಸಂಖ್ಯೆ ಕಡಿಮೆಯಿದೆ. ವಿಜ್ಞಾನ ಬೆಳೆದಂತೆ ಸಮಾಜದಲ್ಲಿ ಬದಲಾವಣೆ ಕಾಣಬಹುದಾಗಿದೆ. ಮಂಗಳ ಗ್ರಹದ ಬಗ್ಗೆ ಹಿಂದೆ ಬರೆದ ವಿಷಯಗಳು ಈಗ ಅಪ್ರಸ್ತುತವಾಗಲಿದೆ. ವಿಜ್ಞಾನಕ್ಕೆ ಸಂಬಂಧಿಸಿದಂತೆ 1,657 ಲೇಖನಗಳನ್ನು ಬರೆದಿದ್ದು, ಇವುಗಳಲ್ಲಿ ಸುಮಾರು ಸಾವಿರ ಲೇಖನಗಳು ಅಪ್ರ-ಸ್ತುತವೆಂದು ಬದಿಗಿಟ್ಟಿದ್ದೇನೆ. ಸಾಹಿತ್ಯಕ್ಕೆ ಸಂಬಂಧಿಸಿದ ಕೃತಿ, ಲೇಖನಗಳನ್ನು ಯಾವಾಗ ಬೇಕಾದರೂ ಓದಬಹುದು' ಎಂದು ತಿಳಿಸಿದರು.

ವಿಜ್ಞಾನಿ ಎಂ.ಆರ್.ಎನ್. ಮೂರ್ತಿ, 'ಎಲ್ಲಾ ದೇಶದಲ್ಲಿಯೂ ಖಗೋಳ ವಿಜ್ಞಾನ ಮೊದಲಿನಿಂದಲೂ ಇದೆ. ಅದಿಲ್ಲದೆ ವ್ಯವಸಾಯ ಸಾಧ್ಯವಿರಲಿಲ್ಲ. ಮಳೆ ಯಾವಾಗ ಬರುತ್ತದೆ ಎಂಬುದನ್ನು ತಿಳಿದುಕೊಳ್ಳಲು ಖಗೋಳ ವಿಜ್ಞಾನ ನೆರವಾಯಿತು. ಎಲ್ಲಾ ಕಾಲದಲ್ಲಿಯೂ ಖಗೋಳ ವಿಜ್ಞಾನ ಬೆಳೆದುಬಂದಿದೆ' ಎಂದು ಹೇಳಿದರು.

ಶಾಸಕರ ನಿಧಿ ಬಳಕೆ: ಮಾರ್ಗಸೂಚಿ ಪರಿಷ್ಕರಣೆ

ಬೆಂಗಳೂರು: ಉನ್ನತ ಶಿಕ್ಷಣ ಇಲಾಖೆಯ ಅಡಿಯಲ್ಲಿರುವ ಸರ್ಕಾರಿ ಕಾಲೇಜು, ಎಂಜಿನಿಯರಿಂಗ್ ಕಾಲೇಜುಗಳಿಗೆ ಮೂಲಸೌಲಭ್ಯ ಕಲ್ಪಿಸಲು ಅಗತ್ಯಕ್ಕೆ ಅನುಗುಣವಾಗಿ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯನ್ನು ಬಳಸಲು ಅವಕಾಶ ಕಲ್ಪಿಸಲಾಗಿದೆ.

ಈ ಸಂಬಂಧ ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಮಾರ್ಗಸೂಚಿ ಪರಿಷ್ಕರಿಸಲಾಗಿದೆ.

ಸರ್ಕಾರಿ ಕಾಲೇಜು, ಕೈಗಾರಿಕಾ ತರಬೇತಿ ಸಂಸ್ಥೆ, ಪಾಲಿಟೆಕ್ನಿಕ್‌ಗಳು, ಎಂಜಿನಿಯರಿಂಗ್ ಕಾಲೇಜುಗಳು, ಸರ್ಕಾರಿ ಔದ್ಯೋಗಿಕ ಸಂಸ್ಥೆಗಳಿಗೆ ತರಗತಿ ಕೊಠಡಿಗಳು, ಆವರಣ ಗೋಡೆ, ಗ್ರಂಥಾಲಯ, ಪ್ರಯೋಗಾಲಯ, ಶೌಚಾಲಯಗಳ ನಿರ್ಮಾಣ, ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜುಗಳಿಗೆ ಉಪಕರಣಗಳನ್ನು ಒದಗಿಸುವುದು, ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸುವುದು, ರಸ್ತೆ, ಆಟದ ಮೈದಾನ, ಉಪಾಹಾರ ಮಂದಿರಗಳಂಥ ಮೂಲಸೌಕರ್ಯ ಒದಗಿಸಲು ಶಾಸಕರ ಅನುದಾನವನ್ನು ಬಳಸಬಹುದು.

ಅಲ್ಲದೆ, ಸರ್ಕಾರಿ ವಿಶ್ವವಿದ್ಯಾಲಯಗಳ ಎಲ್ಲ ವಿಭಾಗಗಳಿಗೂ ಕಂಪ್ಯೂಟರ್ ಒದಗಿಸಲು ಕೂಡಾ ಅನುದಾನ ಬಳಕೆಗೆ ಅವಕಾಶ ಕಲ್ಪಿಸಲಾಗಿದೆ.





ನಗರದ ಜಾನ್ಸನ್ ಮಾರುಕಟ್ಟೆಯ ಬಳಿ ಶನಿವಾರ ಮೊಹರಂ ಅಂಗವಾಗಿ ಶಿಯಾ ಮುಸ್ಲಿಮರು ಮೆರವಣಿಗೆ ನಡೆಸಿದರು (ಎಡಚಿತ್ರ). ಮೊಹರಂ ಅಂಗವಾಗಿ ಶಿವಾಜಿನಗರದ ಒಪಿಎಚ್ ರಸ್ತೆಯ ಪ್ರಾರ್ಥನಾ ಮಂದಿರದಲ್ಲಿ ಮುಸ್ಲಿಮರು ಪ್ರಾರ್ಥನೆ ಸಲ್ಲಿಸಿದರು. – ಪ್ರಜಾವಾಣಿ ಚಿತ್ರಗಳು: ಎಂ.ಎಸ್.ಮಂಜುನಾಥ್

ಶಿಯಾ ಮುಸ್ಲಿಮರಿಂದ ಶ್ರದ್ಧಾಭಕ್ತಿಯ ಆಚರಣೆ; ಕಪ್ಪು ಬಟ್ಟೆ ಧರಿಸಿ ಸಾವಿರಾರು ಮಂದಿ ಭಾಗಿ

ಮೊಹರಂ: ದೇಹದಂಡನೆ, ಮೆರವಣಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೊಹರಂ ಅಂಗವಾಗಿ ನಗರದಲ್ಲಿ ಶನಿವಾರ ಜಾನ್ಸನ್ ಮಾರುಕಟ್ಟೆ ಬಳಿ ಶಿಯಾ ಮುಸ್ಲಿಮರು ಮೆರವಣಿಗೆ ನಡೆಸಿ ದೇಹದಂಡನೆ ಮಾಡಿದರು.

ಶೋಕಾಚರಣೆ ಸಂಕೇತವಾಗಿ ನಡೆದ ಮೆರವಣಿಗೆಯಲ್ಲಿ ಕಪ್ಪುಬಟ್ಟೆ ಧರಿಸಿದ್ದ ಸಾವಿರಾರು ಮಂದಿ ಭಾಗ ವಹಿಸಿದ್ದರು.

ವಿಶೇಷಾಲಂಕೃತ ಸ್ತಬ್ಧಚಿತ್ರಗಳು ಸಾಗಿಬಂದವು. ಸಾವಿರಾರು ಮಂದಿ ಪಾಲ್ಗೊಂಡಿದ್ದರಿಂದ ಮಾರುಕಟ್ಟೆಯ ಅಕ್ಕಪಕ್ಕದ ರಸ್ತೆಯಲ್ಲಿ ಮಧ್ಯಾಹ್ನ ವಾಹನ ಸಂಚಾರ ನಿರ್ಬಂಧಿಸಲಾಗಿತ್ತು.

ಮೆರವಣಿಗೆ ವೇಳೆ ಮಕ್ಕಳು, ಯುವಕರು ಮತ್ತು ವೃದ್ಧರು ದೇಹದಂಡನೆ ಮಾಡಿಕೊಂಡರು. 'ಅಲಿ ದೂಲಾ' ಎಂದು ಕೂಗುತ್ತಾ ದಾರಕ್ಕೆ ಕಟ್ಟಿದ್ದ ಬ್ಲೇಡ್‌ಗಳ ಗೊಂಚಲನ್ನು ಜನರು ತಮ್ಮ ಎದೆಗೆ ಹಾಗೂ ಬೆನ್ನಿಗೆ ಬಡಿದುಕೊಂಡರು. ಆಗ ಅವರ ದೇಹದಿಂದ ರಕ್ತ ಚಿಮ್ಮುತ್ತಿತ್ತು. ಬಹುತೇಕರು ಎದೆಗೆ ಕೈಗಳಿಂದ ಬಡಿದುಕೊಂಡು ಶೋಕ ಗೀತೆಗಳನ್ನು ಹಾಡಿದರು.

ಮೆರವಣಿಗೆಗೆ ಮೊದಲು ಜಾನ್ಸನ್ ಮಾರುಕಟ್ಟೆ ಬಳಿಯ ಅಲಿ ಅಸ್ಕರ್ ಮಸೀದಿಯಲ್ಲಿ ವಿಶೇಷ ಪ್ರಾರ್ಥನೆ ನಡೆಯಿತು. ಅಲ್ಲದೇ ನಗರದ ವಿವಿಧ ಮಸೀದಿಗಳಲ್ಲೂ ಪ್ರಾರ್ಥನೆ ಸಲ್ಲಿಸಲಾಯಿತು.

ಜಾನ್ಸನ್ ಮಾರುಕಟ್ಟೆ ಬಳಿ ಅಹಿತಕರ ಘಟನೆ ನಡೆಯದಂತೆ ಪೊಲೀಸರು ಬಿಗಿ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು. ಅಂಬ್ಯುಲೆನ್ಸ್‌ಗಳನ್ನು ಸ್ಥಳದಲ್ಲಿ ನಿಯೋಜಿಸಲಾಗಿತ್ತು. ನರ್ಸ್‌ಗಳು ಇದ್ದರು.

ಭಾವೈಕ್ಯದ ಪ್ರತೀಕವಾಗಿರುವ ಮೊಹರಂ ಅನ್ನು ರಾಜಧಾನಿ ಸುತ್ತಮುತ್ತಲ ಬಡಾವಣೆಗಳಲ್ಲೂ ಮುಸ್ಲಿಮರು ಶ್ರದ್ಧಾಭಕ್ತಿಯಿಂದ ಆಚರಣೆ ಮಾಡಿದರು.

ಕೆಲವರು ಅಲ್ಲಾ ದೇವರು ಮತ್ತು ಬೀಬಿ ಫಾತಿಮಾರ ಹೆಸರಿನಲ್ಲಿ ಹಾಡಿದ ಹಾಡುಗಳಿಗೆ ಜನರು ಭಾವುಕರಾಗಿ ಭಕ್ತಿಯ ಮೊರೆ ಹೋದರು. ದೀರ್ಘದಂಡ ನಮಸ್ಕಾರ ಹಾಕಿ ಧನ್ಯರಾದರು.

'ಪ್ರವಾದಿ ಮಹಮ್ಮದ್ ಪೈಗಂಬರ್ ಅವರ ಮೊಮ್ಮಕ್ಕಳಾದ ಹಸನ್–ಹುಸೇನ್ ಧರ್ಮದ ಉಳಿವಿಗಾಗಿ ಹಾಗೂ ನ್ಯಾಯಕ್ಕಾಗಿ ಹೋರಾಡಿ ಯುದ್ಧದಲ್ಲಿ ಮರಣ ಹೊಂದಿದರು. ಅವರ ಸಾವಿನ ಸ್ಮರಣಾರ್ಥ ಈ ಶೋಕಾಚರಣೆ ಆಚರಿಸುತ್ತಿದ್ದೇವೆ' ಎಂದು ಮುಸ್ಲಿಂ ಸಮಾಜದ ಮುಖಂಡರು ಹೇಳಿದರು.

ಕಸ್ತೂರಿರಂಗನ್ ವರದಿ ಜಾರಿಗೆ ಬದ್ಧ: ಖಂಡ್ರೆ

ಪ್ರಜಾವಾಣಿ ವಾರ್ತೆ



ಈಶ್ವರ ಬಿ. ಖಂಡ್ರೆ

ಬೆಂಗಳೂರು: ವಿಜ್ಞಾನಿ ಡಾ.ಕೆ. ಕಸ್ತೂರಿರಂಗನ್ ನೇತೃತ್ವದ ಸಮಿತಿಯು ಪಶ್ಚಿಮ ಘಟ್ಟಗಳ ಸಂರಕ್ಷಣೆಗೆ ಸಂಬಂಧಿಸಿದಂತೆ ನೀಡಿರುವ ವರದಿಯನ್ನು ಅನುಷ್ಠಾನಕ್ಕೆ ತರಲು ರಾಜ್ಯ ಸರ್ಕಾರ ಬದ್ಧವಾಗಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ಏಟ್ರಿಯಾ ವಿಶ್ವವಿದ್ಯಾಲಯ, ಸ್ವಿಸ್ ಗ್ಲೋಬಲ್ ನೆಟ್‌ವರ್ಕ್ (ಸ್ವಿಸ್ನೆಕ್ಸ್) ಮತ್ತು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ) ಸಹಭಾಗಿತ್ವದಲ್ಲಿ ಶನಿವಾರ ಆಯೋಜಿಸಿದ್ದ ಅಂತರ ಪ್ರಬೇಧಗಳ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

'ಕಸ್ತೂರಿರಂಗನ್ ವರದಿಯ ಶಿಫಾರಸುಗಳು ಅನುಷ್ಠಾನದ ಕುರಿತು ಸಂಜಯ್ ಕುಮಾರ್ ನೇತೃತ್ವದ ಸಮಿತಿ ಪರಿಶೀಲನೆ ನಡೆಸುತ್ತಿದೆ. ಈ ಸಮಿತಿಯು ಡಿಸೆಂಬರ್ ವೇಳೆಗೆ ತನ್ನ ಅಭಿಪ್ರಾಯಗಳನ್ನು ನೀಡಲಿದ್ದು, ನಂತರ ಸರ್ಕಾರವು ವರದಿಯ ಶಿಫಾರಸುಗಳ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಲಿದೆ' ಎಂದರು.

ಪಶ್ಚಿಮ ಘಟ್ಟಗಳ ಬಹುಭಾಗ ಕರ್ನಾಟಕದಲ್ಲಿದೆ. 11 ಜಿಲ್ಲೆಗಳ ವ್ಯಾಪ್ತಿಯಲ್ಲಿ ಪಶ್ಚಿಮ ಘಟ್ಟಗಳು ವ್ಯಾಪಿಸಿವೆ. ಕಸ್ತೂರಿರಂಗನ್ ಸಮಿತಿ ನೀಡಿರುವ ವರದಿ 10 ವರ್ಷಗಳಿಂದ ಬಾಕಿ ಇದೆ. ಅದಕ್ಕೂ ಹಿಂದೆ ಮಾಧವ ಗಾಡ್ಗೀಳ್ ನೇತೃತ್ವದ ಸಮಿತಿ ನೀಡಿದ್ದ ವರದಿಯೂ ಅನುಷ್ಠಾನಕ್ಕೆ ಬಂದಿರಲಿಲ್ಲ. ಈಗ ಪಶ್ಚಿಮ ಘಟ್ಟಗಳಲ್ಲಿ ವಾಸಿಸುವ ಜನರ ಹಿತಾಸಕ್ತಿಯನ್ನು ರಕ್ಷಿಸಿಕೊಂಡೇ ವರದಿಯ ಜಾರಿಗೆ ಸರ್ಕಾರ ಮುಂದಾಗಿದೆ. ಇತರ ಆರು ರಾಜ್ಯಗಳು ಹಾಗೂ ಕೇಂದ್ರ ಸರ್ಕಾರದ ಜತೆ ಸಮಾಲೋಚನೆ ನಡೆಸಿ ವರದಿಯ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿ, 'ಸುಸ್ಥಿರ ಅಭಿವೃದ್ಧಿ, ಪರಿಸರ ಮತ್ತು ವನ್ಯಜೀವಿ ಸಂರಕ್ಷಣೆಯಲ್ಲಿ ಮಾಹಿತಿ ತಂತ್ರಜ್ಞಾನದ ಪರಿಣಾಮಕಾರಿ ಬಳಕೆ ಆಗಬೇಕಿದೆ. ಈ ಕ್ಷೇತ್ರಗಳಲ್ಲಿ ತಂತ್ರಜ್ಞಾನ ಆಧಾರಿತ ಪರಿಹಾರ ಮಾದರಿಗಳನ್ನು ಅಭಿವೃದ್ಧಿಪಡಿಸುವ ನೇತೃತ್ವವನ್ನು ಬೆಂಗಳೂರು ವಹಿಸಬೇಕಿದೆ' ಎಂದರು.

ಇಂಟರ್ ಸ್ಪೇಸಸ್ ಮನಿ ಸಮೂಹದ ಸಂಸ್ಥಾಪಕ ಜೊನಾಥನ್ ಲೆಡ್‌ಗಾರ್ಡ್ ಅವರೊಂದಿಗೆ ಸಚಿವರು ಸಂವಾದ ನಡೆಸಿದರು. ಜಗತ್ತಿನ ವಿವಿಧೆಡೆ ಪರಿಸರಕ್ಕೆ ಎದುರಾಗಿರುವ ಸವಾಲುಗಳು ಮತ್ತು ಅವುಗಳನ್ನು ಎದುರಿಸುವ ಕುರಿತು ಜೊನಾಥನ್ ಅಭಿಪ್ರಾಯ ಹಂಚಿಕೊಂಡರು.

ಭಾರತದಲ್ಲಿ ಸ್ವಿಟ್ಜರ್ಲೆಂಡ್ ಕಾನ್ಸುಲ್ ಜನರಲ್ ರಾಯಭಾರಿ ಜೋನಸ್ ಬ್ರನ್‌ಶ್ವಿಗ್, ಎಫ್‌ಕೆಸಿಸಿಐ ಅಧ್ಯಕ್ಷ ಗೋಪಾಲ್ ರೆಡ್ಡಿ, ಏಟ್ರಿಯಾ ಶಿಕ್ಷಣ ಟ್ರಸ್ಟ್ ಕಾರ್ಯನಿರ್ವಾಹಕ ನಿರ್ದೇಶಕ ಕೆ. ನಾಗರಾಜು ಉಪಸ್ಥಿತರಿದ್ದರು.

ಮಾರ್ಗದಲ್ಲಿ ಸಂಚರಿಸಿ ಪರಿಶೀಲನೆ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ

ಎಕ್ಸ್‌ಪ್ರೆಸ್‌ವೇ: ₹158 ಕೋಟಿಗೆ ಪ್ರಸ್ತಾವ

ಪ್ರಜಾವಾಣಿ ವಾರ್ತೆ

ಮಂಡ್ಯ: 'ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್‌ವೇಯಲ್ಲಿ ಆಗಮನ, ನಿರ್ಗಮನ (ಎಂಟ್ರಿ– ಎಕ್ಸಿಟ್) ಪಥ ನಿರ್ಮಾಣ, ಬಾಕಿ ಉಳಿದಿರುವ ಸರ್ವೀಸ್ ರಸ್ತೆ ಕಾಮಗಾರಿ ಪೂರ್ಣಗೊಳಿಸಲು ₹158 ಕೋಟಿ ಬಿಡುಗಡೆ ಕೋರಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ನಗರದ ಹೊರವಲಯದ ಶ್ರೀನಿವಾಸಪುರ ಗೇಟ್ ಬಳಿ ಶನಿವಾರ ಎಕ್ಸ್‌ಪ್ರೆಸ್‌ವೇ ಪರಿಶೀಲಿಸಿ ಸುದ್ದಿಗಾರರೊಂದಿಗೆ ಮಾತನಾಡಿದರು.

'ಬಿಡದಿ, ರಾಮನಗರ, ಚನ್ನಪಟ್ಟಣ, ಮದ್ದೂರು, ಮಂಡ್ಯ, ಶ್ರೀರಂಗಪಟ್ಟಣಕ್ಕೆ ತೆರಳಲು ಆಗಮನ, ನಿರ್ಗಮನ ಪಥ ನಿರ್ಮಾಣಗೊಳ್ಳಬೇಕಿದೆ. ಅಲ್ಲಲ್ಲಿ ಸರ್ವೀಸ್ ರಸ್ತೆ ಕಾಮಗಾರಿಯೂ ಬಾಕಿ ಇದೆ. ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರನ್ನು ದೆಹಲಿಯಲ್ಲಿ ಭೇಟಿಯಾಗಿ ಹೆಚ್ಚುವರಿ ಹಣ ಬಿಡುಗಡೆಗೆ ಕೋರುತ್ತೇನೆ. ಮುಂದಿನ ವರ್ಷ ಮಾರ್ಚ್, ಏಪ್ರಿಲ್ ವೇಳೆಗೆ ಬಾಕಿ ಕಾಮಗಾರಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು' ಎಂದರು.

'ಸದ್ಯ 2 ಕಡೆ ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ವೇಗ ಪತ್ತೆ ಕ್ಯಾಮೆರಾ ಅಳವಡಿಸಲಾಗಿದೆ. ಮುಂದೆ 10 ಕಿ.ಮೀ. ಅಂತರಕ್ಕೆ ಒಂದರಂತೆ ಕ್ಯಾಮೆರಾ ಅಳವಡಿಸಲಾಗುವುದು' ಎಂದು ಹೇಳಿದರು.

'ಕಾಮಗಾರಿ ಅವೈಜ್ಞಾನಿಕವಾಗಿಲ್ಲ. ಆದರೆ, ಆತುರಾತುರವಾಗಿ ಮುಗಿಸಿರುವ ಕಾರಣ ಸುರಕ್ಷತಾ ಕ್ರಮ ಕೈಗೊಂಡಿಲ್ಲ. ವೇಗ ಮಿತಿ ಮಾತ್ರವಲ್ಲದೇ ಎಲ್ಲಾ ರೀತಿ ಸುರಕ್ಷತಾ ಕ್ರಮ ಕೈಗೊಳ್ಳಲು ಪೊಲೀಸರಿಗೆ ತಿಳಿಸಿದ್ದೇನೆ. ಈ ಬಗ್ಗೆ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳ ಜೊತೆ ಸಭೆ ನಡೆಸಿದ್ದಾರೆ. ಕಾಮಗಾರಿ ಮುಗಿಯದಿದ್ದರೂ ಟೋಲ್ ಸಂಗ್ರಹಿಸುತ್ತಿದ್ದಾರೆ ಎಂಬ ಆರೋಪಗಳಿವೆ. ಈ ಬಗ್ಗೆಯೂ ಗಡ್ಕರಿ ಅವರೊಂದಿಗೆ ಚರ್ಚಿಸುತ್ತೇನೆ' ಎಂದರು.

ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿ, 'ಬಿಜೆಪಿ ಸರ್ಕಾರದ ನಿರಾಸಕ್ತಿಯಿಂದಾಗಿ ಕಾಮಗಾರಿಗಳು ಮುಗಿಯುವ ಮೊದಲೇ ಹೆದ್ದಾರಿ ಉದ್ಘಾಟನೆಯಾಗಿದೆ. ನಮ್ಮ ಸರ್ಕಾರ ಬಂದ ನಂತರ ಬಾಕಿ ಉಳಿದಿರುವ ಕಾಮಗಾರಿಯನ್ನು ಆದ್ಯತೆಯ ಮೇರೆಗೆ ಮುಗಿಸಲು ಕ್ರಮ ಕೈಗೊಳ್ಳಲಾಗಿದೆ' ಎಂದರು.

ವೇಗಮಿತಿ ಮಾಹಿತಿ ನೀಡಿದ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು, 'ಪ್ರತಿ ಭಾಗದ ಹೆದ್ದಾರಿಯಲ್ಲಿ 3 ಲೇನ್‌ಗಳಿವೆ. ಎಡಭಾಗದ ಲೇನ್‌ನಲ್ಲಿ 60 ಕಿ.ಮೀ., ಮಧ್ಯದ ಲೇನ್‌ನಲ್ಲಿ 90 ಕಿ.ಮೀ. ಹಾಗೂ ಬಲಭಾಗದ ಲೇನ್‌ನಲ್ಲಿ 100 ಕಿ.ಮೀ. ವೇಗ ಮಿತಿ ನಿಗದಿಪಡಿಸಲಾಗಿದೆ' ಎಂದು ತಿಳಿಸಿದರು.

ಶ್ರೀರಂಗಪಟ್ಟಣ ತಾಲ್ಲೂಕು ಗಣಂಗೂರು ಟೋಲ್ ಪರಿಶೀಲಿಸಿದ ಮುಖ್ಯಮಂತ್ರಿಯು ಅಧಿಕಾರಿಗಳಿಂದ ಮಾಹಿತಿ ಪಡೆದರು. ಟೋಲ್ ಪ್ಲಾಜಾ ಸಮೀಪ ಸಸಿ ನೆಟ್ಟು ನೀರೆರೆದರು.

ಸಚಿವರಾದ ಎನ್. ಚಲುವರಾಯಸ್ವಾಮಿ, ಎಚ್.ಸಿ. ಮಹದೇವಪ್ಪ, ಶಾಸಕರಾದ ರಮೇಶ ಬಂಡಿಸಿದ್ದೇಗೌಡ, ಪಿ.ಎಂ.ನರೇಂದ್ರ ಸ್ವಾಮಿ, ಗಣಿಗ ರವಿಕುಮಾರ್‌ಗೌಡ, ಮನ್‌ಮುಲ್ ಅಧ್ಯಕ್ಷ ಬಿ. ಬೋರೇಗೌಡ ಇದ್ದರು.



ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್‌ವೇ ಪರಿಶೀಲಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಗಣಂಗೂರು ಟೋಲ್ ಪ್ಲಾಜಾದಲ್ಲಿ ಯೋಜನಾಧಿಕಾರಿ ಅರ್ಚನಾ ಸುರಕ್ಷತಾ ಕ್ರಮಗಳ ಬಗ್ಗೆ ಮಾಹಿತಿ ನೀಡಿದರು

> ಸಂಚಾರ ಮತ್ತು ರಸ್ತೆ ಸುರಕ್ಷತೆ ವಿಭಾಗದ ತಂಡ ಪರಿಶೀಲಿಸಿದ ಬಳಿಕ ಅಪಘಾತಗಳ ಸಂಖ್ಯೆ ಕಡಿಮೆಯಾಗಿವೆ. ಜೂನ್ ತಿಂಗಳಲ್ಲಿ 20 ಮಂದಿ ಮೃತಪಟ್ಟಿದ್ದರು. ಈ ತಿಂಗಳು 5 ಮಂದಿ ಸತ್ತಿದ್ದಾರೆ
>
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಗುತ್ತಿಗೆದಾರರ ಮೇಲೆ ಸಿ.ಎಂ ಕಿಡಿ

ಸಿ.ಎಂ ಭೇಟಿಯ ಹಿನ್ನೆಲೆಯಲ್ಲಿ ಹೆದ್ದಾರಿ ಕಾಮಗಾರಿ ನಡೆಸಿರುವ ಸ್ಥಳೀಯ ತುಂಡು ಗುತ್ತಿಗೆದಾರರು ತಮ್ಮ ಸಮಸ್ಯೆ ಹೇಳಿಕೊಳ್ಳಲು ಮುಂದಾದರು. 'ಹೆದ್ದಾರಿ ಪ್ರಾಧಿಕಾರ ಕೆಲಸ ಮಾಡಿಸಿಕೊಂಡು ಲಕ್ಷಾಂತರ ರೂಪಾಯಿ ಬಾಕಿ ಉಳಿಸಿಕೊಂಡಿದೆ. ಶೀಘ್ರ ನಮ್ಮ ಬಿಲ್ ಪಾವತಿ ಮಾಡಿಸಿಕೊಡಿ' ಎಂದು ಮನವಿ ಮಾಡಿದರು.

ಇದಕ್ಕೆ ಕೋಪಗೊಂಡ ಮುಖ್ಯಮಂತ್ರಿ 'ನೀವು ನಮ್ಮ ಕಾಲದಲ್ಲಿ ಕೆಲಸ ಮಾಡಿಲ್ಲ. ಎಲ್ಲವನ್ನೂ ಸರಿ ಮಾಡುತ್ತೇವೆ, ಕಾಯಬೇಕು' ಎಂದು ತಾಕೀತು ಮಾಡಿದರು.

ಸುದ್ದಿ 2 ನಿಮಿಷ

ಕಾಂಗ್ರೆಸ್ ಟಿಕೆಟ್ ಕೇಳಿದ ಕೆ.ಸುಧಾಕರ್: ಪ್ರದೀಪ್ ಈಶ್ವರ್

ಚಿಕ್ಕಬಳ್ಳಾಪುರ: 'ಬಿಜೆಪಿ ಮಾಜಿ ಸಚಿವ ಡಾ.ಕೆ.ಸುಧಾಕರ್ 2024ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್ ಕೇಳುತ್ತಿದ್ದಾರೆ. ಈ ಸಂಬಂಧ ಪಕ್ಷದ ಕೆಲವು ನಾಯಕರನ್ನು ಸಹ ಅವರು ಭೇಟಿ ಮಾಡಿದ್ದಾರೆ' ಎಂದು ಶಾಸಕ ಪ್ರದೀಪ್ ಈಶ್ವರ್ ತಿಳಿಸಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಲೋಕಸಭಾ ಚುನಾವಣೆಗೆ ಸ್ಪರ್ಧಿಸಲು ಸುಧಾಕರ್ ಕಾಂಗ್ರೆಸ್ ಟಿಕೆಟ್ ಕೇಳಿರುವುದು ನಿಜ. ಕೆಲವು ಕಾಂಗ್ರೆಸ್ ನಾಯಕರನ್ನು ಸಹ ಅವರು ಭೇಟಿ ಮಾಡಿದ್ದಾರೆ. ಅಲ್ಲದೆ ಚಿಕ್ಕಬಳ್ಳಾಪುರದ ಕೆಲವು ಕಾಂಗ್ರೆಸ್ ನಾಯಕರು ಸಹ ಸುಧಾಕರ್ ಅವರನ್ನು ಭೇಟಿ ಮಾಡಿದ್ದಾರೆ. ಆದರೆ, ಕಾಂಗ್ರೆಸ್‌ಗೆ ಅವರನ್ನು ಸೇರಿಸಿಕೊಳ್ಳುವುದಿಲ್ಲ' ಎಂದರು.

'ಕಾಂಗ್ರೆಸ್‌ಗೆ ದ್ರೋಹ ಮಾಡಿ ಬಿಜೆಪಿಗೆ ಹೋಗಿದ್ದ ಸುಧಾಕರ್ ಮತ್ತೆ ಕಾಂಗ್ರೆಸ್ ಕದ ತಟ್ಟುತ್ತಿದ್ದಾರೆ. ಕಾಂಗ್ರೆಸ್ ಸೇರಲು ಅವರು ಎಲ್ಲಾ ರೀತಿಯ ಪ್ರಯತ್ನ ಮಾಡುತ್ತಿದ್ದಾರೆ. ನಾವು ಅವರನ್ನು ಪಕ್ಷಕ್ಕೆ ಸೇರಿಸಿಕೊಳ್ಳಲು ಸಿದ್ಧವಾಗಿಲ್ಲ. ಎರಡು ತಿಂಗಳಿನಿಂದ ಬಿಜೆಪಿ ಕಾರ್ಯಕ್ರಮದಲ್ಲಿ ಅವರು ಕಾಣಿಸಿಕೊಳ್ಳುತ್ತಿಲ್ಲ. ಮುಂದೆ ಅವರಿಗೆ ಬಿಜೆಪಿ ಟಿಕೆಟ್ ದೊರೆಯುವುದು ಅನುಮಾನ' ಎಂದು ತಿಳಿಸಿದರು.



'ಸಾಧನೆಗೆ ಅಡ್ಡ ದಾರಿ ಬೇಡ'

ಬೆಂಗಳೂರು: 'ಯಾವುದೇ ಕ್ಷೇತ್ರದಲ್ಲಿ ಯಶಸ್ಸು ಸಾಧಿಸಲು ನಿರಂತರ ಪರಿಶ್ರಮ ಅತ್ಯಗತ್ಯ. ಅಲ್ಪಾವಧಿಯಲ್ಲಿ ಗುರಿ ಸಾಧಿಸಲು ಅಡ್ಡ ದಾರಿ ಹಿಡಿಯಬಾರದು' ಎಂದು ಚಲನಚಿತ್ರ ಕಲಾವಿದ ರಮೇಶ್ ಪಂಡಿತ್ ಹೇಳಿದರು.

ಮತ್ತಿಕೆರೆಯ ರಾಯಲ್ ಕಾಲೇಜು ನಗರದಲ್ಲಿ ಶನಿವಾರ ಆಯೋಜಿಸಿದ 'ಮೀಟ್ ಆ್ಯಂಡ್ ಗ್ರೀಟ್ ವಿತ್ ಸೆಲೆಬ್ರಿಟಿ' ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

'ಶಿಕ್ಷಣದ ಜೊತೆಗೆ ಕಲೆ, ಸಾಹಿತ್ಯದಂತಹ ಕ್ರಿಯಾಶೀಲ ಚಟುವಟಿಕೆಗಳಲ್ಲೂ ಮಕ್ಕಳು ತಮ್ಮನ್ನು ತೊಡಗಿಸಿಕೊಳ್ಳಬೇಕು. ಶಿಕ್ಷಣ ಸಂಸ್ಥೆಗಳೂ ಪಠ್ಯದ ಜತೆಗೆ ಪಠ್ಯೇತರ ಚಟುವಟಿಕೆಗಳಿಗೆ ಆದ್ಯತೆ ನೀಡಬೇಕು. ಕಲಾ ಚಟುವಟಿಕೆಗಳು ವ್ಯಕ್ತಿತ್ವ ವಿಕಸನಕ್ಕೆ ಸಹಕಾರಿಯಾಗಲಿವೆ. ಆದ್ದರಿಂದ ಪೋಷಕರು ಮಕ್ಕಳಲ್ಲಿ ಈ ಬಗ್ಗೆ ಆಸಕ್ತಿ ಮೂಡಿಸಬೇಕು' ಎಂದು ಹೇಳಿದರು.

ಇದೇ ವೇಳೆ ಕಾಲೇಜಿನ ಮಾಸಿಕ ಪತ್ರಿಕೆ 'ರಾಯಲ್ ಟೈಮ್ಸ್' ಬಿಡುಗಡೆ ಮಾಡಿದರು. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕಿ ಸುಜಾತ ದೇವರಾಜ್ ಮತ್ತು ಪ್ರಾಚಾರ್ಯ ಲಕ್ಷ್ಮೀಶ್ ಹೆಗಡೆ ಸೋಂದಾ ಇದ್ದರು.

ಎಕ್ಸ್‌ಪ್ರೆಸ್‌ವೇಯಲ್ಲಿ ಅಪಘಾತ ಕಲಾವಿದ ಲೋಕೇಶ್ ಸಾವು

ಪ್ರಜಾವಾಣಿ ವಾರ್ತೆ



ಮಂಡ್ಯ: ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್‌ವೇಯಲ್ಲಿ ಯಲಿಯೂರು ಬಳಿ ಶನಿವಾರ ನಸುಕಿನಲ್ಲಿ ನಡೆದ ಅಪಘಾತದಲ್ಲಿ, ಚಿತ್ರಕಲಾ ಕಲಾವಿದ, ನಟ ಲೋಕೇಶ್ (38) ಅವರು ಸ್ಥಳದಲ್ಲೇ ಮೃತಪಟ್ಟರು.

'ಎರಡೂ ಕಾಲು, ಎರಡು ಕೈ ತುಂಡಾದ ಸ್ಥಿತಿಯಲ್ಲಿ ಅವರ ಮೃತದೇಹ ಪತ್ತೆಯಾಗಿದ್ದು, ಯಾವ ರೀತಿ ಅಪಘಾತವಾಗಿದೆ ಎಂಬುದು ಗೊತ್ತಾಗಿಲ್ಲ. ಬೆಂಗಳೂರಿನಿಂದ ಮೈಸೂರು ಕಡೆಗೆ ತಮ್ಮ ಊರಿಗೆ ಬೈಕ್‌ನಲ್ಲಿ ತೆರಳುತ್ತಿದ್ದ ಅವರು ನಿಂತಿದ್ದ ಕಾರಿಗೆ ಡಿಕ್ಕಿ ಹೊಡೆದಿರುವ ಸಾಧ್ಯತೆ ಇದೆ. ಅಪಘಾತದ ಸ್ಥಳದಲ್ಲಿ ನಂಬರ್ ಪ್ಲೇಟ್ ಪತ್ತೆಯಾಗಿದ್ದು ಕಾರಿಗಾಗಿ ಹುಡುಕಾಟ ನಡೆಸಲಾಗುತ್ತಿದೆ' ಎಂದು ಪೊಲೀಸರು ತಿಳಿಸಿದರು.

ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕಿನ ದೊಡ್ಡತುಪ್ಪೂರು ಗ್ರಾಮದ ಲೋಕೇಶ್ ಚಲನಚಿತ್ರಗಳ ಕಲಾ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು. ಹಲವು ಚಿತ್ರ, ಕಿರುಚಿತ್ರಗಳಲ್ಲಿ ನಟಿಸಿದ್ದರು. 'ಅಮೂಲ್ಯ ರತ್ನ' ಕಿರುಚಿತ್ರ, 'ಫ್ಯಾಮಿಲಿ ಪ್ಯಾಕ್' ಚಲನಚಿತ್ರದಲ್ಲಿ ಅವರು ಅಭಿನಯಿಸಿದ್ದರು.

ಶುಕ್ರವಾರ ತಡರಾತ್ರಿ 2.30ಕ್ಕೆ ಬೆಂಗಳೂರು ಬಿಟ್ಟಿದ್ದರು. ನಸುಕಿನ 5.15ರಲ್ಲಿ ಅಪಘಾತವಾಗಿದೆ. ಹೊಸ ಬೈಕ್ ಖರೀದಿಸಿದ್ದ ಅವರು ಶುಕ್ರವಾರ ಸಂಜೆ ರೀಲ್ಸ್ ಮಾಡಿ ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಹಂಚಿಕೊಂಡಿದ್ದರು. ಅವರಿಗೆ ಪತ್ನಿ, ಪುತ್ರಿ ಇದ್ದಾರೆ. ಮಂಡ್ಯ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಿತ್ರಾವಳಿ



ವೀರಶೈವ ಲಿಂಗಾಯತ ಮಹಾವೇದಿಕೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, 'ಶಿವಕುಮಾರ್ ಸ್ವಾಮೀಜಿ ವಿಶೇಷ ಅಂಚೆ ಲಕೋಟೆ' ಬಿಡುಗಡೆ ಮಾಡಿದರು. (ಎಡದಿಂದ) ವೀರಶೈವ ಲಿಂಗಾಯತ ಮಹಾವೇದಿಕೆ ಅಧ್ಯಕ್ಷ ಪ್ರಶಾಂತ್ ಕಲ್ಲೂರು, ಸಚಿವ ವಿನಯ್ ಕುಲಕರ್ಣಿ, ತುಮಕೂರಿನ ಸಿದ್ಧಗಂಗ ಮಠದ ಸಿದ್ಧಲಿಂಗ ಸ್ವಾಮೀಜಿ ಮತ್ತು ಪೋಸ್ಟ್ ಮಾಸ್ಟರ್ ಜನರಲ್ ಎಲ್.ಕೆ. ಡ್ಯಾಶ್ ಇದ್ದಾರೆ ಪ್ರಜಾವಾಣಿ ಚಿತ್ರ



ಕರ್ನಾಟಕ ಗ್ಯಾಸ್ಟ್ರೋ ಸೆಂಟರ್, ಲಯ ಇಂಟರ್‌ನ್ಯಾಷನಲ್, ಗೌತಮ್ ನರ್ಸಿಂಗ್ ಕಾಲೇಜ್ ,ಸರ್ವೋದಯ ಕಾಲೇಜ್ ಆಫ್ ನರ್ಸಿಂಗ್ ಸಹಯೋಗದಲ್ಲಿ ವಿಶ್ವ ಕಾಮಾಲೆ ದಿನದ ಅಂಗವಾಗಿ ಜಾಗೃತಿ ಕಾಲ್ನಡಿಗೆ ಕಾರ್ಯಕ್ರಮಕ್ಕೆ ವೈದ್ಯಕೀಯ ಸಚಿವ ಶರಣ ಪ್ರಕಾಶ್ ಪಾಟೀಲ, ಮಾಜಿ ಸಚಿವ ಕೆ. ಗೋಪಾಲಯ್ಯ ಚಾಲನೆ ನೀಡಿದರು. ರಾಜ್ಯ ಒಬಿಸಿ ಘಟಕದ ಅಧ್ಯಕ್ಷ ನೆಲ ನರೇಂದ್ರಬಾಬು, ಡಾ. ಉಮೇಶ್ ಜಾಲಿಹಾಳ, ಡಾ. ಇರ್ಷಾದ್, ಡಾ. ಪುನೀತ್ ಇದ್ದರು.



ಬೆಂಗಳೂರು ವಿಜಯನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರಂಗ ಚಿರಂತನ ಥಿಯೇಟರ್ ಕ್ಲಬ್ ವಿದ್ಯಾರ್ಥಿಗಳು ಅಭಿನಯಿಸಿರುವ, ಬೇಲೂರು ರಘುನಂದನ್ ರಚಿಸಿ ನಿರ್ದೇಶಿಸಿರುವ 'ಅಲೆಮಾರಿ ಭಾರತ' ನಾಟಕಕ್ಕೆ ಕಾಲೇಜಿನ ಪ್ರಾಂಶುಪಾಲ ಡಾ. ವೈ. ವೆಂಕಟೇಶಪ್ಪ ಚಾಲನೆ ನೀಡಿದರು. ರಂಗ ಸಂಘಟಕರಾದ ಜೆಪಿಜಿ ಚಂದ್ರು, ಮಾಗಡಿ ಗಿರೀಶ್, ಪ್ರಾಧ್ಯಾಪಕ ಮುದ್ದುಕೃಷ್ಣ, ಜನಪದ ಕಲಾವಿದರಾದ ವೈ.ಕೆ. ಉಮಾ, ಶ್ವೇತಾ, ಕನ್ನಡ ವಿಭಾಗದ ಮುಖ್ಯಸ್ಥ ಬೈರಪ್ಪ ಇದ್ದರು.



'ಮಣಿಪುರದಲ್ಲಿ ಹಿಂಸಾಚಾರ ತಡೆಯಿರಿ. ಶಾಂತಿ ನೆಲೆಸುವಂತೆ ಮಾಡಿ' ಎಂದು ಆಗ್ರಹಿಸಿ ಈಶಾನ್ಯ ರಾಜ್ಯಗಳ ಸಂಯುಕ್ತ ವೇದಿಕೆ ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ



ಶೇಷಾದ್ರಿಪುರಂ ಕಾಲೇಜಿನಲ್ಲಿ ಸಾಹಿತ್ಯ ಸರಸ್ವತಿ ಕಲಾವೇದಿಕೆಯ ಪ್ರಥಮ ವಾರ್ಷಿಕೋತ್ಸವದ ಕಾರ್ಯಕ್ರಮದಲ್ಲಿ ಶಾಂತಿವಾಸು ಅವರ 'ಬಾಲ್ಯ ಕಾಣಿಸದ ಕನ್ನಡಿ' ಕೃತಿಯನ್ನು ಲೇಖಕ ಎಸ್. ಜಿ. ಸಿದ್ದರಾಮಯ್ಯ ಬಿಡುಗಡೆಮಾಡಿದರು. ಶಿಕ್ಷಣ ತಜ್ಞ ವೂಡೇ ಪಿ. ಕೃಷ್ಣ, ಹೋರಾಟಗಾರರಾದ ಸಿ.ಕೆ. ರಾಮೇಗೌಡ, ಕೆ.ಎಂ. ರೇವಣ್ಣ, ಕನ್ನಡಪರ ಹೋರಾಟಗಾರ ಜಿ. ಪುರುಷೋತ್ತಮ್, ಲೇಖಕಿ ಶಾಂತಿವಾಸು ಇದ್ದರು.



ಕಾವ್ಯಸ್ಪಂದನ ಪಬ್ಲಿಕೇಷನ್ಸ್ ನಗರದಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕವಿ ದೊಡ್ಡರಂಗೇಗೌಡ ಅವರಿಗೆ 'ಇಂಡಿಯನ್ ಬುಕ್ ಆಫ್ ರೆಕಾರ್ಡ್ಸ್' ದಾಖಲೆ ಪತ್ರ ಪ್ರದಾನ ಮಾಡಲಾಯಿತು. ಅವರ 'ನೀಳ್ಗವಿತೆಗಳು' ಕೃತಿ ಇಂಡಿಯನ್ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ಸ್ಥಾನ ಪಡೆದುಕೊಂಡಿದೆ. (ಎಡದಿಂದ) ಸಂಶೋಧಕ ಸುಬ್ರಮಣಿ ಕೆ., ಕಾದಂಬರಿಗಾರ್ತಿ ಸಹನಾ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ, ಕಲಾವಿದ ಸುಚೇಂದ್ರ ಪ್ರಸಾದ್ ಮತ್ತು ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ಇದ್ದರು



ಕರ್ನಾಟಕ ರಾಜ್ಯ ಮಡಿವಾಳರ ಸಂಘದ ವತಿಯಿಂದ ರಾಜ್ಯ ಮಟ್ಟದ ಪ್ರತಿಭಾ ಪುರಸ್ಕಾರ ಮತ್ತು ಮಹಿಳಾ ಘಟಕದ ಉದ್ಘಾಟನೆ, ಸಾಧಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು. ಮಡಿವಾಳ ಪೀಠದ ಶಿವಯೋಗಾನಂದಪುರಿ ಸ್ವಾಮೀಜಿ, ರಾಜ್ಯ ಮಡಿವಾಳರ ಸಂಘದ ಅಧ್ಯಕ್ಷ ಪಿ. ನಂಜಪ್ಪ, ಕಾರ್ಯದರ್ಶಿ ಬಿ.ಆರ್. ಪ್ರಕಾಶ್, ಲೋಕಸೇವಾ ಆಯೋಗದ ಸದಸ್ಯ ರವಿಕುಮಾರ್ ಇದ್ದರು

ಧರ್ಮಸ್ಥಳದ ಪರ ಹೋರಾಟಕ್ಕೆ ಜನಜಾಗೃತಿ ವೇದಿಕೆ ಸಿದ್ಧತೆ

ಪ್ರಜಾವಾಣಿ ವಾರ್ತೆ

ಮಂಗಳೂರು: 'ಸೌಜನ್ಯ ಅತ್ಯಾಚಾರ ಮತ್ತು ಕೊಲೆ ಪ್ರಕರಣಕ್ಕೆ ಸಂಬಂಧಿಸಿ ಶ್ರೀ ಕ್ಷೇತ್ರ ಧರ್ಮಸ್ಥಳ ಮತ್ತು ಧರ್ಮಾಧಿಕಾರಿಗಳ ವಿರುದ್ಧ ಅವಹೇಳನಕಾರಿ ಹೇಳಿಕೆಗಳನ್ನು ನೀಡಲಾಗುತ್ತಿದೆ' ಎಂದು ಮಂಗಳೂರಿನ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆಯ ಕಾರ್ಯದರ್ಶಿ ಚೆನ್ನಕೇಶವ ಆರೋಪಿಸಿದ್ದಾರೆ.

'ಸೌಜನ್ಯ ಮೇಲೆ ನಡೆದ ಅತ್ಯಾಚಾರ ಮತ್ತು ಅವರ ಕೊಲೆಗೆ ಎಲ್ಲರೂ ಮರುಕಪಟ್ಟಿದ್ದಾರೆ. ಆದರೆ ಈ ಪ್ರಕರಣಕ್ಕೆ ಸಂಬಂಧಿಸಿ ಕಾನೂನಿನ ಮೂಲಕ ಹೋರಾಡದೆ ಧರ್ಮಸ್ಥಳ ಶ್ರೀಕ್ಷೇತ್ರಕ್ಕೂ ಧರ್ಮಾಧಿಕಾರಿಗಳ ಹೆಸರಿಗೂ ಕಪ್ಪು ಚುಕ್ಕೆ ಬರುವಂತೆ ಕೆಲವರು ವರ್ತಿಸುತ್ತಿದ್ದಾರೆ. ಅಮಾಯಕ ಬಾಲಕಿ ಮೇಲೆ ಆದ ಅನ್ಯಾಯದ ವಿರುದ್ಧ ಧರ್ಮಾಧಿಕಾರಿಗಳು ಇಬ್ಬರು ಗೃಹಮಂತ್ರಿಗಳಿಗೆ ಪತ್ರ ಬರೆದು ತನಿಖೆ ಮಾಡುವಂತೆ ಆಗ್ರಹಿಸಿದ್ದರು' ಎಂದು ಹೇಳಿದ್ದಾರೆ.

'ಕೊಲೆ ಪ್ರಕರಣದ ಬಗ್ಗೆ ಸಿಬಿಐ ತನಿಖೆ ನಡೆದ ನಂತರವೂ ಶ್ರೀ ಕ್ಷೇತ್ರ ಮತ್ತು ಧರ್ಮಾಧಿಕಾರಿ ವಿರುದ್ಧ ಇಲ್ಲಸಲ್ಲದ ಆರೋಪ ಮಾಡುತ್ತಿರುವುದರ ಜೊತೆಯಲ್ಲಿ ಸಮಾಜಘಾತುಕ ಶಕ್ತಿಗಳು ಮುಗ್ಧ ಹೆಣ್ಣುಮಗಳ ಸಾವಿನ ವಿಷಯದಲ್ಲಿ ಚೆಲ್ಲಾಟವಾಡುತ್ತಿದ್ದಾರೆ. ಧರ್ಮಸ್ಥಳದ ಧರ್ಮಾಧಿಕಾರಿಗಳ ಸಾಮಾಜಿಕ ಚಟುವಟಿಕೆಯಿಂದ ಲಕ್ಷಾಂತರ ಮಂದಿಯ ಬಾಳು ಬೆಳಗಿದೆ. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ 40 ಲಕ್ಷ ಮಹಿಳೆಯರು ಜೀವನ ರೂಪಿಸಿಕೊಂಡಿದ್ದಾರೆ. ರಾಜ್ಯದ ಜನತೆ ಮತ್ತು ಶ್ರೀ ಕ್ಷೇತ್ರದ ನಡುವಿನ ಸಂಬಂಧಕ್ಕೆ ಕೊಳ್ಳಿ ಇಡಲು ನಡೆಸುತ್ತಿರುವ ಪ್ರಯತ್ನ ಯಶಸ್ವಿಯಾಗಲು ಜಾತಿ, ಮತ–ಧರ್ಮದ ಭೇದವಿಲ್ಲದೆ ನಿಸ್ವಾರ್ಥ ಸೇವೆ ಮಾಡುತ್ತಿರುವ ಕ್ಷೇತ್ರದ ಭಕ್ತರು ಬಿಡುವುದಿಲ್ಲ' ಎಂದಿದ್ದಾರೆ.

'ಧರ್ಮಾಧಿಕಾರಿಗಳ ವಿರುದ್ಧ ಅಪಪ್ರಚಾರ ಮಾಡುತ್ತಿರುವವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಮಂಗಳೂರಿನ ವಕೀಲ ಮಹಮ್ಮದ್ ಇಸ್ಮಾಯಿಲ್, ಕೋಡಿಕಲ್‌ನ ರಾಜರಾಜೇಶ್ವರಿ ಸುಬ್ರಹ್ಮಣ್ಯ ದೇವಸ್ಥಾನದ ಆಡಳಿತ ಮೊಕ್ತೇಸರ ಮಹಾಬಲ ಚೌಟ, ಕಾರ್ಮಿಕ ಮುಖಂಡ ಸದಾಶಿವ ಶೆಟ್ಟಿ, ಕೇಂದ್ರ ಒಕ್ಕೂಟದ ಅಧ್ಯಕ್ಷ ಸತೀಶ್ ದೀಪಂ ಮತ್ತು ತಾಲ್ಲೂಕು ಘಟಕದ ಅಧ್ಯಕ್ಷ ಚಂದ್ರಶೇಖರ ಉಚ್ಚಿಲ ಕೋರಿದ್ದಾರೆ' ಎಂದು ಚೆನ್ನಕೇಶವ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೀದಿಬದಿ ವ್ಯಾಪಾರಿಗಳ ಜಾಥಾ 31ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ರ್ಯಾಂಡ್ ಬೆಂಗಳೂರು ಹೆಸರಿನಲ್ಲಿ ನಗರದ ಬೀದಿಬದಿ ವ್ಯಾಪಾರಿಗಳನ್ನು ಒಕ್ಕಲೆಬ್ಬಿಸುವುದನ್ನು ವಿರೋಧಿಸಿ ಜುಲೈ 31ರಂದು ಬೆಳಿಗ್ಗೆ 10ಕ್ಕೆ ಕಾಲ್ನಡಿಗೆ ಜಾಥಾ ಹಮ್ಮಿಕೊಳ್ಳಲಾಗಿದೆ ಎಂದು ಅಖಿಲ ಕರ್ನಾಟಕ ರೈತರ ಮತ್ತು ವ್ಯಾಪಾರಿಗಳ ಒಕ್ಕೂಟ ತಿಳಿಸಿದೆ.

ಕೆ.ಆರ್. ಪುರ ಸಂತೆ ಮೈದಾನದಿಂದ ಕೆಪಿಸಿಸಿ ಕಚೇರಿವರೆಗೆ ಕಾಲ್ನಡಿಗೆ ಜಾಥಾದಲ್ಲಿ ತೆರಳಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮನವಿ ಸಲ್ಲಿಸಲಾಗುವುದು ಎಂದು ಒಕ್ಕೂಟ ಪದಾಧಿಕಾರಿ ಎಲೆ ಶ್ರೀನಿವಾಸ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಬೀದಿಬದಿ ವ್ಯಾಪಾರಿಗಳನ್ನು ಒಕ್ಕಲೆಬ್ಬಿಸುವ ಪ್ರಸ್ತಾವ ಕೈಬಿಡಬೇಕು. ಬೀದಿ ಬದಿ ವ್ಯಾಪಾರಿಗಳ ಸಮೀಕ್ಷೆ ನಡೆಸಿ ಗುರುತಿನ ಚೀಟಿ ನೀಡಬೇಕು. ಪ್ರತ್ಯೇಕ ನಿಗಮ–ಮಂಡಳಿ ಸ್ಥಾಪಿಸಿ ಬೀದಿ ಬದಿ ವ್ಯಾಪಾರಿಗಳ ಅಭಿವೃದ್ಧಿಗೆ ಕ್ರಮ ಕೈಗೊಳ್ಳಬೇಕು. ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡಬೇಕು. ಕಟ್ಟಡ ಮತ್ತು ಇತರೆ ಕಾರ್ಮಿಕರಿಗೆ ನೀಡುವ ಸೌಲಭ್ಯಗಳನ್ನು ಈ ವ್ಯಾಪಾರಿಗಳಿಗೂ ಒದಗಿಸಬೇಕು ಎಂದು ಆಗ್ರಹಿಸಿದರು.



ನಗರದಲ್ಲಿ ಶನಿವಾರ ಆಯೋಜಿಸಿದ್ದ ಸಂವಾದದಲ್ಲಿ ಮಾವಳ್ಳಿ ಶಂಕರ್, ಕೆ.ವಿ.ಸ್ಟ್ಯಾನ್ಲಿ, ರೂಪಾ ನಾಗೇನಹಳ್ಳಿ ಇದ್ದರು – ಪ್ರಜಾವಾಣಿ ಚಿತ್ರ

‘ಸಾಮಾಜಿಕ, ಸಾಂಸ್ಕೃತಿಕ ಬಳುವಳಿಯೇ ಶೋಷಣೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಹಿಳೆಯರು ಹಾಗೂ ಮಕ್ಕಳ ಮೇಲೆ ನಡೆಯುತ್ತಿರುವ ಹಿಂಸೆ ಹಾಗೂ ಶೋಷಣೆಗಳು ಸಾಮಾಜಿಕ ಹಾಗೂ ಸಾಂಸ್ಕೃತಿಕ ವ್ಯವಸ್ಥೆಯ ಬಳುವಳಿಗಳು’ ಎಂದು ಮೈಸೂರು ಒಡನಾಡಿ ಸಂಸ್ಥೆ ನಿರ್ದೇಶಕ ಕೆ.ವಿ.ಸ್ಟ್ಯಾನ್ಲಿ ಹೇಳಿದರು.

ಬಯಲು ಬಳಗವು ‘ಮಹಿಳೆ: ವರ್ತಮಾನದ ಶೋಷಣೆ ಮತ್ತು ಹಿಂಸೆ’ ಕುರಿತು ನಗರದಲ್ಲಿ ಶನಿವಾರ ಆಯೋಜಿಸಿದ್ದ ‘ತಿಂಗಳ ಸಂವಾದ’ದಲ್ಲಿ ಅವರು ಮಾತನಾಡಿದರು.

‘ಆರ್ಥಿಕ ಪ್ರಗತಿ ಹೊಂದಿದ್ದೇವೆಯೇ ಹೊರತು ನಾಗರಿಕತೆ ಇನ್ನೂ ಬೆಳೆದಿಲ್ಲ. ಸಮಾಜ ಇನ್ನೂ ಅನಾಗರಿಕವಾಗಿಯೇ ಇದೆ. ಹಿಂಸೆ ಹಾಗೂ ಶೋಷಣೆಗಳು ಕ್ಯಾನ್ಸರ್ ಗಡ್ಡೆಯಾಗಿವೆ. ಸಂಪೂರ್ಣ ನಿರ್ಮೂಲನೆ ಅಸಾಧ್ಯವಾಗಿದೆ’ ಎಂದು ಹೇಳಿದರು.

‘ಮಹಿಳೆಯರ ಮೇಲೆ ದಬ್ಬಾಳಿಕೆಗಳು ನಡೆದ ಸಂದರ್ಭದಲ್ಲಿ ಪ್ರತಿರೋಧ, ಪ್ರತಿಭಟನೆಗಳು ನಡೆಯುತ್ತವೆ. ಶೋಷಣೆಗಳು ಶಾಶ್ವತವಾಗಿ ದೂರವಾಗುವಂತೆ ಸರ್ಕಾರಗಳು ಕ್ರಮ ಕೈಗೊಳ್ಳಬೇಕಿದೆ. ಸಮಾಜವನ್ನು ಸಂವೇದನಾ ಶೀಲಗೊಳಿಸಬೇಕಿದೆ’ ಎಂದು ಕರೆ ನೀಡಿದರು.

‘ಮಣಿಪುರದಲ್ಲಿ ಬೆತ್ತಲೆಗೊಂಡಿದ್ದು ಮಹಿಳೆಯರು ಅಲ್ಲ. ಬೆತ್ತಲೆಗೊಂಡಿದ್ದು ನಮ್ಮ ವ್ಯವಸ್ಥೆ. 30 ವರ್ಷಗಳಿಂದ ಹೆಣ್ಣುಮಕ್ಕಳ ಪರ ಹೋರಾಟ ನಡೆಸುತ್ತಿದ್ದೇನೆ. ಒಡನಾಡಿಗೆ ಬರುವ ಯಾವ ಹೆಣ್ಣು ಮಗುವೂ ಸಂತೋಷದಿಂದ ಬರುತ್ತಿಲ್ಲ. ಪ್ರತಿಯೊಬ್ಬರ ಕಥೆಯೂ ಕಣ್ಣೀರು ತರಿಸುತ್ತದೆ. ಹಿಂಸೆ, ಶೋಷಣೆಗಳು ಪೂರ್ವಜರ ಕೊಡುಗೆಯಾಗಿವೆ. ನಾಗರಿಕತೆಯ ಸೋಗಿನಲ್ಲಿ ಅನಾಗರಿಕತೆ ವ್ಯವಸ್ಥೆಯಿದೆ. ಪೋಷಕರ ಮೇಲೆಯೇ ಮಕ್ಕಳು ಎಸಗುತ್ತಿರುವ ದೌರ್ಜನ್ಯಗಳೂ ಕಡಿಮೆಯಾಗಿಲ್ಲ’ ಎಂದು ಹೇಳಿದರು.

ಬಯಲು ಬಳಗದ ಪ್ರಕಾಶ್ ಮಾತನಾಡಿ, ‘ದಲಿತರು, ಮಹಿಳೆಯರು ಹಾಗೂ ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯಗಳು ನಡೆಯುತ್ತಿವೆ. ಜಾತಿಯ ಕಾರಣಕ್ಕೆ ಅವಮಾನಿಸಲಾಗುತ್ತಿದೆ. ಸೌಜನ್ಯ ಪ್ರಕರಣ, ಮಣಿಪುರದ ಘಟನೆಗಳು ನಮ್ಮ ಎದುರಿಗಿವೆ. ಈ ಕಾಲದ ಹಿಂಸಾಚಾರವನ್ನು ನಿಲ್ಲಿಸಲು ಸಂಘಟಿತ ಹೋರಾಟ ನಡೆಸಬೇಕಿದೆ’ ಎಂದು ಕರೆ ನೀಡಿದರು.

ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ರಾಜ್ಯ ಅಧ್ಯಕ್ಷ ಮಾವಳ್ಳಿ ಶಂಕರ್ ಹಾಗೂ ಕ್ರೈಸ್ಟ್ ಅಲಯನ್ಸ್ ವಿಶ್ವವಿದ್ಯಾಲಯದ ರೂಪಾ ನಾಗೇನಹಳ್ಳಿ ಅವರು ಸಂವಾದದಲ್ಲಿ ಪಾಲ್ಗೊಂಡಿದ್ದರು.

ಭೂಮಿಕಾ ಕ್ಲಬ್‌ನ 7ನೇ ಆವೃತ್ತಿಯಲ್ಲಿ ಆರೋಗ್ಯಕರ ಅಡುಗೆ ಶೋ • ನಕ್ಕು ನಗಿಸಿದ ಕಾಮಿಡಿ

ಮೈಮರೆಸಿದ ಸೌಂಡ್ ಹೀಲಿಂಗ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈ ಮರೆಸಿದ ಸೌಂಡ್ ಹೀಲಿಂಗ್, ಬಾಯಲ್ಲಿ ನೀರೂರಿಸಿದ ಆರೋಗ್ಯಕರ ಸಲಾಡ್, ನಕ್ಕುನಗಿಸಿದ ಸ್ಟ್ಯಾಂಡಪ್ ಕಾಮಿಡಿ, ಮಧ್ಯೆ ಮಧ್ಯೆ ಪ್ರೇಕ್ಷಕರಿಗೆ ವಿವಿಧ ಆಟಗಳು.

‘ಪ್ರಜಾವಾಣಿ’ ಹಾಗೂ ‘ಡೆಕ್ಕನ್ ಹೆರಾಲ್ಡ್’ನ ಭೂಮಿಕಾ ಕ್ಲಬ್ ಬನಶಂಕರಿಯ ಹೋಟೆಲ್ ಪೈ ವಿಸ್ಟಾದಲ್ಲಿ ಶನಿವಾರ ಆಯೋಜಿಸಿದ್ದ 7ನೇ ಆವೃತ್ತಿಯ ಕಾರ್ಯಕ್ರಮದ ಸಂಭ್ರಮ ಇದು.

‘ಫ್ರೀಡಂ ಆಯಿಲ್’ ಸಹಯೋಗದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಆರೋಗ್ಯಕರ ಅಡುಗೆ ಎಣ್ಣೆ ಬಗ್ಗೆಯೂ ತಿಳಿಸಿಕೊಡಲಾಯಿತು.

ನಟಿ ಭಾವನಾ ರಾವ್ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ‘ಮಹಿಳೆಯರು ಒಂದು ಕಡೆ ಕೂಡಿ ಸಕಾರಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಉತ್ತಮ ಹವ್ಯಾಸ’ ಎಂದು ಅವರು ಪ್ರಶಂಸಿಸಿದರು.

ಎಲ್ಲ ಮನುಷ್ಯರಿಗೂ ಒತ್ತಡ ಇದ್ದೇ ಇರುತ್ತದೆ. ಅದನ್ನು ನಿರ್ವಹಣೆ ಮಾಡುವುದು ಗೊತ್ತಿರಬೇಕು. ಇಂಥ ಕಾರ್ಯಕ್ರಮಗಳು, ಕಲಾ ಚಟುವಟಿಕೆಗಳು ಒತ್ತಡ ನಿರ್ವಹಣೆಗೆ ಉತ್ತಮ ಮಾರ್ಗ ಎಂದು ತಿಳಿಸಿದರು.

‘ನಮ್ಮ ದೇಹಕ್ಕೆ ಹೊಂದುವ ಆಹಾರ ಯಾವುದು ಎಂಬುದನ್ನು ಕಂಡುಕೊಂಡು ಸೇವಿಸಬೇಕು. ಯಾವುದೋ ಜಾಹಿರಾತು, ರೀಲ್ಸ್‌ಗಳನ್ನು ನೋಡಿ ಸೇವಿಸಬಾರದು’ ಎಂದು ಸಲಹೆ ನೀಡಿದರು.

‘ದೊಡ್ಡವಳಾದ ಮೇಲೆ ಏನಾಗಬೇಕು ಎಂದು ನನ್ನ ಶಾಲಾ ದಿನಗಳಲ್ಲಿ ಕೇಳುತ್ತಿದ್ದರು. ಆಗ ನಟಿಯಾಗಬೇಕು ಎಂದು ಹೇಳುತ್ತಿದ್ದೆ. ಆದರೆ ನಟನೆಯ ಬಗ್ಗೆ ಯಾವುದೇ ತಿಳಿವಳಿಕೆ ಇರಲಿಲ್ಲ. ಆದರೆ, ಮನಸ್ಸಿನಲ್ಲಿ ಆಳವಾಗಿ ಬೇರೂರಿದ್ದ ಆಸೆ ಅದಾಗಿತ್ತು. ಭರತನಾಟ್ಯ ಮತ್ತು ಪಾಶ್ಚಿಮಾತ್ಯ ನೃತ್ಯಗಳೆರಡನ್ನೂ ಕಲಿತಿದ್ದೇನೆ. ಎರಡೂ ಉತ್ತಮವಾದ ಕಲಾ ಪ್ರಕಾರಗಳು. ಆದರೆ, ನನ್ನನ್ನು ಗುರುತಿಸುವಂತಾಗಲು ಭರತನಾಟ್ಯ ಕಾರಣ’ ಎಂದು ಅನುಭವ ಹೇಳಿಕೊಂಡರು.

ಜಂಬೆ, ಕೊಳಲು, ಗಿಟಾರ್, ಹಾಡು ಹೀಗೆ ವಿವಿಧ ಸಂಗೀತ ಪರಿಕರಗಳನ್ನು ಬಳಸಿಕೊಂಡು ಶಕ್ತಿ ಅವರು ಸೌಂಡ್ ಹೀಲಿಂಗ್ ನಡೆಸಿಕೊಟ್ಟರು. ಅಪರ್ಣಾ ಅವರು ಅದಕ್ಕೆ ಧ್ವನಿ ಗೂಡಿಸಿದ್ದಲ್ಲದೇ ನೃತ್ಯದ ಮೂಲಕ ‘ಮಾನಸ್ ರಿಟ್ರೀಟ್’ ನಡೆಸಿದರು. ಶಕ್ತಿ–ಅಪರ್ಣಾ ಅವರ ಹೀಲಿಂಗ್ ಗೋಷ್ಠಿ ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸಿತು.

‘ಹೀಲಿಂಗ್ ನಿಮಗೆ ಕಷ್ಟಗಳನ್ನು ಕಡಿಮೆ ಮಾಡುವುದಿಲ್ಲ. ಕಷ್ಟಗಳನ್ನು ಎದುರಿಸಲು ತಾಳ್ಮೆಯನ್ನು ಜಾಸ್ತಿ ಮಾಡುತ್ತದೆ. ಯಾರಿಗಾಗಿಯೋ ಬದುಕುವುದಕ್ಕಿಂತ ನಮಗಾಗಿ ಬದುಕಬೇಕು’ ಎಂದು ಅಪರ್ಣಾ ಸಲಹೆ ನೀಡಿದರು.

ಆರೋಗ್ಯಕರ ಅಡುಗೆ ಶೋವನ್ನು ಷೆಫ್ ಆದರ್ಶ್ ತಟಪತಿ ನಡೆಸಿಕೊಟ್ಟರು. ಮೆಡಿಟರೇನಿಯನ್ ಸಲಾಡ್ ತಯಾರಿಯ ಪ್ರಾತ್ಯಕ್ಷಿಕೆ ನೀಡಿದರು. ವಾರಕ್ಕೆ ಎರಡು ಅಥವಾ ಮೂರು ದಿನ ಈ ರೀತಿ ಸಲಾಡ್ ಮಾಡಿ ಸೇವಿಸುವ ಮೂಲಕ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು ಎಂದು ತಿಳಿಸಿದರು.

ಮಿಮಿಕ್ರಿ ಗೋಪಿ ಅವರು ನಡೆಸಿಕೊಟ್ಟ ಸ್ಟ್ಯಾಂಡಪ್ ಕಾಮಿಡಿ ಎಲ್ಲರೂ ನಗೆಗಡಲಿನಲ್ಲಿ ತೇಲುವಂತೆ ಮಾಡಿತು. ನಿರೂಪಕಿ ನಿಖಿತಾ ಪ್ರೇಕ್ಷಕರಿಗೆ ವಿವಿಧ ಆಟಗಳನ್ನು ಆಡಿಸಿ ಹುರಿದುಂಬಿಸಿದರು. ಗೆದ್ದವರಿಗೆ ಉಡುಗೊರೆಗಳನ್ನು ನೀಡಲಾಯಿತು.

Freedom Rice Bran Oil Presents ಭೂಮಿಕಾ ಕ್ಲಬ್



ಆರೋಗ್ಯಕರ ಅಡುಗೆ ಶೋವನ್ನು ಷೆಫ್ ಆದರ್ಶ್ ತಟಪತಿ ನಡೆಸಿಕೊಟ್ಟರು.



ಸ್ಟ್ಯಾಂಡ್ ಅಪ್ ಕಾಮಿಡಿ ಕಾರ್ಯಕ್ರಮವನ್ನು ಮಿಮಿಕ್ರಿ ಗೋಪಿ ನಡೆಸಿಕೊಟ್ಟರು.

ಭೂಮಿಕಾ ಕ್ಲಬ್ ಶನಿವಾರ ಆಯೋಜಿಸಿದ್ದ 7ನೇ ಆವೃತ್ತಿಯ ಕಾರ್ಯಕ್ರಮದಲ್ಲಿ ನೃತ್ಯ ಮತ್ತು ಸೌಂಡ್ ಹೀಲಿಂಗ್ ಅನ್ನು ಅಪರ್ಣಾ ಮತ್ತು ಶಕ್ತಿ ನಡೆಸಿಕೊಟ್ಟರು

ನಟಿ ಭಾವನಾ ರಾವ್ ಮಾತು

ಎಫ್‌ಪಿಐ ಒಳಹರಿವು ಅಬಾಧಿತ

ಜುಲೈ 28ರವರೆಗೆ ₹45,365 ಕೋಟಿ ಮೌಲ್ಯದ ಖರೀದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಷೇರುಪೇಟೆಗಳಲ್ಲಿ ಜುಲೈನಲ್ಲಿಯೂ ವಿದೇಶಿ ಬಂಡವಾಳ ಹೂಡಿಕೆ (ಎಫ್‌ಪಿಐ) ಮುಂದುವರಿದಿದೆ. ಜುಲೈ ತಿಂಗಳಿನಲ್ಲಿ 28ರವರೆಗಿನ ವಹಿವಾಟಿನಲ್ಲಿ ಒಟ್ಟು ₹45,365 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ತಿಳಿಸಿದ್ದಾರೆ.


ವಿದೇಶಿ ಹೂಡಿಕೆದಾರರು ಮೇ 1 ರಿಂದ ಜುಲೈ 28ರವರೆಗೆ ನಡೆದಿರುವ ವಹಿವಾಟಿನಲ್ಲಿ ₹1.36 ಲಕ್ಷ ಕೋಟಿ ಹೂಡಿಕೆ ಮಾಡಿದ್ದಾರೆ ಎಂದು ಅವರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದ್ದಾರೆ.

ವಿದೇಶಿ ಹೂಡಿಕೆದಾರರು ಖರೀದಿಸುವ ವೇಗಕ್ಕೆ ತುಸು ಕಡಿವಾಣ ಬಿದ್ದಂತೆ ಕಾಣುತ್ತಿದೆ. ಜುಲೈ 28ಕ್ಕೆ ಕೊನೆಗೊಂಡ ವಾರದ ಕೊನೆಯ ಎರಡು ದಿನಗಳ ವಹಿವಾಟಿನಲ್ಲಿ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ದೇಶದಲ್ಲಿ ನಡೆಯುವ ವಿದ್ಯಮಾನಗಳಲ್ಲದೆ, ಬಾಹ್ಯ ಕಾರಣಗಳು ಸಹ ವಿದೇಶಿ ಹೂಡಿಕೆದಾರರ ಖರೀದಿ/ಮಾರಾಟದ ಮೇಲೆ ಹೆಚ್ಚು ಪ್ರಭಾವ ಬೀರುತ್ತವೆ. ಡಾಲರ್ ಮೌಲ್ಯದಲ್ಲಿ ಆಗುವ ಏರಿಳಿತ, ಅಮೆರಿಕದ ಬಾಂಡ್ ಗಳಿಕೆ ಮತ್ತು ಜಾಗತಿಕ ಮಾರುಕಟ್ಟೆಯ ಚಲನೆಯು ಮುಖ್ಯವಾಗಲಿವೆ ಎಂದು ಅವರು ವಿವರಿಸಿದ್ದಾರೆ.

2023ರ ಮೊದಲ ಮೂರು ತಿಂಗಳುಗಳಲ್ಲಿ ಹಣಕಾಸು ವಲಯದ ಯಾವ ಷೇರುಗಳನ್ನು ಮಾರಾಟ ಮಾಡಿದ್ದರೋ ಇದೀಗ ಅದೇ ಷೇರುಗಳನ್ನು ಮರಳಿ ಖರೀದಿಸುತ್ತಿದ್ದಾರೆ ಎಂದು ಅವರು ಹೇಳಿದ್ದಾರೆ.

ಜಾಗತಿಕ ಮಾರುಕಟ್ಟೆಯಲ್ಲಿ ನಡೆದ ನಕಾರಾತ್ಮಕ ವಹಿವಾಟು ಮತ್ತು ವಿದೇಶಿ ಬಂಡವಾಳ ಹೂಡಿಕೆದಾರರು ಮಾರಾಟಕ್ಕೆ ಒತ್ತು ನೀಡಿದ್ದರಿಂದಾಗಿ ದೇಶದ ಷೇರುಪೇಟೆಗಳಲ್ಲಿ ಗುರುವಾರ ಮತ್ತು ಶುಕ್ರವಾರ ನಕಾರಾತ್ಮಕ ವಹಿವಾಟು ನಡೆಯಿತು.



ಎರಡು ಕುಟುಂಬಗಳ ವಿರುದ್ಧದ ಎಫ್‌ಐಆರ್ ರದ್ದುಪಡಿಸಿದ ದೆಹಲಿ ಹೈಕೋರ್ಟ್

ಬಡಿದಾಡಿಕೊಂಡವರಿಗೆ ಸಸಿ ನೆಡುವ 'ಶಿಕ್ಷೆ'

ಮುಖ್ಯಾಂಶಗಳು
- 400 ಸಸಿ ನೆಡುವಂತೆ ದೆಹಲಿ ಹೈಕೋರ್ಟ್ ಸೂಚನೆ
- ಆರು ವರ್ಷಗಳ ಹಿಂದಿನ ಪ್ರಕರಣ

ನವದೆಹಲಿ (ಪಿಟಿಐ): ಪರಸ್ಪರ ಬಡಿದಾಡಿಕೊಂಡು ನಂತರ ವ್ಯಾಜ್ಯ ಬಗೆಹರಿಸಿಕೊಂಡಿದ್ದ ಎರಡು ಕುಟುಂಬಗಳ ಸದಸ್ಯರಿಗೆ, '400 ಸಸಿಗಳನ್ನು ನೆಟ್ಟು ನಿಮ್ಮೊಳಗಿನ 'ನಕಾರಾತ್ಮಕ ಶಕ್ತಿ'ಯನ್ನು ಕೊನೆಗಾಣಿಸಿಕೊಳ್ಳಿ' ಎಂದು ದೆಹಲಿ ಹೈಕೋರ್ಟ್ ಸೂಚಿಸಿದೆ.

ಆರು ವರ್ಷಗಳ ಹಿಂದಿನ ಪ್ರಕರಣದಲ್ಲಿ, ಎರಡು ಕುಟುಂಬಗಳ ವಿರುದ್ಧ ದಾಖಲಾಗಿದ್ದ ಎಫ್‌ಐಆರ್‌ಗಳನ್ನು ಕೂಡ ಹೈಕೋರ್ಟ್ ರದ್ದುಗೊಳಿಸಿದೆ.

ಎರಡೂ ಕುಟುಂಬಗಳು ತಾವು ವಾಸಿಸುವ ಪ್ರದೇಶದಲ್ಲಿ ತಲಾ 200 ಸಸಿಗಳನ್ನು ನೆಟ್ಟು, ಐದು ವರ್ಷಗಳವರೆಗೆ ಅವುಗಳ ಪೋಷಣೆ ಮಾಡಬೇಕು ಎಂದು ನ್ಯಾಯಮೂರ್ತಿ ದಿನೇಶ್‌ಕುಮಾರ್ ಶರ್ಮಾ ನಿರ್ದೇಶನ ನೀಡಿದ್ದಾರೆ.

'ತೋಟಗಾರಿಕೆ ಇಲಾಖೆ ಜೊತೆಗೆ ಸಮಾಲೋಚನೆ ನಡೆಸಿದ ಬಳಿಕ ಸಸಿಗಳನ್ನು ನೆಡುವ ಸ್ಥಳಗಳ ಕುರಿತು ತನಿಖಾಧಿಕಾರಿ ನಿರ್ಧಾರ ಕೈಗೊಳ್ಳಬೇಕು. ಈ ಕುರಿತು 15 ದಿನ ಮುಂಚಿತವಾಗಿ ಅರ್ಜಿದಾರರಿಗೆ ಮಾಹಿತಿ ನೀಡಬೇಕು' ಎಂದೂ ಸೂಚಿಸಿದ್ದಾರೆ.



'ಸಸಿಗಳ ನಿರ್ವಹಣೆ ಕುರಿತು ಮೇಲ್ವಿಚಾರಣೆಗಾಗಿ ಜಿಯೊ–ಟ್ಯಾಗ್ ಅಳವಡಿಸಲು ಸಾಧ್ಯವೇ ಎಂಬ ಬಗ್ಗೆಯೂ ತನಿಖಾಧಿಕಾರಿ ಪರಿಶೀಲಿಸಬೇಕು. ಕ್ರಮ ಕೈಗೊಂಡ ಬಗ್ಗೆ ನವೆಂಬರ್‌ನಲ್ಲಿ ವರದಿ ಸಲ್ಲಿಸಬೇಕು' ಎಂದು ಹೇಳಿದ್ದಾರೆ.

ಪ್ರಕರಣವೇನು: ಆರು ವರ್ಷಗಳ ಹಿಂದಿನ ಪ್ರಕರಣವಿದು. '2017ರ ಮಾರ್ಚ್ 4ರಂದು ಆ (ಪ್ರತಿವಾದಿ) ಕುಟುಂಬದ ಮೂವರು ನನ್ನ ಮನೆಗೆ ಬಂದಿದ್ದರು. ರಾಜಕೀಯ ಪಕ್ಷವೊಂದರ ಅಭ್ಯರ್ಥಿ ವಿತರಿಸುತ್ತಿರುವ ಹೊದಿಕೆಗಳನ್ನು ನೀಡುವ ಸಂಬಂಧ ಗುರುತಿನ ಚೀಟಿ ನೀಡುವಂತೆ ಕೇಳಿದ್ದರು. ಅವರು ಬೇರೆ ರಾಜಕೀಯ ಪಕ್ಷವೊಂದರ ಬೆಂಬಲಿಗರಾಗಿದ್ದರಿಂದ ಅವರೊಂದಿಗೆ ಮಾತಿನ ಚಕಮಕಿ ನಡೆದು, ನಂತರ ಬಡಿದಾಟ ನಡೆದಿತ್ತು' ಎಂದು ದೂರುದಾರರು ಹೇಳಿದ್ದಾಗಿ ಮೊದಲ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿತ್ತು.

ಪ್ರತಿವಾದಿಗಳ ನೀಡಿದ ದೂರಿನ ಅನ್ವಯ ದಾಖಲಾಗಿದ್ದ ಮತ್ತೊಂದು ಎಫ್‌ಐಆರ್‌ನಲ್ಲಿ, 'ಹೊದಿಕೆಗಳ ವಿತರಣೆಗಾಗಿ ಗುರುತಿನ ಚೀಟಿಗಳನ್ನು ಸಂಗ್ರಹಿಸುತ್ತಿದ್ದಾಗ ಆ ಕುಟುಂಬದ (ದೂರುದಾರರು) ಸದಸ್ಯರು ಜಗಳ ಮಾಡಿ, ನಮ್ಮನ್ನು ಹೊಡೆದರು' ಎಂದು ವಿವರಿಸಲಾಗಿತ್ತು. ಕಳೆದ ಜನವರಿಯಲ್ಲಿ ಎರಡೂ ಕುಟುಂಬಗಳು ಸಂಧಾನ ಮಾಡಿಕೊಂಡಿದ್ದವು.

'ಯಾವುದೇ ಭಯ, ಒತ್ತಡ ಅಥವಾ ಬಲವಂತವಿಲ್ಲದೇ, ಸ್ವಯಂ ಪ್ರೇರಿತವಾಗಿ ವಿಷಯವನ್ನು ಇತ್ಯರ್ಥಪಡಿಸಿಕೊಂಡಿದ್ದೇವೆ' ಎಂದು ಎರಡೂ ಕುಟುಂಬಗಳು ನ್ಯಾಯಾಲಯಕ್ಕೆ ತಿಳಿಸಿದ್ದವು.

ಎಂಆರ್‌ಪಿಎಲ್ ಲಾಭ ₹ 1,013 ಕೋಟಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಮಂಗಳೂರು ರಿಫೈನರಿ ಮತ್ತು ಪೆಟ್ರೋಕೆಮಿಕಲ್ಸ್ ಲಿಮಿಟೆಡ್ (ಎಂಆರ್‌ಪಿಎಲ್), 2023–24ರ ಮೊದಲ ತ್ರೈಮಾಸಿಕದಲ್ಲಿ ತೆರಿಗೆ ಕಳೆದು ₹ 1,013 ಕೋಟಿ ಲಾಭ ಗಳಿಸಿದೆ. 2022–23ನೇ ಸಾಲಿನ ಮೊದಲ ಮೂರು ತಿಂಗಳಿನಲ್ಲಿ ಕಂಪನಿಯು ₹ 2,707 ಕೋಟಿ ಲಾಭ ಗಳಿಸಿತ್ತು.

2023–24ರ ಮೊದಲ ತ್ರೈಮಾಸಿಕದಲ್ಲಿ 43.6 ಲಕ್ಷ ಟನ್ ನಿರ್ವಹಣೆ ಮಾಡುವ ಮೂಲಕ ಸಂಸ್ಕರಣಾ ಘಟಕವು ಇದುವರೆಗಿನ ಗರಿಷ್ಠ ಸಾಧನೆ ಮಾಡಿದೆ. ಈ ಸಂಸ್ಕರಣಾ ಘಟಕವನ್ನು ಅದರ ಸಾಮರ್ಥ್ಯದ ಶೇ 116.26ರಷ್ಟನ್ನು ಈ ಅವಧಿಯಲ್ಲಿ ಬಳಕೆ ಮಾಡಿಕೊಂಡಿದೆ. ಈ ಘಟಕದ ವಾರ್ಷಿಕ ನಿರ್ವಹಣಾ ಸಾಮರ್ಥ್ಯ 150 ಲಕ್ಷ ಟನ್.

ಕಾರ್ಯಾಚರಣಾ ವರಮಾನ 2023–24ರ ಮೊದಲ ತ್ರೈಮಾಸಿಕದಲ್ಲಿ ₹ 24,832 ಕೋಟಿಗೆ ಇಳಿಕೆಯಾಗಿದೆ. 2022–23ನೇ ಸಾಲಿನ ಮೊದಲ ತ್ರೈಮಾಸಿಕದಲ್ಲಿ ಕಂಪನಿ ಕಾರ್ಯಚರಣಾ ವರಮಾನ ₹ 35,915 ಕೋಟಿ ಆಗಿತ್ತು. ಕಂಪನಿಯು ರಫ್ತಿನ ಮೂಲಕ ₹ 6,907 ಕೋಟಿ ವರಮಾನ ಗಳಿಸಿದೆ. ಕಳೆದ ಸಾಲಿನಲ್ಲಿ ಈ ಅವಧಿಯಲ್ಲಿ ₹ 14,765 ಕೋಟಿ ವರಮಾನ ಗಳಿಸಿತ್ತು ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ.

ಚಿನ್ನ, ಬೆಳ್ಳಿ ಧಾರಣೆ

ಬೆಂಗಳೂರು

ಸ್ಟ್ಯಾಂಡರ್ಡ್ ಚಿನ್ನ 10ಗ್ರಾಂ	₹61,560
ಒಡವೆ ಚಿನ್ನ 1ಗ್ರಾಂ	₹5,694
ಬೆಳ್ಳಿ ಕೆ.ಜಿಗೆ	₹75,900

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹465
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹465

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್‌-4	₹149.50
ಆರ್‌ಎಸ್‌ಎಸ್‌-5	₹144.50
ಗುಡ್ ಲಾಟ್	₹127.50

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1870 (1850)
ಸೋಯಾ (ರಿಫೈನ್ಡ್)	₹970 (975)
ಸೂರ್ಯಕಾಂತಿ (ರಿಫೈನ್ಡ್)	₹985 (985)
ಪಾಮೋಲಿನ್	₹887 (894)

ಯುನೈಟೆಡ್ ಬ್ರೀವರೀಸ್ ಲಾಭ ಇಳಿಕೆ

ನವದೆಹಲಿ (ಪಿಟಿಐ): ಬಿಯರ್ ತಯಾರಿಸುವ ಕಂಪನಿ ಯುನೈಟೆಡ್ ಬ್ರೀವರೀಸ್ ಲಿಮಿಟೆಡ್‌ನ ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ಶೇ 16.09ರಷ್ಟು ಇಳಿಕೆ ಕಂಡಿದ್ದು ₹136.34 ಕೋಟಿಗೆ ತಲುಪಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹162.50 ಕೋಟಿ ಲಾಭ ಆಗಿತ್ತು ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಪೂರೈಕೆ ವ್ಯವಸ್ಥೆಯಲ್ಲಿನ ಸವಾಲುಗಳು, ಹಣದುಬ್ಬರ ಹಾಗೂ ರಾಜ್ಯಗಳ ಮಧ್ಯೆ ಮಾರಾಟ ಕಡಿಮೆ ಆಗಿರುವ ಕಾರಣಗಳಿಂದಾಗಿ ಲಾಭದಲ್ಲಿ ಇಳಿಕೆ ಆಗಿದೆ ಎಂದು ಕಂಪನಿಯು ಹೇಳಿದೆ.

ಕಂಪನಿಯ ಕಾರ್ಯಾಚರಣಾ ವರಮಾನ ₹5,243 ಕೋಟಿಯಷ್ಟು ಆಗಿದೆ. ಹಿಂದಿನ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ₹5,196 ಕೋಟಿಯಷ್ಟು ಇತ್ತು.

ತಮಿಳುನಾಡು, ಆಂಧ್ರಪ್ರದೇಶ, ದೆಹಲಿ ಮತ್ತು ಹರಿಯಾಣ ರಾಜ್ಯಗಳಲ್ಲಿ ಮಾರಾಟ ಕಡಿಮೆ ಆಗಿರುವುದರಿಂದ ಒಟ್ಟು ಮಾರಾಟದ ಪ್ರಮಾಣವು ಶೇ 12ರಷ್ಟು ಇಳಿಕೆ ಕಂಡಿದೆ. ಪ್ರೀಮಿಯಂ ವಿಭಾಗದಲ್ಲಿ ಮಾರಾಟದ ಪ್ರಮಾಣ ಶೇ 21ರಷ್ಟು ಇಳಿಕೆ ಆಗಿದೆ ಎಂದು ಹೇಳಿದೆ.

ಕಂಪನಿಯ ಒಟ್ಟು ವೆಚ್ಚವು ಶೇ 1.69ರಷ್ಟು ಹೆಚ್ಚಾಗಿದ್ದು ₹5,072.96 ಕೋಟಿಗೆ ತಲುಪಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ ಸಕಲೇಶಪುರ		1600-1800	ಕಾಳುಮೆಣಸು 530
ಕೂಳೆ	500-550		
ನಡುಗೋಲು	600-650		
ರಾಶಿ	700-800		
ರಾಶಿ ಉತ್ತಮ	900-950		
ಜರಡಿ	1000-1050		
ಹೆರಕಿದ್ದು	1300-1400		
ಹಸಿರು ಸಾಧಾರಣ	1000-1100		
ಹಸಿರು ಉತ್ತಮ	1250-1350		
ಹಸಿರು ಅತಿ ಉತ್ತಮ			

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13800	13900	14000	157.90 ಸೆಂಟ್ಸ್
ಎಸಿ	7000	6900	7000	
ಆರ್‌ಪಿ	10100	10200	10200	ಲಂಡನ್
ಆರ್‌ಸಿ	6090	246	6000	2588 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ 29-07-2023

ಜಾವಾ 70/80(ಹೊಸ)	12600-12700
ಜಾವಾ 80/90(ಹೊಸ)	12100-12200
ದಪ್ಪ ಮಧ್ಯಪ್ರದೇಶ(ಹೊಸ)	12100-12200
ದಪ್ಪ ಗುಜರಾತ್(ಹೊಸ)	12900-13000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1880 (1860)
ಒಂದು ವಾರದ ಡೆಲಿವರಿ	1875 (1855)
ಸೋಯಾ ಕಚ್ಚಾ	930 (935)
ಪಾಮ್ ವಾರದ ಡೆಲಿವರಿ	885 (892)
ಸೂರ್ಯಕಾಂತಿ ಎಣ್ಣೆ ಕಚ್ಚಾ	940 (940)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 59,350 (59,200)
ಬೆಳ್ಳಿ ಕೆ.ಜಿ 73,500 (73,400)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಹಾಸ್ಟೆಲ್ ಬಾಡಿಗೆಗೆ ಶೇ 12 ಜಿಎಸ್‌ಟಿ

ಒಂದನೇ ಪುಟದಿಂದ

ಪಿ.ಜಿ./ಹಾಸ್ಟೆಲ್‌ನಲ್ಲಿ ವಾಸ ಇರುವವರು ಪಾವತಿಸುವ ಬಾಡಿಗೆಯು ಜಿಎಸ್‌ಟಿ ವಿನಾಯಿತಿಗೆ ಒಳಪಡುವುದಿಲ್ಲ ಎಂದು ಬೆಂಗಳೂರು ಪೀಠವು ಸ್ಪಷ್ಟಪಡಿಸಿದೆ.

ಮನೆಯು ಶಾಶ್ವತವಾಗಿ ನೆಲೆ ನಿಲ್ಲಲು ಇರುವ ವ್ಯವಸ್ಥೆ ಆಗಿದೆ. ಗೆಸ್ಟ್ ಹೌಸ್, ಲಾಡ್ಜ್ ಮುಂತಾದವನ್ನು ಈ ರೀತಿ ಪರಿಗಣಿಸಲು ಆಗುವುದಿಲ್ಲ. ಅರ್ಜಿದಾರರು, ಪಿ.ಜಿ./ಹಾಸ್ಟೆಲ್ ಸೇವೆಗಳನ್ನು ನೀಡುತ್ತಿರುವುದಾಗಿ ಹೇಳಿದ್ದಾರೆ. ಹೀಗಾಗಿ ಅದನ್ನು ವಾಸ ಮಾಡುವ ಮನೆ ಎಂದು ಹೇಳಲು ಆಗುವುದಿಲ್ಲ ಎಂದು ಪೀಠವು ಸ್ಪಷ್ಟಪಡಿಸಿದೆ.

ನೊಯಿಡಾ ಮೂಲದ ವಿ.ಎಸ್. ಇನ್‌ಸ್ಟಿಟ್ಯೂಟ್ ಆ್ಯಂಡ್ ಹಾಸ್ಟೆಲ್ ಪ್ರೈವೇಟ್ ಲಿಮಿಟೆಡ್‌ನ ಅರ್ಜಿಯ ವಿಚಾರಣೆ ನಡೆಸಿದ ಎಎಆರ್‌ನ ಲಖನೌ ಪೀಠವು ಸಹ ಇದೇ ಅಭಿಪ್ರಾಯ ವ್ಯಕ್ತಪಡಿಸಿತ್ತು.

ತಿಪಟೂರು ಕೊಬ್ಬರಿ (ಕ್ವಿಂಟಲ್‌ಗೆ)

ಕನಿಷ್ಠ	₹8,500
ಗರಿಷ್ಠ	₹9,800
ಮಾದರಿ	₹9,800

ಭಾರತೀಯರಿಗೆ ಗ್ರೀನ್ ಕಾರ್ಡ್: ಅವಧಿ ಕಡಿತಕ್ಕೆ ಮನವಿ

ವಾಷಿಂಗ್ಟನ್ (ಪಿಟಿಐ): ಅಮೆರಿಕದಲ್ಲಿ ಕಾಯಂ ಆಗಿ ನೆಲೆಸಲು ಅಗತ್ಯವಿರುವ ಗ್ರೀನ್ ಕಾರ್ಡ್‌ಗಾಗಿ ಅರ್ಜಿ ಸಲ್ಲಿಸಿರುವ ಭಾರತೀಯರು ಬಹಳ ವರ್ಷಗಳವರೆಗೆ ಕಾಯಬೇಕಾಗಿದೆ. ಈ ಕಾಯುವಿಕೆ ಅವಧಿ ಕಡಿತಗೊಳಿಸುವಂತೆ ಸಂಸದರ ಗುಂಪೊಂದು ಸರ್ಕಾರಕ್ಕೆ ಮನವಿ ಮಾಡಿದೆ.

ಸಂಸದರಾದ ರಾಜಾ ಕೃಷ್ಣಮೂರ್ತಿ ಹಾಗೂ ಲ್ಯಾರಿ ಬುಷಾನ್ ನೇತೃತ್ವದಲ್ಲಿ ಎರಡೂ ಪಕ್ಷಗಳಿಗೆ ಸೇರಿರುವ 56 ಸಂಸದರು ವಿದೇಶಾಂಗ ಕಾರ್ಯದರ್ಶಿ ಆಂಟನಿ ಬ್ಲಿಂಕೆನ್, ಆಂತರಿಕ ಭದ್ರತೆ ಕಾರ್ಯದರ್ಶಿ ಅಲೆಜಾಂಡ್ರೊ ಮೇಯರ್‌ಕಾಸ್ ಅವರಿಗೆ ಪತ್ರ ಬರೆದಿದ್ದಾರೆ.

ವಿಶೇಷ ಕೌಶಲ ಹೊಂದಿದ ವಿದೇಶಿಯರನ್ನು ನೇಮಕ ಮಾಡಿಕೊಳ್ಳಲು ಅಮೆರಿಕದ ಕಂಪನಿಗಳಿಗೆ ಅವಕಾಶವಿದೆ. ಈ ಕಂಪನಿಗಳಲ್ಲಿ ಉದ್ಯೋಗಕ್ಕೆ ಸೇರುವವರಿಗೆ ಎಚ್–1ಬಿ ವೀಸಾ ನೀಡಲಾಗುತ್ತದೆ. ಈ ವೀಸಾ ಹೊಂದಿರುವವರು ನಂತರ ಗ್ರೀನ್ ಕಾರ್ಡ್‌ಗಾಗಿಯೂ ಅರ್ಜಿ ಸಲ್ಲಿಸಬಹುದು.

ಸದ್ಯ, ಗ್ರೀನ್‌ಕಾರ್ಡ್‌ಗಾಗಿ ಅರ್ಜಿ ಸಲ್ಲಿಸಿ ಕಾಯುತ್ತಿರುವ ಭಾರತೀಯರ ಸಂಖ್ಯೆ ದೊಡ್ಡದು. ಶೇ 7ರ ಮಿತಿ ಹಾಗೂ ಬಾಕಿ ಇರುವ ಅರ್ಜಿಗಳನ್ನು ಪರಿಗಣಿಸಿದಲ್ಲಿ, ಈ ಕಾಯುವಿಕೆ ಅವಧಿ 195 ವರ್ಷಗಳಾಷ್ಟಗಲಿದೆ ಎಂದು ಅಧ್ಯಕ್ಷ ಜೋ ಬೈಡನ್ ಅವರಿಗೆ ಫೌಂಡೇಷನ್ ಫಾರ್ ಇಂಡಿಯಾ ಅಂಡ್ ಇಂಡಿಯನ್ ಡಯಾಸ್ಪೊರಾ ಸ್ಟಡೀಸ್ (ಎಫ್‌ಐಐಡಿಎಸ್) ಎಂಬ ಸಂಘಟನೆ ಮನವಿಯಲ್ಲಿ ವಿವರಿಸಿದೆ.

ಬಾಂಗ್ಲಾ ಪ್ರಧಾನಿ ರಾಜೀನಾಮೆಗೆ ಆಗ್ರಹಿಸಿ ಕಲ್ಲು ತೂರಾಟ

ಢಾಕಾ (ಎಎಫ್‌ಪಿ): ಪ್ರಧಾನಿ ರಾಜೀನಾಮೆಗೆ ಆಗ್ರಹಿಸಿ ರಾಜಧಾನಿಯ ವಿವಿಧೆಡೆ ಶನಿವಾರ ರಸ್ತೆತಡೆ ನಡೆಸಿ, ಕಲ್ಲು ತೂರಾಟ ನಡೆಸಿದ ಪ್ರತಿಭಟನಕಾರರನ್ನು ಚದುರಿಸಲು ಪೊಲೀಸರು ರಬ್ಬರ್ ಗುಂಡುಗಳು ಮತ್ತು ಅಶ್ರುವಾಯು ಶೆಲ್‌ಗಳನ್ನು ಪ್ರಯೋಗಿಸಿದ್ದಾರೆ.

ಪ್ರಧಾನಿ ಶೇಖ್ ಹಸೀನಾ ಅಧಿಕಾರದಿಂದ ಕೆಳಗಿಳಿಯಬೇಕು ಮತ್ತು ಮುಂದಿನ ಜನವರಿಯಲ್ಲಿ ನಡೆಯಲಿರುವ ಚುನಾವಣೆಗಳ ಮೇಲ್ವಿಚಾರಣೆಗೆ ಉಸ್ತುವಾರಿ ಸರ್ಕಾರಕ್ಕೆ ಅವಕಾಶ ನೀಡಬೇಕು ಎಂದು ಒತ್ತಾಯಿಸಿ ಪ್ರತಿಪಕ್ಷ ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಾರ್ಟಿ (ಬಿಎನ್‌ಪಿ) ಮತ್ತು ಅದರ ಮಿತ್ರಪಕ್ಷಗಳು ಸರಣಿ ಪ್ರತಿಭಟನೆ ನಡೆಸುತ್ತಿವೆ.

ಬಿಎನ್‌ಪಿ ಕಾರ್ಯಕರ್ತರು ನಾಲ್ಕು ಬಸ್, ಪೊಲೀಸ್ ಕಾರಿಗೆ ಬೆಂಕಿ ಹಚ್ಚಿದರು. ಇತರೆ ವಾಹನಗಳಿಗೂ ಹಾನಿ ಮಾಡಿದ್ದಾರೆ. ಪೆಟ್ರೋಲ್ ಬಾಂಬ್‌ಗಳನ್ನು ಸ್ಫೋಟಿಸಿದ್ದಾರೆ. ಪೊಲೀಸರ ಮೇಲೆ ಕಲ್ಲು ತೂರಿದ್ದಾರೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ರಾಜಧಾನಿ ಮತ್ತು ದೇಶದ ಇತರ ಭಾಗಗಳ ನಡುವಿನ ಸಾರಿಗೆ ಸಂಪರ್ಕ ಅಸ್ತವ್ಯಸ್ತಗೊಂಡಿದ್ದು, ಟ್ರಕ್‌ಗಳು ಮತ್ತು ಬಸ್ಸುಗಳು ಸಂಚಾರ ದಟ್ಟಣೆಯಲ್ಲಿ ಸಿಲುಕಿಕೊಂಡಿವೆ.



ಪ್ರಧಾನಿ ಶೇಖ್ ಹಸಿನಾ ರಾಜೀನಾಮೆಗೆ ಆಗ್ರಹಿಸಿ ಢಾಕಾದಲ್ಲಿ ಪ್ರತಿಭಟನೆ ನಡೆಸುತ್ತಿದ್ದ ಬಿಎನ್‌ಪಿ ಕಾರ್ಯಕರ್ತರು ಹಾಗೂ ಪೊಲೀಸರ ನಡುವೆ ಘರ್ಷಣೆ ನಡೆದಿದೆ –ಎಎಫ್‌ಪಿ ಚಿತ್ರ

'ಪ್ರತಿಭಟನಕಾರರು ಪೊಲೀಸರ ಮೇಲೆ ದಾಳಿ ನಡೆಸಿದರು. ಘಟನೆಯಲ್ಲಿ 20 ಅಧಿಕಾರಿಗಳು ಗಾಯಗೊಂಡಿದ್ದು, 90 ಬಿಎನ್‌ಪಿ ಕಾರ್ಯಕರ್ತರನ್ನು ಬಂಧಿಸಲಾಗಿದೆ. ಪರಿಸ್ಥಿತಿ ನಿಯಂತ್ರಿಸಲು ಅಶ್ರುವಾಯು ಶೆಲ್ ಸಿಡಿಸಲಾಗಿದೆ ಮತ್ತು ರಬ್ಬರ್ ಗುಂಡುಗಳನ್ನು ಹಾರಿಸಿದ್ದೇವೆ' ಎಂದು ಢಾಕಾ ಮೆಟ್ರೊಪಾಲಿಟನ್ ಪೊಲೀಸ್ ವಕ್ತಾರ ಫಾರೂಕ್ ಹುಸೇನ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ನಗರದ ಸುತ್ತಮುತ್ತಲಿನ ನಾಲ್ಕು ಪ್ರತಿಭಟನಾ ಸ್ಥಳಗಳಲ್ಲಿ ಪೊಲೀಸರು ಮತ್ತು ಪ್ರತಿಭಟನಾಕಾರರ ನಡುವೆ ಘರ್ಷಣೆ ನಡೆದಿದೆ ಎಂದು ಹೇಳಿದ್ದಾರೆ.

ಬಿಎನ್‌ಪಿಯ ಹಿರಿಯ ನಾಯಕರನ್ನು ವಶಕ್ಕೆ ಪಡೆದು, ಬಿಡುಗಡೆ ಮಾಡಲಾಗಿದೆ. ಗಾಯಗೊಂಡಿರುವ 6 ಮಂದಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ. ಘಟನೆಯಲ್ಲಿ ಹಲವು ಕಾರ್ಯಕರ್ತರು ಗಾಯಗೊಂಡಿದ್ದಾರೆ ಎಂದು ಬಿಎನ್‌ಪಿ ಆರೋಪಿಸಿದೆ.

ಕೊಲಂಬಿಯಾ ಅಧ್ಯಕ್ಷರ ಪುತ್ರನ ಬಂಧನ

ಬೊಗೋಟಾ (ಕೊಲಂಬಿಯಾ) (ಎಪಿ): ಹಣ ಅಕ್ರಮ ವರ್ಗಾವಣೆ ಪ್ರಕರಣದ ತನಿಖೆ ಸಂಬಂಧ ಕೊಲಂಬಿಯಾ ಅಧ್ಯಕ್ಷ ಗುಸ್ಟಾವೊ ಪೆಟ್ರೋ ಅವರ ಪುತ್ರ ನಿಕೋಲಸ್ ಪೆಟ್ರೊ ಅವರನ್ನು ಕೊಲಂಬಿಯಾ ಪೊಲೀಸರು ಶನಿವಾರ ಬಂಧಿಸಿದ್ದಾರೆ.

ಕಳೆದ ವರ್ಷ ಅಧ್ಯಕ್ಷೀಯ ಚುನಾವಣಾ ಪ್ರಚಾರದ ವೇಳೆ ಅಕ್ರಮವಾಗಿ ದೇಣಿಗೆ ಸಂಗ್ರಹಿಸಿರುವ ಆರೋಪ ಇವರ ಮೇಲಿತ್ತು. ಬೊಗೋಟಾದ ನ್ಯಾಯಾಲಯದ ಆದೇಶದ ಮೇರೆಗೆ ನಿಕೋಲಸ್ ಮತ್ತು ಅವರ ಮಾಜಿ ಪತ್ನಿಯನ್ನು ವಶಕ್ಕೆ ಪಡೆಯಲಾಗಿದೆ ಎಂದು ಮುಖ್ಯ ಪ್ರಾಸಿಕ್ಯೂಟರ್ ಕಚೇರಿ ಹೇಳಿಕೆಯಲ್ಲಿ ತಿಳಿಸಿದೆ.

ಮೂತ್ರ ಕುಡಿಸಿದ್ದ ಆರೋಪ: ಐವರ ಬಂಧನ

ಕಾಸಗಂಜ್ (ಉತ್ತರಪ್ರದೇಶ) (ಪಿಟಿಐ): ವ್ಯಕ್ತಿಯ ತಲೆ ಬೋಳಿಸಿ, ಆತನಿಗೆ ಮೂತ್ರ ಕುಡಿಸಿದ್ದ ಆರೋಪದ ಮೇಲೆ ಮೂವರು ಲಿಂಗತ್ವ ಅಲ್ಪಸಂಖ್ಯಾತರು ಸೇರಿದಂತೆ ಐದು ಜನರನ್ನು ಪೊಲೀಸರು ಶನಿವಾರ ಬಂಧಿಸಿದ್ದಾರೆ.

ಜುಲೈ 26ರಂದು ನಡೆದಿದ್ದ ಘಟನೆಗೆ ಸಂಬಂಧಿಸಿದ್ದು ಎನ್ನಲಾದ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದ ಬೆನ್ನಲ್ಲೇ ಪೊಲೀಸರು ಕ್ರಮ ತೆಗೆದುಕೊಂಡಿದ್ದಾರೆ. ರಫೀಕ್ ಉಲ್ ಎಂಬಾತ ದೂರು ನೀಡಿದ್ದಾರೆ. ಬಂಧಿತರ ಪೈಕಿ ಒಬ್ಬ ಲಿಂಗತ್ವ ಅಲ್ಪಸಂಖ್ಯಾತನ ಮನೆಯಲ್ಲಿ ರಫೀಕ್ ಅಡುಗೆ ಕೆಲಸಕ್ಕಿದ್ದರು. ಕ್ಷುಲ್ಲಕ ಕಾರಣಕ್ಕೆ ಆರೋಪಿಗಳು ಆತನ ತಲೆ ಬೋಳಿಸಿ ನಂತರ ಮೂತ್ರ ಕುಡಿಸಿದ್ದಾರೆ ಎನ್ನಲಾಗಿದೆ.

ಪಟಾಕಿ ತಯಾರಿಕಾ ಘಟಕದಲ್ಲಿ ಸ್ಫೋಟ: 9 ಮಂದಿ ಸಾವು

ಕೃಷ್ಣಗಿರಿ (ಪಿಟಿಐ): ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯಲ್ಲಿರುವ ಪಟಾಕಿ ತಯಾರಿಕಾ ಘಟಕ ಮತ್ತು ಅಂಗಡಿಯಲ್ಲಿ ಸ್ಫೋಟ ಸಂಭವಿಸಿ ಮೂವರು ಮಹಿಳೆಯರು ಸೇರಿ ಕನಿಷ್ಠ ಒಂಬತ್ತು ಮಂದಿ ಮೃತಪಟ್ಟು, ಹತ್ತು ಮಂದಿ ಗಾಯಗೊಂಡಿದ್ದಾರೆ.

'ಬೆಂಗಳೂರಿನಿಂದ 95 ಕಿ.ಮೀ ದೂರದಲ್ಲಿರುವ ಬೋಗನಪಲ್ಲಿಯಲ್ಲಿರುವ ಪಟಾಕಿ ತಯಾರಿಕಾ ಗೋದಾಮಿನಲ್ಲಿ ಶನಿವಾರ ಬೆಳಿಗ್ಗೆ 9.45ರ ಸುಮಾರಿಗೆ ಸ್ಫೋಟ ಸಂಭವಿಸಿದೆ. ಪರಿಣಾಮ ಮೃತದೇಹಗಳು ಛಿದ್ರಛಿದ್ರವಾಗಿ ಸುಮಾರು 200 ಅಡಿ ದೂರದ ವರೆಗೆ ಹಾರಿ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಸಮೀಪದಲ್ಲಿದ್ದ ರೆಸ್ಟೋರೆಂಟ್ ಮತ್ತು ವೆಲ್ಡಿಂಗ್ ಶಾಪ್ ಸಂಪೂರ್ಣ ಭಗ್ನಾವಶೇಷಗೊಂಡಿವೆ.

'ಗಾಯಗೊಂಡವರು ಕೃಷ್ಣಗಿರಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಜಿಲ್ಲಾಡಳಿತದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಅಗ್ನಿಶಾಮಕ ಸಿಬ್ಬಂದಿ ಕೂಡಲೇ ಸ್ಥಳಕ್ಕೆ ದೌಡಾಯಿಸಿ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದರು. 'ಬೆಳಿಗ್ಗೆ ವಾಣಿಜ್ಯ ಸಂಕೀರ್ಣದಲ್ಲಿ ಬೃಹತ್ ಸ್ಫೋಟ ಕೇಳಿಬಂತು' ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

'ಪಟಾಕಿ ಗೋದಾಮಿನಲ್ಲಿ ಮೊದಲು ಸ್ಫೋಟ ಆರಂಭವಾಗಿದೆ. ನಂತರ ಅದು ಪಕ್ಕದ ಅಂಗಡಿ ಮತ್ತು ರೆಸ್ಟೋರೆಂಟ್‌ಗೆ ವ್ಯಾಪಿಸಿದೆ. ಸ್ಫೋಟಕ್ಕೆ ಕಾರಣ ಏನೆಂದು ತಕ್ಷಣಕ್ಕೆ ತಿಳಿದುಬಂದಿಲ್ಲ. ತನಿಖೆ ಬಳಿಕ ಕಾರಣ ಗೊತ್ತಾಗಲಿದೆ' ಎಂದು ಜಿಲ್ಲಾಧಿಕಾರಿ ಕೆ.ಎಂ.ಸರಯು ತಿಳಿಸಿದ್ದಾರೆ.

ಪ್ರಧಾನಿ ಮೋದಿ ಮೃತರ ಕುಟುಂಬಸ್ಥರಿಗೆ ತಲಾ ₹2 ಲಕ್ಷ ಮತ್ತು ಗಾಯಾಳುಗಳಿಗೆ ತಲಾ ₹50 ಸಾವಿರ ಪರಿಹಾರ ಘೋಷಿಸಿದ್ದಾರೆ. ಸ್ಟಾಲಿನ್ ಅವರು ಮೃತರ ಕುಟುಂಬಸ್ಥರಿಗೆ ತಲಾ ₹3 ಲಕ್ಷ ಮತ್ತು ಗಾಯಾಳುಗಳಿಗೆ ತಲಾ ಒಂದು ಲಕ್ಷ ಘೋಷಿಸಿದ್ದಾರೆ.

ಗೋದಾಮಿನಲ್ಲಿ ಸ್ಫೋಟ: 9 ಸಾವು

ಬ್ಯಾಂಕಾಕ್ (ಎಪಿ): ದಕ್ಷಿಣ ಥಾಯ್ಲೆಂಡ್‌ನ ಪಟಾಕಿ ಗೋದಾಮಿನಲ್ಲಿ ಶನಿವಾರ ಸ್ಫೋಟ ಸಂಭವಿಸಿ ಕನಿಷ್ಠ 9 ಜನರು ಮೃತಪಟ್ಟಿದ್ದಾರೆ ಮತ್ತು ನೂರಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಘಟನೆಯಲ್ಲಿ 115 ಜನ ಗಾಯಗೊಂಡಿದ್ದಾರೆ. ಹಲವರ ಸ್ಥಿತಿ ಗಂಭೀರವಾಗಿದೆ. ಸುಮಾರು 500 ರಿಂದ 800 ಸ್ಥಳೀಯರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲಾಗಿದೆ ಎಂದು ನರಾಥಿವಾಸ್ ಪ್ರಾಂತ್ಯದ ಗವರ್ನರ್ ಸನನ್ ಪೊಂಗಕ್ಸೋನ್ ಅವರು ಥಾಯ್ ಪಿಬಿಎಸ್ ವಾಹಿನಿ ವರದಿ ಮಾಡಿದೆ.

ಸಾಮಾಜಿಕ ಜಾಲತಾಣದಲ್ಲಿ ಘಟನೆಯ ವಿಡಿಯೊ ಹರಿದಾಡುತ್ತಿದ್ದು, ಪ್ರದೇಶದಲ್ಲಿ ದಟ್ಟ ಹೊಗೆ ಆವರಿಸಿದ್ದು, ಅನೇಕ ಕಟ್ಟಡಗಳು, ವಾಹನ ಹಾಗೂ ರಸ್ತೆಗಳು ಹಾನಿಯಾಗಿರುವುದು. ಗೋದಾಮು ಸುತ್ತಮುತ್ತಲಿನ ನೂರಾರು ಮನೆಗಳಿಗೆ ಹಾನಿಯಾಗಿರುವುದು ಕಂಡು ಬಂದಿದೆ.

ಗೋದಾಮಿನಲ್ಲಿ ವೆಲ್ಡಿಂಗ್ ಕಾಮಗಾರಿ ನಡೆಯುತ್ತಿದ್ದು, ಅದರ ಕಿಡಿ ಪಟಾಕಿಗೆ ತಾಕಿ ಸ್ಫೋಟ ಸಂಭವಿಸಿರಬಹುದು ಎಂದು ಗವರ್ನರ್ ಸನನ್ ಹೇಳಿದ್ದಾರೆ.

ಮಣಿಪುರದ ಹಿಂಸಾಚಾರ ಸ್ಥಳಗಳಿಗೆ 'ಇಂಡಿಯಾ' ಸಂಸದರ ನಿಯೋಗ • ಕಾಂಗ್ರೆಸ್‌ನ ಗೌರವ್ ಗೊಗೊಯಿ ಕಳವಳ

'ವಾಸ್ತವ ಗಡಿ ರೇಖೆಯಲ್ಲಿನ ಪರಿಸ್ಥಿತಿ'

ಪ್ರಜಾವಾಣಿ ವಾರ್ತೆ

ಇಂಫಾಲ್: ಹಿಂಸಾಚಾರ, ಸಂಘರ್ಷಪೀಡಿತ ಮಣಿಪುರ ರಾಜ್ಯದ ವಿವಿಧ ಪ್ರದೇಶಗಳಿಗೆ ಶನಿವಾರ ತೆರಳಿದ್ದ ವಿರೋಧ ಪಕ್ಷಗಳ ಮೈತ್ರಿಕೂಟ 'ಇಂಡಿಯಾ'ದ 18 ಸಂಸದರು, ಸಂತ್ರಸ್ತರನ್ನು ಭೇಟಿಯಾಗಿ ಸಾಂತ್ವನ ಹೇಳಿದ್ದು, ವಸ್ತುಸ್ಥಿತಿಯ ವಿವರ ಪಡೆದರು.

'ವಾಸ್ತವಿಕ ಗಡಿ ರೇಖೆ ಪ್ರದೇಶದಲ್ಲಿರುವ ವಾತಾವರಣವೇ ಪ್ರಸ್ತುತ ಮಣಿಪುರದಲ್ಲಿ ಇದೆ' ಎಂದು ಈ ಸಂದರ್ಭದಲ್ಲಿ ಮಾತನಾಡಿದ ಕಾಂಗ್ರೆಸ್ ಪಕ್ಷದ ಸಂಸದ ಗೌರವ್ ಗೊಗೊಯಿ ಹೇಳಿದರು. ಸಂಸದರ ನಿಯೋಗವು ಎರಡು ದಿನ ಪ್ರವಾಸ ಹಮ್ಮಿಕೊಂಡಿದೆ. ಮೊದಲ ದಿನವಾದ ಶನಿವಾರ ಕುಕಿ ಸಮುದಾಯದವರು ಹೆಚ್ಚಿರುವ ಚುರಚಾಂದ್‌ಪುರ್ ಮತ್ತು ಮೈತೇಯಿ ವರ್ಗದವರು ಹೆಚ್ಚಿರುವ ಬಿಷ್ಣುಪುರ್ ಮತ್ತು ಇಂಫಾಲ್ ಪೂರ್ವ ಜಿಲ್ಲೆಗಳಿಗೆ ಭೇಟಿ ನೀಡಿತ್ತು.

ಮಣಿಪುರದಲ್ಲಿ ಮೇ 3ರಂದು ಆರಂಭವಾಗಿರುವ ಜನಾಂಗೀಯ ಸಂಘರ್ಷ, ಹಿಂಸಾಕೃತ್ಯಗಳಲ್ಲಿ ಉಭಯ ಸಮುದಾಯಗಳಿಗೆ ಸೇರಿರುವ ಸುಮಾರು 150 ಜನರು ಮೃತಪಟ್ಟಿದ್ದು, 60 ಸಾವಿರಕ್ಕೂ ಅಧಿಕ ಜನರು ಸಂತ್ರಸ್ತರಾಗಿದ್ದಾರೆ. ಮೈತೇಯಿ ಸಮುದಾಯದ ವಿವಿಧ ಸಂಘಟನೆಗಳು ಒಟ್ಟಾಗಿ ರಾಜಧಾನಿ ಇಂಫಾಲ್‌ದಲ್ಲಿ ಹಮ್ಮಿಕೊಂಡಿದ್ದ ಬೃಹತ್ ರ್‍ಯಾಲಿ ಸಂದರ್ಭದಲ್ಲೇ 'ಇಂಡಿಯಾ'ದ ಸಂಸದರ ಭೇಟಿ ಕಾರ್ಯವೂ ನಡೆಯಿತು.

ವಿವಿಧೆಡೆ ಭೇಟಿಗೆ ತೆರಳುವ ಮುನ್ನ ಮಾತನಾಡಿದ ಗೌರವ್ ಗೊಗೊಯಿ, 'ಮೈತೇಯಿ ಮತ್ತು ಕುಕಿ ಸಮುದಾಯದವರ ಸಂಘರ್ಷದಿಂದಾಗಿ ರಾಜ್ಯದಲ್ಲಿ ವಾಸ್ತವ ಗಡಿ ರೇಖೆಯಲ್ಲಿರುವ ವಾತಾವರಣವೇ ಇದೆ. ಶಾಲೆ, ಕಾಲೇಜಿಗೆ ತೆರಳಬೇಕಿದ್ದ ಯುವಕರು ಕೈಯಲ್ಲಿ ಶಸ್ತ್ರಾಸ್ತ್ರಗಳನ್ನು ಹಿಡಿದು ಹಳ್ಳಿಗಳನ್ನು ಕಾಯುತ್ತಿದ್ದಾರೆ. ಉಭಯ ಸಮುದಾಯದವರು ಸೇನೆಯ ಯೋಧರ ಮೇಲೆ ದಾಳಿ ನಡೆಸುತ್ತಿದ್ದಾರೆ' ಎಂದರು.

ಹಿಂಸಾಕೃತ್ಯದ ಸ್ಥಳಗಳಿಗೆ ಭೇಟಿ ನೀಡಿದ ಬಳಿಕ ಮತ್ತೆ ಮಾತನಾಡಿದ ಅವರು, 'ಪ್ರಸ್ತುತ ಸಂತ್ರಸ್ತರು ಮತ್ತೆ ತಮ್ಮ ಮನೆಗಳಿಗೆ ಹೋಗಲೂ ಹಿಂಜರಿಯುವಷ್ಟು ಭೀತರಾಗಿದ್ದಾರೆ. ರಾಜ್ಯ ಸರ್ಕಾರದ ಮೇಲೆ ಅವರು ಪೂರ್ಣ ನಂಬಿಕೆ ಕಳೆದುಕೊಂಡಿದ್ದಾರೆ' ಎಂದರು. 'ನಾಗರಿಕರ ಮೇಲೆ ಹೇಗೆ ಮತ್ತು ಯಾರು ದಾಳಿ ಮಾಡಿ ಕೊಂದಿದ್ದಾರೆ ಎಂಬುದರ ಬಗ್ಗೆ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಯೊಬ್ಬರ ನೇತೃತ್ವದಲ್ಲಿ ತನಿಖೆ ನಡೆಸುವುದು ಅಗತ್ಯ' ಎಂದು ಅವರು ಒತ್ತಾಯಿಸಿದರು.

ವಲಸಿಗರಿಗೆ ಬಯೊಮೆಟ್ರಿಕ್: ಮಣಿಪುರ ಆಡಳಿತವು ಮ್ಯಾನ್ಮಾರ್‌ನಿಂದ 'ಅಕ್ರಮವಾಗಿ ವಲಸೆ' ಬಂದಿರುವವರ ಬಯೊಮೆಟ್ರಿಕ್ ವಿವರ ಸಂಗ್ರಹಿಸುವ ಕಾರ್ಯಕ್ಕೆ ಚಾಲನೆ ನೀಡಿದೆ.



ಮಣಿಪುರ ಏಕತೆ ಸಂಯೋಜನಾ ಸಮಿತಿ (ಸಿಒಸಿಒಎಂಐ) ನೇತೃತ್ವದಲ್ಲಿ ಶನಿವಾರ ಮಣಿಪುರ ರಾಜಧಾನಿ ಇಂಫಾಲ್‌ನಲ್ಲಿ ನಡೆದ ಬೃಹತ್ ರ್‍ಯಾಲಿಯಲ್ಲಿ ಅಸಂಖ್ಯ ಜನರು ಭಾಗವಹಿಸಿದ್ದರು —ಎಎಫ್‌ಪಿ ಚಿತ್ರ

'ಮೈತೇಯಿ' ಬೇಡಿಕೆ

ಮಣಿಪುರ ಏಕತೆ ಸಂಯೋಜನಾ ಸಮಿತಿ (ಸಿಒಸಿಒಎಂಐ) ನೇತೃತ್ವದಲ್ಲಿ ರ್‍ಯಾಲಿ ನಡೆಸಿದ್ದ ಮೈತೇಯಿ ಸಮುದಾಯದವರು, 'ಚಿನ್ ಕುಕಿ ನಾರ್ಕೊ ಭಯೋತ್ಪಾದಕರು' ಮತ್ತು 'ಅಕ್ರಮ ವಲಸಿಗರ' ವಿರುದ್ಧ ಕಠಿಣಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದ್ದಾರೆ. ಅಲ್ಲದೆ, ಪ್ರತ್ಯೇಕ ಆಡಳಿತ ವ್ಯವಸ್ಥೆಯನ್ನು ಕಲ್ಪಿಸಬೇಕು ಎಂಬ ಕುಕಿ ಸಮುದಾಯದವರ ಬೇಡಿಕೆಗೂ ಸಮಿತಿಯು ತೀವ್ರವಾಗಿ ವಿರೋಧ ವ್ಯಕ್ತಪಡಿಸಿದೆ.

'ಕುಕಿ' ಜನರ ಬೇಡಿಕೆ

ಕುಕಿ ಸಮುದಾಯ ದವರ ಸಂಘಟನೆ ಇಂಡಿಜಿನೀಯಸ್ ಟ್ರೈಬಲ್ ಲೀಡರ್ಸ್ ಫೋರಂ (ಐಟಿಎಲ್‌ಎಫ್) ಸದಸ್ಯರು, ರಾಜ್ಯ ಪ್ರವಾಸ ಕೈಗೊಂಡಿದ್ದ 'ಇಂಡಿಯಾ' ಸಂಸದರ ನಿಯೋಗವನ್ನು ಭೇಟಿಯಾಗಿ ತಮ್ಮ ಬೇಡಿಕೆ ಕುರಿತು ಮನವಿ ಸಲ್ಲಿಸಿದರು.

ಮಣಿಪುರದಲ್ಲಿ ಕುಕಿ ಸಮುದಾಯದವರಿಗಾಗಿಯೇ ಪ್ರತ್ಯೇಕ ಆಡಳಿತ ವ್ಯವಸ್ಥೆ ಜಾರಿಗೊಳಿಸಬೇಕು ಎಂದು ಐಟಿಎಲ್‌ಎಫ್‌ನ ಪ್ರಮುಖ ಬೇಡಿಕೆಯಾಗಿದೆ.

ಪತಿ, ಮಗನ ಶವ ತೋರಿಸಿ ಕೊಡಿ: ತಾಯಿಯ ಅಳಲು

ಇಂಫಾಲ್ (ಪಿಟಿಐ): 'ನನ್ನ ಮಗ, ಪತಿಯ ಶವವನ್ನು ನೋಡಬೇಕು. ದಯವಿಟ್ಟು ಸಹಾಯ ಮಾಡಿ...'

ಬೆತ್ತಲೆ ಮೆರವಣಿಗೆ ಕೃತ್ಯಕ್ಕೆ ಗುರಿಯಾದ ಮಹಿಳೆಯರ ಪೈಕಿ ಒಬ್ಬರ ತಾಯಿ 'ಇಂಡಿಯಾ' ಸಂಸದರ ನಿಯೋಗದ ಮುಂದಿಟ್ಟ ಬೇಡಿಕೆ ಇದು.

ನಿಯೋಗದಲ್ಲಿದ್ದ ಟಿಎಂಸಿ ಸಂಸದೆ ಸುಶ್ಮಿತಾ ದೇವ್ ಮತ್ತು ಡಿಎಂಕೆ ಸಂಸದೆ ಕನಿಮೊಳಿ ಅವರು ಸಂತ್ರಸ್ತೆಯ ತಾಯಿಯನ್ನು ಭೇಟಿಯಾಗಿ ಸಾಂತ್ವನ ಹೇಳಿದರು. ಆಗ ಮಹಿಳೆ ಮೇಲಿನಂತೆ ಬೇಡಿಕೆ ಮುಂದಿಟ್ಟರು.

ಈಗ ಸಂಘರ್ಷದಲ್ಲಿ ನಿರತರಾಗಿರುವ ಕುಕಿ ಮತ್ತು ಮೈತೇಯಿ ಸಮುದಾಯದವರು ಭವಿಷ್ಯದಲ್ಲಿ ಒಟ್ಟಿಗೆ ಬಾಳಲು ಸಾಧ್ಯವೇ ಇಲ್ಲ ಎಂದು ಮಹಿಳೆ ಇದೇ ಸಂದರ್ಭದಲ್ಲಿ ಹೇಳಿದರು.

'ಈ ತಾಯಿಯ ಮಗಳ ಮೇಲೆ ಅತ್ಯಾಚಾರ ಆಗಿದೆ. ಪತಿ, ಮಗನ ಕೊಲೆಯಾಗಿದೆ. ಪೊಲೀಸರ ಎದುರೇ ಈ ಕೃತ್ಯಗಳಾಗಿವೆ. ಆದರೆ, ಈವರೆಗೂ ಒಬ್ಬ ಪೊಲೀಸ್ ಅಧಿಕಾರಿಯನ್ನೂ ಸರ್ಕಾರ ಅಮಾನತುಪಡಿಸಿಲ್ಲ' ಎಂದು ಸಂಸದೆ ಸುಶ್ಮಿತಾ ಆಕ್ರೋಶ ವ್ಯಕ್ತಪಡಿಸಿದರು.

ಕನಿಮೊಳಿ ಅವರು, 'ಸಂತ್ರಸ್ತೆಯ ತಂದೆ ಸೇನೆಯಲ್ಲಿದ್ದು ದೇಶವನ್ನು ರಕ್ಷಿಸಿದವರು. ಆದರೆ, ತನ್ನದೇ ಕುಟುಂಬ ರಕ್ಷಿಸಿಕೊಳ್ಳಲಾಗಲಿಲ್ಲ. ಮಗ, ಪತಿಯನ್ನು ಕಳೆದುಕೊಂಡ ಮಹಿಳೆಗೆ ನ್ಯಾಯ ಸಿಗದಿರುವುದು ವಿಷಾದಕರ' ಎಂದು ಅಭಿಪ್ರಾಯಪಟ್ಟರು.

ಸಿಜೆಐ ವಿರುದ್ಧ ಹೇಳಿಕೆ: ಪ್ರಕಾಶಕ ಬದ್ರಿ ಶೇಷಾದ್ರಿ ಬಂಧನ

ಪ್ರಜಾವಾಣಿ ವಾರ್ತೆ



ಚೆನ್ನೈ: ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ವಿರುದ್ಧ ಪ್ರಚೋದನಕಾರಿ ಹೇಳಿಕೆ ನೀಡಿದ ಆರೋಪದಲ್ಲಿ ಪ್ರಕಾಶಕ ಮತ್ತು ರಾಜಕೀಯ ವಿಶ್ಲೇಷಕ ಬದ್ರಿ ಶೇಷಾದ್ರಿ ಅವರನ್ನು ತಮಿಳುನಾಡು ಪೊಲೀಸರು ಶನಿವಾರ ಬಂಧಿಸಿದ್ದಾರೆ.

ಮಣಿಪುರ ಗಲಭೆಯ ಸಂಬಂಧ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಎಚ್ಚರಿಕೆ ನೀಡಿರುವ ವಿಚಾರವಾಗಿ ಯೂಟ್ಯೂಬ್ ಚಾನೆಲ್‌ಗೆ ನೀಡಿದ ಸಂದರ್ಶನವೊಂದರಲ್ಲಿ ಅವರು ಚಂದ್ರಚೂಡ್ ಅವರ ವಿರುದ್ಧ ಹೇಳಿಕೆ ನೀಡಿದ್ದರು ಎಂದು ಆರೋಪಿಸಲಾಗಿದೆ.

ವಕೀಲ ಕವಿಅರಸು ಎಂಬುವರು ನೀಡಿರುವ ದೂರಿನ ಅನ್ವಯ ಶೇಷಾದ್ರಿ ಅವರನ್ನು ಪೆರಂಬಲೂರ್‌ನ ಮೈಲಾಪುರದಲ್ಲಿರುವ ಅವರ ನಿವಾಸದಲ್ಲಿ ಬಂಧಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಬಿಜೆಪಿ ಬೆಂಬಲಿಗರಾಗಿರುವ ಶೇಷಾದ್ರಿ ಅವರ ವಿರುದ್ಧ ವಿವಿಧ ಸೆಕ್ಷನ್‌ಗಳ ಅಡಿ ಪ್ರಕರಣ ದಾಖಲಾಗಿದೆ ಎಂದೂ ಹೇಳಿವೆ.

'ಚಂದ್ರಚೂಡ್ ಅವರಿಗೆ ಬಂದೂಕು ಕೊಟ್ಟು ಮಣಿಪುರಕ್ಕೆ ಕಳುಹಿಸೋಣ. ಅವರು ಅಲ್ಲಿ ಶಾಂತಿ ಪುನಃಸ್ಥಾಪಿಸುತ್ತಾರೋ ಎಂದು ನೋಡೋಣ' ಎಂಬುದಾಗಿ ಶೇಷಾದ್ರಿ ಅವರು ಸಂದರ್ಶನದಲ್ಲಿ ಹೇಳಿದ್ದರು.

ಶೇಷಾದ್ರಿ ಅವರ ಬಂಧನವನ್ನು ಖಂಡಿಸಿರುವ ಬಿಜೆಪಿ ರಾಜ್ಯ ಘಟಕ ಅಧ್ಯಕ್ಷ ಅಣ್ಣಾಮಲೈ, 'ಸಾಮಾನ್ಯ ಜನರು ನೀಡುವ ಹೇಳಿಕೆಗಳನ್ನು ನಿಭಾಯಿಸಲು ಆಡಳಿತಾರೂಢ ಭ್ರಷ್ಟ ಡಿಎಂಕೆ ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ' ಎಂದು ಟ್ವೀಟ್ ಮಾಡಿದ್ದಾರೆ.

ಡಿಎಂಕೆಯ ಪ್ರತೀಕಾರದ ನಡೆಯನ್ನು ಕಾರ್ಯಗತಗೊಳಿಸುವುದು ಪೊಲೀಸರ ಕೆಲಸವೇ ಎಂದೂ ಅವರು ಪ್ರಶ್ನಿಸಿದ್ದಾರೆ. ಶೇಷಾದ್ರಿ ಅವರನ್ನು ಬಂಧಿಸಿರುವುದಕ್ಕೆ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಲಕ್ಷ್ಮಿ ರಾಮಚಂದ್ರನ್ ಅವರು ಕೂಡ ಟ್ವಿಟರ್‌ನಲ್ಲಿ ಖಂಡನೆ ವ್ಯಕ್ತಪಡಿಸಿದ್ದಾರೆ.

ತೋರಿಕೆಗಾಗಿ ಮಣಿಪುರಕ್ಕೆ ಭೇಟಿ: ಅನುರಾಗ್ ವ್ಯಂಗ್ಯ

ಕೋಲ್ಕತ್ತ (ಪಿಟಿಐ): 'ಜನಾಂಗೀಯ ಹಿಂಸಾಚಾರದಿಂದ ತತ್ತರಿಸಿರುವ ಮಣಿಪುರಕ್ಕೆ 'ಇಂಡಿಯಾ' ಸದಸ್ಯರ ನಿಯೋಗವು ಕೇವಲ ತೋರಿಕೆಗಾಗಿ ಭೇಟಿ ನೀಡಿದೆ' ಎಂದು ಕೇಂದ್ರ ಮಾಹಿತಿ ಮತ್ತು ಪ್ರಚಾರ ಸಚಿವ ಅನುರಾಗ್ ಠಾಕೂರ್ ವ್ಯಂಗ್ಯವಾಡಿದ್ದಾರೆ.

ಸುದ್ದಿಗಾರರೊಂದಿಗೆ ಇಲ್ಲಿ ಮಾತನಾಡಿದ ಅವರು, 'ಹಿಂದಿನ ಸರ್ಕಾರಗಳ ಅವಧಿಯಲ್ಲಿಯೂ ಮಣಿಪುರ ಹೊತ್ತಿ ಉರಿದಿದೆ. ಆ ವೇಳೆ ಈಗ ನಿಯೋಗದಲ್ಲಿರುವ ಸದಸ್ಯರು ಸಂಸತ್‌ನಲ್ಲಿ ಒಂದು ಪದವನ್ನೂ ಮಾತನಾಡಿಲ್ಲ. ಮತ್ತಷ್ಟು ತಿಂಗಳ ಕಾಲ ಸಂಘರ್ಷ ಮುಂದುವರಿದರೂ ಅವರ ಮನಸ್ಥಿತಿ ಬದಲಾಗಲ್ಲ' ಎಂದು ಟೀಕಿಸಿದರು. 'ಕಣಿವೆ ರಾಜ್ಯಕ್ಕೆ ತೆರಳಿರುವ ನಿಯೋಗದ ಸದಸ್ಯರು ಮರಳಿ ಬಂದಾಗಲೂ ಸುಗಮವಾಗಿ ಸಂಸತ್‌ನ ಕಲಾಪ ನಡೆಯಲು ಅವಕಾಶ ನೀಡುವುದಿಲ್ಲ' ಎಂದು ಆಪಾದಿಸಿದರು.

ಬೆತ್ತಲೆ ಮೆರವಣಿಗೆ: ತನಿಖೆ ಶುರು

ನವದೆಹಲಿ (ಪಿಟಿಐ): ಮಣಿಪುರದಲ್ಲಿ ಮೇ 4ರಂದು ನಡೆದಿದ್ದ ಇಬ್ಬರು ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಹಾಗೂ ಬೆತ್ತಲೆ ಮೆರವಣಿಗೆ ಕೃತ್ಯದ ತನಿಖೆಯನ್ನು ಸಿಬಿಐ ವಹಿಸಿಕೊಂಡಿದೆ. ಈ ಸಂಬಂಧ ವಿಡಿಯೊ ಜುಲೈ 19ರಂದು ಜಾಲತಾಣದಲ್ಲಿ ಸಾಕಷ್ಟು ಹಂಚಿಕೆಯಾಗಿತ್ತು.

ನಿರ್ದಿಷ್ಟ ಸಮುದಾಯದ ಜನರು, ಮತ್ತೊಂದು ಸಮುದಾಯಕ್ಕೆ ಸೇರಿದ ಇಬ್ಬರು ಮಹಿಳೆಯರ ಮೇಲೆ ದೌರ್ಜನ್ಯ ಎಸಗಿದ್ದ ಈ ವಿಡಿಯೊ ಬಹಿರಂಗವಾದ ಹಿಂದೆಯೇ ದೇಶದಾದ್ಯಂತ ತೀವ್ರ ಆಕ್ರೋಶ ವ್ಯಕ್ತವಾಗಿತ್ತು.

ಸಂತ್ರಸ್ತೆ ಭೇಟಿಯಾದ ರಾಜ್ಯಪಾಲರು

'ಇಂಡಿಯಾ'ದ 18 ಸಂಸದರ ನಿಯೋಗ ಪ್ರವಾಸದಲ್ಲಿರುವಾಗಲೇ, ರಾಜ್ಯಪಾಲರಾದ ಅನುಸೂಯಾ ಉಯಿಕೆ ಅವರು, ಬೆತ್ತಲೆ ಮೆರವಣಿಗೆ ಕೃತ್ಯದ ಸಂತ್ರಸ್ತ ಮಹಿಳೆಯನ್ನು ಭೇಟಿ ಮಾಡಿದರು. ಇಬ್ಬರು ಮಹಿಳೆಯರ ಕುಟುಂಬಗಳಿಗೆ ತಲಾ ₹ 10 ಲಕ್ಷ ಪರಿಹಾರದ ಚೆಕ್ ವಿಸ್ತರಿಸಿದರು.

'ಕೃತ್ಯ ಇಡೀ ದೇಶ ನಾಚಿಕೆ ಪಡುವಂತದ್ದಾಗಿದೆ. ಇಬ್ಬರು ಸಹೋದರಿಯರನ್ನು ನಾನು ಭೇಟಿಯಾಗಿದ್ದೇನೆ. ಅವರಿಗೆ ಅಗತ್ಯ ಹಣಕಾಸು ನೆರವು ಮತ್ತು ಮಾನಸಿಕ ಸ್ಥೈರ್ಯ ನೀಡಲಾಗುವುದು. ಕೇಂದ್ರ ಪಡೆಗಳನ್ನು ನಿಯೋಜಿಸಲಾಗಿದೆ. ಶಾಂತಿ ಮರುಸ್ಥಾಪನೆಗೆ ಎಲ್ಲರೂ ಅಗತ್ಯ ಸಹಕಾರ ನೀಡಬೇಕು' ಎಂದು ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಸಂಭಾಜಿ ಭಿಡೆ ವಿರುದ್ಧ ಪ್ರಕರಣ ದಾಖಲು

ಅಮರಾವತಿ (ಪಿಟಿಐ): ಮಹಾತ್ಮ ಗಾಂಧಿ ಕುರಿತು ಅವಹೇಳನಕಾರಿ ಹೇಳಿಕೆ ನೀಡಿರುವ ಆರೋಪದಲ್ಲಿ ಬಲಪಂಥೀಯ ನಾಯಕ ಸಂಭಾಜಿ ಭಿಡೆ ವಿರುದ್ಧ ಮಹಾರಾಷ್ಟ್ರದ ಅಮರಾವತಿ ಜಿಲ್ಲೆಯ ರಾಜಪೇಟ್‌ನ ಪೊಲೀಸರು ಶನಿವಾರ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಶ್ರೀ ಶಿವ ಪ್ರತಿಷ್ಠಾನ ಹಿಂದೂಸ್ತಾನ್ ಸಂಘಟನೆಯ ಸಂಸ್ಥಾಪಕ ಸಂಭಾಜಿ ಗುರುವಾರ ಅಮರಾವತಿ ಜಿಲ್ಲೆಯಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮವೊಂದರಲ್ಲಿ ಮಹಾತ್ಮ ಗಾಂಧಿ ಅವರ ಕುರಿತು ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ ಎಂದು ಕಾಂಗ್ರೆಸ್ ಆರೋಪಿಸಿದೆ. ಈ ವಿಚಾರವನ್ನು ಶುಕ್ರವಾರ ವಿಧಾನಸಭಾ ಅಧಿವೇಶನದಲ್ಲೂ ಪ್ರಸ್ತಾಪಿಸಿತ್ತು.

ವಿದರ್ಭ ಪ್ರವಾಸದಲ್ಲಿರುವ ಸಂಭಾಜಿ ಅವರು ಅಮರಾವತಿಯ ಬದ್ನೇರಾ ರಸ್ತೆ ಪ್ರದೇಶದಲ್ಲಿರುವ ಭಾರತ್ ಮಂಗಲ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಈ ಹೇಳಿಕೆ ನೀಡಿದ್ದರು ಎಂದೂ ಆರೋಪಿಸಲಾಗಿದೆ.

ಸಂಭಾಜಿ ವಿರುದ್ಧ ಕಾಂಗ್ರೆಸ್ ರಾಜ್ಯ ಘಟಕದ ಕಾರ್ಯದರ್ಶಿ ನಂದಕಿಶೋರ್ ಕುಯಟೆ ಅವರು ಪೊಲೀಸರಿಗೆ ದೂರು ನೀಡಿದ್ದರು. ಸಂಭಾಜಿ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಬಾಳಾಸಾಹೇಬ್ ಥೋರಟ್ ಅವರು ವಿಧಾನಸಭೆಯಲ್ಲಿ ಆಗ್ರಹಿಸಿದ್ದರು. 'ಸಂಭಾಜಿ ಅವರು ಪದೇ ಪದೇ ಮಹಾತ್ಮ ಗಾಂಧಿ ಅವರ ವಿರುದ್ಧ ಅವಹೇಳನಕಾರಿ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಅವರು ನೀಡುವ ಹೇಳಿಕೆಗಳನ್ನು ರಾಜಕೀಯ ಹಿತಾಸಕ್ತಿಯಿಂದ ಬೆಂಬಲಿಸುವವರು ಯಾರು ಎಂಬುದನ್ನು ಪತ್ತೆಹಚ್ಚಬೇಕಿದೆ' ಎಂದೂ ಹೇಳಿದ್ದರು.

ಶಂಕಿತ ಉಗ್ರರಿಗೆ ನೆರವು: ವ್ಯಕ್ತಿ ಬಂಧನ

ಪುಣೆ (ಪಿಟಿಐ): ಇಬ್ಬರು ಶಂಕಿತ ಭಯೋತ್ಪಾದಕರಿಗೆ ಆರ್ಥಿಕ ನೆರವು ನೀಡಿದ್ದ ಆರೋಪದಡಿ ಮಹಾರಾಷ್ಟ್ರದ ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ರತ್ನಗಿರಿ ಜಿಲ್ಲೆಯಲ್ಲಿ ವ್ಯಕ್ತಿಯೊಬ್ಬನನ್ನು ಬಂಧಿಸಿದೆ.

ಇಬ್ಬರು ಶಂಕಿತ ಉಗ್ರರನ್ನು ಜುಲೈ 18ರಂದು ಬಂಧಿಸಲಾಗಿತ್ತು. ಅವರಿಗೆ ಆಶ್ರಯ ನೀಡಿದ್ದ ವ್ಯಕ್ತಿಯನ್ನೂ ಬಂಧಿಸಲಾಗಿದೆ. ಈಗ ಆರ್ಥಿಕ ನೆರವು ನೀಡಿದ ಸಂಬಂಧ ರತ್ನಗಿರಿ ಜಿಲ್ಲೆಯ ವ್ಯಕ್ತಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದು, ಆತನನ್ನೂ ಬಂಧಿಸಲಾಗಿದೆ. ಬಂಧಿತರ ಸಂಖ್ಯೆ 4ಕ್ಕೆ ಏರಿದೆ ಎಂದು ಎಟಿಎಸ್ ಹೇಳಿಕೆಯಲ್ಲಿ ತಿಳಿಸಿದೆ. ಆದರೆ, ಬಂಧಿತನ ವಿವರಗಳನ್ನು ಎಟಿಎಸ್ ಬಹಿರಂಗಪಡಿಸಿಲ್ಲ. ಎಟಿಎಸ್ ತಂಡ ತನಿಖೆಗಾಗಿ ಮತ್ತೊಂದು ರಾಜ್ಯಕ್ಕೆ ತೆರಳಿದೆ. ತನಿಖೆಗೆ ಹಾಜರಾಗಲು ಸೂಚಿಸಿ ಶಂಕಿತನೊಬ್ಬನಿಗೆ ನೋಟಿಸ್ ಜಾರಿ ಮಾಡಿದೆ ಎಂದು ತಿಳಿಸಿದೆ. ಶಂಕಿತ ಉಗ್ರರಾದ ಮೊಹಮ್ಮದ್ ಇಮ್ರಾನ್ ಮೊಹಮ್ಮದ್ ಯೂನುಸ್ ಖಾನ್ (23), ಮೊಹಮ್ಮದ್ ಯೂನುಸ್ ಮೊಹಮ್ಮದ್ ಯಾಕುಬ್ ಸಕಿ (24) ಅವರಿಗೆ ಆಶ್ರಯ ನೀಡಿದ್ದ ಅಬ್ದುಲ್ ಖಾದಿರ್ ದಸ್ತಗೀರ್ ಪಠಾಣ್‌ರನ್ನು ಪುಣೆಯಲ್ಲಿ ಬುಧವಾರವಷ್ಟೇ ಬಂಧಿಸಲಾಗಿತ್ತು.

ಲಡಾಕ್: ನೀರ್ಗಲ್ಲು ಕರಗಿ 3 ಸರೋವರ ಸೃಷ್ಟಿ ಸಾಧ್ಯತೆ

ನವದೆಹಲಿ (ಪಿಟಿಐ): ಲಡಾಕ್‌ನ ಹಿಮಾಲಯದಲ್ಲಿರುವ ಪರ್ಕಾಚಿಕ್ ನೀರ್ಗಲ್ಲು ಅತಿವೇಗವಾಗಿ ಕರಗುತ್ತಿದ್ದು, ಇದರಿಂದ ಹಿಮಗಡ್ಡೆಗಳಿಂದ ಕೂಡಿರುವ ಮೂರು ಹೊಸ ಸರೋವರಗಳು ರೂಪುಗೊಳ್ಳುವ ಸಾಧ್ಯತೆ ಇದೆ. ಭವಿಷ್ಯದಲ್ಲಿ ಇವು ಭಾರಿ ಹಿಮಪ್ರವಾಹಕ್ಕೂ ಕಾರಣವಾಗುವ ಸಂಭವ ಇದೆ ಎಂದು ಅಧ್ಯಯನವೊಂದು ತಿಳಿಸಿದೆ.

ಈ ಸರೋವರಗಳ ಆಳ 34ರಿಂದ 84 ಮೀಟರ್ ಇರಲಿದೆ ಎಂದು ಡೆಹ್ರಾಡೂನ್‌ನ ವಾಡಿಯಾ ಇನ್‌ಸ್ಟಿಟ್ಯೂಟ್ ಆಫ್ ಹಿಮಾಲಯನ್ ಜಿಯಾಲಜಿ ವಿಜ್ಞಾನಿಗಳು ತಿಳಿಸಿದ್ದಾರೆ.

ಪರ್ಕಾಚಿಕ್ ನೀರ್ಗಲ್ಲು, ಸುರು ನದಿ ಕಣಿವೆಯಲ್ಲಿರುವ ಅತಿದೊಡ್ಡ ನೀರ್ಗಲ್ಲು ಆಗಿದೆ. ಇದು ಪಶ್ಚಿಮ ಹಿಮಾಲಯದ ಭಾಗವಾದ ಝನ್ಸ್‌ಕಾರ್ ಪರ್ವತ ಶ್ರೇಣಿಯಲ್ಲಿದ್ದು, ಲಡಾಕ್‌ನಲ್ಲಿದೆ.

28 ವರ್ಷಗಳ ಹಿಂದಿನ ಅವಧಿಗೆ (1971ರಿಂದ 1999ರವರೆಗೆ) ಹೋಲಿಸಿದರೆ, 1999ರಿಂದ 2021ರ ನಡುವಿನ ಅವಧಿಯಲ್ಲಿ ಈ ನೀರ್ಗಲ್ಲಿನ ಕರಗುವಿಕೆ ಪ್ರಮಾಣ ಆರು ಪಟ್ಟು ಹೆಚ್ಚಾಗಿದೆ ಎಂದು ವಿಜ್ಞಾನಿಗಳು ಹೇಳಿದ್ದಾರೆ.

ಉಪಗ್ರಹ ರವಾನಿಸಿದ ದತ್ತಾಂಶಗಳ ವಿಶ್ಲೇಷಣೆ ಆಧರಿಸಿ ಈ ವಿದ್ಯಮಾನ ಕುರಿತು ಅಧ್ಯಯನ ನಡೆಸಲಾಗಿದೆ ಎಂದು ತಿಳಿಸಿದ್ದಾರೆ.

ನೀರ್ಗಲ್ಲುಗಳು ವೇಗವಾಗಿ ಕರಗುವುದಕ್ಕೆ ಹವಾಮಾನ ಬದಲಾವಣೆ ಪ್ರಮುಖ ಕಾರಣ ಎಂದು ಇದೇ ಅಧ್ಯಯನ ಪ್ರತಿಪಾದಿಸಿದೆ.

ನೀರ್ಗಲ್ಲು ಕರಗಿದ ನಂತರ ಸರೋವರ ಸೃಷ್ಟಿಯಾಗಬಹುದಾದ ಮೂರು ಪ್ರದೇಶಗಳನ್ನು ವಿಜ್ಞಾನಿಗಳು ಗುರುತಿಸಿದ್ದಾರೆ. ಇವುಗಳ ವಿಸ್ತೀರ್ಣ 43 ರಿಂದ 270 ಹೆಕ್ಟೇರ್‌ನಷ್ಟು ಇರಲಿದೆ ಎಂದು ಅಂದಾಜಿಸಿದ್ದಾರೆ.

'ಎನ್‌ಇಪಿಯಿಂದ 'ದ್ವೇಷದ ಅಂಗಡಿ' ಬಂದ್ ಆಗಲಿದೆ'

ನವದೆಹಲಿ (ಪಿಟಿಐ): ನೂತನ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ)ಯು ದೇಶದ ಎಲ್ಲ ಭಾಷೆಗಳಿಗೂ ಪ್ರಾಧಾನ್ಯ ನೀಡುವುದರಿಂದ, ಜನರ ನಡುವೆ ವೈಮನಸ್ಸು ಹರಡಲು ಭಾಷೆಯನ್ನು ಬಳಸಿಕೊಳ್ಳುತ್ತಿರುವವರು ತಮ್ಮ 'ದ್ವೇಷದ ಅಂಗಡಿ'ಯನ್ನು ಮುಚ್ಚಬೇಕಾಗುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ಹೇಳಿದ್ದಾರೆ.

'ಎನ್‌ಇಪಿ'ಯ ಮೂರನೇ ವರ್ಷಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ 'ಅಖಿಲ ಭಾರತೀಯ ಶಿಕ್ಷಾ ಸಂಗಮ್' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'ತಮ್ಮ ಸ್ವಾರ್ಥ ಸಾಧನೆಗಾಗಿ ಭಾಷೆಯನ್ನು ಒಂದು ಅಸ್ತ್ರವನ್ನಾಗಿ ಬಳಸಿಕೊಂಡು ದ್ವೇಷ ಹರಡುವುದರಲ್ಲಿ ನಿರತರಾಗಿರುವವರು ತಮ್ಮ 'ನಫ್ರತ್ ಕಿ ದುಕಾನ್' ಅನ್ನು ಮುಚ್ಚಬೇಕಾಗುತ್ತದೆ' ಎಂದರು.



ನವದೆಹಲಿಯಲ್ಲಿ ನಡೆಯುತ್ತಿರುವ 'ಅಖಿಲ ಭಾರತೀಯ ಶಿಕ್ಷಾ ಸಂಗಮ್'ನಲ್ಲಿ ಮಕ್ಕಳ ಚಟುವಟಿಕೆಗಳನ್ನು ಪ್ರಧಾನಿ ನರೇಂದ್ರ ಮೋದಿ ವೀಕ್ಷಿಸಿದರು —ಪಿಟಿಐ ಚಿತ್ರ

'ಮಾತೃಭಾಷೆಯಲ್ಲಿ ಶಿಕ್ಷಣ ನೀಡುವುದರಿಂದ ಪ್ರತಿಭಾವಂತ ಯುವ ಜನತೆಗೆ ನಿಜವಾಗಿಯೂ ನ್ಯಾಯ ಒದಗಿಸಿದಂತಾಗುವುದು. ಸಾಮಾಜಿಕ ನ್ಯಾಯದ ದೃಷ್ಟಿಯಿಂದಲೂ ಇದು ಮಹತ್ವದ ಹೆಜ್ಜೆಯಾಗಲಿದೆ' ಎಂದರು.

ಕೌಶಲಗಳ ಕುರಿತು 12 ಭಾಷೆಗಳಲ್ಲಿ ಅನುವಾದಿತ ಕೃತಿಗಳನ್ನು ಇದೇ ಸಂದರ್ಭದಲ್ಲಿ ಮೋದಿ ಬಿಡುಗಡೆ ಮಾಡಿದರು.

ದೌರ್ಜನ್ಯ: ಬಿಜೆಪಿ ಮುಖಂಡನಿಗೆ ವಾರಂಟ್ ಜಾರಿ

ಮೀರಠ್ (ಉತ್ತರ ಪ್ರದೇಶ): 17 ವರ್ಷ ವಯಸ್ಸಿನ ಯುವತಿಗೆ ಲೈಂಗಿಕ ಕಿರುಕುಳ ನೀಡಿದ ಪ್ರಕರಣದಲ್ಲಿ ಬಿಜೆಪಿ ಸ್ಥಳೀಯ ಮುಖಂಡರೊಬ್ಬರ ವಿರುದ್ಧ ಮಕ್ಕಳ ವಿರುದ್ಧ ಲೈಂಗಿಕ ಅಪರಾಧಗಳ ತಡೆ ಕಾಯ್ದೆ (ಪೋಕ್ಸೊ) ಅಡಿಯ ವಿಶೇಷ ನ್ಯಾಯಾಲಯ ಜಾಮೀನುರಹಿತ ಬಂಧನದ ವಾರಂಟ್ ಹೊರಡಿಸಿದೆ.

ಯುವತಿಯು ವಕೀಲ ರಮೇಶ್ ಚಂದ್ ಗುಪ್ತಾ ಎಂಬುವರ ಕಚೇರಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದರು. ಗುಪ್ತಾ ಅವರ ಸಂಬಂಧಿ ಮತ್ತು ಬಿಜೆಪಿ ಮಹಾನಗರ ಘಟಕದ ಪ್ರಧಾನ ಕಾರ್ಯದರ್ಶಿ ಅರವಿಂದ್ ಗುಪ್ತಾ ಮಾರ್ವಾಡಿ ಹಾಗೂ ಉತ್ತರಪ್ರದೇಶ ಗ್ರಾಹಕರ ಸಹಕಾರ ಘಟಕದ ಉಪಾಧ್ಯಕ್ಷ ಸಂಜೀವ್ ಗೋಯಲ್ ಸಿಕ್ಕಾ ಅವರು, ಆಕೆಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಎದುರಿಸುತ್ತಿದ್ದಾರೆ.

ವಕೀಲ ಗುಪ್ತಾ ಅವರನ್ನು ಜೂನ್ 21ರಂದು ಬಂಧಿಸಲಾಗಿದೆ. ಅರವಿಂದ್ ಗುಪ್ತಾ ತಲೆಮರೆಸಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಸೆಪ್ಟೆಂಬರ್‌ನಲ್ಲಿ 'ಇಂಡಿಯಾ' ಮೂರನೇ ಸಭೆ?

ನವದೆಹಲಿ (ಪಿಟಿಐ): ಪ್ರತಿಪಕ್ಷಗಳ ಮೈತ್ರಿಕೂಟವಾದ 'ಇಂಡಿಯಾ'ದ 3ನೇ ಸಭೆಯು ಸೆಪ್ಟೆಂಬರ್‌ನ ಮೊದಲ ವಾರ ನಡೆಯುವ ಸಾಧ್ಯತೆಯಿದೆ.

ಪಟ್ನಾ, ಬೆಂಗಳೂರು ಸಭೆಯ ಬಳಿಕ ಮೂರನೇ ಸಭೆಯನ್ನು ಆಗಸ್ಟ್ 25, 26ರಂದು ಮುಂಬೈನಲ್ಲಿ ನಡೆಸಲು ನಿರ್ಧರಿಸಲಾಗಿತ್ತು. ಆದರೆ, ಹಲವು ವಿಪಕ್ಷ ನಾಯಕರು ಆಗಸ್ಟ್‌ನಲ್ಲಿ ಪೂರ್ವ ನಿಗದಿತ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದಾರೆ. ಹಾಗಾಗಿ, ಸೆಪ್ಟೆಂಬರ್‌ನಲ್ಲಿ ಸಭೆ ನಡೆಸಲು ಚಿಂತನೆ ನಡೆದಿದೆ.

'ಗುಲಾಮಗಿರಿ ಮನಃಸ್ಥಿತಿ ಬದಲಾಗಲಿ'

ನವದೆಹಲಿ (ಪಿಟಿಐ): 'ವಸಾಹತುಶಾಹಿ ಆಡಳಿತವು ಭಾರತೀಯರಲ್ಲಿ ಬೆಳೆಸಿದ್ದ ಗುಲಾಮಗಿರಿ ಮನಃಸ್ಥಿತಿ ಸ್ವಾತಂತ್ರ್ಯದ ನಂತರವೂ ಮುಂದುವರಿದಿದೆ. ಇದು ಬದಲಾಗಬೇಕು' ಎಂದು ಆರ್‌ಎಸ್‌ಎಸ್ ಸರ ಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಹೇಳಿದರು.

ಬಿಜೆಪಿ ಮುಖಂಡ ಬಲ್‌ಬೀರ್ ಪುಂಜ್ ಅವರ 'ನರೇಟಿವ್ ಕಾ ಮಾಯಾಜಾಲ್' ಕೃತಿಯನ್ನು ಶುಕ್ರವಾರ ಬಿಡುಗಡೆ ಮಾಡಿ ಮಾತನಾಡಿದ ಅವರು, 'ಬ್ರಿಟಿಷರ ಆಡಳಿತದ ಮನಃಸ್ಥಿತಿಯನ್ನೇ ಅವರ 'ಏಜೆಂಟರು' ಸ್ವಾತಂತ್ರ್ಯದ ನಂತರವೂ ರಕ್ಷಿಸಿಕೊಂಡುಬರುತ್ತಿದ್ದಾರೆ' ಎಂದು ಟೀಕಿಸಿದರು.

ಕೇರಳದ ರಾಜ್ಯಪಾಲ ಅರಿಫ್ ಮೊಹಮ್ಮದ್ ಖಾನ್ ಮತ್ತು ವಕೀಲ, ಅಂಕಣಕಾರ ಜೆ.ಸಾಯಿ ದೀಪಕ್ ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ವಸಾಹತುಶಾಹಿ ಆಡಳಿತದ ಕಾರ್ಯಶೈಲಿಯನ್ನು ಉಲ್ಲೇಖಿಸಿದ ಹೊಸಬಾಳೆ, 'ಭಾರತೀಯರು ಎಂದಿಗೂ ಮೊಘಲರನ್ನು ತಮಗಿಂತ ಉತ್ತಮರು ಎಂದು ಭಾವಿಸಿರಲಿಲ್ಲ. ಅವರು ದೇಶದ ಮೇಲೆ ಅತಿಕ್ರಮಣ ಮಾಡಿದಾಗಲೂ ಧೈರ್ಯದಿಂದಲೇ ಎದುರಿಸಿದ್ದರು' ಎಂದು ಉಲ್ಲೇಖಿಸಿದರು.

'ವಸಾಹತುಶಾಹಿ ಆಡಳಿತದ ಅವಧಿಯಲ್ಲಿ 'ನಾವು ಗುಲಾಮರು, ಬಿಳಿಯರ ಪಾಲಿನ ಹೊರೆ' ಎಂಬ ಸಂಕಥನವನ್ನು ಭಾರತೀಯರಲ್ಲಿ ಕಟ್ಟಿ ಬೆಳೆಸಲಾಯಿತು' ಎಂದೂ ವಿಶ್ಲೇಷಿಸಿದರು.

'ಆ ಆಡಳಿತದಲ್ಲಿ ವಿದ್ಯಾವಂತರು ಎಂದು ಹೇಳಿಕೊಂಡವರೂ 'ನಾವು ಹಳೆಯ ಕಾಲದವರು, ನಾವು ಜಗತ್ತಿಗೆ ಏನನ್ನೂ ನೀಡಿಲ್ಲ' ಎಂದೇ ಭಾವಿಸಿದ್ದರು. ಸ್ವಾತಂತ್ರ್ಯದ ನಂತರ ಈ ಮನಃಸ್ಥಿತಿ ಬದಲಾಗಬೇಕಿತ್ತು. ಆದರೆ, ವಿಶ್ವವಿದ್ಯಾಲಯ, ಅಂತರರಾಷ್ಟ್ರೀಯ ಮಾಧ್ಯಮ, ಚಿಂತಕರ ಚಾವಡಿ, ನ್ಯಾಯಾಂಗದ ಮೂಲಕ ಬ್ರಿಟಿಷರ 'ಏಜೆಂಟ'ರು ಈ ಸಂಕಥನವನ್ನು ಹಾಗೇ ಉಳಿಸಿಕೊಂಡು ಬಂದರು' ಎಂದು ದೂರಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಆರಿಫ್ ಮೊಹಮ್ಮದ್ ಖಾನ್ ಅವರು, 'ಆರ್‌ಎಸ್‌ಎಸ್ ಸಂಘಟನೆಯ ಹೆಸರನ್ನು ಉಲ್ಲೇಖಿಸದೆಯೇ ಹಲವು ಸಾಮಾಜಿಕ ಸಂಘಟನೆಗಳು ಸಮಾಜದಲ್ಲಿ ಬದಲಾವಣೆಯನ್ನು ತರಲು ಶ್ರಮಿಸುತ್ತಿವೆ' ಎಂದು ಅಭಿಪ್ರಾಯಪಟ್ಟರು.

ಜಪಾನ್ ಓಪನ್: ಫೈನಲ್‌ಗೆ ಕ್ರಿಸ್ಟಿ– ಆಕ್ಸೆಲ್ಸನ್

ಹೋರಾಡಿ ಸೋತ ಲಕ್ಷ್ಯ ಸೇನ್

ಟೋಕಿಯೊ (ಪಿಟಿಐ): ಭಾರತದ ಲಕ್ಷ್ಯ ಸೇನ್ ಅವರು ಜಪಾನ್ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್ ಸೆಮಿಫೈನಲ್‌ನಲ್ಲಿ ವೀರೋಚಿತ ಸೋಲು ಅನುಭವಿಸಿದರು. ಲಕ್ಷ್ಯ, ಮೂರು ಗೇಮ್‌ಗಳನ್ನು ಕಂಡ ಸೆಣಸಾಟದಲ್ಲಿ ಏಷ್ಯನ್ ಗೇಮ್ಸ್ ಚಾಂಪಿಯನ್ ಇಂಡೋನೇಷ್ಯಾದ ಜೊನಾಥನ್ ಕ್ರಿಸ್ಟಿ ಅವರಿಗೆ ಮಣಿದರು.

ಶನಿವಾರ ನಡೆದ ಪಂದ್ಯದಲ್ಲಿ ವಿಶ್ವದ 13ನೇ ಕ್ರಮಾಂಕದ ಸೇನ್ 68 ನಿಮಿಷಗಳ ಹಣಾಹಣಿಯಲ್ಲಿ ವಿಶ್ವದ 9ನೇ ಕ್ರಮಾಂಕದ ಆಟಗಾರನಿಗೆ 15–21, 21–13, 16–21ರಿಂದ ಶರಣಾದರು. ಈ ಮೂಲಕ ಜಪಾನ್ ಓಪನ್ ಟೂರ್ನಿಯಲ್ಲಿ ಭಾರತದ ಆಟಗಾರರ ಸವಾಲು ಅಂತ್ಯಗೊಂಡಿದೆ.

ಆರಂಭದಲ್ಲಿ ಕ್ರಿಸ್ಟಿ ಸ್ಥಿರ ಪ್ರದರ್ಶನ ನೀಡುವಲ್ಲಿ ಎಡವಿದರು. ಇದರ ಲಾಭ ಪಡೆದ ಸೇನ್ 7–4 ರಿಂದ ಮುನ್ನಡೆ ಪಡೆದರೂ ನಂತರ ಸೈಡ್‌ಲೈನ್‌ಲ್ಲಿ ಮಾಡಿದ ತಪ್ಪುಗಳಿಂದಾಗಿ ಹಿನ್ನಡೆ ಅನುಭವಿಸಬೇಕಾಯಿತು.

ಮೊದಲ ಗೇಮ್ ಅನ್ನು ಸೋತರೂ ಎರಡನೇ ಗೇಮ್‌ನಲ್ಲಿ ಪುಟಿದೆದ್ದ ಸೇನ್, ಪ್ರಬಲ ಹೊಡೆತಗಳ ಮೂಲಕ ಮೇಲುಗೈ ಸಾಧಿಸಿ 1–1ರ ಸಮಬಲ ಸಾಧಿಸಿದರು. ಆದರೆ, ನಿರ್ಣಾಯಕ ಗೇಮ್‌ನಲ್ಲಿ ಐದನೇ ಶ್ರೇಯಾಂಕದ ಇಂಡೋನೇಷ್ಯಾದ ಆಟಗಾರ ರಕ್ಷಣಾತ್ಮಕ ಆಟದೊಂದಿಗೆ ಹಿಡಿತ ಸಾಧಿಸಿ ಪ್ರಶಸ್ತಿ ಸುತ್ತಿಗೆ ಲಗ್ಗೆ ಹಾಕಿದರು.



ಇಂಡೋನೇಷ್ಯಾದ ಜೊನಾಟನ್ ಕ್ರಿಸ್ಟಿ —ಎಪಿ ಚಿತ್ರ

ಇದೇ ತಿಂಗಳ ಆರಂಭದಲ್ಲಿ ಲಕ್ಷ್ಯ ಸೇನ್ ಕೆನಡಾ ಓಪನ್ ಚಾಂಪಿಯನ್ ಆಗಿದ್ದರು. ಅಮೆರಿಕ ಓಪನ್‌ನಲ್ಲೂ ಸೆಮಿಫೈನಲ್ ಪ್ರವೇಶಿಸಿದ್ದರು.

ಜೊನಾಥನ್ ಫೈನಲ್‌ನಲ್ಲಿ ಅಗ್ರ ಕ್ರಮಾಂಕದ ವಿಕ್ಟರ್ ಆಕ್ಸೆಲ್ಸನ್ ಅವರನ್ನು ಎದುರಿಸಲಿದ್ದಾರೆ. ಇನ್ನೊಂದು ಸೆಮಿಫೈನಲ್‌ನಲ್ಲಿ ಡೆನ್ಮಾರ್ಕ್‌ನ ಆಕ್ಸೆಲ್ಸನ್ 21–11, 21–11 ರಿಂದ ಜಪಾನ್‌ನ ಕೊಡೈ ನರವೋಕಾ ಅವರನ್ನು ಮಣಿಸಿದರು.

ಬುದ್ಧದೇವ್ ಭಟ್ಟಾಚಾರ್ಯ ಆಸ್ಪತ್ರೆಗೆ ದಾಖಲು

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿ ಬುದ್ಧದೇವ್ ಭಟ್ಟಾಚಾರ್ಯ ಅವರಿಗೆ ತೀವ್ರ ಉಸಿರಾಟದ ಸಮಸ್ಯೆ ಕಾಣಿಸಿಕೊಂಡಿದ್ದು, ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಟ್ಟಾಚಾರ್ಯ ಅವರನ್ನು ಸದ್ಯ ತೀವ್ರ ನಿಗಾ ಘಟಕದಲ್ಲಿ ವೆಂಟಿಲೇಟರ್ ನೆರವಿನಲ್ಲಿ ಇರಿಸಲಾಗಿದೆ. ಅವರು ಕೆಲ ದಿನಗಳಿಂದ ವಯೋಸಹಜ ಅನಾರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದರು ಎಂದು ತಿಳಿಸಿದ್ದಾರೆ. ಇವರು 2000ರಿಂದ 2011ರವರೆಗೆ ಮುಖ್ಯಮಂತ್ರಿ ಆಗಿದ್ದರು.

ಮಧ್ಯಪ್ರದೇಶ: 12 ವರ್ಷದ ಬಾಲಕಿ ಮೇಲೆ ಅತ್ಯಾಚಾರ

ಇಬ್ಬರು ಆರೋಪಿಗಳ ಮನೆ ನೆಲಸಮ

ಸತ್ನಾ (ಮಧ್ಯಪ್ರದೇಶ)(ಪಿಟಿಐ): ಜಿಲ್ಲೆಯ ಮೈಹರ್ ಪಟ್ಟಣದಲ್ಲಿ 12 ವರ್ಷದ ಬಾಲಕಿಯೊಂದಿಗೆ ಕ್ರೂರವಾಗಿ ವರ್ತಿಸಿ, ಅತ್ಯಾಚಾರ ಎಸಗಿದ ಇಬ್ಬರು ಆರೋಪಿಗಳ ಮನೆಗಳನ್ನು ಸ್ಥಳೀಯ ಆಡಳಿತ ಶನಿವಾರ ನೆಲಸಮಗೊಳಿಸಿದೆ.

ರವೀಂದ್ರಕುಮಾರ್ ಹಾಗೂ ಅತುಲ್ ಭದೋಲಿಯಾ ಎಂಬವರು ಆರೋಪಿಗಳಾಗಿದ್ದು, ಅವರ ವಿರುದ್ಧ ಐಪಿಸಿ ಮತ್ತು ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ.

'ಈ ಇಬ್ಬರು ಆರೋಪಿಗಳು ಬಾಲಕಿಯನ್ನು ಗುರುವಾರ ಹೊಡೆದು, ಆಕೆ ಮೇಲೆ ಅತ್ಯಾಚಾರ ಎಸಗಿದ್ದರು. ನಂತರ ಮರ್ಮಾಂಗದಲ್ಲಿ ಗಡುಸಾದ ವಸ್ತುವೊಂದನ್ನು ತುರುಕಿದ್ದರು' ಎಂದು ದೂರಲಾಗಿದೆ.

'ಆರೋಪಿಗಳಿಬ್ಬರನ್ನು ಸ್ಥಳೀಯ ನ್ಯಾಯಾಲಯಕ್ಕೆ ಶುಕ್ರವಾರ ಹಾಜರುಪಡಿಸಲಾಗಿತ್ತು. ಇಬ್ಬರನ್ನು 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ' ಎಂದು ಎಸ್ಪಿ ಅಶುತೋಷ್ ಗುಪ್ತ ಹೇಳಿದ್ದಾರೆ.

'ಆಮಿಷವೊಡ್ಡಿ, ನಿರ್ಜನ ಪ್ರದೇಶಕ್ಕೆ ಬಾಲಕಿಯನ್ನು ಕರೆದೊಯ್ದಿದ್ದ ಆರೋಪಿಗಳು, ನಂತರ ಆಕೆ ಮೇಲೆ ಅತ್ಯಾಚಾರ ಎಸಗಿದ್ದಾರೆ' ಎನ್ನಲಾಗಿದೆ.

'ಆರೋಪಿಗಳು ಬಡಿಗೆ ಅಥವಾ ಬೇರೆ ವಸ್ತುವೊಂದನ್ನು ಬಾಲಕಿಯ ಗುಪ್ತಾಂಗದಲ್ಲಿ ತುರುಕಿದ್ದರು ಎಂಬುದನ್ನು ವೈದ್ಯಕೀಯ ಪರೀಕ್ಷೆ ವರದಿ ಬಂದ ನಂತರವಷ್ಟೇ ಖಚಿತಪಡಿಸಲು ಸಾಧ್ಯ' ಎಂದು ಎಸ್ಪಿ ಹೇಳಿದ್ದಾರೆ.

'ವಿಪರೀತ ರಕ್ತಸ್ರಾವದಿಂದ ಅಸ್ವಸ್ಥಗೊಂಡಿದ್ದ ಬಾಲಕಿಯನ್ನು ರೇವಾ ನಗರದ ಸಂಜಯ್ ಗಾಂಧಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಹೆಚ್ಚಿನ ಚಿಕಿತ್ಸೆಯ ಅಗತ್ಯ ಕಂಡುಬಂದಲ್ಲಿ ಬಾಲಕಿಯನ್ನು ಭೋಪಾಲ್ ಅಥವಾ ದೆಹಲಿಯ ಆಸ್ಪತ್ರೆಗೆ ಕರೆದೊಯ್ಯಲಾಗುವುದು' ಎಂದೂ ತಿಳಿಸಿದ್ದಾರೆ.

ಈ ಘಟನೆ ಗೊತ್ತಾದ ಬೆನ್ನಲ್ಲೇ, ಆರೋಪಿಗಳ ಕುಟುಂಬಗಳಿಗೆ ಮೈಹರ್ ಪುರಸಭೆ ಅಧಿಕಾರಿಗಳು ನೋಟಿಸ್ ಜಾರಿ ಮಾಡಿ, ಅವರಿಗೆ ಸೇರಿದ ಜಮೀನು ಮತ್ತು ಕಟ್ಟಡಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸುವಂತೆ ಸೂಚಿಸಿತ್ತು.

'ಆರೋಪಿಗಳಿಗೆ ಸೇರಿದ ಮನೆ ಗಳನ್ನು ಕಾನೂನುಬಾಹಿರವಾಗಿ ನಿರ್ಮಿಸಿರುವುದು ದಾಖಲೆಗಳ ಪರಿಶೀಲನೆಯಿಂದ ತಿಳಿದುಬಂದ ಕಾರಣ, ಶನಿವಾರ ಬೆಳಿಗ್ಗೆ ಎರಡೂ ಮನೆಗಳನ್ನು ನೆಲಸಮಗೊಳಿಸಲಾಯಿತು' ಎಂದು ಅಧಿಕಾರಿಗಳು ತಿಳಿಸಿದ್ದಾರೆ. 'ಮನೆಗಳನ್ನು ನೆಲಸಮಗೊಳಿಸಲು ಸಿಬ್ಬಂದಿ ಸ್ಥಳಕ್ಕೆ ತೆರಳಿದ ವೇಳೆ, ತನಿಖೆ ಪೂರ್ಣಗೊಂಡ ಬಳಿಕ ಕ್ರಮ ಕೈಗೊಳ್ಳುವಂತೆ ಭದೋಲಿಯಾ ಕುಟುಂಬದ ಸದಸ್ಯರು ಮನವಿ ಮಾಡಿದರು. ಆದರೆ, ಅಧಿಕಾರಿಗಳು ಮನೆಗಳನ್ನು ನೆಲಸಮಗೊಳಿಸಿದರು' ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ.

ವಜಾ: ಆರೋಪಿಗಳು ಪಟ್ಟಣದ ಮಾ ಶಾರದಾದೇವಿ ಮಂದಿರದ ನೌಕರರಾಗಿದ್ದರು.

'ಘಟನೆ ಹಿನ್ನೆಲೆಯಲ್ಲಿ ರವೀಂದ್ರ ಕುಮಾರ್ ಹಾಗೂ ಅತುಲ್ ಭದೋಲಿಯಾ ಅವರನ್ನು ನೌಕರಿಯಿಂದ ವಜಾಗೊಳಿಸಿ, ಅವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ' ಎಂದು ಮಂದಿರ ನಿರ್ವಹಣಾ ಸಮಿತಿ ತಿಳಿಸಿದೆ.

ಏಷ್ಯನ್ ವೇಟ್‌ಲಿಫ್ಟಿಂಗ್: ಭಾರತಕ್ಕೆ 2 ಬೆಳ್ಳಿ

ಗ್ರೇಟರ್ ನೊಯ್ಡಾ (ಪಿಟಿಐ): ಭಾರತದ ಸೇನಾಪತಿ ಗುರು ನಾಯ್ಡು ಮತ್ತು ಎಂ.ಟಾಮ್ಚೌ ಮೀತಿ ಅವರು ಏಷ್ಯನ್ ಯೂತ್ ಮತ್ತು ಜೂನಿಯರ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನ ಪುರುಷರ 55 ಕೆ.ಜಿ. ವಿಭಾಗದಲ್ಲಿ ಶನಿವಾರ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕಗಳನ್ನು ಗೆದ್ದುಕೊಂಡರು.

ಈ ವಿಭಾಗದಲ್ಲಿ ವಿಶ್ವ ದಾಖಲೆ ಹೊಂದಿರುವ ವಿಯೆಟ್ನಾಮಿನ ಕೆ.ದುವೊಂಗ್ ಚಿನ್ನ ಗೆದ್ದರು. 55 ಕೆ.ಜಿ. ಜೂನಿಯರ್ ವಿಭಾಗದಲ್ಲಿ ಮುಕುಂದ್ ಸಂತೋಷ್ ಅಹಿರ್ ಬೆಳ್ಳಿಯ ಪದಕ ತಮ್ಮದಾಗಿಸಿಕೊಂಡರು. ವಿಯೆಟ್ನಾಮಿನ ತು ಟುಂಗ್ ಡೊ ಮತ್ತು ಟುವಾನ್ ಕೀಟ್ ದುವೊಂಗ್ ಕ್ರಮವಾಗಿ ಚಿನ್ನ ಮತ್ತು ಕಂಚಿನ ಪದಕ ಗಳಿಸಿದರು. ಗೌತಮ ಬುದ್ಧ ವಿಶ್ವವಿದ್ಯಾಲಯದಲ್ಲಿ ಗುರುವಾರ ಆರಂಭವಾದ ಈ ಚಾಂಪಿಯನ್‌ಷಿಪ್ ಆಗಸ್ಟ್ 5ರವರೆಗೆ ನಡೆಯಲಿದೆ.

ಬಿಎಫ್‌ಸಿ ಸೇರಿದ ವಿಲಿಯಮ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ಟ್ರೇಲಿಯಾದ ಸ್ಟ್ರೈಕರ್ ರಾಯನ್ ವಿಲಿಯಮ್ಸ್ ಅವರು ಒಂದು ವರ್ಷದ ಅವಧಿಗೆ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ತಂಡವನ್ನು ಸೇರಿಕೊಂಡಿದ್ದಾರೆ.


2023–24ರ ಋತುವಿಗೆ ಮುನ್ನ ತನ್ನ ಫಾರ್ವರ್ಡ್ ವಿಭಾಗವನ್ನು ಬಲಪಡಿಸುವ ನಿಟ್ಟಿನಲ್ಲಿ ಬಿಎಫ್‌ಸಿ ಈ ಹೆಜ್ಜೆಯಿಟ್ಟಿದೆ. ಬೆಂಗಳೂರಿನ ತಂಡ ಕಳೆದ ವಾರ ಇಂಗ್ಲೆಂಡ್‌ನ ಸ್ಟ್ರೈಕರ್ ಕರ್ಟಿಸ್ ಮೇನ್ ಅವರನ್ನು ತಂಡಕ್ಕೆ ಸೇರಿಸಿಕೊಂಡಿತ್ತು.


ರಾಯನ್ ಅವರು ಈಚೆಗೆ ಆಸ್ಟ್ರೇಲಿಯಾದ ಎ–ಲೀಗ್‌ನಲ್ಲಿ ಪರ್ತ್ ಗ್ಲೋರಿ ತಂಡದ ಪರ ಆಡಿದ್ದರು. 29 ವರ್ಷದ ಅವರು ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್‌ನ ಹಲವು ಕ್ಲಬ್‌ಗಳನ್ನು ಪ್ರತಿನಿಧಿಸಿದ್ದಾರೆ. ಆಸ್ಟ್ರೇಲಿಯಾದ 20 ಮತ್ತು 23 ವರ್ಷ ವಯಸ್ಸಿನೊಳಗಿನವರ ರಾಷ್ಟ್ರೀಯ ತಂಡದಲ್ಲೂ ಆಡಿದ್ದರು.



ರ್‍ಯಾನ್ ವಿಲಿಯಮ್ಸ್

'ರಾಯನ್ ಅವರೊಂದಿಗೆ ಒಪ್ಪಂದ ಮಾಡಿಕೊಂಡಿರುವುದು ಸಂತಸ ಉಂಟುಮಾಡಿದೆ. ಫಾರ್ವರ್ಡ್ ಮಾತ್ರವಲ್ಲದೆ, ಮಿಡ್‌ಫೀಲ್ಡ್‌ನಲ್ಲೂ ಆಡುವ ಸಾಮರ್ಥ್ಯ ಅವರಿಗಿದೆ. ಇಂಗ್ಲೆಂಡ್‌ನ ಕ್ಲಬ್‌ಗಳಲ್ಲಿ ಆಡುತ್ತಿದ್ದಾಗಲೇ ನಾನು ಅವರ ಬಗ್ಗೆ ತಿಳಿದುಕೊಂಡಿದ್ದೆ' ಎದು ಬಿಎಫ್‌ಸಿ ಕೋಚ್ ಸೈಮನ್ ಗ್ರೇಸನ್ ಹೇಳಿದ್ದಾರೆ. 7ನೇ ಸಂಖ್ಯೆಯ ಪೋಷಾಕು ಧರಿಸಿ ಆಡಲಿರುವ ಅವರು, ಈ ಋತುವಿನ ಆರಂಭಕ್ಕೆ ಮುನ್ನವೇ ತಂಡವನ್ನು ಸೇರಿಕೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.








ಕಪ್ಪತ್ತಗುಡ್ಡ

ಪ್ರಾಣಿಗಳ ಸುಖೀ 'ಅಡ್ಡ'



ಇದೇ ಮೊದಲ ಬಾರಿಗೆ ಕಪ್ಪತ್ತಗುಡ್ಡದಲ್ಲಿ ಚಿಂಕಾರಗಳು ಪತ್ತೆಯಾಗಿವೆ. ರಸ್ಟಿ ಸ್ಪಾಟೆಡ್ ಕ್ಯಾಟ್ ಹಾಗೂ ಮೂರು ಜಾತಿಯ ಹುಲ್ಲೆಗಳೂ ಕಂಡಿವೆ. ಹೈನಾಗಳ ಸಂಖ್ಯೆ ಹೆಚ್ಚಾಗಿರುವುದು ಕಾಡು ಶುದ್ಧವಾಗಿರುವುದರ ಸಂಕೇತ. ಜೀವವೈವಿಧ್ಯ ಎಷ್ಟು ಹೆಚ್ಚಾಗಿದೆ ಎನ್ನುವ ಬಗೆಗೆ ಇನ್ನಷ್ಟು ಅಧ್ಯಯನಗಳು ನಡೆಯುತ್ತಿವೆ.



ಕ್ಯಾಮೆರಾ ಟ್ರ್ಯಾಪ್‌ನಲ್ಲಿ ಸೆರೆಸಿಕ್ಕಿರುವ ಕೊಂಡುಕುರಿ

ಕೆ.ಎಂ.ಸತೀಶ್ ಬೆಳ್ಳಕ್ಕಿ

ಉತ್ತರ ಕರ್ನಾಟಕದ ಸಹ್ಯಾದ್ರಿ ಕಪ್ಪತ್ತಗುಡ್ಡವನ್ನು ವನ್ಯಜೀವಿಧಾಮ ಎಂದು ಘೋಷಿಸಿದ ನಂತರ ಕಪ್ಪತ್ತಗಿರಿಯ ಸೊಗಸಿಗೆ ಮತ್ತಷ್ಟು ರಮ್ಯತೆ ಮೂಡಿದೆ. ಕುರುಚಲು ಕಾಡಿನ ಸೊಬಗು ದಿನೇ ದಿನೇ ದಟ್ಟವಾಗುತ್ತಿದೆ. ಖನಿಜ ನಿಕ್ಷೇಪಗಳು ಸುರಕ್ಷಿತಗೊಂಡಿವೆ. ಔಷಧೀಯ ಗುಣವುಳ್ಳ ಸಸ್ಯ ಸಂಪತ್ತು ವೃದ್ಧಿಸಿ, ಕನ್ನಡ ನಾಡಿನ ಜೀವನಾಡಿ ಎನಿಸಿದೆ. ಈ ಹಸಿರು ಸರಪಳಿಯ ಜತೆಗೆ ಇಲ್ಲೀಗ ವನ್ಯಜೀವಿಗಳ ಸಂತತಿಯೂ ಹೆಚ್ಚಾಗಿರುವುದು ಗಮನಾರ್ಹ ವಿಷಯ.

ಗದಗ ತಾಲ್ಲೂಕಿನ ಬಿಂಕದಕಟ್ಟಿಯಿಂದ ಮುಂಡರಗಿ ತಾಲ್ಲೂಕಿನ ಶಿಂಗಟಾಲೂರಿನವರೆಗೆ ಕಪ್ಪತ್ತಗುಡ್ಡ ಚಾಚಿಕೊಂಡಿದೆ. ಶಿರಹಟ್ಟಿ ಸೇರಿ ಮೂರು ತಾಲ್ಲೂಕುಗಳಲ್ಲಿ 65 ಕಿ.ಮೀಗಳಷ್ಟು ಉದ್ದಕ್ಕೆ ಕವಲು ಕವಲಾಗಿ ಸಣ್ಣ ಮತ್ತು ದೊಡ್ಡ ಗುಡ್ಡಗಳ ಸಾಲುಗಳಿಂದ ಕಂಗೊಳಿಸುವ ಕಪ್ಪತ್ತಗುಡ್ಡದಲ್ಲಿ ಈಗ ಕಾಡುಪ್ರಾಣಿಗಳ ಸಂಖ್ಯೆ ವೃದ್ಧಿಸಿರುವುದು ಸಮೀಕ್ಷೆಯಿಂದ ದೃಢಪಟ್ಟಿದೆ. ಈ ಸಂಗತಿ ಪರಿಸರಪ್ರಿಯರಿಗೆ ಸಂತಸ ತರಿಸಿದೆ.

ಕಪ್ಪತ್ತಗುಡ್ಡದಲ್ಲಿ ಜೀವವೈವಿಧ್ಯ ಹೆಚ್ಚಾಗಿದೆ. ಆದರೆ, ಇಲ್ಲಿ ಎಷ್ಟು ಮಾಂಸಾಹಾರಿ ಪ್ರಾಣಿಗಳಿವೆ, ಸಸ್ಯಾಹಾರಿಗಳು ಎಷ್ಟಿವೆ, ಅವು ಏನನ್ನು ಭಕ್ಷಿಸುತ್ತವೆ, ಕಾಡಿನ ಯಾವ ಭಾಗದಲ್ಲಿ ಹೆಚ್ಚಿನ ಪ್ರಾಣಿಗಳಿವೆ, ಕಡಿಮೆ ಇರುವ ಜಾಗದಲ್ಲಿ ಪ್ರಾಣಿಗಳ ಸಂತತಿ ಹೆಚ್ಚಿಸಲು ಏನು ಕ್ರಮವಹಿಸಬೇಕು ಎಂಬೆಲ್ಲಕ್ಕೆ ಸಂಬಂಧಿಸಿದಂತೆ ಈವರೆಗೆ ಯಾವುದೇ ವೈಜ್ಞಾನಿಕ ಅಧ್ಯಯನಗಳು ನಡೆದಿರಲಿಲ್ಲ.

ಕಪ್ಪತ್ತಗುಡ್ಡ ವನ್ಯಜೀವಿ ಧಾಮದಲ್ಲಿ ಆಶ್ರಯ ಪಡೆದಿರುವ ಸಸ್ಯಾಹಾರಿ ಮತ್ತು ಮಾಂಸಾಹಾರಿ ಪ್ರಾಣಿಗಳ ನೆಲೆ ಕಂಡುಹಿಡಿಯಲಿಕ್ಕೆ ಗದಗ ಜಿಲ್ಲಾ ಡಿಸಿಎಫ್ ದೀಪಿಕಾ ಬಾಜಪೇಯಿ ವಿಶೇಷ ಆಸ್ಥೆ ವಹಿಸಿ ಪ್ರಾಥಮಿಕ ಸಮೀಕ್ಷೆ ನಡೆಸಿದ್ದಾರೆ. ಇದರಿಂದ ದೊರೆತ ಫಲಿತಾಂಶ ಅಚ್ಚರಿಯಿಂದ ಕೂಡಿದ್ದು, ಎಲ್ಲರಲ್ಲೂ ಖುಷಿ ತರಿಸಿದೆ. ಅರಣ್ಯ ಇಲಾಖೆ ಸಿಬ್ಬಂದಿ ಸಂಗ್ರಹಿಸಿದ ಮಾಹಿತಿ ವಿಶ್ಲೇಷಣೆಗೆ ಒಳಪಡಲಿದ್ದು, ಕಪ್ಪತ್ತಗುಡ್ಡದಲ್ಲಿ ಯಾವ ಪ್ರಾಣಿಗಳು ಎಷ್ಟು ಸಂಖ್ಯೆಯಲ್ಲಿವೆ ಎಂಬ ನಿಖರ ಮಾಹಿತಿ ಮುಂದೆ ಸಿಗಲಿದೆ.

ಡೆಹರಾಡೂನ್‌ನ ಭಾರತೀಯ ವನ್ಯಜೀವಿ ಸಂಸ್ಥೆಯಲ್ಲಿ ವಿಜ್ಞಾನಿಯಾಗಿರುವ ಡಾ. ಸಾಲ್ವಡಾರ್ ಲಿಂಗ್ದೊಹ್ ಕಳೆದ ವರ್ಷ ಎರಡು ಬಾರಿ ಕಪ್ಪತ್ತಗುಡ್ಡಕ್ಕೆ ಭೇಟಿ ನೀಡಿದ್ದರು. ಇವರು ತೋಳಗಳ ಅಧ್ಯಯನದಲ್ಲಿ ವಿಶೇಷ ಪರಿಣತಿ ಸಾಧಿಸಿದ್ದಾರೆ. ಗದಗ ಅರಣ್ಯ ಇಲಾಖೆ ಡಿಸಿಎಫ್ ದೀಪಿಕಾ ಬಾಜಪೇಯಿ ಇವರ ಜತೆಗೆ ಚರ್ಚಿಸಿ ಕಪ್ಪತ್ತಗುಡ್ಡದಲ್ಲಿರುವ ವನ್ಯಜೀವಿಗಳ ಕುರಿತಾಗಿ ವೈಜ್ಞಾನಿಕ ಸಮೀಕ್ಷೆ ನಡೆಸುವ ಯೋಜನೆ ರೂಪಿಸಿ, ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದ್ದರು. ಅದಕ್ಕೆ ಅನುಮತಿ ಸಿಕ್ಕ ನಂತರ ಗದಗ ಅರಣ್ಯ ಇಲಾಖೆಯು ಭಾರತೀಯ ವನ್ಯಜೀವಿ ಸಂಸ್ಥೆ, ದಾಂಡೇಲಿಯ ಕಾಳಿ ಹುಲಿ ಸಂರಕ್ಷಿತ ಪ್ರದೇಶದ ಸಿಬ್ಬಂದಿಯ ನೆರವಿನಿಂದ ಪ್ರಾಥಮಿಕ ಅಧ್ಯಯನ ನಡೆಸಿದೆ.



ಕ್ಯಾಮೆರಾ ಟ್ರ್ಯಾಪ್‌ನಲ್ಲಿ ಸೆರೆಸಿಕ್ಕಿರುವ ಚಿರತೆ

ಅಧ್ಯಯನ ಆರಂಭಿಸುವುದಕ್ಕೂ ಮುನ್ನ ಇಲಾಖೆಯಲ್ಲಿ ಚುರುಕುತನದಿಂದ ಗುರುತಿಸಿಕೊಂಡಿದ್ದ ಆರ್‌ಎಫ್‌ಒಗಳಾದ ಸುಮಾ ಹಳೆಹೊಳಿ, ಮಹೇಶ ಮರೇಣ್ಣವರ ಹಾಗೂ ಡಿಆರ್‌ಎಫ್‌ಒ ಸೋಮನಗೌಡ ಪಾಟೀಲ ಅವರನ್ನು ತರಬೇತಿ ಪಡೆಯಲು ಡೆಹರಾಡೂನ್‌ಗೆ ಕಳುಹಿಸಲಾಗಿತ್ತು. ಅಲ್ಲಿ ಅವರು ಮೂರು ತಿಂಗಳ ಕಾಲ ಇಂಟೆನ್ಸಿವ್ ವೈಲ್ಡ್‌ಲೈಫ್ ಮ್ಯಾನೇಜ್‌ಮೆಂಟ್ ಕೋರ್ಸ್ ಪೂರ್ಣಗೊಳಿಸಿ, ವಿಶೇಷ ಕೌಶಲ ಪಡೆದುಕೊಂಡರು. ಡೆಹರಾಡೂನ್‌ನಲ್ಲಿ ತರಬೇತಿ ಪಡೆದಿದ್ದ ಸಿಬ್ಬಂದಿ ನೇತೃತ್ವದಲ್ಲಿ ಸ್ಥಳೀಯವಾಗಿ ಹಲವರಿಗೆ ತರಬೇತಿ ಕೊಡಿಸಿ ಒಂದೂವರೆ ತಿಂಗಳ ಕಾಲ ಸಮೀಕ್ಷೆ ನಡೆಸಲಾಗಿದೆ. ಇವರೆಲ್ಲರೂ ಮೇ 7ರಿಂದ ಜುಲೈ 15ರವರೆಗೆ ಕಪ್ಪತ್ತಗುಡ್ಡ ವನ್ಯಜೀವಿಧಾಮದಲ್ಲಿರುವ ಸಸ್ಯಾಹಾರಿ ಹಾಗೂ ಪ್ರಾಣಿಭಕ್ಷಕ ಪ್ರಾಣಿಗಳ ಸಂಖ್ಯೆಯ ಬಗ್ಗೆ, ಅವುಗಳ ಆಹಾರ ಪದ್ಧತಿ ಬಗ್ಗೆ ಪ್ರಾಥಮಿಕ ಅಧ್ಯಯನ ನಡೆಸಿದ್ದಾರೆ.

ಅರಣ್ಯ ಇಲಾಖೆ ಸಿಬ್ಬಂದಿ ಕ್ಯಾಮೆರಾ ಟ್ರ್ಯಾಪ್ ವಿಧಾನ ಅನುಸರಿಸುವುದಕ್ಕೂ ಮುನ್ನ ಎರಡು ಬಗೆಯಲ್ಲಿ ವೈಜ್ಞಾನಿಕ ಸಮೀಕ್ಷೆ ನಡೆಸಿದ್ದರು. ಸೈನ್ ಸರ್ವೆ ವಿಧಾನದಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಪ್ರತಿನಿತ್ಯ ಮೂರರಿಂದ ಹತ್ತು ಕಿ.ಮೀ.ವರೆಗೆ ಉದ್ದಕ್ಕೆ ನಡೆಯುತ್ತಿದ್ದರು. ಹೀಗೆ ನಡೆಯುತ್ತಿರುವಾಗ ತಮ್ಮ ಎಡ ಹಾಗೂ ಬಲಭಾಗದಲ್ಲಿ ಯಾವುದಾದರೂ ಪ್ರಾಣಿಗಳು ಪತ್ರ್ಯಕ್ಷವಾಗಿ ಕಾಣಿಸಿದರೆ ಗುರುತು ಮಾಡಿಕೊಳ್ಳುತ್ತಿದ್ದರು. ಅದರ ಜತೆಗೆ ಪ್ರಾಣಿಗಳ ಮಲ ಅಥವಾ ನೆಲದಲ್ಲಿ, ಗಿಡಗಳಲ್ಲಿ ಪ್ರಾಣಿಗಳು ಪರಚಿತ ಗುರುತುಗಳು ಕಂಡುಬಂದರೆ ಜಿಪಿಎಸ್ ರೀಡಿಂಗ್ ಮೂಲಕವೇ ದಾಖಲಿಸುತ್ತ ಬಂದರು.

9ನೇ ಪುಟಕ್ಕೆ...

ವನ್ಯಜೀವಿ, ಸಸ್ಯ ಸಂಪತ್ತು ವೃದ್ಧಿಸಲು ಕಾರಣವೇನು?

ಕಪ್ಪತ್ತಗುಡ್ಡವನ್ನು ವನ್ಯಜೀವಿಧಾಮವೆಂದು ಘೋಷಣೆ ಮಾಡಿದ ನಂತರ ಮಾನವ ಹಸ್ತಕ್ಷೇಪ ತುಂಬ ಕಡಿಮೆ ಆಗಿದೆ. ಕಳ್ಳ ಬೇಟೆ ತಡೆಗೆ ಅರಣ್ಯ ಇಲಾಖೆ ವಿಶೇಷ ಕ್ಯಾಂಪ್‌ಗಳನ್ನು ಆಯೋಜಿಸಿ, ಗಸ್ತು ಬಿಗಿಗೊಳಿಸಿದೆ.

ಬೇಸಿಗೆ ಸಮಯದಲ್ಲಿ ವನ್ಯಜೀವಿಗಳು ಕುಡಿಯುವ ನೀರು ಅರಸಿ, ಜನವಸತಿಯ ಸನಿಹಕ್ಕೆ ಬರುತ್ತಿದ್ದವು. ಇದನ್ನು ತಪ್ಪಿಸಲು ಕಪ್ಪತ್ತಗುಡ್ಡದ ವಿವಿಧ ಭಾಗಗಳಲ್ಲಿ ಕೃತಕ ಹೊಂಡಗಳನ್ನು ನಿರ್ಮಿಸಲಾಗಿದೆ. ಬೇಸಿಗೆ ಕಾಲದಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಹೊಂಡಕ್ಕೆ ನೀರು ತುಂಬಿಸಿ, ಪ್ರಾಣಿಗಳ ದಾಹ ನೀಗಿಸುತ್ತಿದ್ದಾರೆ.

'ಕಪ್ಪತ್ತಗುಡ್ಡ ವನ್ಯಜೀವಿಧಾಮ ಎಂದು ಘೋಷಣೆ ಆಗಿರುವುದರಿಂದ ಒಂದು ಪ್ರಾಜೆಕ್ಟ್ ಮಾಡಿಕೊಂಡು ವಿಶೇಷ ಅಧ್ಯಯನ ನಡೆಸಲಾಗುತ್ತಿದೆ. ಯಾವುದೇ ಜಾಗವನ್ನು ಸಂರಕ್ಷಿಸಿದರೆ ಅಲ್ಲಿ ಕಾಡು ಹೆಚ್ಚುತ್ತದೆ. ಪ್ರಾಣಿಗಳ ಸಂಖ್ಯೆಯೂ ವೃದ್ಧಿಸುತ್ತದೆ. ಆಹಾರ ಸರಪಳಿ ಬಿಗಿಗೊಂಡಂತೆ ಎಲ್ಲವೂ ಸಮೃದ್ಧಗೊಳ್ಳುತ್ತದೆ' ಎಂದು ಸಿಸಿಎಫ್ ಯತೀಶ್ ಕುಮಾರ್ ಆಶಾವಾದದಿಂದ ಹೇಳುತ್ತಾರೆ.

'ವನ್ಯಜೀವಿಧಾಮ ಆದ ನಂತರ ಕಪ್ಪತ್ತಗುಡ್ಡಕ್ಕೆ ವಿಶೇಷ ಮಹತ್ವ ಬಂದಿದೆ. ಬೇಸಿಗೆಯಲ್ಲಿ ಕಾಡ್ಗಿಚ್ಚಿನಿಂದ ಆಗುವ ಹಾನಿ ತಪ್ಪಿಸಲು ಬೆಂಕಿ ರೇಖೆಗಳನ್ನು ನಿರ್ಮಿಸಿ ವಿಶೇಷ ಗಮನ ಹರಿಸಲಾಗುತ್ತಿದೆ. ಬೇಸಿಗೆಯಲ್ಲಿ ಕಾಡಿನಲ್ಲಿರುವ ಬಾಧೆ ಹುಲ್ಲು ಬೆಂಕಿಗೆ ಆಹುತಿ ಆಗುತ್ತದೆ. ಮಳೆಗಾಲದಲ್ಲಿ ಮತ್ತೇ ಹಸಿರು ನಳನಳಿಸುತ್ತದೆ. ಬೆಂಕಿ ಕಾಣಿಸಿಕೊಂಡ ತಕ್ಷಣ ವನ್ಯಜೀವಿಗಳು ಸುರಕ್ಷಿತ ಸ್ಥಳಕ್ಕೆ ಓಡಿ ಹೋಗುತ್ತವೆ. ಹೀಗಾಗಿ ಬೆಂಕಿ ಆಕಸ್ಮಿಕದಲ್ಲಿ ಜೀವಹಾನಿ ಸಂಭವಿಸುವುದು ವಿರಳ. ವನ್ಯಜೀವಿಧಾಮ ಘೋಷಣೆಯ ನಂತರ ವನ್ಯಜೀವಿಗಳ ರಕ್ಷಣೆಗೆ ಸರ್ಕಾರದಿಂದ ವಿಶೇಷ ಅನುದಾನ ಸ್ವಲ್ಪ ಮಟ್ಟದಲ್ಲಿ ಸಿಗುತ್ತದೆ. ಮಾನವ ಮತ್ತು ವನ್ಯಜೀವಿ ಸಂಘರ್ಷ ತಡೆಗೆ ಇದು ನೆರವಾಗಲಿದೆ' ಎನ್ನುತ್ತಾರೆ ಡಿಸಿಎಫ್ ದೀಪಿಕಾ ಬಾಜಪೇಯಿ.



ದೀಪಿಕಾ ಬಾಜಪೇಯಿ

'ಕಪ್ಪತ್ತಗುಡ್ಡ, ವನ್ಯಜೀವಿಗಳ ಸಂತತಿ ಪೊರೆಯಲು ಬೇಕಿರುವ ಅತ್ಯುತ್ತಮ ಶಕ್ತಿ ಹೊಂದಿದೆ. ಈಗ ನಡೆದಿರುವ ಪ್ರಾಥಮಿಕ ಅಧ್ಯಯನವು ನಿರಂತರ ಮೇಲ್ವಿಚಾರಣೆ ಮೂಲಕ ಭವಿಷ್ಯದ ಸಂರಕ್ಷಣೆ ಕಾರ್ಯಕ್ರಮಗಳನ್ನು ನಡೆಸಲು ಆಧಾರವಾಗಲಿದೆ' ಎಂದು ಭಾರತೀಯ ವನ್ಯಜೀವಿ ಸಂಸ್ಥೆಯ ವಿಜ್ಞಾನಿ ಡಾ. ಸಾಲ್ವಡಾರ್ ಲಿಂಗ್ದೊಹ್ ಹೇಳಿದ್ದು ಭವಿಷ್ಯದ ಕುರಿತ ಭರವಸೆಯ ಮಾತಿನಂತೆ ಇತ್ತು.

ಪರಿಸರ ಕಾಳಜಿಗೆ 'ಸಾರ' ಸ್ವರ

'ಸಾರ' ಆವರಣ



ಡಿ.ಎಸ್.ಚೌಗಲೆ

> ಪರಿಸರ ಕಾಳಜಿಯನ್ನು ಕಲಾ ಚಳವಳಿಯ ಮಾದರಿಗೆ ಏರಿಸಿರುವುದು ಹೊಸನಗರದ ಡೊಂಬೆಕೊಪ್ಪದಲ್ಲಿ ಇರುವ 'ಸಾರ'. ಇಲ್ಲಿನ ಭಿತ್ತಿಗಳು, ವಾತಾವರಣ ತೋರುವ ಪರಿಸರ ಲೋಕ ಅರಿವಿನ ಗುರುವೇ ಹೌದು.

ಪ್ರಪಂಚದ ನೈಸರ್ಗಿಕ ಸಂಪತ್ತು ಮಾನವ ಆಕ್ರಮಣಕ್ಕೆ ನಲುಗಿ ನಶಿಸುತ್ತಿದೆ. ನಿಸರ್ಗ ಸಂಪನ್ಮೂಲ ಬಗೆದು ಮಾರುವ ಬೃಹತ್ ಬಹುರಾಷ್ಟ್ರೀಯ ಉದ್ಯಮಗಳು, ನೈಸರ್ಗಿಕ ಅಸಮತೋಲನದಿಂದ ಜಾಗತಿಕ ತಾಪಮಾನದಲ್ಲಿ ಹುಟ್ಟಿಕೊಂಡ ಏರಪೇರು, ಋತುಗಳಲ್ಲಿ ಕಾಲ ಪಲ್ಲಟಗಳು, ಬೆಳೆ ಬೆಳೆದು ನಿಂತಾಗ ಅಕಾಲ ಅಪ್ಪಳಿಸುವ ಚಂಡಮಾರುತಗಳ ವರ್ಷಾ ಅಬ್ಬರ... ಹೀಗೆಷ್ಟೋ ಎಣಿಕೆಗೆ ದಕ್ಕದಷ್ಟು ಪ್ರಾಕೃತಿಕ ವಿಕೋಪಗಳು ಭೂತಾಯಿ ಮೇಲೆ ಸಂಭವಿಸುತ್ತಲೇ ಇವೆ. ಸಕಲ ಜೀವರಾಶಿಗಳಿಗೆ ನೆಲದ ನೆತ್ತಿಯ ಮೇಲೆ ಬದುಕುವ ಹಕ್ಕನ್ನು ಆ ನಿಸರ್ಗವೇ ನೀಡಿದೆ. ಹಕ್ಕಿ ಪಕ್ಕಿ, ಕ್ರಿಮಿ–ಕೀಟ, ಕಾಡು ನಾಡಿನ ಪ್ರಾಣಿ ವರ್ಗ... ಹೀಗೆ ಎಲ್ಲರೂ, ಎಲ್ಲವೂ ಸಮತೋಲನ ಕಾಯ್ದುಕೊಂಡು ಬಾಳಿದಾಗ ಮಾತ್ರ ಸಕಲರ ಬದುಕು ಚೆಂದ ಕಾಣಲಿದೆ. ಇಂಥ ತಾರ್ಕಿಕತೆ ಮೂಲಕ ನೈಜ ಪ್ರಕೃತಿಯನ್ನು ಕಾಪಿಡುವ ಪಣ ತೊಟ್ಟಿದ್ದೆ 'ಸಾರ' ಸೆಂಟರ್ (ಸಸ್ಟೇನೆಬಲ್ ಅಲ್ಟರ್‌ನೇಟಿವ್ಸ್ ಫಾರ್ ರೂರಲ್ ಅಕಾರ್ಡ್). ಇಂಥ 'ಸಾರ'ತ್ವದ ಕನಸನ್ನು ನನಸಾಗಿಸಲು ಒಂದು ಚಳವಳಿ ಮಾದರಿಯಲ್ಲಿ ಹೊರಟವರು ಅಂತರರಾಷ್ಟ್ರೀಯ ಖ್ಯಾತಿಯ ಆಧುನಿಕ ಶಿಲ್ಪ ಕಲಾವಿದ ಅರುಣಕುಮಾರ್ ಎಚ್.ಜಿ. ಅವರ ಹೆಗಲಿಗೆ ಹೆಗಲಾಗಿ ನಿಂತವರು ಹೆಗ್ಗೋಡಿನ ರಂಗಕರ್ಮಿ ಏಸು ಪ್ರಕಾಶ, ಧನುಷ್‌ಕುಮಾರ, ಶಿವಕುಮಾರ್, ಕುಮಾರ್ ಅವರುಗಳು. ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕಿನ ಡೊಂಬೆಕೊಪ್ಪದ ಕಾಡಿನ ಮಧ್ಯೆ ಈ ಕೇಂದ್ರವಿದೆ.

'ಸಾರ' ಕೇಂದ್ರದ ಉದ್ದೇಶ ಸ್ಪಷ್ಟವಾಗಿದೆ. ಭೂಮಿ ಲಕ್ಷಾಂತರ ವರ್ಷಗಳಿಂದ ವಿಕಸಿತಗೊಂಡು ವರ್ತಮಾನದ ಹಂತಕ್ಕೆ ಬಂದು ನಿಂತಿದೆ ಮತ್ತು ಭವಿಷ್ಯದಲ್ಲಿ ವಿಕಸಿತವಾಗುತ್ತಲೇ ಇರುತ್ತದೆ. ಈ ವಿಸ್ಮಯಕಾರಿ ಬುವಿಯಲ್ಲಿ ಅಸಂಖ್ಯಾತ ಜೀವ ಸಂಕುಲಗಳು, ಕೀಟಗಳು, ಸಸ್ಯಗಳು, ಪ್ರಾಣಿಗಳು, ಪಕ್ಷಿಗಳು ಮತ್ತು ಮಾನವ ಬದುಕಿಗೆ ಸಂಬಂಧಿಸಿದಂತೆ ಬಹು ಅನುಕೂಲಕರ ವಾತಾವರಣವನ್ನು ನಿರ್ಮಿಸಿವೆ. ಪ್ರತಿ ಜೀವ ತನ್ನ ಉಳಿವಿಗೆ ಅವಲಂಬಿತವೂ ಹೌದು. ಪ್ರಕೃತಿ ಸಂತುಲನದ ಸೂಕ್ಷ್ಮದಲ್ಲೂ ಈ ಅವಲಂಬನೆಯ ಪಾತ್ರವಿದೆ. ಹೀಗೆ ಒಟ್ಟು ಜೀವಸಂಕುಲಗಳ ಉಳಿವು ಮತ್ತು ಸುಸ್ಥಿರತೆಗೆ ಮಾನವನ ಹೊಣೆಗಾರಿಕೆ ಬಹು ಮುಖ್ಯವಾದುದು. ಮನುಷ್ಯ ಪ್ರಬಲ ಚಿಂತನಾ ಶಕ್ತಿ ಹೊಂದಿದ ಪ್ರಾಣಿ. ಮನುಷ್ಯನ ಕುತೂಹಲಕರ ಮನಸ್ಸು ಜೀವ ದ್ರವ್ಯಗಳ ಬೆಳವಣಿಗೆಯನ್ನು ಅರ್ಥೈಸಲು ನೆರವಾಗಿರುತ್ತದೆ. ಮಾನವನ ಆಮೂಲಾಗ್ರ ಕಾರ್ಯವೈಖರಿಗಳು ಪರಿಸರದ ಸರ್ವ ಜೀವಗಳ ಒಳಿತಿನ ಮೇಲೆ ಗಾಢ ಪರಿಣಾಮ ಬೀರುತ್ತವೆ.

9ನೇ ಪುಟಕ್ಕೆ...



'ಸಾರ' ಭಿತ್ತಿಯಲ್ಲಿ ಸಾರುವ ಸಂಗತಿಗಳು

ಇದೋ... ಪಿಚ್ ರಿಪೋರ್ಟ್

ಗಿರೀಶ ದೊಡ್ಡಮನಿ

ಪಿಚ್ ಹೇಗಿದೆ..?

ಇವತ್ತು ಯಾವುದೇ ಕ್ರಿಕೆಟ್ ಪಂದ್ಯ ಆರಂಭವಾಗುವ ಮುನ್ನ ಬಹುತೇಕರು ಕೇಳುವ ಪ್ರಶ್ನೆ ಇದು. ಪಂದ್ಯ ಮುಗಿದ ಮೇಲೂ 'ಪಿಚ್ ಹಾಗಿತ್ತು, ಹೀಗಿತ್ತು..' ಎಂಬ ಚರ್ಚೆಗಳು ಕ್ರಿಕೆಟ್ ಪರಿಣತರಿಂದ ಶುರುವಾಗಿ ಶಾಲೆಯ ಮಕ್ಕಳ ವಲಯದಲ್ಲಿಯೂ ಜೋರಾಗಿ ನಡೆಯುವ ಕಾಲ. ಆದರೆ ಈ ಪಿಚ್ ಸಿದ್ಧಗೊಳಿಸುವ ಶ್ರಮಜೀವಿಗಳ ಬಗ್ಗೆ ಮಾತನಾಡುವವರು ಎಷ್ಟು ಜನ ಇದ್ದಾರೆ?

ಇತ್ತೀಚೆಗೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ದುಲೀಪ್ ಟ್ರೋಫಿ ಟೂರ್ನಿಯ ಕ್ವಾರ್ಟರ್, ಸೆಮಿಫೈನಲ್ ಮತ್ತು ಫೈನಲ್ ಪಂದ್ಯಗಳು ನಡೆದಿದ್ದವು. ಫೈನಲ್ ಪಂದ್ಯದ ಕೊನೆಯ ಎರಡು ದಿನಗಳನ್ನು ಬಿಟ್ಟರೆ ಉಳಿದೆಲ್ಲ ದಿನಗಳಲ್ಲಿಯೂ ಮಳೆಯ ಆಟ ನಡೆದಿತ್ತು. ಆದರೆ ಸಬ್ ಏರ್ ಸಿಸ್ಟಮ್ ಇದ್ದ ಕಾರಣ ಮಳೆ ನಿಂತ ಅರ್ಧಗಂಟೆಯಲ್ಲಿ ಕ್ರೀಡಾಂಗಣ ಆಟಕ್ಕೆ ಸಿದ್ಧವಾಗುತ್ತಿತ್ತು. ಇದರಿಂದಾಗಿ ಎಲ್ಲ ಪಂದ್ಯಗಳ ಸ್ಪಷ್ಟ ಫಲಿತಾಂಶ ಹೊರಹೊಮ್ಮಲು ಕಾರಣವಾಯಿತು.

> ಕ್ರಿಕೆಟ್ ಪಿಚ್ ಸಿದ್ಧಗೊಳಿಸುವುದು ಈಗ ವೃತ್ತಿಯಾಗಿ ರೂಪುಗೊಳ್ಳುತ್ತಿದೆ. ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯೊಂದರಲ್ಲಿಯೇ 130 ಸಿಬ್ಬಂದಿ ಈ ಕಾರ್ಯದಲ್ಲಿದ್ದಾರೆ. ಝಗಮಗಿಸುವ ಕ್ರಿಕೆಟ್ ಪಂದ್ಯಗಳ ಹಿಂದೆ ಈ ಶ್ರಮಜೀವಿಗಳಿದ್ದಾರೆ. ಅವರ ಬೆವರಹನಿಗಳಿವೆ.

ಆದರೆ ಮಳೆ ಹನಿ ಉದುರಿದಾಕ್ಷಣ ಬೌಂಡರಿಯಾಚೆಯಿಂದ ಮಣಭಾರದ ಬೃಹತ್ ಹೊದಿಕೆಗಳನ್ನು ಎಳೆದುಕೊಂಡು ಬಂದು ಪಿಚ್ ನೆನೆಯದಂತೆ ಹೊದಿಸುತ್ತಿದ್ದ ಸಿಬ್ಬಂದಿಯ ಕಾರ್ಯವೂ ಪಂದ್ಯಗಳ ಯಶಸ್ಸಿಗೆ ಕಾರಣ. ಪ್ರತಿದಿನವೂ ಸುಮಾರು ಆರರಿಂದ ಏಳು ಬಾರಿ ಮಳೆ ಬಂದು ನಿಂತಿತ್ತು. ಪ್ರತಿಬಾರಿಯೂ ಮಳೆ ಬಂದಾಗ ಹೊದಿಕೆಯನ್ನು ಹಾಕುವುದು, ಅಂಪೈರ್‌ಗಳು ಆಟಕ್ಕೆ ಹಸಿರು ನಿಶಾನೆ ಕೊಟ್ಟಾಗ ಅದನ್ನು ತೆಗೆಯುತ್ತಿದ್ದರು.

ಜೊತೆಗೆ ಸೂಪರ್ ಸಾಪರ್ ಯಂತ್ರಗಳ ಮೂಲಕ ಹೊರಾಂಗಣದ ನೀರನ್ನೂ ಒಣಗಿಸುವುದನ್ನು ಒಂಚೂರೂ ಬೇಸರವಿಲ್ಲದೇ ಮಾಡಿದ್ದರು. ಪಿಚ್ ಕ್ಯೂರೇಟರ್ ಪ್ರಶಾಂತ್ ಮತ್ತು ಜಿಸಿಂತಾ ಅವರ ಮಾರ್ಗದರ್ಶನದಲ್ಲಿ 25ಕ್ಕೂ ಹೆಚ್ಚು ಸಿಬ್ಬಂದಿ ಈ ಬಾರಿಯ ದುಲೀಪ್ ಟ್ರೋಫಿ ಯಶಸ್ಸಿನ ರೂವಾರಿಗಳು. ಅದಕ್ಕಾಗಿಯೇ ಈ ಟೂರ್ನಿಯಲ್ಲಿ ಚಾಂಪಿಯನ್ ಆದ ದಕ್ಷಿಣ ವಲಯದ ಆಟಗಾರ ಮತ್ತು ಬೆಂಗಳೂರಿನವರೇ ಆದ ಮಯಂಕ್ ಅಗರವಾಲ್ ಪಂದ್ಯ ನಡೆದ ನಂತರ ಸಿಬ್ಬಂದಿಯ ಬಳಿ ಹೋಗಿ ಕೃತಜ್ಞತೆ ಸಲ್ಲಿಸಿದ್ದರು.

ಹೋದ ಮೇ ತಿಂಗಳಲ್ಲಿ ಇಲ್ಲಿ ನಡೆದಿದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಗುಜರಾತ್ ಟೈಟನ್ಸ್ ನಡುವಣ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಪಂದ್ಯಕ್ಕೂ ಮುನ್ನ ವಿಪರೀತ ಮಳೆ ಸುರಿದಿತ್ತು. ಪಂದ್ಯ ನಡೆಯುವುದೋ ಇಲ್ಲವೋ ಎಂಬ ಅನುಮಾನ ಮೂಡಿತ್ತು. ಆದರೆ ಪೂರ್ಣ ಪಂದ್ಯ ನಡೆಯಲು ಸಬ್ ಏರ್ ತಂತ್ರಜ್ಞಾನ ಮತ್ತು ಮೈದಾನ ಸಿಬ್ಬಂದಿಯ ಪರಿಶ್ರಮ ಕಾರಣವಾಯಿತು.

ವೃತ್ತಿಯಾಗಿ ಪಿಚ್ ಸಿದ್ಧತೆ

ದಶಕಗಳ ಹಿಂದೆ ಕ್ರಿಕೆಟ್ ಪಿಚ್ ಸಿದ್ಧಗೊಳಿಸುವುದೆಂದರೆ ಮಣ್ಣು ಹಾಕುವುದು, ನೀರುಣಿಸಿ ಮತ್ತು ರೋಲರ್‌ಗಳನ್ನು ಬಳಸಿ ಸಮ ಮಾಡುವುದಷ್ಟೇ ಎಂಬ ಮಾತಿತ್ತು. ಆದರೆ ಈಗ ಹಾಗಲ್ಲ. ಅದೊಂದು ವಿಜ್ಞಾನ, ತಂತ್ರಜ್ಞಾನ ಮತ್ತು ಕಲೆ ಮೇಳೈಸಿದ ವೃತ್ತಿಯಾಗಿ ಬೆಳೆದಿದೆ. ಇದರಿಂದಾಗಿ ಹಲವರಿಗೆ ಉದ್ಯೋಗಾವಕಾಶವೂ ಸೃಷ್ಟಿಯಾಗಿದೆ.

ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಒಂದರಲ್ಲಿಯೇ 130 ಜನ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ.

'ಬೆಂಗಳೂರು, ಆಲೂರು, ಹುಬ್ಬಳ್ಳಿ, ಬೆಳಗಾವಿ, ಶಿವಮೊಗ್ಗ, ಮೈಸೂರುಗಳಲ್ಲಿ ನಮ್ಮ ಕ್ರೀಡಾಂಗಣಗಳಿವೆ. ಎಲ್ಲ ಕಡೆಯೂ ನಮ್ಮ ನಿರ್ವಹಣಾ ಸಿಬ್ಬಂದಿ ಇದ್ದಾರೆ. ಇದರಲ್ಲಿ ಶೇ 60ರಷ್ಟು ಮಂದಿ ಕಾಯಂ ಉದ್ಯೋಗಿಗಳು.

11ನೇ ಪುಟಕ್ಕೆ...



ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಈಚೆಗೆ ನಡೆದ ದುಲೀಪ್ ಟ್ರೋಫಿ ಸೆಮಿಫೈನಲ್ ಪಂದ್ಯದಲ್ಲಿ ಮಳೆ ಬಂದಾಗ ಪಿಚ್‌ಗೆ ಹೊದಿಕೆ ಹಾಕಲು ಶ್ರಮಿಸಿದ ಸಿಬ್ಬಂದಿ –ಚಿತ್ರ/ಎಸ್.ಕೆ. ದಿನೇಶ್

ವಿಜ್ಞಾನ ನಾಟಕೋತ್ಸವದ ಸ್ವಂತ ಪ್ರಯೋಗಗಳು

ವಿಜ್ಞಾನ ನಾಟಕಗಳ ಹೊಸ ಕಾಲಘಟ್ಟದಲ್ಲಿ ಕನ್ನಡ ರಂಗಭೂಮಿಯು ಈ ಸೃಜನಶೀಲ ದಿಕ್ಕಿನೆಡೆಗೆ ತಿರುಗಿಕೊಳ್ಳುತ್ತಿದೆ ಎಂದು ಪ್ರತಿಪಾದಿಸುತ್ತಿರುವ ಮೈಸೂರಿನ ಈ ಹವ್ಯಾಸಿಗಳ ಎದುರು ಹೊಸ ದಿಗಂತಗಳು ತೆರೆದುಕೊಳ್ಳುತ್ತಿವೆ. ಸಸ್ಯವಿಜ್ಞಾನ ಕ್ಷೇತ್ರದಲ್ಲಿ ವಿಶ್ವದ ಗಮನ ಸೆಳೆದಿರುವ ಬಿಜಿಎಲ್ ಸ್ವಾಮಿ ಹಾಗೂ ವಿಶ್ವವಿಖ್ಯಾತ ಭಾರತೀಯ ಭೌತಶಾಸ್ತ್ರಜ್ಞ ಸರ್ ಸಿ.ವಿ.ರಾಮನ್ ಜೀವನ ಸಾಧನೆ ಕುರಿತ ನಾಟಕ ರಚನೆಯ ಕಲ್ಪನೆ ಮೊಳಕೆಯೊಡೆದಿದೆ.


ಮೇರಿ ಕ್ಯೂರಿ ಸಾಧನೆಗೆ ಕನ್ನಡಿ ಹಿಡಿದ 'ಪ್ರಭಾಸ' ನಾಟಕ

ಕೆ.ನರಸಿಂಹಮೂರ್ತಿ

ರಂಗಭೂಮಿ

ಭ್ರೂಣಗಳ ಕ್ಲೋನಿಂಗ್ ಕುರಿತ ಕೊರಿಯಾದ ಜೆನೆಟಿಕ್ಸ್ ವಿಜ್ಞಾನಿ ಹ್ವಾಂಗ್ ವೂ ಸುಕ್‌ನ ವಿವಾದಿತ ಸಂಶೋಧನೆಯನ್ನೇ ಆಧಾರವಾಗಿಸಿಕೊಂಡು 2084ರಲ್ಲಿ ಇಬ್ಬರು ಭಾರತೀಯ ಸಂಶೋಧಕರು ಮತ್ತೆ ಸಂಶೋಧನೆ ನಡೆಸಿದರೆ ಏನಾಗಬಹುದು? ಈ ಕಲ್ಪನೆಯು ನಾಟಕ ರೂಪ ತಾಳಿದರೆ ಹೇಗಿರಬಹುದು?

ಇಂಥದ್ದೊಂದು ಕುತೂಹಲವನ್ನಿಟ್ಟುಕೊಂಡು, ಮೈಸೂರಿನ 'ವರ್ಕ್‌ಶಾಪ್ ಇನ್ ಮೈಸೂರು... ಫಾರ್ ಥಿಯೇಟರ್' ತಂಡದ ಯತೀಶ್ ಎನ್. ಕೊಳ್ಳೇಗಾಲ ಅವರು ರಚಿಸಿದ 'ಮಿಲನಸಾಕ್ಷಿ'/'ಅಸ್ಮಿತಾ' ನಾಟಕವು, ಈ ಬಾರಿಯ (ಜುಲೈ 6-9) ಮೈಸೂರು ವಿಜ್ಞಾನ ನಾಟಕೋತ್ಸವದಲ್ಲಿ ಪ್ರದರ್ಶಿತವಾಯಿತು.

ವಿಜ್ಞಾನ ಮತ್ತು ಫಿಕ್ಷನ್ ಎರಡೂ ಸೇರಿ ನಾಟಕವಾದ ಬಗೆಯಂತೂ ಇನ್ನೂ ರೋಚಕ. ಅಂದ ಹಾಗೆ, ಈ ನಾಟಕ ರಚನೆಯ ಕಲ್ಪನೆ, ಸಿದ್ಧತೆ, ಹಿಂದಿನ ವರ್ಷದ ಉತ್ಸವದ ಸಂದರ್ಭದಲ್ಲೇ ಶುರುವಾಗಿತ್ತು! ಉತ್ಸವವೆಂದರೆ ವರ್ಷದ ಸಿದ್ಧತೆ ಅಲ್ಲವೇ.

'ಅಸ್ಮಿತಾ' ನಾಟಕದಂತೆಯೇ, 'C ವಾರ್ಡ್,ಕ್ಯಾನ್ಸರ್ ಕಥಾನಕಗಳು' ನಾಟಕವೂ ಡಾ.ಸಿದ್ಧಾರ್ಥ್ ಮುಖರ್ಜಿ ಅವರ 'ದಿ ಎಂಪರರ್ ಆಫ್ ಆಲ್ ಮೆಲಡೀಸ್' ಕೃತಿಯನ್ನು ಆಧರಿಸಿದ ಮನೋಜ್ಞ ನಾಟಕ. ಕ್ಯಾನ್ಸರ್ ಕುರಿತ ಈ ಜೀವನಚರಿತ್ರೆಯನ್ನೇ ನಾಟಕ ಮಾಡಿ, ನಿರ್ದೇಶಿಸಿದವರು ಮೈಸೂರಿನ ಎಸ್.ಆರ್.ರಮೇಶ್. ಅದನ್ನು ವೇದಿಕೆಗೆ ತಂದಿದ್ದು, ಅವರದ್ದೇ 'ಪರಿವರ್ತನ ರಂಗ ಸಮಾಜ' ತಂಡ.

ಭಾರತದ ಪಕ್ಷಿಲೋಕದ ಪಿತಾಮಹ ಡಾ.ಸಲೀಂ ಅಲಿ ಕುರಿತ, 'ಸಲೀಂ ಅಲಿ; ಪಕ್ಷಿ ಲೋಕದ ಬೆರಗು' ನಾಟಕವೂ ಅಲಿ ಅವರ ಜೀವನ ಚರಿತ್ರೆಯನ್ನು ಕನ್ನಡದಲ್ಲಿ ತಾಜಾ ಆಗಿ ಗ್ರಹಿಸಿ ಮಂಡಿಸಿದ ವಿಶೇಷ ನಾಟಕ.

'ಮಾಂಸಾಹಾರಿಯಾಗಿದ್ದ ಸಲೀಂ ಅಲಿ ಅವರು, ಅದು ಹೇಗೆ ಪಕ್ಷಿಗಳನ್ನು ತಂದು ಸಾಕುತ್ತಿದ್ದರು ಎಂಬ ಪ್ರಶ್ನೆಯು ನಾಟಕದ ರಚನೆಯ ಸಂದರ್ಭದಲ್ಲಿ ಮೂಡಿ ಬಂದಿತ್ತು. ಆಗ, ನಾನು ಕೂಡ ಮಾಂಸಾಹಾರಿಯೇ ಎಂದು ಉತ್ತರಿಸಿದ್ದೆ' ಎಂದು ಸ್ಮರಿಸುತ್ತಾರೆ ನಾಟಕದ ನಿರ್ದೇಶಕ ಬರ್ಟಿ ಒಲಿವೆರಾ. ಇದು ವಿಜ್ಞಾನದ ತರ್ಕ ಮತ್ತು ಮನುಷ್ಯ ಭಾವನೆಗಳ ನಡುವಿನ ತಾಕಲಾಟ. ಈ ತಾಕಲಾಟವಿರುವ ಕಾರಣಕ್ಕೇ, 'ಸಲೀಂ ಅಲಿ ನಮ್ಮ ಪಕ್ಕದ ಮನೆ ತಾತನ ರೀತಿ ಕಾಣುತ್ತಿದ್ದರು' ಎನ್ನುತ್ತಾರೆ ಒಲಿವೆರಾ.

ಈ ನಾಟಕದ ಕಲ್ಪನೆಗೂ ಒಂದು ವರ್ಷದ ಚರಿತ್ರೆ ಇದೆ. ನಾಟಕವನ್ನು ರಚಿಸಿದ, ಅರಿವು ರಂಗ ಸಂಸ್ಥೆಯ ಡಾ.ಎಂ.ಸಿ.ಮನೋಹರ್, ಉತ್ಸವಕ್ಕೂ ಮೂರು ತಿಂಗಳ ಮೊದಲೇ ಮೈಸೂರಿನ ರಮಾಬಾಯಿ ಗೋವಿಂದ ರಂಗಮಂದಿರದಲ್ಲಿ ಏರ್ಪಡಿಸಿದ್ದ ಮೊದಲ ಪ್ರದರ್ಶನಕ್ಕೆ ರಂಗಾಸಕ್ತರು ಹೆಚ್ಚಿನ ಸಂಖ್ಯೆಯಲ್ಲೇ ನೆರೆದಿದ್ದರು.

'ಕನ್ನಡದಲ್ಲಿ ವಿಜ್ಞಾನ ನಾಟಕಗಳು ಹೆಚ್ಚಿಲ್ಲ' ಎಂಬ ಕೊರತೆಯ ಮಾತನ್ನು ನೀಗಿಸುವತ್ತ ಈ ಮೂರೂ ನಾಟಕಗಳು ಮಹತ್ವದ ಹೆಜ್ಜೆ ಎನ್ನಬೇಕು. ಹೀಗೆ ಉತ್ಸವವು ವಿಜ್ಞಾನ ನಾಟಕಗಳ ಲೋಕದಲ್ಲಿ ಕನ್ನಡದ ಅಸ್ಮಿತೆಯನ್ನು ಹೊಳೆಯುವಂತೆ ಮಾಡಿತು. ಐದು ಉತ್ಸವಗಳಲ್ಲೂ ಅನುವಾದಿತ ವಿಜ್ಞಾನ ನಾಟಕಗಳೇ ಹೆಚ್ಚಿದ್ದವು. ಈ ಬಾರಿ ಕನ್ನಡದ್ದೇ ಎನ್ನುವ ವಿಜ್ಞಾನದ ನಾಟಕಗಳನ್ನು ಮೈಸೂರಿಗರೇ ಬರೆದು ಅಭಿನಯಿಸಿದರು. ನಿರ್ದೇಶಿಸಿದರು.

ಈ ನಾಟಕಗಳೊಂದಿಗೆ ಗಮನ ಸೆಳೆದಿದ್ದು, ಶಿಕ್ಷಕಿ ಸುಮನಾ ಡಿ. ಮತ್ತು ಶಶಿಧರ ಡೋಂಗ್ರೆ ಅವರು ಅನುವಾದಿಸಿದ, ಅಲನ್ ಅಲ್ಡಾ ಅವರ, ಮೇರಿ ಕ್ಯೂರಿ ಜೀವನ-ಸಾಧನೆ ಆಧಾರಿತ ನಾಟಕ 'ಪ್ರಭಾಸ'. ನಾಲ್ಕು ನಾಟಕಗಳ ಪೈಕಿ ಎರಡು ಸಿದ್ಧಾಂತ ಕೇಂದ್ರಿತವಾದರೆ, ಇನ್ನೆರಡು ವ್ಯಕ್ತಿ ಕೇಂದ್ರಿತ.

ಹವ್ಯಾಸಿ ರಂಗಾಭ್ಯಾಸಿಗಳೊಳಗೆ ವಿಜ್ಞಾನಾಸಕ್ತರು, ಲೇಖಕರು, ಅನುವಾದಕರು, ಶಿಕ್ಷಕರು, ವೈದ್ಯರು ಸಮಾನ ಮನಸ್ಸಿನಿಂದ ಸೇರಿಕೊಂಡು ಆದ ಉತ್ಸವ ಇದು. ನಟನೆ, ನಾಟಕ ರಚನೆಯ ಪಾಠಗಳನ್ನು ಕಲಿಯುತ್ತಲೇ, ವೈಜ್ಞಾನಿಕ ಸಿದ್ಧಾಂತ, ಅದರ ಪರಿಭಾಷೆಗಳನ್ನು ಅರಿಯುತ್ತಲೇ ಅದನ್ನು ಸೃಜನಶೀಲ ರೂಪಕ್ಕೆ ತಂದು ರಂಗವೇರಿಸುವ ಪ್ರಯತ್ನವೇ ವಿಜ್ಞಾನ ನಾಟಕೋತ್ಸವ. ಈ ವರ್ಷದ್ದು ಆರನೇ ಸಂಚಿಕೆ. ಧಾರವಾಡದ ಅಭಿನಯ ಭಾರತಿ ತಂಡವೂ ಎರಡನೇ ಬಾರಿಗೆ ಬಂದು, 'ಪ್ರಭಾಸ' ನಾಟಕವನ್ನು ಅಭಿನಯಿಸಿದ್ದು ವಿಶೇಷ. ಹೀಗೆ ಮೈಸೂರಿನಿಂದ ಧಾರವಾಡದವರೆಗೆ ಉತ್ಸಾಹ- ಉಮ್ಮೇದು ತುಯ್ದಾಡುತ್ತಿದೆ. ಈ ಎರಡೂ ಸಾಂಸ್ಕೃತಿಕ ನಗರಗಳ ನಡುವೆ ರಂಗ-ವಿಜ್ಞಾನದ ಬೆಸುಗೆ ಏರ್ಪಟ್ಟಿದೆ. ಹಿಂದಿನ ವರ್ಷ ಮೈಸೂರಿನ ಬಳಿಕ, ಧಾರವಾಡದಲ್ಲೂ ನಡೆದಿತ್ತು. ಈಗ ಮೈಸೂರಿನಲ್ಲಿ ಮುಗಿದಿದೆ. ಧಾರವಾಡದಲ್ಲೂ ಸಿದ್ಧತೆ ನಡೆದಿದೆ.ದಿತ್ತು. ಈಗ ಮೈಸೂರಿನಲ್ಲಿ ಮುಗಿದಿದೆ. ಧಾರವಾಡದಲ್ಲೂ ಸಿದ್ಧತೆ ನಡೆದಿದೆ.

ನಾಟಕವಷ್ಟೇ ಅಲ್ಲ..

ವಿಜ್ಞಾನ ನಾಟಕಗಳ ಕುರಿತ ಕಾರ್ಯಾಗಾರವೂ ಉತ್ಸವದ ಗರಿಮೆಯನ್ನು ಹೆಚ್ಚಿಸಿತು. 'ವಿಜ್ಞಾನಿಗಳ ಜೀವನ ಚರಿತ್ರೆ ಮತ್ತು ನಾಟಕ' ಕುರಿತು ಡಾ.ಎಂ.ಸಿ.ಮನೋಹರ, 'ನಾಟಕಗಳಲ್ಲಿ ವಿಜ್ಞಾನದ ಪ್ರಗತಿ ಮತ್ತು ವೈಯಕ್ತಿಕ ಪ್ರತಿಷ್ಠೆಯ ಚಿತ್ರಣ' ಕುರಿತು ಅಜಯ್ ಸ್ವರೂಪ್ ಮಂಡಿಸಿದ ವಿಚಾರಗಳ ಮೇಲೆ ನಡೆದ ಚರ್ಚೆಯೂ ಕುತೂಹಲಕಾರಿಯಾಗಿತ್ತು.

'2016ರಲ್ಲಿ ಮೊದಲ ಉತ್ಸವ ನಡೆದಾಗ, ವಿಜ್ಞಾನ ನಾಟಕ ಹೇಗೋ ಏನೋ ಎಂದು ಜನ ಅನುಮಾನದಿಂದ ಬರುತ್ತಿದ್ದರು. ಈ ಬಾರಿ ಸಭಾಂಗಣ ಭರ್ತಿಯಾಗಿ ಜಾಗ ಸಿಗದವರು ನಿರಾಶರಾಗಿ ವಾಪಸು ಹೋದರು. ಇದು ನಮ್ಮ ಯಶಸ್ಸು' ಎನ್ನುತ್ತಾರೆ ಶಶಿಧರ ಡೋಂಗ್ರೆ.

ಜ್ಞಾನ ಮತ್ತು ತಂತ್ರಜ್ಞಾನವನ್ನು ಭಾರತೀಯ ಭಾಷೆಗಳಲ್ಲಿ ಸಂವಹನ ಮಾಡುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಂಗಸಂಸ್ಥೆ 'ವಿಜ್ಞಾನ ಪ್ರಸಾರ್'ನ 'ಸ್ಕೋಪ್' ಯೋಜನೆಯಡಿ ಕರ್ನಾಟಕದಲ್ಲಿ ವಿಜ್ಞಾನ-ತಂತ್ರಜ್ಞಾನದ ಸಂವಹನ, ಜನಪ್ರಿಯ ವಿಜ್ಞಾನ ಹಾಗೂ ವಿಸ್ತರಣೆಯ ಕಾರ್ಯಕ್ರಮ 'ಕುತೂಹಲಿ' ಹಾಗೂ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು ಉತ್ಸವಕ್ಕೆ ಎಂದಿನಂತೆ ಬೆಂಬಲ ನೀಡಿದೆ. ಈ ಬೆಂಬಲದೊಂದಿಗೆ ಪರಿವರ್ತನ ರಂಗ ಸಮಾಜ, ಕಲಾಸುರುಚಿ ಮತ್ತು ಅರಿವು ಸಂಸ್ಥೆ ಉತ್ಸಾಹದಲ್ಲಿ ಮುನ್ನಡೆದಿವೆ.

ಸಸ್ಯವಿಜ್ಞಾನ ಕ್ಷೇತ್ರದಲ್ಲಿ ವಿಶ್ವದ ಗಮನ ಸೆಳೆದಿರುವ ಬಿಜಿಎಲ್ ಸ್ವಾಮಿ ಹಾಗೂ ವಿಶ್ವವಿಖ್ಯಾತ ಭಾರತೀಯ ಭೌತಶಾಸ್ತ್ರಜ್ಞ ಸರ್.ಸಿ.ವಿ. ರಾಮನ್ ಜೀವನ ಸಾಧನೆ ಸಾರುವ ನಾಟಕಗಳ ರಚನೆಯ ಕಲ್ಪನೆ ಈಗ ಮೊಳಕೆಯೊಡೆದಿದೆ. ❖

ಪ್ರಾಣಿಗಳ ಸುಖೀ 'ಅಡ್ಡ'


ಕ್ಯಾಮೆರಾ ಟ್ರ್ಯಾಪ್‌ನಲ್ಲಿ ಸೆರೆಸಿಕ್ಕಿರುವ ಹೈನಾ


ಕ್ಯಾಮೆರಾ ಟ್ರ್ಯಾಪ್‌ನಲ್ಲಿ ಸೆರೆಸಿಕ್ಕಿರುವ ಚಿಂಕಾರ

8ನೇ ಪುಟದಿಂದ...

ಸೈನ್ ಸರ್ವೆ ವಿಧಾನದಲ್ಲಿ ಸಂಗ್ರಹಿಸಿದ ಮಾಂಸಾಹಾರಿ ಪ್ರಾಣಿಗಳ ಮಲವನ್ನು ಸದ್ಯ ಪ್ರಯೋಗಾಲಯಕ್ಕೆ ಕಳುಹಿಸಲಾಗಿದ್ದು, ಅದರಿಂದ ಅವುಗಳ ಆಹಾರ ಪದ್ಧತಿ ತಿಳಿದು ಬರಲಿದೆ. ಅಂದರೆ, ಕಪ್ಪತ್ತಗುಡ್ಡದಲ್ಲಿರುವ ಮಾಂಸಾಹಾರಿ ಪ್ರಾಣಿಗಳು ಕಾಡುಪ್ರಾಣಿಗಳನ್ನು ಭಕ್ಷಿಸುತ್ತಿವೆಯೇ ಅಥವಾ ಹಸು, ಕುರಿಗಳನ್ನು ಕೊಂದು ತಿನ್ನುತ್ತಿವೆಯೇ ಎಂಬುದಕ್ಕೆ ಉತ್ತರ ಸಿಗಲಿದೆ.

ಲೈನ್ ಟ್ರಾನ್ಸೆಕ್ಟ್ ವಿಧಾನದಲ್ಲಿ ಸಸ್ಯಾಹಾರಿ ಪ್ರಾಣಿಗಳ ಹಿಕ್ಕೆಗಳನ್ನು ವೀಕ್ಷಣೆ ಮಾಡಲಾಗಿದೆ. ಜತೆಗೆ ಈ ಮಾರ್ಗದಲ್ಲಿ ಕಂಡುಬರುವ ಪ್ರತಿಯೊಂದು ಗಿಡ-ಮರದ ಜಾತಿಯನ್ನು ಕೂಡ ಪಟ್ಟಿ ಮಾಡಲಾಗಿದೆ.

ಈ ಎರಡು ವಿಧಾನಗಳ ಸರ್ವೆ ಬಳಿಕ ಕ್ಯಾಮೆರಾ ಟ್ರ್ಯಾಪ್ ಮಾಡಲಾಗಿದೆ. ಸೈನ್ ಸರ್ವೆ ಸಂದರ್ಭದಲ್ಲಿ ಯಾವೆಲ್ಲ ಜಾಗಗಳಲ್ಲಿ ಪ್ರಾಣಿಗಳ ಹೆಜ್ಜೆಗುರುತು, ಪರಚಿದ ಗುರುತುಗಳು ಕಂಡುಬಂದಿದ್ದವೋ ಅಲ್ಲಿಗೆ ಕ್ಯಾಮೆರಾಗಳನ್ನು ಅಳವಡಿಸಿ, 30 ದಿನಗಳ ಕಾಲ ಸತತವಾಗಿ ವೀಕ್ಷಣೆ ಮಾಡಿದ್ದಾರೆ. ಕ್ಯಾಮೆರಾ ಟ್ರ್ಯಾಪ್ ಸರ್ವೆಗೆ ಅರಣ್ಯ ಇಲಾಖೆ ಸಿಬ್ಬಂದಿ 98 ಕ್ಯಾಮೆರಾಗಳನ್ನು ಬಳಕೆ ಮಾಡಿದ್ದರು. ಒಂದು ಕ್ಯಾಮೆರಾ ಪಾಯಿಂಟ್‌ನಿಂದ ಮತ್ತೊಂದು ಪಾಯಿಂಟ್‌ಗೆ ಕನಿಷ್ಠ ಒಂದೂವರೆ ಕಿ.ಮೀ. ಅಂತರ ಕಾಯ್ದುಕೊಂಡಿದ್ದರು. ಪ್ರತಿ 10 ದಿನಗಳಿಗೊಮ್ಮೆ ಕ್ಯಾಮೆರಾದಲ್ಲಿ ಸೆರೆಸಿಕ್ಕ ಚಿತ್ರಗಳನ್ನು ಡೌನ್‌ಲೋಡ್ ಮಾಡಿಕೊಂಡು, ಬೇರೆ ಮೆಮೊರಿ ಕಾರ್ಡ್ ಅಳವಡಿಸುತ್ತಿದ್ದರು.

ಕಪ್ಪತ್ತಗುಡ್ಡದಲ್ಲಿರುವ ಸೂಜಿ ಮಡ್ಡಿ, ಕೆಂಪ ಗುಡ್ಡ, ಗಾಳಿಗುಂಡಿ, ಎತ್ತಿನ ಗುಡ್ಡ, ಆನೆ ಸೊಂಡಿಲು, ಉಪ್ಪಿನ ಪಡಿ, ಮಂಜಿನ ದೋಣಿ, ಮಜ್ಜಿಗೆ ಬಸವಣ್ಣ ಗುಡ್ಡ ಸೇರಿದಂತೆ ಇತರೆ ಗುಡ್ಡಗಳಲ್ಲಿ ಕತ್ತೆಕಿರುಬ, ತೋಳ, ಚಿರತೆ, ನರಿ, ಗುಳ್ಳೆನರಿ, ರಸ್ಟಿ ಸ್ಪಾಟೆಡ್ ಕ್ಯಾಟ್, ಪುನುಗು ಬೆಕ್ಕು, ಚುಕ್ಕೆ ಜಿಂಕೆ, ಕೃಷ್ಣಮೃಗ ಕೊಂಡುಕುರಿ, ಮುಳ್ಳುಹಂದಿ, ಕಾಡುಹಂದಿ ಕಂಡುಬಂದಿವೆ. ಇದೇ ಮೊದಲ ಬಾರಿಗೆ ಕಪ್ಪತ್ತಗುಡ್ಡದಲ್ಲಿ ಚಿಂಕಾರಗಳು ಪತ್ತೆಯಾಗಿರುವುದು ವಿಶೇಷ. ಜತೆಗೆ ರಸ್ಟಿ ಸ್ಪಾಟೆಡ್ ಕ್ಯಾಟ್ ಹಾಗೂ ಮೂರು ಜಾತಿಯ ಹಲ್ಲೆಗಳು ಕಂಡುಬಂದಿವೆ.

'ಕಪ್ಪತ್ತಗುಡ್ಡದಲ್ಲಿ ಚಿಂಕಾರ ಇತ್ತು ಎಂಬುದು ಗೊತ್ತಿತ್ತು. ಆದರೆ, ಇಷ್ಟು ವರ್ಷಗಳಲ್ಲಿ ಒಮ್ಮೆಯೂ ಗೋಚರಿಸಿರಲಿಲ್ಲ. ಕ್ಯಾಮೆರಾ ಟ್ರ್ಯಾಪ್‌ನಲ್ಲಿ ಕಪ್ಪತ್ತಗುಡ್ಡದ ಬಹಳ ಜಾಗಗಳಲ್ಲಿ ಚಿಂಕಾರಗಳು ಸೆರೆಯಾಗಿವೆ. ಪ್ರಾಥಮಿಕ ಅಧ್ಯಯನದಲ್ಲಿ ಸಿಕ್ಕ ಮಾಹಿತಿ ಆಧರಿಸಿ ಎಲ್ಲೆಲ್ಲಿ ಯಾವ ಪ್ರಾಣಿಗಳು ಇರಬಹುದು ಎಂದು ಮುಂದೆ ವಿಶ್ಲೇಷಣೆ ಮಾಡುತ್ತೇವೆ' ಎನ್ನುತ್ತಾರೆ ಗದಗ ಡಿಸಿಎಫ್ ದೀಪಿಕಾ ಬಾಜಪೇಯಿ.

ಕಪ್ಪತ್ತಗುಡ್ಡದಲ್ಲಿ ವನ್ಯಜೀವಿಗಳ ಸಂತತಿ ಇರುವಿಕೆ ಬಗ್ಗೆ ಆಗಾಗ ತಕರಾರು ತೆಗೆದು, ಗಣಿಗಾರಿಕೆ ನಡೆಸಲು ಅನುಮತಿ ನೀಡುವಂತೆ ಸಂಚು ರೂಪಿಸುತ್ತಿದ್ದ ಕೆಲವರ ಆಸೆಗೆ ಈ ವರದಿ ನಿರಾಸೆ ಮೂಡಿಸಿದೆ. ಅರಣ್ಯ ಇಲಾಖೆ ಅಧಿಕಾರಿಗಳು ಏಕಜಾತಿಯ ನೆಡುತೋಪಿನ ಅಪಾಯ ಅರಿತು ಈ ಭಾಗದಲ್ಲಿ ನೈಸರ್ಗಿಕವಾಗಿ ಬೆಳೆಯುವ ಕ್ರಮವಹಿಸಬೇಕು. ಬೇಸಿಗೆಯಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಡ್ರೋನ್ ಕ್ಯಾಮೆರಾಗಳನ್ನು ಬಳಸುವ ಮೂಲಕ ಕಾಡಿಗೆ ಬೆಂಕಿ ಹಚ್ಚುವವರನ್ನು ಪತ್ತೆಹಚ್ಚಲು ಕ್ರಮವಹಿಸಬೇಕು ಎಂಬುದು ಪರಿಸರಪ್ರಿಯರ ಆಗ್ರಹವಾಗಿದೆ.

ಕಪ್ಪತ್ತಗುಡ್ಡದಲ್ಲಿ ಮಾನವ ಹಸ್ತಕ್ಷೇಪ ಕಡಿಮೆ ಆಗಿದ್ದರಿಂದ ಕಾಡಿನ ಪ್ರಮಾಣ ವೃದ್ಧಿಸಿದ್ದು, ಪ್ರಾಣಿಗಳ ಸಂಖ್ಯೆ ಕೂಡ ಹೆಚ್ಚಾಗುತ್ತಿದೆ. ಅರಣ್ಯ ಇಲಾಖೆಯವರು ಗುಡ್ಡದ ತಪ್ಪಲಿನಲ್ಲಿರುವ ಜನರ ಸಹಕಾರ ಪಡೆದು ಕಪ್ಪತ್ತಗುಡ್ಡವನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಕಾಳಜಿ ಮಾಡಬೇಕು ಎನ್ನುವುದು ನಂದಿವೇರಿ ಮಠದ ಶಿವಕುಮಾರ ಸ್ವಾಮೀಜಿ ಅವರ ಒತ್ತಾಸೆಯಾಗಿದೆ. ❖

ಪರಿಸರ ಕಾಳಜಿಗೆ 'ಸಾರ' ಸ್ವರ

8ನೇ ಪುಟದಿಂದ...

ಜೀವ ಸಂಕುಲಗಳ ಅವಲಂಬನೆಯ ವ್ಯವಸ್ಥೆ ಬಗ್ಗೆ ಎಲ್ಲ ಮಗ್ಗುಲಗಳ ಸಮಗ್ರ ಅಧ್ಯಯನವನ್ನು ಮಾಡುವುದು ಅನಿವಾರ್ಯವಾಗಿದೆ.

ಮಾನವ ಸಾವಿರಾರು ವರ್ಷಗಳಿಂದ ಅಸಂಖ್ಯಾತ ಬಗೆಯ ಉಪಯುಕ್ತ ಆಹಾರ ಮತ್ತು ಔಷಧೀಯ ಗುಣಗಳ ಸಸ್ಯಗಳನ್ನು ಗುರುತಿಸಿ ಸಂರಕ್ಷಿಸಿದ್ದಾನೆ. ನಮ್ಮ ಪೂರ್ವಜರ ಜ್ಞಾನ ಭಂಡಾರವು ಈ ಅಮೂಲ್ಯ ಪರಂಪರೆಯನ್ನು ಜೀವಂತವಾಗಿ ಇಟ್ಟಿದೆ. ಈ ಬಹು ದೊಡ್ಡ ಜ್ಞಾನ ಪರಂಪರೆಯನ್ನು ಮುಂದಿನ ಪೀಳಿಗೆಗೆ ಹಸ್ತಾಂತರಿಸಬೇಕಿದೆ. ಇದು ನಮ್ಮ ಕರ್ತವ್ಯವೆನಿಸಿದರೂ ಕಳೆದ ಕೆಲವು ದಶಕಗಳಿಂದ ಹಲವು ಕಾರಣಗಳನ್ನು ಮುಂದಿಟ್ಟು ಈ ಮೌಲಿಕ ಪರಂಪರೆಯನ್ನು ರಕ್ಷಿಸುವಲ್ಲಿ ನಾವು ವಿಫಲರಾಗಿದ್ದೇವೆ. ಅದಕ್ಕಾಗಿ ಒಂದು ಸಾಂಸ್ಕೃತಿಕ, ಸಾಮಾಜಿಕ ಹೊಣೆಗಾರಿಕೆಯಿಂದ ಜಾಗರವನ್ನು ಹುಟ್ಟು ಹಾಕಬೇಕಿದೆ. ಅದನ್ನು ನೆರವೇರಿಸಲು 'ಸಾರ' ಕೇಂದ್ರ ಸನ್ನದ್ಧವಾಗಿದೆ. ಇದಕ್ಕೆ ಸಮಾಜದ ಎಲ್ಲ ವರ್ಗದವರು ಸ್ಪಂದಿಸಿ ಕೈಜೋಡಿಸಬೇಕಿದೆ ಎಂದು ಅದರ ಪ್ರಧಾನ ಸಂಚಾಲಕ ಕಲಾವಿದ ಅರುಣಕುಮಾರ್ ತಮ್ಮ ಕಾಳಜಿಯನ್ನು ವ್ಯಕ್ತಪಡಿಸುತ್ತಾರೆ.

ಇಲ್ಲಿ 'ನೈಸರ್ಗಿಕ ಪರಂಪರೆ'ಯಲ್ಲಿ ನಿಸರ್ಗದ ವಿಸ್ಮಯಗಳನ್ನು ಹತ್ತಿರದಿಂದ ಪರಿಶೀಲಿಸುವ ಯತ್ನವಿದೆ. ಕಲ್ಲು, ಮಣ್ಣು, ಮರ-ಗಿಡಗಳು, ಕೀಟ, ಪಕ್ಷಿಗಳು, ಭತ್ತದ ತಳಿಗಳು, ವಿವಿಧ ಆಹಾರ ಧಾನ್ಯಗಳ ಮಾದರಿಗಳ ಅಧ್ಯಯನವಿದೆ. ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಮತ್ತು ಸಂಶೋಧನೆಗೆ ಪ್ರೇರಣೆ ದೊರಕಿಸಿಕೊಡಲು ಸಚಿತ್ರ ವಿವರಗಳನ್ನು ಕ್ರೋಡೀಕರಿಸಿ ನೀಡಲಾಗಿದೆ.


ಪ್ರಕೃತಿ ಪರಂಪರೆಯ ಕಥೆ ಹೇಳುವ 'ಬೇರುಗಳು'

ಪಾರಂಪರಿಕ ನೂರಾ ಅರವತ್ತಕ್ಕೂ ಮಿಕ್ಕಿದ ಭತ್ತದ ತಳಿಗಳನ್ನು ಸಂಗ್ರಹಿಸಿ ಇಡಲಾಗಿದೆ. ವಿವಿಧ ಆಹಾರ ಬಗೆಯ ಬೀಜಗಳ ಸಂಗ್ರಹವು ಇಲ್ಲಿದೆ. ಮಾದರಿ ಭತ್ತದ ತೆನೆಗಳು ಕೂಡ ಉಂಟು. ಪ್ರದರ್ಶನಕ್ಕಿಟ್ಟ ಶಿಲೆಯ ಹಲವು ರೂಪಗಳ ಪದರುಗಳು ಕುತೂಹಲವನ್ನು ವೃದ್ಧಿಸುತ್ತವೆ. ಮಣ್ಣಿನ ಸಂಸ್ಕೃತಿ, ಶಿಲಾ ಸಂಸ್ಕೃತಿಯ ರೂಪಗಳ ವಿವರಗಳನ್ನು ಇಡಲಾಗಿದೆ. ಅಂತರ್ಜಲ ಮಾಹಿತಿಯ ಪ್ರಾತ್ಯಕ್ಷಿಕೆಗಳಿವೆ.

'ಸಾರ' ಕೇಂದ್ರದಲ್ಲಿ ಸಹ್ಯಾದ್ರಿ ಶ್ರೇಣಿಯ ಪ್ರಾಣಿ ವೈವಿಧ್ಯದ ಗುಣ ಸ್ವಭಾವಗಳ ಚಿತ್ರಣವನ್ನು ನೀಡಲಾಗಿದೆ. ಪಶ್ಚಿಮ ಘಟ್ಟಗಳಲ್ಲಿ ವಿಶಿಷ್ಟ ಪ್ರಾಣಿ ಪ್ರಭೇದಗಳು, ಅಳಿವಿನಂಚಿನಲ್ಲಿರುವ ಪ್ರಾಣಿ, ಚಿಕ್ಕ ಪ್ರಾಣಿ, ಕೀಟ, ಸಣ್ಣ ಕೀಟ, ಹಾವು, ಪಕ್ಷಿಗಳ ವಿವರಗಳು ಇವೆ. ಎಲ್ಲ ವಿಷಯಗಳಲ್ಲೂ ಮಾನವ ಅದೆಷ್ಟು ಹೊಣೆಗಾರನು ಎಂಬುದನ್ನು ಚಿಂತನೆಗೆ ಒಡ್ಡುವಂತೆ ಇವು ಪ್ರೇರೇಪಿಸುತ್ತವೆ. ಗಣಿಗಾರಿಕೆ, ಹುಸಿ ಅಭಿವೃದ್ಧಿ ನೀತಿಗಳು, ಮಾನವನು ಕೃಷಿ ಚಟುವಟಿಕೆಗಳಿಗೆ ಕಾಡನ್ನು ಬಳಸುವುದು.-ಇವೆಲ್ಲವೂ ಪ್ರಾಕೃತಿಕ ಅಸಮತೋಲನಕ್ಕೆ ಕಾರಣ.

ಮಹಾತ್ಮ ಗಾಂಧೀಜಿಯವರ 'ಗ್ರಾಮ ಸ್ವರಾಜ್ಯ' ಅರುಣಕುಮಾರ್ ಅವರಿಗೆ ಸ್ಫೂರ್ತಿ. ಕೆಲವು ಹಳ್ಳಿಗಳನ್ನು 'ಸಾರ' ಕೇಂದ್ರ ದತ್ತು ಪಡೆಯಿತು. ಆ ಹಳ್ಳಿಗಳ ಬತ್ತಿದ ಕೆರೆಗಳಿಗೆ ಕಾಯಕಲ್ಪ ನೀಡಿ ನೀರು ಜಿನುಗುವಂತೆ ಮಾಡುವುದು ಅದರ ಮುಖ್ಯ ಧ್ಯೇಯೋದ್ದೇಶ. ನೇರ ಮತ್ತು ನೇರವಲ್ಲದೇ ಇರುವ ಹದಿನೈದು-ಹದಿನಾರು ಕೆರೆಗಳ ಹೂಳೆತ್ತಿ ನೀರು ಹರಿಸಿದ ಶ್ರೇಯ 'ಸಾರ'ಕ್ಕಿದೆ. ಗ್ರಾಮೀಣರನ್ನು ವಿಶ್ವಾಸಕ್ಕೆ ಪಡೆದು ಗ್ರಾಮ ಸಮಿತಿಗಳನ್ನು ರಚಿಸಿದರು. ಗ್ರಾಮೀಣ ಬದುಕಿನ ನಾಡಿ ಮಿಡಿತವರಿತು ಕೃಷಿ, ಆರೋಗ್ಯ, ಜಲಭದ್ರತೆಯ ಅರಿವು ಮೂಡಿಸಿದರು. 2017-18ರಲ್ಲಿ 'ಘಟ್ಟದತ್ತ ದಿಟ್ಟ ಹೆಜ್ಜೆ' ಎನ್ನುವ ಚಳವಳಿಯನ್ನು 'ಸಾರ' ಹುಟ್ಟುಹಾಕಿತು.

ಇತ್ತೀಚೆಗೆ 'ಸಾರ'ದಲ್ಲಿ ದೇಶದ ವಿವಿಧ ಭಾಗಗಳಿಂದ ಬಂದಿದ್ದ ಕಲಾವಿದರ ಒಂದು ಕಲಾಶಿಬಿರವೂ ನಡೆಯಿತು. 'ಪಾರಿಸರಿಕ ಗುರುತುಗಳು' ಪರಿಕಲ್ಪನೆಯ ಶಿಬಿರ ಇದು. ಇದರಲ್ಲಿ ಸುತ್ತಲಿನ ಕಾಲೇಜು ವಿದ್ಯಾರ್ಥಿಗಳು ಪಾಲ್ಗೊಂಡರು. ಅವರು 'ನೆಲದ ಕತೆಗಳು'ಎಂಬ ಹೆಸರಿನ ಪರಿಸರ ಸಂಬಂಧಿ ಕತೆಗಳನ್ನು ರಚಿಸಿ ವಾಚಿಸಿದರು. ಅದರ ಆಧಾರಿತ ಚಿತ್ರಗಳು ರಚನೆಗೊಂಡವು.

ಈಗ 'ಸಾರ' ಕೇಂದ್ರದಿಂದ ಮಲೆನಾಡಿನ ಕಾಲೇಜುಗಳತ್ತ 'ಸಹ್ಯಾದ್ರಿ ಸಂವಾದ' ನಾಮದ ಪರಿಸರ ಜಾಗೃತಿಯ ಭಿತ್ತಿಚಿತ್ರಗಳ ಅಭಿಯಾನ ಆರಂಭಗೊಂಡಿದೆ. ಇದು ಪರಿಸರ ಪ್ರಜ್ಞೆಯನ್ನು ಯುವಕರಿಗೆ ತಲುಪಿಸುವ ಒಂದು ಅಭಿಯಾನ. ಜೀವಜಗತ್ತು ಅರಳಲು ಸಕಲರ ಪರಿಸರ ಕಾಳಜಿಯ ಅಗತ್ಯವಿದೆ ಎನ್ನುವುದಕ್ಕೆ 'ಸಾರ' ಸಂವಾದರೂಪವಾಗಿ ಕಾಣುತ್ತದೆ. ❖

ಮುನ್ನೋಟ 30-07-2023 ರಿಂದ 05-08-2023

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ದಿನಸಿ ವರ್ತಕರಿಗೆ ಉತ್ತಮ ಲಾಭ ಪ್ರಾಪ್ತಿಯಾಗುವ ಯೋಗವಿದೆ. ಬಹಳ ದಿನಗಳಿಂದ ಅನಾರೋಗ್ಯ ಪೀಡಿತರಾಗಿರುವವರಿಗೆ ಆರೋಗ್ಯದಲ್ಲಿ ಈಗ ಸ್ವಲ್ಪ ಸುಧಾರಣೆ ಆಗುತ್ತದೆ. ಉದ್ಯೋಗದಲ್ಲಿ ಎದುರಾಗುವ ಸಮಸ್ಯೆಗಳಿಗೆ ಪರಿಹಾರ ಹುಡುಕಲು ಪ್ರಯತ್ನ ಪಡುವಿರಿ. ಹೊಸ ವ್ಯಾಪಾರವನ್ನು ಆರಂಭಿಸುವವರಿಗೆ ಲಾಭವಿಲ್ಲದಿದ್ದರೂ ಅತಿಯಾದ ನಷ್ಟವಿರುವುದಿಲ್ಲ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ವಿದ್ಯುತ್ ಉಪಕರಣಗಳ ಬಳಕೆಯಲ್ಲಿ ಸಾಕಷ್ಟು ಜಾಗರೂಕರಾಗಿರುವುದು ಬಹಳ ಒಳ್ಳೆಯದು. ವಿದ್ಯಾರ್ಥಿಗಳಿಗೆ ಅತಿ ಹೆಚ್ಚಿನ ಓದಿನಿಂದ ಒಂದು ರೀತಿಯ ಒತ್ತಡ ಉಂಟಾಗಬಹುದು. ಸಮಯ ಪ್ರಜ್ಞೆಯನ್ನು ಅರಿತು ಕೆಲಸ ಮಾಡುವುದರಿಂದ ನಿಮಗೆ ಒಳಿತಾಗುತ್ತದೆ. ತೈಲ ಉತ್ಪನ್ನಗಳನ್ನು ಮಾರಾಟ ಮಾಡುವವರಿಗೆ ಹೆಚ್ಚಿನ ವ್ಯವಹಾರ ನಡೆದು ಹೆಚ್ಚು ಲಾಭವಿರುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ವಿದ್ಯಾರ್ಥಿಗಳಿಗೆ ಸಾಮಾನ್ಯವಾದ ಫಲಿತಾಂಶವಿರುತ್ತದೆ. ಸರ್ಕಾರದಿಂದ ಬರಬೇಕಾಗಿದ್ದ ಬಾಕಿ ಹಣಗಳು ಈಗ ಬರುತ್ತದೆ. ಆಟಿಕೆಗಳನ್ನು ಅಥವಾ ಕ್ರೀಡಾ ವಸ್ತುಗಳನ್ನು ತಯಾರಿಸಿ ಮಾರಾಟ ಮಾಡುವವರಿಗೆ ಹೆಚ್ಚಿನ ಲಾಭ ಇರುತ್ತದೆ. ಕೃಷಿ ಉಪಕರಣಗಳನ್ನು ತಯಾರಿಸಿ ಮಾರುವವರಿಗೆ ಹೆಚ್ಚು ವ್ಯವಹಾರ ನಡೆದು ಲಾಭವಿರುತ್ತದೆ. ಬೇರೆಯವರ ಹಣದ ಹಿಡಿತದಿಂದ ನೀವು ಈಗ ಪಾರಾಗಬಹುದು.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಕೆಲವರಿಗೆ ಹೊಸ ಹುದ್ದೆ ದೊರೆತು ಗೌರವ ಮತ್ತು ಸಂತೋಷ ದೊರೆಯುತ್ತದೆ. ಹಳೆಯದಾಗಿ ಕಗ್ಗಂಟಾಗಿದ್ದ ಕೌಟುಂಬಿಕ ಮುಖ್ಯ ಸಮಸ್ಯೆಯನ್ನು ಬಗೆಹರಿಸುವಿರಿ. ನಿಮ್ಮ ಉದ್ಯೋಗ ಸ್ಥಳದಲ್ಲಿ ಜವಾಬ್ದಾರಿಯುತ ಕೆಲಸಗಳು ದೊರೆತು ಅದನ್ನು ಯಶಸ್ವಿಯಾಗಿ ಮಾಡಿ ಮುಗಿಸುವಿರಿ. ಹಿರಿಯ ಸಹೋದ್ಯೋಗಿಗಳಿಂದ ಸಮಯಕ್ಕೆ ತಕ್ಕಂತೆ ಆರ್ಥಿಕ ಸಹಾಯ ದೊರೆಯುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಕೆಲವರಿಗೆ ಎರಡು ಮೂರು ವ್ಯವಹಾರಗಳಲ್ಲಿ ಆಹ್ವಾನ ದೊರೆತು ಆಯ್ಕೆ ಸ್ವಲ್ಪ ಕಷ್ಟವಾಗಬಹುದು. ರಾಜಕೀಯ ವಿಷಯಗಳ ಸಮಾಲೋಚನೆ ಮಾಡುವುದಕ್ಕೆ ಈಗ ಸರಿಯಾದ ಕಾಲ. ವೃತ್ತಿಯಲ್ಲಿ ಕೆಲವರಿಗೆ ವಿದೇಶಯಾನ ದೊರೆಯುವ ಸಂದರ್ಭವಿದೆ. ಹುಡುಕುತ್ತಿದ್ದ ವರಮಾನದ ಹೊಸ ಮಾರ್ಗ ಸಿಗಬಹುದು. ಪುಸ್ತಕ ಓದುವ ಹವ್ಯಾಸವಿದ್ದವರಿಗೆ ಉತ್ತಮ ಪುಸ್ತಕಗಳು ದೊರೆಯಬಹುದು.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಕೆಲವರಿಗೆ ವೃತ್ತಿಯಲ್ಲಿ ತರಬೇತಿ ದೊರೆಯುವ ಸಾಧ್ಯತೆ ಇದೆ. ವ್ಯವಹಾರದಲ್ಲಿ ನೀವು ತೋರುವ ದರ್ಪದಿಂದ ಪಾಲುದಾರರು ದೂರ ಸರಿಯುವ ಸಾಧ್ಯತೆ ಇದೆ. ದೈನಂದಿನ ಬದುಕಿನಲ್ಲಿ ಕೆಲವು ಸಮಸ್ಯೆಗಳು ಬರುವ ಸಾಧ್ಯತೆಗಳಿವೆ. ಕ್ರೀಡಾ ಪಟುಗಳಿಗೆ ಹೊಸ ಸಮಸ್ಯೆಗಳು ಎದುರಾಗಬಹುದು. ಆಸ್ತಿ ಸಂಬಂಧಪಟ್ಟ ಗೊಂದಲಗಳು ದೂರವಾಗುವ ಸಾಧ್ಯತೆ ಇದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ನ್ಯಾಯಾಲಯದ ವ್ಯವಹಾರಗಳಲ್ಲಿ ನಿಧಾನವಾದರೂ ಅಂತಿಮ ಜಯ ನಿಮ್ಮದಾಗಿರುತ್ತದೆ. ಉಸಿರಾಟದ ತೊಂದರೆ ಅನುಭವಿಸುತ್ತಿರುವವರು ಚಿಕಿತ್ಸೆ ಪಡೆಯುವುದು ಒಳ್ಳೆಯದು. ಆಪ್ತರ ಸಲಹೆಯನ್ನು ಅನುಸರಿಸಿ ಮಾಡಿದ ಕೆಲಸಗಳಲ್ಲಿ ಯಶಸ್ಸು ಇರುತ್ತದೆ. ನಿಮ್ಮ ಒಳ ಮರ್ಮ ಅರಿಯದೆ ಕೆಲವರು ನಿಮಗಾಗಿ ಕೆಲಸ ಮಾಡಿಕೊಡುವರು. ಆದಾಯದಷ್ಟೇ ಖರ್ಚು ಬರುವ ಸಾಧ್ಯತೆಗಳಿವೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಜನಗಳ ಮಧ್ಯದಲ್ಲಿ ಸವಿಯಾಗಿ ಮಾತನಾಡಿ ನಿಮ್ಮ ವಿಷಯವನ್ನು ಜನರಿಗೆ ತಲುಪಿಸುವುದರಲ್ಲಿ ಯಶಸ್ವಿಯಾಗುವಿರಿ. ಬುದ್ಧಿವಂತಿಕೆಯಿಂದ ಹಲವಾರು ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವಿರಿ. ಪತ್ರಿಕಾರಂಗದಲ್ಲಿ ಕೆಲಸ ಮಾಡುತ್ತಿರುವವರಿಗೆ ಉತ್ತಮ ಹೆಸರು ದೊರೆಯುವ ಸಾಧ್ಯತೆ ಇದೆ. ಹಣವನ್ನು ಹೂಡುವಾಗ ಅದರ ಬಗ್ಗೆ ಸರಿಯಾಗಿ ಪರಿಶೀಲನೆ ಮಾಡಿರಿ.


ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಸಾಕಷ್ಟು ಆಸಕ್ತಿ ಮೂಡುತ್ತದೆ. ಧಾರ್ಮಿಕ ಆಚರಣೆಗಳ ಬಗ್ಗೆ ಹೆಚ್ಚಿನ ಒಲವು ಮೂಡುತ್ತದೆ. ನೀರಿನಿಂದ ಉಂಟಾಗಿದ್ದ ಆರೋಗ್ಯ ಸಮಸ್ಯೆಗಳು ಈಗ ಪರಿಹಾರವಾಗುತ್ತವೆ. ವಾಹನ ಕಲಿಕಾ ಶಾಲೆಗಳನ್ನು ನಡೆಸುತ್ತಿರುವವರಿಗೆ ಅಭಿವೃದ್ಧಿ ಇರುತ್ತದೆ. ನಿಮ್ಮೆಲ್ಲಾ ಕೆಲಸಗಳಲ್ಲೂ ಹಸನ್ಮುಖಿಯಾಗಿ ಕೆಲಸ ಮಾಡುವಿರಿ. ಉದ್ಯೋಗ ಸ್ಥಳದಲ್ಲಿ ಅಭಿವೃದ್ಧಿಯನ್ನು ಕಾಣಬಹುದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಬಾಲ್ಯದ ಗೆಳೆಯರು ದೊರೆತು ನಿಮ್ಮ ಬಾಲ್ಯ ಜೀವನವನ್ನು ಮೆಲುಕು ಹಾಕುವಿರಿ. ನಿಮ್ಮ ಪ್ರಾಮಾಣಿಕತೆಗೆ ಸರಿಯಾದ ಫಲಗಳು ಈಗ ದೊರೆಯುತ್ತವೆ. ಸರಳ ಸ್ವಭಾವದಿಂದ ಸಂಬಂಧಿಕರಲ್ಲಿ ಗೌರವವನ್ನು ಹೆಚ್ಚಿಸಿಕೊಳ್ಳುವಿರಿ. ಕಟ್ಟಡ ನಿರ್ಮಾಣಕಾರರಿಗೆ ಹೊಸ ಕಟ್ಟಡದ ನಿರ್ಮಾಣದ ನಿರ್ವಹಣೆ ದೊರೆಯುತ್ತದೆ. ದೂರ ಪ್ರಯಾಣಗಳಿಂದ ಖರ್ಚುಗಳಿದ್ದರೂ ಕೂಡ ಹೆಚ್ಚಿನ ಸಂತೋಷ ದೊರೆಯುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಹಿರಿಯ ಅಧಿಕಾರಿಗಳಿಗೆ ಅವರ ಪ್ರಾಮಾಣಿಕತೆ ಮತ್ತು ನಿಷ್ಠೆಗೆ ಗೌರವ ದೊರೆಯುತ್ತದೆ. ವ್ಯವಹಾರದಲ್ಲಿ ಯೋಚಿಸಿ ಮಾತನಾಡುವುದರಿಂದ ಯಾವುದೇ ಗೊಂದಲಗಳಿಗೆ ಆಸ್ಪದ ಇರುವುದಿಲ್ಲ. ಯುವಕರು ಇತರರ ಭಾವನೆಗಳಿಗೆ ಬೆಲೆ ಕೊಡುವುದನ್ನು ಕಲಿಯುವುದು ಒಳ್ಳೆಯದು. ಉನ್ನತ ವಿದ್ಯಾಭ್ಯಾಸ ಮಾಡುತ್ತಿರುವವರಿಗೆ ಸೂಕ್ತ ರೀತಿಯ ಸಹಾಯ ಹಾಗೂ ಮಾರ್ಗದರ್ಶನ ದೊರೆಯುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಕೆಲವೊಂದು ಕೌಟುಂಬಿಕ ಸಮಸ್ಯೆಗಳಿಂದ ಮುಕ್ತರಾಗುವಿರಿ. ರಫ್ತು ಉದ್ಯಮ ನಡೆಸುತ್ತಿರುವವರಿಗೆ ಇದ್ದ ಅಡೆತಡೆಗಳು ನಿವಾರಣೆಯಾಗುತ್ತವೆ. ಆಸ್ತಿಯ ವಿಷಯಗಳು ನಿರಾತಂಕವಾಗಿ ಬಗೆಹರಿಯುತ್ತವೆ. ಹಣ್ಣು ಮಾರಾಟಗಾರರಿಗೆ ನಿರೀಕ್ಷಿಸಿದ್ದಕ್ಕಿಂತ ಹೆಚ್ಚಿನ ವ್ಯವಹಾರ ನಡೆಯುತ್ತದೆ. ಉದ್ದಿಮೆದಾರರು ಅವರ ಕಾರ್ಮಿಕ ಸಮಸ್ಯೆಗಳನ್ನು ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳಬಹುದು.

ಪದಬಂಧ 2800



ಮೇಲಿನಿಂದ ಕೆಳಕ್ಕೆ

1. ಸದಾ ಅರಳುತ್ತಾ ಹೋಗುವ ಪ್ರವೃತ್ತಿ 3
2. 'ತರನಾನ' ಆಲಾಪನೆಯ ಹಿಂದೂಸ್ಥಾನಿ ಸಂಗೀತ ಪ್ರಕಾರ 3
3. ಹೊಳೆಯಿಂದ ಹುಟ್ಟಿಬಂದವನು ಉದಾ: ಗಂಗಾತನಯ 3
4. ಅಧೋಗತಿಗೆ ಇಳಿದಿದ್ದು 3
5. ವಿರಳವಾದ ಪ್ರಯತ್ನ 3
8. ಕಿತ್ತಳೆ ನಿಂಬೆ ಜಾತಿಗೆ ಸೇರಿದ ಮತ್ತೊಂದು ಹಣ್ಣು 3
9. ಎಲ್ಲರೂ ಜೊತೆ ಜೊತೆ ಮಾಡುವ ವಿದ್ಯಾಭ್ಯಾಸ 5
11. ತೆಲುಗು ಜನರ ನೀರಿನ ಮೋಜು 3
12. ನಾಟಕದ ಸಂಭಾಷಣೆಯಲ್ಲಿ "ಮಾಡಿಹಾಕು"ಒತ್ತರಿಸಿ ಹೀಗೆ 3
13. ಮನಸ್ಸಿನ ಊಹಾ ತರಂಗ 3
14. ಹೊಸ ಪೀಳಿಗೆಯ ಒಂಭತ್ತನೆ ಮನುಷ್ಯ 5
15. ಕೆಡಬಾರದ ಶೀಲಯುಕ್ತ ಹೆಜ್ಜೆ ಪಾಡು 3
17. ಪುಣ್ಯ ವಿಶೇಷದಿಂದ ಮಾಡಿರ ಬಹುದಾದ ಒಳ್ಳೆಯ ಕೆಲಸ 3
19. ಸರ್ಕಾರದ ಯಜ್ಞಕ್ಕಾಗಿ ಒಟ್ಟು ಗೂಡುವ ದಾಖಲೆಗಳ ರಾಶಿ 3
20. ಬೆನ್ನು ನೆಲಕ್ಕೆ ಮಾಡಿ ಬಿದ್ದಿರುವ ಸ್ಥಿತಿ 3
21. ಮನವನ್ನೆಲ್ಲ ಕೇಂದ್ರೀಕರಿಸಲು ಬೇಕಾದ ದೃಷ್ಟಿ 3
22. ಮನವಿ ದೀರ್ಘವಾದಾಗ ಸಿಗುವ ರಾಯಚೂರಿನ ಪಟ್ಟಣ 3
23. ಸಂತನಿಗಾಗುವ ಹರ್ಷ 3
24. ಯೌವನಕ್ಕಾಗಿ ಬೇಡಿದ ರಾಜ ಕೆಳಗಿನಿಂದ ಮೇಲೆ 3

ಎಡದಿಂದ ಬಲಕ್ಕೆ

1. ಕರ್ತವ್ಯ ಕರ್ಮದಿಂದ ನಿವೃತ್ತನಾದವನ ಕೆಲಸವಿಲ್ಲದ ಬದುಕು 6
4. ಸುಭದ್ರೆಯಂಥವಳ ಪ್ರಣಯದ ನಂತರದ ವಿವಾಹ 4
6. ಭೂಮಿ ಭಾನು ಸೇರುವ ಸ್ಥಳ 3
7. ಯಾವ ವ್ಯತ್ಯಾಸವೂಯಿಲ್ಲದ ಏಕ ರೂಪದ ಜನಪದ ಸಮೂಹ 6
10. ಹೊಸ ಮಂದಿಯೇ ಇವರು 4
12. ಅಗ್ನಿಮಿತ್ರನ ನಾಟಕದ ಹೆಣ್ಣು 4
13. ಅನುಷ್ಠಾನಕ್ಕೆ ಒಗ್ಗದ ಬಿರುಸಾದ ವಿಧೇಯಕ 6
16. ಬಹಳ ನವಿರು ಎಳೆಗಳಿಂದ ಬಿಡಿಸಿದ ಶಿಲ್ಪದ ಕಲಾತ್ಮಕ ಕೆಲಸ 6
18. ಸಂಧಾನ ನಿರತ ರಾಜಕಾರಣಿಗಳ ಸದಾ ಸಂವಾದ 4
20. ಒಳಮನಸ್ಸಿನ ವೇದಿಕೆ 4
22. ಮನುಕುಲದಿ ಹುಟ್ಟಿಬಂದವರು 6
25. ಮಲೆನಾಡಿನ ಜನ ನೀರು ಎರೆದು ಕೊಳ್ಳುವ ಮಹಾಸಂಭ್ರಮ 3
26. ನಿಮ್ಮ ದೇಹ ಹಾಗೂ ದುಡ್ಡು 4
27. ಕೆಲಸದ ಮಧ್ಯದಲ್ಲಿ ವಿಶ್ರಾಂತಿಯ ಕೆಲ ಕಾಲ 6

ಪದಬಂಧ ಉತ್ತರ -2799

ಮೇಲಿಂದ ಕೆಳಕ್ಕೆ

1.ಚಕ್ರವರ್ತಿನಿ 2.ತ್ರಯೋದಶ 3.ಅಮರಾ 5.ಗಮಾರ 8.ಮನೋವಿಲಾಸ 10.ಧಾತ್ರಿಹವನ 12.ಜನ 14.ರಜ 16.ಪದವಿಧರ 17.ಭಾಜನ 18.ನವರಸ 20.ಕಣಜ

ಎಡದಿಂದ ಬಲಕ್ಕೆ

1.ಚಲನಚಿತ್ರ 3.ಅಷ್ಟಾವಕ್ರ 4.ಯೋಗಾಯೋಗ 6.ವನವಿವಾದ 7.ರಾಮಮೂರ್ತಿ 9.ಶಿರೋಧಾರ 11.ನಿಜ 13.ನಗರ 15.ಜಪ 17.ಭಾಸಮಾನ 19.ದಮನಕ 21.ವಚನಕವಿ 22.ನಗೆವಾರ 23.ಧರ್ಮರಾಜ 24.ಸಲಹೆಗಾರ

ಕೃಷ್ಣ ಸೃಜಿಸಿದ ಜಗತ್ತು

ಕ್ಯಾಪ್ಟನ್ ಜಿ.ಆರ್. ಗೋಪಿನಾಥ್

ಟಿ.ಎಂ. ಕೃಷ್ಣ ಅವರ ಸಂಗೀತ ಕಛೇರಿ ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆಯಿತು. ಅದರ ರಸಾಸ್ವಾದದ ಜತೆಗೆ ಸಂಗೀತಗಾರರ ಪ್ರಯೋಗಗಳನ್ನು ಗುರುತಿಸುವ ಅನುಭವ ಬರಹವಿದು.



ಟಿ.ಎಂ. ಕೃಷ್ಣ

ಆಹ್ವಾನ ಪತ್ರಿಕೆಯಲ್ಲಿ ಹೀಗೊಂದು ಒಕ್ಕಣೆ–'ವಿಶ್ವದ ಹೆಸರಾಂತ ಕರ್ನಾಟಕ ಶಾಸ್ತ್ರೀಯ ಗಾಯಕ ಟಿ.ಎಂ. ಕೃಷ್ಣ ಅವರ ಸಮ್ಮೋಹನಗೊಳಿಸುವ ಸಂಗೀತ ಸಂಜೆಯಲ್ಲಿ ಜತೆಯಾಗಿ; ಭಾರತೀಯ ಕಲೆ ಮತ್ತು ಸಂಸ್ಕೃತಿಯ ಪರಂಪರೆ, ಸೃಜನಶೀಲತೆಯ ಸಂಭ್ರಮಾಚರಣೆ ಮಾಡಿ'.

ತಮ್ಮ ಯಾವುದೇ ಕಛೇರಿಯಲ್ಲಿ ಕೃಷ್ಣ ಮೋಡಿ ಮಾಡುವುದು, ಕೀಟಲೆ ಮಾಡುವುದು ಸದಾ ಇದ್ದೇ ಇರುತ್ತದೆ. ಪ್ರಚೋದಿಸುವ, ಗೊಂದಲ ಮೂಡಿಸುವ, ಬಡಿದೆಬ್ಬಿಸುವ ಕೆಲಸವನ್ನೂ ಅವರ ಸಂಗೀತ ಮಾಡುತ್ತದೆ. ಮಂಕು ಎನ್ನಬಹುದಾದ ಕ್ಷಣವೇ ಅವರ ಕಛೇರಿಯಲ್ಲಿ ಇರುವುದಿಲ್ಲ. ಶುದ್ಧ ಕಲಾಪ್ರಕಾರ ಪ್ರೀತಿಸುವವರಿಗೆ ಅದೊಂದು ಹಬ್ಬ. ಪ್ರಯೋಗಮುಖಿ ಕಲಾವಂತರಿಗೆ ಹಾಗೂ ಸರ್ವಧರ್ಮಗಳನ್ನೂ ಸಮಾನವಾಗಿ ಕಾಣುವವರಿಗೆ ಅಚ್ಚರಿ ಬೆರೆತ ಆನಂದವನ್ನು ಕೃಷ್ಣ ಅವರ ಸಂಗೀತ ನೀಡುತ್ತದೆ. ಆದರೆ, ಧರ್ಮಿಷ್ಠರು, ಸಂಪ್ರದಾಯವಾದಿಗಳು ಅವರೆಂದರೆ ಬಿರುಗೂದಲಿನವರಾಗುತ್ತಾರೆ, ಶಾಸ್ತ್ರೀಯ ಸಂಗೀತದ ಆಳ–ಅಗಲವನ್ನು ಬಲ್ಲ ಹಿರೀಕರು ಮೆಚ್ಚುಗೆ ಸೂಸುವಾಗಲೂ ಅವರನ್ನು ವಾರೆಗಣ್ಣಿನಿಂದಲೇ ನೋಡುತ್ತಾರೆ. ಶಾಸ್ತ್ರೀಯ ಸಂಗೀತದತ್ತ ಆಸಕ್ತಿ ಬೆಳೆಸಿಕೊಂಡ ಹೊಸ ತಲೆಮಾರಿನವರು ಹಾಗೂ ಸಂಗೀತ ವಿದ್ಯಾರ್ಥಿಗಳು ಅವರನ್ನು ಕೊಂಡಾಡುತ್ತಾರೆ. ಕೃಷ್ಣ ದೈವಾರಾಧಕರಲ್ಲದಿದ್ದರೂ ಹಲವು ವಿಷಯಗಳ ಸಾರಸತ್ತ್ವ ಅರಿಯುವ ಆಸಕ್ತಿ ಹಾಗೂ ತಲಸ್ಪರ್ಶಿ ಅಧ್ಯಯನದಿಂದ ಅವರ ದೃಷ್ಟಿಕೋನಗಳು ವಿಕಸನಗೊಂಡಿವೆ. ಶಾಸ್ತ್ರೀಯ ಸಂಗೀತ, ಕಲೆ, ಅಸ್ಪೃಶ್ಯತೆಯಿಂದಾಗಿ ಸಮಾಜದಲ್ಲಿ ಮೂಲೆಗುಂಪಾದರೂ ತಲೆ ತಲಾಂತರದಿಂದ ಬಂದ ವಾದ್ಯ ತಯಾರಿಕೆಗೆ ಅರ್ಪಿಸಿಕೊಂಡ ಕಲಾ ಕುಶಲಕರ್ಮಿಗಳ ಕುರಿತು ವಿದ್ವತ್ಪೂರ್ಣ ಕೃತಿಗಳನ್ನು ಬರೆದಿರುವ ಅವರು ಹೆಸರಾಂತ ಲೇಖಕ. ಸಮಕಾಲೀನ ವಿಷಯಗಳ ಬಗೆಗೆ ಸತತವಾಗಿ ಬರೆಯುವ ನಿರ್ಭೀತ ಹೋರಾಟಗಾರರೂ ಹೌದು.

ಸಂಪ್ರದಾಯದ ಬೇರುಗಳಿದ್ದೂ ಅವರು ಆಧುನಿಕ ಮನಃಸ್ಥಿತಿಯವರು. ನಿರೀಶ್ವರವಾದಿಯಾದರೂ ದೇವಸ್ಥಾನದಲ್ಲಿ ನಡೆಯುವ ಸಂಗೀತೋತ್ಸವಗಳಲ್ಲಿ ಭಕ್ತಿಗೀತೆಗಳನ್ನು ಹಾಡಿ ಮೋಡಿ ಮಾಡುತ್ತಾರೆ. ಕಲೆಯ ಜತೆ ಬೆರೆತುಕೊಂಡಿರುವ ಸಂಪ್ರದಾಯವಾದಿ ಮನಸ್ಸುಗಳನ್ನು ಅವರು ಸಂಸ್ಕೃತಿ ಹಾಗೂ ಸಾಮಾಜಿಕ ಅವಕಾಶದ ನೆಲೆಗಟ್ಟಿನಲ್ಲಿ, ಗುಪ್ತಗಾಮಿನಿಯಾಗಿರುವ ತರತಮವನ್ನು ಉಲ್ಲೇಖಿಸಿ ಪ್ರಶ್ನಿಸುತ್ತಾರೆಯೇ ವಿನಾ ನಂಬಿಕೆಗಳನ್ನೇ ಬುಡಮೇಲು ಮಾಡುವುದಿಲ್ಲ.

ವಿಶ್ವಮಟ್ಟದಲ್ಲಿ ಅವರಿಗೆ ಎಲ್ಲರಿಂದಲೂ ಹೊಗಳಿಕೆ ಸಿಗುವುದಿಲ್ಲ ಎನ್ನುವುದೇನೋ ನಿಜ. ಆದರೆ ಕಲೆಯನ್ನು ಶ್ರೀಮಂತಗೊಳಿಸುವಂಥ ಅರ್ಥಪೂರ್ಣ ಚರ್ಚೆಗಳನ್ನು ಅವರು ಹಚ್ಚುತ್ತಾರೆನ್ನುವುದು ಗಮನಾರ್ಹ. ಜನಪದೀಯರು, ಟ್ರ್ಯಾನ್ಸ್‌ಜೆಂಡರ್‌ಗಳು, ಪುರಾಣಿಕರು, ಶಾಸ್ತ್ರೀಯರು, ದಾಸ–ವಚನ ಸಾಹಿತ್ಯ ಹಾಡುವವರು, ಹಳೆಯ ಹಾಗೂ ನವೋದಯ ಕಾವ್ಯಪ್ರೇಮಿಗಳು, ಭಕ್ತಿ ಹಾಗೂ ಸೂಫಿ ಸಂಗೀತಗಾರರು ಎಲ್ಲರನ್ನೂ ಒಳಗೊಳ್ಳುತ್ತಲೇ ಸಂಗೀತದ ಕಲಾವಂತಿಕೆಯನ್ನು ಅವರು ಸಂಭ್ರಮಿಸುತ್ತಾರೆ.

ಕರ್ನಾಟಕ, ಹಿಂದೂಸ್ತಾನಿ, ಭರತನಾಟ್ಯ, ಕಥಕ್, ಕುಚಿಪುಡಿ, ಒಡಿಸ್ಸಿ ಮತ್ತಿತರ ಸಂಗೀತ ಹಾಗೂ ನೃತ್ಯ ಪ್ರಕಾರಗಳನ್ನು ಕಛೇರಿಯು ಒಳಗೊಳ್ಳಲಿದೆ ಎಂದು ಆಯೋಜಕರು ಉಲ್ಲೇಖಿಸಿದ್ದನ್ನು ನೋಡಿ ಅಚ್ಚರಿಯಾಗಿತ್ತು. ಆದರೆ, ಕೃಷ್ಣ ಅದನ್ನು ಅರ್ಥೈಸಿದ್ದು ತುಸು ಬೇರೆ ರೀತಿಯಲ್ಲಿ. ಕಛೇರಿ ಪ್ರಾರಂಭಿಸುವ ಮೊದಲು ಅವರು ಸಂಕ್ಷಿಪ್ತವಾಗಿ ಮಾತನಾಡಿದರು. ಪ್ರಾಚೀನ, ಮಧ್ಯಕಾಲೀನ ಹಾಗೂ ಆಧುನಿಕ ಕಾಲದ ಸಂಗೀತ ಸಂಯೋಜನೆಗಳನ್ನು ವಿವಿಧತೆ ಹಾಗೂ ಶ್ರೀಮಂತ ಪರಂಪರೆಯ ದೃಷ್ಟಿಯಿಂದ ಅಷ್ಟೇ ಅಲ್ಲದೆ ನಾವು ಎದುರಿಸುತ್ತಿರುವ ಸಮಕಾಲೀನ ವಿದ್ಯಮಾನಗಳು, ಸಮಸ್ಯೆಗಳಿಗೆ ಅನ್ವಯಿಸಬಹುದಾದ ಅವುಗಳ ಪಠ್ಯದ ಅರ್ಥ–ತತ್ತ್ವದಿಂದಲೂ ಆಯ್ಕೆ ಮಾಡಿಕೊಂಡಿದ್ದಾಗಿ ಅವರು ಹೇಳಿದರು.

ಗೋಪಾಲಕೃಷ್ಣ ಭಾರತಿ ಅವರ ತಮಿಳಿನ ಜನಪ್ರಿಯ ರಚನೆಯೊಂದರಿಂದ ಅವರು ಹಾಡುಗಾರಿಕೆ ಪ್ರಾರಂಭಿಸಿದರು. ವಿಲಂಬ ಕಾಲದಿಂದ ಶುರುವಾಯಿತು. ಸಾಮಾನ್ಯವಾಗಿ ಸಾಹಿತ್ಯ, ಸಂಗೀತದ ಪಲುಕುಗಳ ಮಿಶ್ರಣ ಒಳಗೊಂಡ ವರ್ಣದ ಮೂಲಕ ಕಛೇರಿಗಳನ್ನು ಅನೇಕರು ಪ್ರಾರಂಭಿಸುತ್ತಾರೆ. ಅದಕ್ಕೆ ಇದು ಅಪವಾದ. ಗಾಯಕರಿಗೆ ವರ್ಣ ಎನ್ನುವುದು ಒಂದು ಬಗೆಯಲ್ಲಿ ಕಛೇರಿಯ ದಿಕ್ಕನ್ನು ನಿರ್ಣಯಿಸುವಂಥದ್ದು. ಸರಿಯಾದ ಶ್ರುತಿ, ತಾಳಕ್ಕೆ ಒಗ್ಗಿಕೊಳ್ಳಲು ಅಗತ್ಯವಿರುವ ಪ್ರವೇಶಿಕೆಯಂತೆ. ಬಹುಶಃ ಸಂಪ್ರದಾಯವಾದಿಗಳಿಗೆ ಕೃಷ್ಣ ಅವರು ಈ ಹಾದಿಯನ್ನು ಆಯ್ಕೆ ಮಾಡಿಕೊಳ್ಳದೇಹೋದುದು ಇರುಸು ಮುರುಸು ಉಂಟುಮಾಡಿದ್ದೀತು.

ಪ್ರತಿ ಕಛೇರಿಯಲ್ಲೂ ಹೊಸತನ್ನು ಅನಾವರಣ ಮಾಡುವ ಕೃಷ್ಣ ಶುದ್ಧವಾದಿ. ಕೃತಿಗಳು, ರಾಗಗಳು, ಆಲಾಪ, ತಾನಂ, ಪಲ್ಲವಿಗಳು, ಕಲ್ಪನಾಸ್ವರಗಳು, ನೆರವಲ್‌ಗಳು ಇವೆಲ್ಲವುಗಳ ಮೇಲಿನ ಅವರ ಹಿಡಿತವೇ ಒಂದು ಹಿತಾನುಭವ.

ಕೃಷ್ಣ ಊಹೆಗೂ ಮೀರಿದ್ದನ್ನು ಆ ದಿನ ಹಾಡಿದರು. 2500 ವರ್ಷಗಳ ಹಿಂದೆ ಬಂಡೆಗಳ ಮೇಲೆ ಕೊರೆದಿದ್ದ ಅಶೋಕನ ಶಿಲಾಶಾಸನಗಳಿಂದ ತೆಗೆದುಕೊಳ್ಳಲಾದ ಸಾರವನ್ನು ಹಾಡಾಗಿಸಿದರು. ಇತಿಹಾಸಕಾರರು, ಭಾಷಾ ಪರಿಣತರು ಹಾಗೂ ಅಶೋಕ ವಿಶ್ವವಿದ್ಯಾಲಯದವರೊಂದಿಗೆ ಸಾಕಷ್ಟು ಸಂಶೋಧನೆ ನಡೆಸಿ, ಅರಿವಿಗೆ ದಕ್ಕಲು ಕಷ್ಟವಾದ ಪ್ರಾಕೃತ ಭಾಷೆಯ ಪಠ್ಯಕ್ಕೆ ರಾಗ ಹಾಗೂ ಸ್ವರ ಹಾಕಿದರು. ನಿಗೂಢ ಚಿತ್ರಲಿಪಿಗಳ ಮೂಲಕ ಉಳಿದಿರುವ ಪ್ರಾಕೃತ ಲಿಪಿಯನ್ನು ಕೆಲವು ತಿಂಗಳ ಹಿಂದೆಯಷ್ಟೆ ಸಾರ್ವಜನಿಕರಿಗೆ ಮುಕ್ತಗೊಳಿಸಲಾಯಿತು. ಪ್ರಾಕೃತ ಲಿಪಿ ಕುರಿತ ಅಧ್ಯಯನ ಈಗಲೂ ಮುಂದುವರಿದಿದೆ. ಸೌಹಾರ್ದ, ಶಾಂತಿ ಹಾಗೂ ಧರ್ಮಮಾರ್ಗದ ನಡೆಯನ್ನು ಅಶೋಕನ ಶಾಸನಗಳ ಪ್ರಸ್ತುತಿಯು ಕೇಂದ್ರವಾಗಿಟ್ಟುಕೊಂಡಿತ್ತು. ತನ್ನ ಸಾಮ್ರಾಜ್ಯ ನಡೆಸುತ್ತಿದ್ದ ಮೊದಲ ಕಾಲಘಟ್ಟದಲ್ಲಿ ನಿರ್ದಯಿ ಯುದ್ಧಪಿಪಾಸು ಆಗಿದ್ದ ಅಶೋಕ ಮುಂದೆ ಶಾಂತಿಪ್ರಿಯನಾದದ್ದು ಗೊತ್ತೇ ಇದೆ. ಅವನ ಒಂದು ಶಾಸನದಲ್ಲಿ ಕೃಷ್ಣ ಹೀಗೆ ಹೇಳುತ್ತಾನೆ- 'ಅಶೋಕನು ಕಳಿಂಗವನ್ನು ಯುದ್ಧದಿಂದ ಗೆದ್ದ. ಆದರೆ ನ್ಯಾಯವನ್ನು ಪ್ರತಿಬಿಂಬಿಸಿ, ನ್ಯಾಯವನ್ನು ಅಭ್ಯಸಿಸಿ, ನ್ಯಾಯವನ್ನು ಸುಖಿಸಿ ಪಶ್ಚಾತ್ತಾಪಪಟ್ಟ. ಕಳಿಂಗದ ಜನರ ಹೃದಯವನ್ನು ಅಶೋಕ ಗೆದ್ದನೇ?'

ಕೃಷ್ಣ ತಮ್ಮ ಕಛೇರಿಯಲ್ಲಿ ಪ್ರಸ್ತುತಪಡಿಸಿದ್ದರಲ್ಲಿ ತ್ಯಾಗರಾಜರ ಕೀರ್ತನೆ ಹಾಗೂ ಜನಪ್ರಿಯ ಸಂಸ್ಕೃತ ಗೀತೆ 'ಪಾಪನಾಶನ ಶಿವಂ'ನ 'ಜಾನಕೀಪತೆ', ಜೇಡರ ದಾಸಿಮಯ್ಯ ಹಾಗೂ ಲಡ್ಡೆಯ ಸೋಮಣ್ಣನ ಎರಡು ವಚನಗಳು ಕೂಡ ಸೇರಿದ್ದವು. ದಾಸಿಮಯ್ಯನ ಪೌರುಷದ ಪದ್ಯ 1000 ವರ್ಷಗಳ ಹಿಂದೆಯೇ ರಚಿತವಾದುದು. ಆ ಕಾಲದಲ್ಲಿ ಸಾಕಷ್ಟು ದೂರಾಲೋಚನೆಯುಳ್ಳದ್ದು. ಟ್ರಾನ್ಸ್‌ಜೆಂಡರ್‌ಗಳ ಅಸಮಾನತೆ ಹಾಗೂ ಅವರ ಮೇಲೆ ಹೇರಿದ್ದ ಬಹಿಷ್ಕಾರ ಸೇರಿದಂತೆ ಸಾಮಾಜಿಕ ಪಿಡುಗುಗಳನ್ನು ಅವನು ಖಂಡಿಸಿದ್ದ ವಚನ ಅದು. ಅದು ಹೀಗಿದೆ: 'ಜಡೆ ಬಂದರೆ ಹೆಣ್ಣೆಂಬರು/ಕಾಸೆ ಮೀಸೆ ಬಂದರೆ ಗಂಡೆಂಬರು/ ನಡುವೆ ಸುಳಿವ ಆತ್ಮನು ಹೆಣ್ಣೂ ಅಲ್ಲ ಗಂಡೂ ಅಲ್ಲ'. ಸಮಾಜ ಸುಧಾರಕ ನಾರಾಯಣ ಗುರು ಅವರ ಮಲಯಾಳಂ ರಚನೆ 'ಅನುಕಂಬದಾಸಕಂ' ಅನ್ನೂ ಅವರು ಹಾಡಿದರು. ರಾಮ, ಬುದ್ಧ, ಯೇಸು, ಶಂಕರ ಅಥವಾ ಪೈಗಂಬರ್–ಇವರಲ್ಲಿ ಅತ್ಯುನ್ನತ ಸ್ಥಾನದಲ್ಲಿ ಇರುವವರು ಯಾರು ಎನ್ನುವ ಗಂಭೀರ ಪ್ರಶ್ನೆಯನ್ನು ಎತ್ತಿದ ರಚನೆ ಇದು. ಕೊನೆಯಲ್ಲಿ ಹುತಾತ್ಮ ಯೋಧರಿಗೆ ಗೌರವ ಸೂಚಿಸುವ ಉಮೇದಿನಿಂದ ಮೆಚ್ಚಿನ ಗಾಂಧಿ ಗೀತೆಯನ್ನು ಹಾಡಿದರು. ಮೀರಾ ಭಜನೆಯೊಂದಿಗೆ ಕಛೇರಿ ಮುಗಿಯಿತು.

ಪಾಕಿಸ್ತಾನದ ಹಫೀಸ್ ಜಲಂಧರಿ ಬರೆದಿರುವ ಕೃಷ್ಣದೇವರ ಕುರಿತಾದ 'ಕೃಷ್ಣಾ ಕನ್ಹಯ್ಯಾ' ಎಂಬ ಉರ್ದು ಗೀತೆಯನ್ನು ಕೃಷ್ಣ ಹಾಡಿದ್ದು ಅವರ ಕಛೇರಿಯ ರೋಮಾಂಚನಕಾರಿ ಘಟ್ಟ. ಪಾಕಿಸ್ತಾನದ ರಾಷ್ಟ್ರಗೀತೆಯನ್ನೂ ಬರೆದಿರುವ ಹಫೀಸ್ ಜಲಂಧರಿ ಅವರ ಭಾವತೀವ್ರತೆಯ ಅರ್ಥಪೂರ್ಣ ಗೀತೆ ಅದು. ಈ ಗೀತೆಗೆ ಸ್ವರ ಸಂಯೋಜನೆ ಮಾಡಲು ಹಿಂದೂಸ್ಥಾನಿ ಸಂಗೀತದ ಹೆಸರಾಂತ ಗಾಯಕಿ ಶುಭಾ ಮುದ್ಗಲ್ ಅವರ ನೆರವನ್ನು ಪಡೆದುಕೊಂಡಿದ್ದಾಗಿ ಕೃಷ್ಣ ತಿಳಿಸಿದರು. ಸೃಜನಶೀಲತೆಯ ವಿಷಯದಲ್ಲಿ ಈ ಸಂಗೀತಗಾರನ ಉತ್ಕಟತೆ ಎಷ್ಟು ಆಳವಾದದ್ದು ಎನ್ನುವುದಕ್ಕೆ ಈ ತರಹದ ಯತ್ನಗಳು ಕನ್ನಡಿ ಹಿಡಿಯುತ್ತವೆ. ಕೃಷ್ಣನ ಗುಣಗಾನ ಮಾಡುತ್ತಲೇ ನೋಡುಗರನ್ನು ಪ್ರಚೋದಿಸುವಷ್ಟು ಶಕ್ತವಾದ ಈ ರಚನೆಯು 'ಓ ನನ್ನ ಕತ್ತಲ ಬಂಧು, ಭಾರತದ ಬೆಳಕೇ, ನಿನ್ನ ನಿಲುವಂಗಿಯಲ್ಲಿ ನನ್ನ ಸುತ್ತುವರಿ' ಎನ್ನುವ ಅರ್ಥ ಕೊಡುವ ಸಾಲುಗಳಿಂದ ಮುಕ್ತಾಯಗೊಂಡಿತು.

ಎರಡೂವರೆ ತಾಸು ಅವಧಿಯ ಕಛೇರಿ ಮುಗಿದೊಡನೆ ಎಲ್ಲರೂ ಎದ್ದುನಿಂತು ಚಪ್ಪಾಳೆಯ ಗುಡುಗು ಮೂಡಿಸಿದರು. ಆಗ ನನಗೆ ಶೇಕ್ಸ್‌ಪಿಯರನ ಈ ಸಾಲುಗಳು ನೆನಪಾದವು: 'ಸಂಗೀತ ಪ್ರೀತಿಯ ಆಹಾರವಾದರೆ, ಅನುರಣಿಸಲಿ; ಅದನ್ನು ಭರಪೂರ ನೀಡು... ಇಷ್ಟು ಭಾವಪರವಶವಾದ ಸಂಗೀತ, ಕ್ಲಿಯೋಪಾತ್ರಳ ಕುರಿತ ಬಾರ್ಡ್‌ನ ಸಾಲುಗಳನ್ನು ತಿರುಗಿಸಿ ಹೇಳುವುದಾದರೆ, ತಣಿಸಿದಷ್ಟೂ ಹಸಿವು ಮೂಡಿಸುವಷ್ಟು ಶಕ್ತ'.

ಜನಾನುರಾಗಿ ಗಣಿತ ಶಿಕ್ಷಕ ಸಿ.ಕೆ. ಸರ್

ನಿವೃತ್ತಿಯಾದ ಮೇಲೆಯೂ ಶಾಲೆಗೆ ಹೋಗಿ ಗಣಿತ ಪಾಠ ಹೇಳುತ್ತ, ಮಕ್ಕಳೊಂದಿಗೆ ಆಡುತ್ತಿದ್ದಾರೆ ಹಿರೆವಂಕಲಕುಂಟಾದ ಚಂದ್ರಕಾಂತಯ್ಯ ಮೇಷ್ಟ್ರು. ಇಡೀ ಊರಲ್ಲಿ ಇವರು ಸಿ.ಕೆ. ಸರ್ ಎಂದೇ ಜನಪ್ರಿಯರು.

ಅಮರೇಶ ನುಗಡೋಣಿ

ಗುರು ನಮನ

ಚಂದ್ರಕಾಂತಯ್ಯನವರು 1986ರಲ್ಲಿ ಗಣಿತ ಶಿಕ್ಷಕರಾಗಿ ನೇಮಕಗೊಂಡು ಸರ್ಕಾರಿ ಶಾಲೆ, ಹಿರೆವಂಕಲಕುಂಟಾದಲ್ಲಿ ಸೇವೆ ಆರಂಭಿಸಿದಾಗ, ಯಲಬುರ್ಗಾ ತಾಲ್ಲೂಕಿನಲ್ಲಿದ್ದ (ಜಿ. ಕೊಪ್ಪಳ) ಈ ಹಳ್ಳಿ ಚಿಕ್ಕದು. ನೀರಾವರಿ ಇರದೆ, ಮಳೆ ನೀರಿನಲ್ಲಿಯೇ ರೈತರು ವ್ಯವಸಾಯ ಮಾಡುತ್ತಿದ್ದರು. ವರ್ಷಕ್ಕೆ ಒಂದೇ ಬೆಳೆ. ಜೋಳ, ನವಣೆ, ಹತ್ತಿ ಬೆಳೆಗಳೇ ಪ್ರಮುಖವಾಗಿದ್ದವು. ಸರ್ಕಾರಿ ಶಾಲೆಯಿದ್ದರೂ ಹೆತ್ತವರು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುವ ಬದಲು ತಮ್ಮ ಹೊಲ ಮನೆಗಳ ಕೆಲಸಗಳಿಗೆ ತೊಡಗಿಸುವುದೇ ಹೆಚ್ಚಾಗಿತ್ತು. ಸಿ. ಕೆ. ಸರ್ ಇತರ ಸಹ ಶಿಕ್ಷಕರೊಂದಿಗೆ ಮನೆ ಮನೆಗಳಿಗೆ ಅಲೆದು ಪೋಷಕರ ಮನವೊಲಿಸಿ ಮಕ್ಕಳನ್ನು ಶಾಲೆಗೆ ಕರೆತರಲು ವರ್ಷ ವರ್ಷ ಶ್ರಮಿಸಿದರು.

ಊರಲ್ಲಿ ದುಡಿವವರಿಗೆ ಕೂಲಿ ಕೆಲಸಗಳು ಸಿಗುತ್ತಿರಲಿಲ್ಲ. ಬಡವರು ನಗರಗಳಿಗೆ ಮಕ್ಕಳೊಂದಿಗೆ ವಲಸೆ ಹೋಗುತ್ತಿದ್ದರು. ಇಂಥ ಸ್ಥಿತಿಯಲ್ಲೂ ಮಕ್ಕಳನ್ನು ಶಾಲಾ ಕಡೆಗೆ ಬರುವಂತೆ ಸಿ. ಕೆ. ಸರ್ ಮತ್ತು ಅವರ ಸಹ ಶಿಕ್ಷಕರ ತಂಡ ಶ್ರಮಿಸಿತು. ಕೆಲವೇ ವರ್ಷಗಳಲ್ಲಿ ಶಾಲೆಗೆ ಬರುವ ಮಕ್ಕಳ ಸಂಖ್ಯೆ ಏರುತ್ತಲೇ ಹೋಯಿತು. ಹೈಸ್ಕೂಲ್‌ನಲ್ಲಿ ಅವರು ನಿವೃತ್ತಿ ಹೊಂದುವ ಸಮಯದಲ್ಲಿ ಏಳುನೂರು ವಿದ್ಯಾರ್ಥಿಗಳು ಕಲಿಯುತ್ತಿದ್ದರು. ಅಕ್ಕಪಕ್ಕದ ಹತ್ತಾರು ಹಳ್ಳಿಗಳಲ್ಲಿ ಶಾಲೆಗಳಿದ್ದರೂ ಸಿ.ಕೆ. ಸರ್ ಪ್ರಭಾವದಿಂದ ಹಿರೆವಂಕಲಕುಂಟಾ ಹೈಸ್ಕೂಲಿಗೆ ಪೋಷಕರು ಮಕ್ಕಳನ್ನು ಕಳಿಸುತ್ತಿದ್ದರು.

ಸಿ.ಕೆ. ಸರ್ ಅವರು ತಮ್ಮ ಶ್ರಮ-ಶ್ರದ್ಧೆಗಳಿಂದ ದುಡಿಯುವ ಪ್ರವೃತ್ತಿಯುಳ್ಳವರಾಗಿದ್ದರು. ಶಾಲೆಗೆ ನಿತ್ಯವೂ ಒಂಬತ್ತು ಗಂಟೆಗೆ ಹೋಗಿ ಗಣಿತದ ತರಗತಿಯನ್ನು ಶುರು ಮಾಡುತ್ತಿದ್ದರು. ಸಂಜೆ ಶಾಲಾ ಸಮಯ ಮುಗಿದ ಮೇಲೆಯೂ ಒಂದು ಗಂಟೆ ಗಣಿತದ ಪಾಠಗಳನ್ನು ಮಾಡುತ್ತಿದ್ದರು. ಶಿಸ್ತಿನಿಂದ ಈ ರೀತಿ ಕೆಲಸ ಮಾಡುತ್ತ ಬಂದಿದ್ದರಿಂದ ಮಕ್ಕಳಿಗೂ, ಹಳ್ಳಿಗಳ ಜನರಿಗೂ ವಿಶ್ವಾಸ ಹೆಚ್ಚಾಗಿ ಗೌರವ ಪಡೆದರು. ಚಂದ್ರಕಾಂತಯ್ಯನವರು ಪಾಠದ ಜೊತೆಗೆ ಆಟಗಳಲ್ಲಿ ವಿಶೇಷ ಆಸಕ್ತಿಯುಳ್ಳವರಾಗಿದ್ದಾರೆ. ನಿತ್ಯ ವಿದ್ಯಾರ್ಥಿಗಳ ಜೊತೆಗೆ ಆಟವಾಡಲು ಮೈದಾನಕ್ಕೆ ಇಳಿಯುತ್ತಿದ್ದರು. ಶಾಲಾ ಮಟ್ಟದ ಕ್ರೀಡಾಕೂಟಗಳಿಗೆ ಆಟದ ತಂಡಗಳನ್ನು ಸಿದ್ಧ ಮಾಡಿ ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಮಕ್ಕಳಲ್ಲಿ ಕ್ರೀಡಾ ಮನೋಭಾವ ಬೆಳೆಸುತ್ತ ಬಂದಿದ್ದಾರೆ.


ಸಿ.ಕೆ. ಸರ್ 1986 ರಿಂದ ಈ ಹಳ್ಳಿಯಲ್ಲಿಯೇ ವಾಸವಾಗಿದ್ದಾರೆ. ಹಾಸ್ಟೆಲ್‌ಗಳನ್ನು ಸರ್ಕಾರ ಆರಂಭಿಸಿದ ಮೇಲೆ, ಅಲ್ಲಿ ತಂಗುತ್ತಿದ್ದ ವಿದ್ಯಾರ್ಥಿಗಳ ಯೋಗಕ್ಷೇಮ ವಿಚಾರಿಸುತ್ತಿದ್ದರು. ಪೋಷಕರನ್ನು ಬಿಟ್ಟು ಬಂದಿರುತ್ತಿದ್ದ ಮಕ್ಕಳು ಸಿ.ಕೆ. ಸರ್ ಅವರಿಂದ ಸಾಂತ್ವನ ಪಡೆಯುತ್ತಿದ್ದರು. ಸಿ.ಕೆ. ಸರ್ ಅವರ ಚಿಕ್ಕಮಗುವೊಂದು ತೀರಿಕೊಂಡಿತ್ತು. ಊರಿನ ಜನರೇ ನೆರೆದು, ಮಗುವಿನ ಮಣ್ಣು ಮಾಡಿ ಸಂತೈಸಿದ್ದರು. ಮರು ವರ್ಷ ಮತ್ತೊಂದು ಮಗು ಹುಟ್ಟಿದಾಗ ಊರ ಜನರೇ ನಿಂತು ನಾಮಕರಣ ಮಾಡಿ ಸಂಭ್ರಮಿಸಿದ್ದರು. ಸಿ. ಕೆ. ಸರ್ ಅವರ ಪತ್ನಿ ಮನೆವಾರ್ತೆಯನ್ನು ನೋಡಿಕೊಂಡು ಬಂದಿದ್ದಾರೆ. 36 ವರ್ಷಗಳಿಂದ ಈ ಹಳ್ಳಿಯಲ್ಲಿ ಬಾಡಿಗೆ ಮನೆಗಳಲ್ಲಿ ವಾಸವಾಗಿದ್ದು ಜೀವನ ನಡೆಸಿದ್ದಾರೆ. ಪತಿಗೆ ಮೂರು ಹೊತ್ತು ಬಿಸಿ ರೊಟ್ಟಿ ಮಾಡಿ ಉಣ್ಣಲು ಕೊಡುತ್ತಾರಂತೆ. ಈಗ ನಿವೃತ್ತಿಯಾಗಿದ್ದರೂ ಸಾವಿರಾರು ಪೋಷಕರು 'ನಮ್ಮೂರು ಬಿಟ್ಟು ಹೋಗಬೇಡಿ' ಎಂದು ಕೈ ಮುಗಿಯುತ್ತಿದ್ದಾರೆ.



ನಿವೃತ್ತಿಯಾದ ಸಂದರ್ಭದಲ್ಲಿ ಮನಬಿಚ್ಚಿ ಮಾತನಾಡಿದ ಸಿ.ಕೆ. ಸರ್

ಮುಂದಿನ ದಾರಿ ಯಾವುದೆಂದು ಅವರನ್ನು ಕೇಳಿದರೆ, 'ನಾನು ನಿವೃತ್ತಿಯಾದ ಮ್ಯಾಲ ಯಥಾ ರೀತಿ ಶಾಲೆಗೆ ಹೋಗಿ ಗಣಿತ ಪಾಠ ಮಾಡ್ತಿದ್ದೀನಿ. ಮಕ್ಕಳ ಜತೆ ಆಟ ಆಡ್ತಿದ್ದೀನಿ. ಮಕ್ಕಳಿಗೆ ನಾನು ನಿವೃತ್ತಿಯಾಗಿದ್ದೀನಿ ಅಂತನ್ನಿಸಿಲ್ಲ. ನನಗೂ ಅನ್ನಿಸಿಲ್ಲ. ನಿತ್ಯದ ದಿನಚರಿಯಲ್ಲಿ ಚೂರೂ ಬದಲಾವಣೆ ಮಾಡಿಕೊಂಡಿಲ್ಲ ನಾನು. ಹಳೆ ವಿದ್ಯಾರ್ಥಿ ಸಂಘದವರು ಸೇರಿಕೊಂಡು, 'ನಮ್ಮ ಶಾಲೆಯಲ್ಲೇ ನೀವಿರಬೇಕು. ಇದ್ದು ಪಾಠ ಆಟದ ಜತೆಗೆ ಕಾಲ ಕಳೀರಿ. ತಿಂಗಳಿಗೆ ಒಂದಷ್ಟು ಗೌರವಧನ ಕೊಡ್ತೀವಿ' ಅಂತ ಹೇಳಿದ್ರು. 'ಸರ್ಕಾರ ನನ್ಗ ಸಾಯುವ ತನಕ ಪಿಂಚಣಿ ಕೊಡ್ತದ. ಅದು ಪಗಾರನೇ. ಆರೋಗ್ಯ ಗಟ್ಟಿಯಿರತನಕ ಪಾಠ ಮಾಡ್ತೀನಿ. ಯಾವ ಗೌರವಧನ ಬ್ಯಾಡ್ರೀ' ಎಂದು ಹೇಳಿದ್ದಾರೆ.

ವಸ್ತುವೈವಿಧ್ಯ-ಎದ್ದು ಕಾಣುವ ಸದ್ಯ



ನಾಟಕೀಯ
ಲೇ: ಪ್ರೇಮಕುಮಾರ್ ಹರಿಯಬ್ಬೆ
ಪ್ರ: ಅಂಕಿತ ಪುಸ್ತಕ
ಸಂ: 080-26617100
ಪು: 152 ₹160

ಗೌರಿ

ವಿಮರ್ಶೆ

ಪ್ರೇಮಕುಮಾರ್ ಹರಿಯಬ್ಬೆ ಅವರ ನಾಲ್ಕನೇ ಕಥಾಸಂಕಲನ 'ನಾಟಕೀಯ'. ಮೂಲತಃ ಪತ್ರಕರ್ತರಾದ ಹರಿಯಬ್ಬೆ ಅವರು ತಮ್ಮ ವೃತ್ತಿಯಿಂದಾಗಿ ಸಮಾಜದ ಹಲವು ಆಯಾಮಗಳನ್ನು ಹತ್ತಿರದಿಂದ ಕಂಡವರು. ಅವರೇ ಹೇಳಿಕೊಂಡ ಹಾಗೆ, ವರದಿಯಾಗದೇ ತನ್ನಲ್ಲೇ ಉಳಿದ ಅನೇಕ ಸಂಗತಿಗಳನ್ನು ಲೇಖನಗಳಾಗಿ ಪ್ರಕಟಿಸಿದ್ದಾರೆ. ಇನ್ನೂ ಕೆಲವು ಸಂಗತಿಗಳನ್ನು ಕಥೆಗಳ ಮೂಲಕ ಹೇಳುವ ಪ್ರಯತ್ನ ಮಾಡಿದ್ದಾರೆ. ಇಲ್ಲಿನ ಹತ್ತು ಕಥೆಗಳಲ್ಲಿ ಇರುವ ವಸ್ತು ವೈವಿಧ್ಯಕ್ಕೂ ಅವರ ವೃತ್ತಿಬದುಕಿನಲ್ಲಿ ಸಿಕ್ಕ ಅನುಭವ ವೈವಿಧ್ಯಕ್ಕೂ ಸಂಬಂಧವಿರುವಂತಿದೆ.

ಇಲ್ಲಿನ ಕಥೆಗಳ ಪ್ರಪಂಚವನ್ನು ಒಂದು ಏಕಸೂತ್ರದಲ್ಲಿ ಹಿಡಿದಿಡುವುದು ಕಷ್ಟ. ಸಮಾಜದ ಹಲವು ವರ್ಗದ, ನಗರ ಮತ್ತು ಗ್ರಾಮೀಣ ಬದುಕಿನ ಕಥೆಗಳು ಇಲ್ಲಿವೆ. ಆದರೆ ಬಹುತೇಕ ಎಲ್ಲ ಕಥೆಗಳಲ್ಲಿಯೂ ಕಾಣಿಸುವ ಒಂದು ಸಾಮಾನ್ಯ ಸಂಗತಿ ಎಂದರೆ ಅವು ವಿಪರ್ಯಾಸ ಭಾವದಿಂದ ತಮ್ಮ ಬದುಕಿನ ಭೂತಕಾಲಕ್ಕೆ ಮುಖಾಮುಖಿಯಾಗುತ್ತವೆ.

ಕಥೆ ಎಲ್ಲವನ್ನೂ ಬಗೆಹರಿಸುತ್ತದೆ ಎಂಬ ನಿಲುವು ಇಲ್ಲಿನ ಕಥೆಗಳಲ್ಲಿ ಇಲ್ಲ; ಕಥೆಗಳಲ್ಲಾದರೂ ಎಲ್ಲವೂ ಬಗೆಹರಿಯಬೇಕು ಎಂಬ ಸಿನಿಕತೆಯೂ ಇಲ್ಲ. ಬದುಕಿನ ವಿನ್ಯಾಸದಲ್ಲಿಯೇ ಹುದುಗಿರುವ ಬಿರುಕುಗಳನ್ನು, ವಿಪರೀತಗಳನ್ನು ಹಾಗೆಯೇ ಹಿಡಿಯುವ ಪ್ರಯತ್ನ ಇಲ್ಲಿರುವಂತೆ ತೋರುತ್ತದೆ. ಹಾಗಾಗಿಯೇ 'ನಿರಾಳ' ಕಥೆಯ ಅರುಣ ತಂದೆಯ ಸಾವಿನ ಎದುರೂ ಕರಗುವುದಿಲ್ಲ, 'ಅನೂಹ್ಯ' ಕಥೆಯ ಜಯದೇವ ಮತ್ತು ತನ್ಮಯಿಯ ಬದುಕಿನ ದುರಂತಗಳಿಗೆ ಪರಿಹಾರದ ಸೂಚನೆಯೂ ಕಾಣಿಸುವುದಿಲ್ಲ. 'ಬಂದು ಹೋದವನು' ಕಥೆಯ ತೇಜಸ್ವಿ ಬದುಕುಳಿಯುವುದಿಲ್ಲ.

ಇವುಗಳಲ್ಲಿ 'ನಾಟಕೀಯ' ಕಥೆಗೊಂದೇ ಸುಖಾಂತ್ಯ ಇರುವುದು. ಹಳ್ಳಿಯಲ್ಲಿ ನಾಟಕ ಮಾಡುವುದರಲ್ಲಿ ಎದುರಾಗುವ ಅಡೆತಡೆಗಳನ್ನು ಇಟ್ಟುಕೊಂಡು ಕಟ್ಟಿರುವ ಈ ಕಥೆ ಆ ಎಲ್ಲ ತಡೆಗಳನ್ನು ಎದುರಿಸಿ ಪ್ರದರ್ಶನ ಪ್ರಾರಂಭವಾಗುವುದರೊಂದಿಗೆ ಮುಗಿಯುತ್ತದೆ. ಧರ್ಮ, ಧಾರ್ಮಿಕ ಮುಖಂಡರ ರಾಜಕೀಯಗಳಲ್ಲಿ ಸಾಮಾನ್ಯ ಮನುಷ್ಯನ ಪಡಿಪಾಡಲನ್ನು ಹೇಳುವ ಕಥೆ 'ಆಕ್ರಮಣ'. ಊರಿನ ಮಠದ ಸ್ವಾಮೀಜಿ ಆ ಊರಿನ ಮೊಯಿದ್ದೀನ್ ಎಂಬ ಮುಸ್ಲಿಂ ವ್ಯಕ್ತಿಯ ಜಮೀನನ್ನು ಕಬಳಿಸಲು ಹೊಂಚು ಹಾಕಿದ್ದಾರೆ. ಆ ಜಾಗದಲ್ಲಿ ಒಂದು ಇಂಗ್ಲಿಷ್ ಸ್ಕೂಲ್ ಪ್ರಾರಂಭಿಸುವ ಹುನ್ನಾರ ಅವರದು. ಇದು ಹಲವು ತಿರುವುಗಳನ್ನು ಪಡೆದುಕೊಂಡು, ಕೊನೆಗೆ ಮೊಯಿದ್ದೀನ್ ತನ್ನ ಪ್ರಾಮಾಣಿಕತೆಯನ್ನು, ತನ್ನ ಮೂಲವನ್ನು ಸಾಬೀತುಗೊಳಿಸಬೇಕಾದ ಪರಿಸ್ಥಿತಿಗೆ ಬಂದು ನಿಂತುಕೊಳ್ಳುತ್ತದೆ. ಇಂದು ಅಲ್ಪಸಂಖ್ಯಾತರ ನಿಷ್ಠೆ ಪ್ರತಿದಿನ ಪ್ರತಿಕ್ಷಣ ಪರೀಕ್ಷೆಗೆ ಒಳಗಾಗುತ್ತಿರುವ ವಿದ್ಯಮಾನವನ್ನು ಈ ಕಥೆ ನೆನಪಿಸುತ್ತದೆ. ಆದರೆ ಅದನ್ನು ನಿರ್ವಹಿಸಿದ ರೀತಿ ಮಾತ್ರ ಮತ್ತೊಂದು ಅಂಥದ್ದೇ ನೈತಿಕ ಮಾದರಿಯನ್ನು ಅಲ್ಪಸಂಖ್ಯಾತರ ಮೇಲೆ ಹೇರಹೊರಟಂತೆ ಕಾಣಿಸುತ್ತದೆ. ಕಥೆಯ ಕೊನೆಯಲ್ಲಿ ಮೊಯಿದ್ದೀನ್ ಹನುಮಂತ ದೇವರ ಕಡೆ ನೋಡಿ ಕೈಮುಗಿದು ಮಂಗಳಾರತಿ ಪದ್ಯ ಹೇಳುತ್ತಾನೆ. ಆಗ ಊರ ಜನರ ಕಣ್ಣಂಚು ಒದ್ದೆಯಾಗುತ್ತದೆ. ಇದು ಏನನ್ನು ಸೂಚಿಸುತ್ತದೆ? ಹಿಂದೂ ಧರ್ಮದ ಆಚರಣೆಗಳಿಗೆ ಒಗ್ಗಿಕೊಳ್ಳುವುದೇ ಒಳ್ಳೆಯ ಮುಸ್ಲಿಂ ಲಕ್ಷಣವೆಂದೇ? ಇಂಥದ್ದೊಂದು ಪ್ರಶ್ನೆಯನ್ನು ಕಥೆ ಮನಸಲ್ಲಿ ಉಳಿಸಿಬಿಡುತ್ತದೆ. ಇಲ್ಲಿನ ಕಥೆಗಳ ವಸ್ತುವೈವಿಧ್ಯದಲ್ಲಿ ವಿಸ್ತಾರವಿರುವುದಂತೂ ಆಸಕ್ತಿಕರ.

ಮೊದಲ ಓದು

ಹಂಗರಹಳ್ಳಿಯ ಬರ್ಬರ ಸಂಕೋಲೆಗಳು




ಹಂಗರಹಳ್ಳಿಯ ಬರ್ಬರ ಸಂಕೋಲೆಗಳು
ಲೇ: ಸುದೇಶ ದೊಡ್ಡಪಾಳ್ಯ
ಪ್ರ: ವಿಸ್ಮಯ ಬುಕ್‌ಹೌಸ್, ಮೈಸೂರು
ಸಂ: 8050302424
ಪು: 192 ₹200

ಪತ್ರಕರ್ತ ಸುದೇಶ ದೊಡ್ಡಪಾಳ್ಯರ ವೃತ್ತಿಜೀವನದ ಅನುಭವಗಳ ಕೆನೆಪದರದ ಸಂಕಲನ 'ಹಂಗರಹಳ್ಳಿಯ ಬರ್ಬರ ಸಂಕೋಲೆಗಳು'. 'ವಿಭಿನ್ನ ಬರಹಗಳ ಕಟ್ಟು' ಎನ್ನುವ ಅಡಿ ಬರಹಕ್ಕೆ ಪೂರಕವಾಗಿ, 'ಮಾನವೀಯ', 'ಮಹಿಳೆ', 'ವ್ಯಕ್ತಿಗಳು', 'ಸಿನಿಮಾ', 'ಭಿನ್ನ–ವಿಭಿನ್ನ' ಶೀರ್ಷಿಕೆಯಲ್ಲಿ ಒಟ್ಟು 36 ಬರಹಗಳು ಈ ಕೃತಿಯಲ್ಲಿವೆ. ಈ ಕಟ್ಟಿನ ವೈವಿಧ್ಯ ಸುದೇಶರ ಬಹುಮುಖಿ ಆಸಕ್ತಿಗಳನ್ನು ಸೂಚಿಸುವಂತಿದೆ.

ಸುದೇಶರ ಬರಹಗಳ ಸೊಗಸಿರುವುದು ಅವುಗಳ ನಿರೂಪಣೆಯಲ್ಲಿ ಹಾಗೂ ಅನುಭವಗಳ ಅಸಲಿಯತ್ತಲ್ಲಿ. ಈ ಬರಹಗಳ ಹಿಂದೆ ಜನಪರ ಸೂಕ್ಷ್ಮ ಮನಸ್ಸೊಂದರ ಹಾಜರಿಯಿದೆ. ಘಟನೆಯನ್ನು ರೋಚಕಗೊಳಿಸದೆಯೂ ರುಚಿಕರ ಓದಾಗಿ ರೂಪಿಸುವುದು ಹೇಗೆ ಎನ್ನುವುದಕ್ಕೆ ಉದಾಹರಣೆಗಳ ರೂಪದಲ್ಲೂ ಇಲ್ಲಿನ ಬರಹಗಳನ್ನು ನೋಡಬಹುದು. ಪತ್ರಿಕಾ ಬರಹಗಳನ್ನಾಗಿಯಷ್ಟೇ ನೋಡದೆ, ಆಯಾ ಸಂದರ್ಭದ ಸಾಮಾಜಿಕ–ಸಾಂಸ್ಕೃತಿಕ ದಾಖಲೆಗಳ ರೂಪದಲ್ಲೂ ಇವುಗಳನ್ನು ಗಮನಿಸಬಹುದು.

ಬರಹಗಳಿಗೆ ಪೂರಕವಾಗಿ, ಅವು ರೂಪುಗೊಂಡ ಸಂದರ್ಭ ಹಾಗೂ ನಂತರದ ಪರಿಣಾಮ–ಪ್ರತಿಕ್ರಿಯೆಗಳ ಕುರಿತ ಟಿಪ್ಪಣಿಗಳೂ ಇಲ್ಲಿ ಒಟ್ಟುಗೂಡಿವೆ. ಈ ಟಿಪ್ಪಣಿಗಳು ಸುದ್ದಿಮನೆಯ ಸ್ವರೂಪವನ್ನು ಪರಿಚಯಿಸುವುದರೊಂದಿಗೆ, ಪತ್ರಕರ್ತನ ಕರ್ತವ್ಯದ ಸಾಧ್ಯತೆ–ಸವಾಲುಗಳನ್ನೂ ಸೂಚಿಸುವಂತಿವೆ. ಪತ್ರಕರ್ತನೊಬ್ಬನ ಅನುಭವ ಕಥನದಂತೆಯೂ ಓದಬಹುದಾದ ಈ ಕೃತಿ, ಪತ್ರಿಕೋದ್ಯಮದ ವಿದ್ಯಾರ್ಥಿಗಳಿಗೆ ಉಪಯುಕ್ತವಾದುದು. ಲೇಖಕರ ವ್ಯಕ್ತಿತ್ವದಲ್ಲಿನ ನವಿರುತನ ಬರವಣಿಗೆಯಲ್ಲೂ ಕಾಣಿಸಿಕೊಂಡಿರುವುದರಿಂದ, ಈ ಕೃತಿ ಸಹೃದಯರ ಪಾಲಿಗೆ ರುಚಿಕರ ಕಟ್ಟೂ ಹೌದು.

'ಬೆಟ್ಟದ ಜೀವ'ದ ಆಳ–ಅಗಲ




ಬೆಟ್ಟದ ಜೀವ
(ವಿಮರ್ಶಾ ಲೇಖನಗಳು)
ಸಂ: ಶ್ರೀಧರ ಹೆಗಡೆ ಭದ್ರನ್
ಪ್ರ: ಅರವಿಂದ್ ಇಂಡಿಯಾ
ಸಂ: 9902445501
ಪು: 142 ₹120

'ಬೆಟ್ಟದ ಜೀವ' ಕಾರಂತರ ಸಾಹಿತ್ಯ ಪ್ರಪಂಚದಲ್ಲಿ ಮೂಡಿಬಂದ ಒಂಬತ್ತನೆಯ ಕಾದಂಬರಿ. '1943ರಲ್ಲಿ ಧಾರವಾಡದ ಮನೋಹರ ಗ್ರಂಥ ಮಾಲೆಯಿಂದ ಪ್ರಕಟಗೊಂಡ ಈ ಕೃತಿ ಹಲವು ಶೈಕ್ಷಣಿಕ ಹಂತಗಳಲ್ಲಿ ಪಠ್ಯಪುಸ್ತಕವಾಗಿ ಇಂದಿಗೂ ತನ್ನ ತಾಜಾತನದಿಂದ ಗಮನ ಸೆಳೆಯುತ್ತಿದೆ. ಹಿಂದಿ ಹಾಗೂ ಅನೇಕ ಭಾಷೆಗಳಿಗೆ ಅನುವಾದಗೊಂಡಿರುವ ಈ ಕಾದಂಬರಿ ಎಂಟು ದಶಕಗಳಿಂದ ಚಲಾವಣೆಯಲ್ಲಿದೆ. ಬಾಳನ್ನು ತಿಳಿಯಲು ಬೇಕಾದ ಸಾಧನಗಳನ್ನು ನಿರೂಪಿಸಿದೆ. ಕೃತಿಯ ಕುರಿತು ಇದುವರೆಗೆ ಹಲವು ದೃಷ್ಟಿಕೋನಗಳ ವಿಮರ್ಶೆ ಪ್ರಕಟವಾಗಿದೆ. ಅವುಗಳಲ್ಲಿ ಮುಖ್ಯವಾದ ಬರಹಗಳನ್ನು ಸಂಗ್ರಹಿಸುವುದು ಮತ್ತು ಹೊಸ ತಲೆಮಾರಿನ ವಿಮರ್ಶಕರ ಪ್ರತಿಕ್ರಿಯೆಗಳನ್ನು ದಾಖಲಿಸುವುದು ಪ್ರಸ್ತುತ ಪುಸ್ತಕದ ಮೂಲ ಉದ್ದೇಶ' ಎಂದು ಕೃತಿಯ ಸಂಪಾದಕ ಶ್ರೀಧರ ಹೆಗಡೆಯವರು ಪ್ರಸ್ತಾವನೆಯಲ್ಲಿ ಹೇಳಿದ್ದಾರೆ.

ಜಿ.ಎಸ್.ಅಮೂರ, ಎಲ್.ಎಸ್.ಶೇಷಗಿರಿ ರಾವ್, ಎಲ್.ದ್ವಾರಕನಾಥ್ ಸೇರಿದಂತೆ ನಾಡಿನ ಪ್ರಮುಖ ಲೇಖಕರು ಈ ಕಾದಂಬರಿಯ ಕುರಿತು ಬರೆದ 16 ವಿಮರ್ಶಾ ಲೇಖನಗಳು ಈ ಕೃತಿಯಲ್ಲಿವೆ. ಕಾದಂಬರಿಯ ವಸ್ತು ಮತ್ತು ಅಭಿವ್ಯಕ್ತಿ ಕುರಿತು ಪ್ರಾರಂಭದಲ್ಲಿ ಶ್ರೀಧರ ಹೆಗಡೆ ಭದ್ರನ್ ಅವರೇ ಒಂದು ಲೇಖನ ಬರೆದಿದ್ದಾರೆ. ಕಾದಂಬರಿಯ ಕಥಾವಸ್ತು, ನಿರೂಪಣೆ, ತಂತ್ರಗಾರಿಕೆ ಕುರಿತು ಈ ಲೇಖನದಲ್ಲಿ ವಿಶ್ಲೇಷಿಸಲಾಗಿದೆ.

ಕಾದಂಬರಿಯಲ್ಲಿನ ನಿಸರ್ಗ ಮತ್ತು ಮನುಷ್ಯ ಚಿತ್ರಣದ ಕುರಿತು ಜಿ.ಎಸ್.ಅಮೂರ ವಿಶ್ಲೇಷಿಸಿದ್ದಾರೆ. ನಿರೂಪಕ ಮತ್ತು ನಿರೂಪಣೆ ಕುರಿತು ಸಿ.ಎನ್.ರಾಮಚಂದ್ರನ್ ವಿಸ್ತೃತವಾಗಿ ಬರೆದಿದ್ದಾರೆ. ಪಾತ್ರ ಪ್ರಪಂಚ, ಸ್ಥಳೀಕರಣದ ಸಂಕಟಗಳು, ಜೀವನಾಸಕ್ತಿ ಸೇರಿದಂತೆ 'ಬೆಟ್ಟದ ಜೀವದ' ಹಲವು ಆಯಾಮದ ಕುರಿತು ವಿಮರ್ಶಾ ಲೇಖನಗಳಿವೆ. ಒಟ್ಟಾರೆಯಾಗಿ ಈ ಕಾದಂಬರಿಯನ್ನು ಗಂಭೀರವಾಗಿ ಅಧ್ಯಯನ ಮಾಡುವವರಿಗೆ ಈ ಕೃತಿ ಮಾರ್ಗಸೂಚಿಯಾಗಬಹುದು.

ಸಾವಿತ್ರಿಬಾಯಿ ಆಕರ್ಷಕ ಚಿತ್ರಕಥನ



ಸಾವಿತ್ರಿಬಾಯಿ
ಪ್ರ: ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈ. ಲಿ.;
ಸಹಯೋಗ: ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿ
ಸಂ: 080-22161900
ಪು: 48 ₹125

'ವ್ಯಕ್ತಿ ಮತ್ತು ಚಿಂತನೆಗಳು' ಶೀರ್ಷಿಕೆಯಡಿ ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿಯು ಚಿಣ್ಣರಿಗೆ ಪ್ರಮುಖರ ಬದುಕನ್ನು ಪರಿಚಯಿಸುವ ಮಾಲಿಕೆ ತರುತ್ತಿದೆ. ಅದರಲ್ಲಿ 'ಸಾವಿತ್ರಿಬಾಯಿ–ಪ್ರವರ್ತಕಿಯ ಪಯಣ' ಕೂಡ ಒಂದು. ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಕಾರಿಯಾದ ಬದಲಾವಣೆ ತಂದ ಸಾವಿತ್ರಿಬಾಯಿಯವರ ಬದುಕನ್ನು ಪರಿಚಯಿಸುವ ಚಿತ್ರರೂಪಿಕೆಯ ಕೃತಿ ಇದು. ಪಶ್ಚಿಮ ಬಂಗಾಳದ ಪಟುವಾ ಕಲಾವಿದರಾದ ಸುಮನ್ ಚಿತ್ರಕಾರ್ ಈ ಪುಟ್ಟ ಕೃತಿಯಲ್ಲಿ ಮೂಡಿಸಿರುವ ಚಿತ್ರಗಳು ಚಿಕ್ಕಮಕ್ಕಳನ್ನು ಥಟ್ಟನೆ ಸೆಳೆಯುವಂತಿವೆ. ಜಯಶ್ರೀ ನಾಯರ್ ಅವರ ವಿನ್ಯಾಸಕ್ಕೂ ಶಹಬ್ಬಾಸ್‌ಗಿರಿ ಸಲ್ಲಬೇಕು. ಸಾವಿತ್ರಿಬಾಯಿ ಅವರು ಪ್ರವರ್ತಕಿ ಹೇಗೆ ಎನ್ನುವುದನ್ನು ಸಚಿತ್ರವಾಗಿ ನಿರೂಪಿಸುವ ಕೃತಿ ನೋಡಲು ಆಕರ್ಷಕವಾಗಿರುವುದರ ಜತೆಗೆ ಚಿಣ್ಣರು ಇನ್ನಷ್ಟು ಹುಡುಕಾಡಲು ಪ್ರೇರೇಪಿಸುತ್ತದೆ.

ಸಾದರ ಸ್ವೀಕಾರ

ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ–ಮೇಲ್‌ಗೆ ಕಳುಹಿಸಿ
bhanuvara@prajavani.co.in

ಕಥೆ

ಶ್ರೀಧರ ಬಳಗಾರ ಅವರ **ಮಾರ ಮಿಂದನು**

ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/short-story

ಕವನ

ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ


ಆಶಾ ಎ. ಶಿವಮೊಗ್ಗ ಅವರ **ಕರುಳ ಕರೆ**

ಲೋಕೇಶ ಬೆಕ್ಕಳಲೆ ಅವರ **ಕ್ಷಮಿಸಿ ಬಿಡು**

https://www.prajavani.net/poetry

ಈ ಬೆಟ್ಟದ ತುತ್ತತುದಿಯಿಂದ ಸುತ್ತ ನೋಡಿದರೆ ಹಾಲಿನ ಸಮುದ್ರದಲ್ಲಿ ತೇಲಾಡುತ್ತಿರುವಂತಹ ಭಾವ. ಮುಂಗಾರಿನಲ್ಲಿ ತಡಿಯಂಡಮೋಳ್ ಚಾರಣದ ಅನುಭವವನ್ನು ಮಾತಿನಲ್ಲಿ ಕಟ್ಟಿಕೊಡಲು ಬಲುಕಷ್ಟ. ಅದನ್ನು ಅನುಭವಿಸಿಯೇ ತೀರಬೇಕು. ಮಳೆಗಾಲದಲ್ಲಿ ಚಾರಣದ ಹವ್ಯಾಸವಿದ್ದರೆ ಇದನ್ನೊಮ್ಮೆ ನೋಡಿ ಬನ್ನಿ...

ಹಿಮಚಾಮರದೊಳ್ ತಡಿಯಂಡಮೋಳ್



ಮಂಜು ಮುಸುಕಿದ ದಾರಿಯಲ್ಲಿ ತಡಿಯಂಡಮೋಳ್ ಚಾರಣ...

ಪ್ರವಾಸ

ಮಲ್ಲತ್ತಹಳ್ಳಿ ಎಚ್. ತುಕಾರಾಂ

ಮುಂಗಾರಿನ ಆರಂಭ, ಚಾರಣಿಗರು ಪ್ರವಾಸಕ್ಕೆ ಆಯ್ದುಕೊಳ್ಳುವ ಪ್ರಶಸ್ತ ಸಮಯ. ಪ್ರಕೃತಿ ಸೌಂದರ್ಯವನ್ನು ಸವಿಯಲು ಅದು ಸೂಕ್ತ ಕಾಲ. ಮಳೆಗಾಲದಲ್ಲಂತೂ ಕೊಡಗು, ಚಿಕ್ಕಮಗಳೂರು, ಸಕಲೇಶಪುರ, ದಕ್ಷಿಣ ಕನ್ನಡವು ನೋಡುಗರಿಗೆ ಹಬ್ಬದೂಟದಂತೆ. ಅದನ್ನು ಅನುಭವಿಸುವ ಕಲೆ ಇರಬೇಕಷ್ಟೆ.

ಕಳೆದ ವಾರ ನಾವು ನಮ್ಮ ಕರ್ನಾಟಕದ ಗಡಿ ಪ್ರದೇಶದಲ್ಲಿರುವ ತಡಿಯಂಡಮೋಳ್ ಚಾರಣಕ್ಕೆ ಹೋಗಿದ್ದೆವು. ಇದು ಸಮುದ್ರ ಮಟ್ಟದಿಂದ 1,748 ಮೀಟರ್ ಎತ್ತರದಲ್ಲಿದೆ. ಬೆಂಗಳೂರಿನಿಂದ ಸುಮಾರು 250 ಕಿ.ಮೀ.; ವಿರಾಜಪೇಟೆಯಿಂದ ಸುಮಾರು 25 ಕಿ.ಮೀ. ದೂರವಿರುವ ಈ ಪ್ರದೇಶ ಚಾರಣಿಗರನ್ನು ಸೆಳೆಯುವ ಪ್ರಮುಖ ತಾಣ. ನಾವು ವಿರಾಜಪೇಟೆ ತಲುಪಿದ್ದು, ನಾಗರಹೊಳೆ ಮಾರ್ಗವಾಗಿ. ಚಾರಣ ನಮ್ಮ ಹವ್ಯಾಸವಾದ್ದರಿಂದ ಅದಕ್ಕೆ ಬೇಕಾಗುವ ಎಲ್ಲಾ ಪರಿಕರಗಳು ನಮ್ಮ ಬಳಿಯಿದ್ದವು. ಮುಖ್ಯವಾಗಿ ಈ ಮಳೆಗಾಲದಲ್ಲಿ ಕಾಡಿನಲ್ಲಿ ಸಂಚರಿಸುವಾಗ ಜಿಗಣೆಯಿಂದ ಕಾಪಾಡಿಕೊಳ್ಳಲು ಬೇಕಾದ ಅಸ್ತ್ರಗಳು! ತಳದಲ್ಲಿಯೇ ಇದ್ದ ಹೋಂ ಸ್ಟೇನಲ್ಲಿ ನಮ್ಮ ವಸತಿ. ಅದಾಗಲೇ ಅಲ್ಲಿ ಮಳೆರಾಯನ ಹಾಜರಿಯಿತ್ತು. ಇಲ್ಲಿ ಮಳೆ ಬಂದರೆ, ಕೆಆರ್‌ಎಸ್ ತುಂಬಿ ಬೆಂಗಳೂರಿಗೆ ನೀರು ಎಂದು ಆ ಕ್ಷಣದಲ್ಲಿ ಆಲೋಚಿಸಿದೆ.

ಚಾರಣದ ಆರಂಭದಲ್ಲಿ ನಮಗೆ ನೋಡಸಿಕ್ಕಿದ್ದು, ದಟ್ಟಡವಿಯ ತಪ್ಪಲಿನಲ್ಲಿರುವ ನಾಲ್ಕ್ನಾಡ್ ಅರಮನೆ. ಇಲ್ಲಿ ಒಂದು ಕಲ್ಲಿನಲ್ಲಿ ಆ ಅರಮನೆಯ ಬಗ್ಗೆ ಮಾಹಿತಿ ಇದೆ. 'ತಡಿಯಂಡಮೋಳ್ ಬೆಟ್ಟದ ತಪ್ಪಲಿನ ದಟ್ಟಡವಿಯ ನಡುವೆ ಸುರಕ್ಷಿತವಾಗಿರಲು ದೊಡ್ಡವೀರರಾಜೇಂದ್ರ ಈ ಅರಮನೆಯನ್ನು ಕ್ರಿ.ಶ. 1792ರಲ್ಲಿ ನಿರ್ಮಿಸಿದ್ದ. ಎರಡು ಅಂತಸ್ತಿನ ಈ ಅರಮನೆಯು ಮೋಹಕ ಸ್ತಂಭಗಳು ಹಾಗೂ ಅಲಂಕೃತ ಮೊಗಸಾಲೆಗಳಿಂದ ಕೂಡಿದೆ. ಕ್ರಿ.ಶ.1834ರಲ್ಲಿ ಬ್ರಿಟಿಷರಿಗೆ ಶರಣಾಗುವುದಕ್ಕೆ ಮುಂಚೆ, ಈ ಅರಮನೆ ಚಿಕ್ಕವೀರರಾಜೇಂದ್ರರಿಗೆ ಕಡೆಯ ಅಡಗುತಾಣವಾಗಿತ್ತು. ವೈರಿಗಳ ಕಿರುಕುಳಕ್ಕೆ ಒಳಗಾಗಿದ್ದ ರಾಜಪರಿವಾರವು ಆಕ್ರಮಣಕಾರಿ ವೈರಿಗಳಿಗೆ ಭಯಮೂಡಿಸುವ ದೃಷ್ಟಿಯಿಂದ ಅರಮನೆಯ ಪ್ರಮುಖ ಸ್ಥಳಗಳಲ್ಲಿ ಹಾವಿನ ಸಂಕೇತಗಳನ್ನು ಮೂಡಿಸಿರಬಹುದು' ಎಂದು ಆ ಫಲಕದಲ್ಲಿ ಉಲ್ಲೇಖಿಸಲಾಗಿದೆ.

ವಿಶಾಲವಾದ ಅರಮನೆಯ ಮುಂದೆ ಒಂದು ದೇವಸ್ಥಾನವಿದೆ.

ಇಲ್ಲಿಂದ ಸುಮಾರು 6 ಕಿ.ಮೀ. ನಡೆದರೆ ಬೆಟ್ಟದ ತುದಿ ತಲುಪುತ್ತೇವೆ. ಹಿಂದೊಮ್ಮೆ ಮಧ್ಯಾಹ್ನ ಬಿಸಿಲಿನ ಸಮಯದಲ್ಲಿ ಚಾರಣ ನಡೆಸಿ ಇನ್ನೂ 2 ಕಿ.ಮೀ. ಬಾಕಿ ಉಳಿಸಿ ಮರಳಿದ್ದೆವು. ಅಂದು ತುಂಬಾ ದಣಿವಾಗಿತ್ತು. ಮಳೆಗಾಲದಲ್ಲಿ ಹತ್ತಲೇಬೇಕೆಂದು ತೀರ್ಮಾನಿಸಿ ಬೆಳಿಗ್ಗೆ 8.30ಕ್ಕೆ ನಡಿಗೆಯನ್ನು ಪ್ರಾರಂಭಿಸಿದ್ದೆವು. ನಾವು ತಂಗಿದ್ದ ಹೋಂಸ್ಟೇಯಿಂದ 1 ಕಿ.ಮೀ. ನಡೆದರೆ ಅಲ್ಲಿ ಅರಣ್ಯ ಕಾವಲುಗಾರರು ಇದ್ದು ಪ್ರತಿ ವ್ಯಕ್ತಿಗೆ ₹250ರಂತೆ ಪಡೆದು, ಬಂದಿದ್ದವರ ಮಾಹಿತಿ ಪಡೆದು ಚಾರಣಕ್ಕೆ ಅನುಮತಿ ನೀಡುತ್ತಾರೆ. ಮಕ್ಕಳಿಗೆ ₹150 ದರ ನಿಗದಿಪಡಿಸಲಾಗಿದೆ.



ನಾಲ್ಕ್ನಾಡ್ ಅರಮನೆಯ ಒಳಾಂಗಣದಲ್ಲಿರುವ ಸ್ತಂಭಗಳು



ಬೇಸಿಗೆಯಲ್ಲಿ ಹೀಗೆ ಕಾಣುತ್ತದೆ ತಡಿಯಂಡಮೋಳ್

ಚಾರಣದ ಆರಂಭದಲ್ಲಿ ರಸ್ತೆ ಅಗಲವಾಗಿದ್ದು, ಅಷ್ಟೇನೂ ಕಷ್ಟವಲ್ಲ ಎಂಬ ಭಾವನೆ ಮೂಡಿಸುತ್ತದೆ. ಜುಳುಜುಳು ನೀರಿನ ಸದ್ದು, ಕೆಲವು ಕಡೆ ಶಾಂತವಾಗಿ ಹರಿಯುವ ತೊರೆಗಳು ಚಾರಣಕ್ಕೆ ಇನ್ನಷ್ಟು ಪ್ರೇರೇಪಿಸುತ್ತವೆ. ಹನಿ ಹನಿ ಮಳೆ, ಹದವಾದ ವಾತಾವರಣ ಚಾರಣಕ್ಕೆ ಪ್ರಶಸ್ತ ಎನ್ನುವಂತಿತ್ತು. ಪಾದಗಳಿಗೆ ಆಗಾಗ ಹತ್ತುವ ಜಿಗಣೆಗಳು, ಅದರಿಂದ ತಪ್ಪಿಸಿಕೊಳ್ಳಲು ಸ್ಯಾನಿಟೈಸರ್, ಹೊಗೆಸೊಪ್ಪುಗಳನ್ನು ಕಾಲಿಗೆ ಸಿಂಪಡಿಸುತ್ತಾ ಹೋದೆವು. ಜಿಗಣೆಗಳಿಂದ ತಪ್ಪಿಸಿಕೊಳ್ಳಲು ಎಷ್ಟೇ ಪ್ರಯತ್ನಪಟ್ಟರೂ ಹೇಗೋ ಯಾಮಾರಿಸಿ ಕಾಲಿನ ಶೂ, ಪ್ಯಾಂಟ್‌ನೊಳಗೆ ನುಗ್ಗಿ ತಮ್ಮ ಕಾರ್ಯವನ್ನು ಸಾಧಿಸಿಕೊಳ್ಳುತ್ತಿದ್ದವು. ಸುಮಾರು 4 ಕಿ.ಮೀ.ವರೆಗೆ ಸುಲಭ ಎನಿಸುವ ಚಾರಣದಲ್ಲಿ ಸವಾಲು ಕ್ರಮೇಣ ಆರಂಭವಾಗುತ್ತದೆ. ಅಲ್ಲಿಯೇ ಒಂದು ಬಸವನ ರೀತಿಯಲ್ಲಿ ಬಂಡೆಯಿದ್ದು, ಅರ್ಧಕ್ಕೆ ಕೆತ್ತನೆ ಮಾಡಿ ಬಿಟ್ಟ ರೀತಿ ಇದೆ. ಆ ರೀತಿಯ ಬಸವನ ಮೂರ್ತಿಯು ಅರಮನೆಯ ದೇವಸ್ಥಾನದಲ್ಲೂ ಕಾಣಬಹುದಾಗಿದೆ.

ಮಳೆ ಸಿಂಚನದಲ್ಲಿ ನಡೆಯುತ್ತಿದ್ದಾಗ ದಣಿವು ಕಡಿಮೆ ಎನಿಸಿದರೂ ಆಯಾಸ ಹೆಚ್ಚು. ಪಕ್ಕದ ಕೇರಳದಿಂದಲೂ ಸುಮಾರು 50 ವಿದ್ಯಾರ್ಥಿಗಳು, ಕೆಲವು ಕುಟುಂಬಗಳು ಬಹಳ ಉತ್ಸಾಹದಿಂದ ಚಾರಣಕ್ಕೆ ಬಂದಿದ್ದವು. ಬೆಟ್ಟದ ತುದಿ ತಲುಪುತ್ತಾ, ರಸ್ತೆ ಬದಿಯಲ್ಲಿ ಹುಲ್ಲು ದಟ್ಟವಾಗಿ ರಸ್ತೆಯನ್ನೇ ಕಾಣದಂತೆ ಆವರಿಸಿತ್ತು. ಹತ್ತಲೇಬೇಕೆಂಬ ಹಠವಿದ್ದುದರಿಂದ ನಿಧಾನವಾಗಿ, ಸಾವರಿಸಿಕೊಂಡು ಒಳ್ಳೆಯ ದೃಶ್ಯ ಕಂಡುಬಂದಾಗ ಫೋಟೊ ಕ್ಲಿಕ್ಕಿಸಿಕೊಳ್ಳುತ್ತಾ ತುತ್ತ ತುದಿ ತಲುಪಿದೆವು.

ತುತ್ತತುದಿಯಿಂದ ನೋಡಿದಾಗ ನಾವು ಹಾಲಿನ ಸಮುದ್ರದಲ್ಲಿರುವಂತಹ ಭಾವ. ಚಳಿ ಏರಿತು, ಮಳೆಯ ರಭಸ ಹೆಚ್ಚಿತು. ಎದುರಿದ್ದವರೂ ಕಾಣದ ರೀತಿ ಮಂಜು ಆವರಿಸಿಕೊಂಡಿತು. ಇಡೀ ತಡಿಯಂಡಮೋಳ್ ಮೋಡದ ಮರೆಯಲ್ಲಿ ಅವಿತು ಕುಳಿತ ಅನುಭವವನ್ನು ನೀಡಿತು. ಮಳೆಗಾಲವಾದ್ದರಿಂದ ಮತ್ತು ಮಂಜು ಮುಸುಕಿದ್ದ ಕಾರಣ, ಬೆಟ್ಟದ ತಪ್ಪಲು ಕಾಣಿಸಲೇ ಇಲ್ಲ. ದಟ್ಟ, ಕ್ಲಿಷ್ಟಕರವಾದ ಕುಮಾರ ಪರ್ವತ ಚಾರಣ ಮಾಡಿದ್ದ ನಮಗೆ ಅಷ್ಟೇ ಕಷ್ಟದ ಎರಡನೆಯ ಬೆಟ್ಟ ಎಂಬ ಭಾವನೆಯನ್ನು ಇದು ತರಿಸಿತು. ಮಳೆಗಾಲದಲ್ಲಿ ಚಾರಣದ ಅಭ್ಯಾಸವಿದ್ದರೆ ಇದನ್ನೊಮ್ಮೆ ನೋಡಿ ಬನ್ನಿ. ❖

ಪಿಚ್ ರಿಪೋರ್ಟ್

8ನೇ ಪುಟದಿಂದ...

ಉಳಿದವರು ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಎಲ್ಲ ರೀತಿಯ ಸೌಲಭ್ಯ ಮತ್ತು ಉತ್ತಮ ವೇತನವನ್ನು ಸಂಸ್ಥೆಯು ನೀಡುತ್ತಿದೆ. ಕಾಲಕಾಲಕ್ಕೆ ತಕ್ಕಂತೆ ತಾಂತ್ರಿಕ ಬದಲಾವಣೆಗಳ ಕುರಿತು ಅರಿವು ಮೂಡಿಸಲಾಗುತ್ತಿದೆ. ಇದರಿಂದಾಗಿ ಬೆಂಗಳೂರಿನಲ್ಲಿ ಪಿಚ್ ನಿರ್ವಹಣೆ ಮಾಡುವವರು ಪರಿಣತರಾಗಿ ರೂಪುಗೊಳ್ಳುತ್ತಿದ್ದಾರೆ. ದಿವಂಗತ ಕಸ್ತೂರಿರಂಗನ್ ಅವರು ಇಲ್ಲಿಯ ಪಿಚ್‌ನ ಮೊದಲ ಕ್ಯೂರೇಟರ್ ಆಗಿದ್ದವರು. ನಂತರ ನಾರಾಯಣರಾಜು ಅವರು ಕೂಡ ಕಾರ್ಯನಿರ್ವಹಿಸಿದ್ದರು. ಇಲ್ಲಿ ಕೆಲಸ ಮಾಡಿದವರು ಆಯಾ ಕಾಲದ ಉತ್ತಮ ಅಂಶಗಳನ್ನು ರೂಢಿಸಿಹೋಗಿದ್ದಾರೆ. ಅದೇ ಅಡಿಪಾಯದ ಮೇಲೆ ನಾವು ಕೂಡ ಕಾರ್ಯನಿರ್ವಹಿಸುತ್ತಿದ್ದೇವೆ' ಎಂದು ಪ್ರಶಾಂತ್ ಹೇಳುತ್ತಾರೆ.

ಕ್ರಿಕೆಟ್ ಇಂದು ವಾಣಿಜ್ಯ ಚಟುವಟಿಕೆಯಾಗಿ ಬೆಳೆದಿದೆ. ಟೆಸ್ಟ್ ಪಂದ್ಯಗಳಲ್ಲಿಯೂ ರೋಚಕ ಫಲಿತಾಂಶಗಳು ಹೊರಹೊಮ್ಮುತ್ತಿವೆ. ಅದರಿಂದಾಗಿ ಸ್ಪರ್ಧಾತ್ಮಕ ಪಿಚ್‌ಗಳನ್ನು ರೂಪಿಸಿಕೊಡುವುದು ತಮ್ಮ ಆದ್ಯತೆ ಎನ್ನುತ್ತಾರೆ ಬೆಂಗಳೂರಿನ ಸಿಬ್ಬಂದಿ. ಅದರಿಂದಾಗಿಯೇ ಚಿನ್ನಸ್ವಾಮಿ ಕ್ರೀಡಾಂಗಣದ ಪಿಚ್ ಬಗ್ಗೆ ದೇಶ, ವಿದೇಶಗಳ ಆಟಗಾರರು ಮೆಚ್ಚುಗೆ ವ್ಯಕ್ತಪಡಿಸುತ್ತಾರೆ. ಅದೇ ತಮಗೆ ಹೆಗ್ಗಳಿಕೆ ಎನ್ನುತ್ತಾರೆ ಇಲ್ಲಿಯ ಸಿಬ್ಬಂದಿ.

ಪಿಚ್ ನಿರ್ವಹಣೆ ಕಲೆ

2015ರಲ್ಲಿ ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಣ ಟೆಸ್ಟ್ ಪಂದ್ಯವು ಮಳೆಯಿಂದಾಗಿ ರದ್ದಾಗಿತ್ತು. ಆಗಿನ ಆಡಳಿತ ಮಂಡಳಿಯು ಬ್ರಿಜೇಶ್ ಪಟೇಲ್ ಅವರ ನೇತೃತ್ವದಲ್ಲಿ ಸಬ್ ಏರ್ ವ್ಯವಸ್ಥೆ ಅಳವಡಿಕೆಗೆ ಮುಂದಾಯಿತು. ಇದು ಫಲಪ್ರದವೂ ಆಯಿತು. ಇದರ ನಂತರ ಇಲ್ಲಿ ಮಳೆಯಿಂದ ಪಂದ್ಯಗಳು ರದ್ದಾಗಿದ್ದು ತೀರಾ ಕಡಿಮೆ. ತಂತ್ರಜ್ಞಾನವನ್ನು ಸಮರ್ಥವಾಗಿ ಬಳಸಿಕೊಂಡು ಆಟಗಾರರಿಗೆ ಸುರಕ್ಷಿತವಾದ ಪಿಚ್ ನಿರ್ಮಿಸುವುದು ಕಲೆ ಮತ್ತು ವಿಜ್ಞಾನ.

'ಇಡೀ ದೇಶದಲ್ಲಿ ಸಬ್ ಏರ್ ವ್ಯವಸ್ಥೆ ಇರುವುದು ಇಲ್ಲಿ ಮಾತ್ರ. ಇದರಿಂದಾಗಿ ಜೋರು ಮಳೆ ಸುರಿದು ಹೋದ ನಂತರದ ಅರ್ಧಗಂಟೆಯೊಳಗೆ ಹೊರಾಂಗಣ ಒಣಗುತ್ತದೆ. ಇದರಿಂದ ಪಂದ್ಯ ಆರಂಭಿಸಲು ಸಾಧ್ಯವಾಗುತ್ತದೆ. ಪಿಚ್ ಗಟ್ಟಿತನದ ಪರೀಕ್ಷೆಗೆ ಕ್ಲೆಗ್ ಹ್ಯಾಮರ್ ಸಾಧನವೂ ನಮ್ಮ ಬಳಿ ಇದೆ. ಇದರಿಂದ ಅಂಕಣದಲ್ಲಿ ಚೆಂಡು ಪುಟಿತದ ಸಾಮರ್ಥ್ಯವನ್ನು ಲೆಕ್ಕಹಾಕಲಾಗುತ್ತದೆ. ಈ ಸುತ್ತಿಗೆಯಿಂದ ಪಿಚ್ ಮೇಲೆ ಹೊಡೆದಾಗ ಡಿಜಿಟಲ್ ರೀಡಿಂಗ್‌ನಲ್ಲಿ ಗ್ರಾವಿಟಿ ಲೆಕ್ಕ ತೋರಿಸುತ್ತದೆ. ಅದರ ಆಧಾರದ ಮೇಲೆ ಮಣ್ಣು ಸಡಿಲಿಸುವುದು ಅಥವಾ ಬಿಗಿಗೊಳಿಸುವ ಕಾರ್ಯವನ್ನು ಮಾಡಲಾಗುತ್ತದೆ' ಎಂದು ಪ್ರಶಾಂತ್ ವಿವರಿಸುತ್ತಾರೆ.

130 ರಿಂದ 150 ಕಿ.ಮೀ ವೇಗದಲ್ಲಿ ಬರುವ ಚೆಂಡಿಗೆ ತನ್ನ ದೇಹವನ್ನೇ ಪಣಕ್ಕೊಡ್ಡಿ ನಿಂತು ಆಡುವ ಬ್ಯಾಟರ್‌ಗಳ ಸುರಕ್ಷತೆ ಮುಖ್ಯ. ಜೊತೆಗೆ ಬೌಲರ್‌ಗಳಿಗೂ ತಮ್ಮ ಸಾಮರ್ಥ್ಯಕ್ಕೆ ತಕ್ಕ ಫಲ ಪಡೆಯುವ ಅವಕಾಶ ಇರಬೇಕು. ಆಗಲೇ ಪಂದ್ಯದಲ್ಲಿ ಸ್ವಾರಸ್ಯ ಇರುತ್ತದೆ. ಅದರಲ್ಲೂ ಭಾರತದ ಮಣ್ಣಿನ ಗುಣ, ಹವಾಗುಣಗಳು ಊರಿನಿಂದ ಊರಿಗೆ ಬದಲಾಗುತ್ತದೆ. ಆದ್ದರಿಂದ ಪಿಚ್ ನಿರ್ವಹಣೆಯ ವಿಧಾನ ಮತ್ತು ಮಣ್ಣಿನ ಗುಣಮಟ್ಟವೂ ಬದಲಾಗುತ್ತದೆ. ಮಣ್ಣಿನ ಶುಷ್ಕತೆ ಮತ್ತು ತೇವಾಂಶ ಅರಿಯುವುದೂ ಪಿಚ್ ರಚನೆ ವೇಳೆ ಮುಖ್ಯವಾಗುತ್ತದೆ.

ಪ್ರತಿಯೊಂದು ಪಂದ್ಯವನ್ನೂ ಹೊಸ ಕಲಿಕೆಯ ಪಾಠವಾಗಿಯೇ ತೆಗೆದುಕೊಳ್ಳುವ ಯುವ ಸಿಬ್ಬಂದಿ ಇಲ್ಲಿದ್ದಾರೆ. ಅದರಿಂದಾಗಿಯೇ ಬೆಂಗಳೂರಿನ ಪಿಚ್ ಸಿಬ್ಬಂದಿಯು ದೇಶದ ಉಳಿದ ಕ್ರೀಡಾಂಗಣಗಳ ಸಿಬ್ಬಂದಿಗಿಂತ ವಿಶೇಷವಾಗುತ್ತಾರೆ.

ಮೊದಲ ಮಹಿಳಾ ಕ್ಯೂರೇಟರ್: ದೇಶಕ್ಕೆ ಮೊಟ್ಟಮೊದಲ ಮಹಿಳಾ ಪಿಚ್ ಕ್ಯೂರೇಟರ್ ನೀಡಿದ ಹೆಗ್ಗಳಿಕೆಯೂ ಕೆಎಸ್‌ಸಿಎಗೆ ಸಲ್ಲುತ್ತದೆ. ಜೆಸಿಂತಾ ಕಲ್ಯಾಣ ಅವರು ಸಂಸ್ಥೆಯ ಕಚೇರಿಯ ಉದ್ಯೋಗಿಯಾಗಿದ್ದವರು. ಪಿಚ್ ಬಗ್ಗೆ ಆಸಕ್ತಿ ತೋರುತ್ತ ಕಾರ್ಯನಿರ್ವಹಿಸತೊಡಗಿದರು. ಅದರಲ್ಲಿ ಹೆಚ್ಚು ಶ್ರಮವಹಿಸಿದರು. ಬಿಸಿಸಿಐ ನಡೆಸುವ ಅರ್ಹತಾ ಪರೀಕ್ಷೆಗಳಲ್ಲಿ ಉತ್ತಮ ಅಂಕಗಳನ್ನು ಗಳಿಸಿದರು. ಪಿಚ್ ನಿರ್ವಹಣೆ ಪುರುಷರಿಗಷ್ಟೇ ಸೀಮಿತವಲ್ಲ. ಮಹಿಳೆಯರೂ ಮಾಡಬಲ್ಲರು ಎಂದು ತೋರಿಸಿಕೊಟ್ಟಿದ್ದಾರೆ. ❖


ಮಜ ಮಜ ಮಜಕೂರ

• ಎಂ.ಎಸ್.ಪೂಜಾರ




ಡಶ್ಗ ಚಕ್ಕು ಕೀಶ್ರಷ್ಟು ಕಥೆಯ — ಬಳ್ಳಿ ಹಾವು

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು



ಹಾವಾಡಿಗನೊಬ್ಬ ಊರಿನ ಜಾತ್ರೆಗೆ ಬಂದಿದ್ದ. ದೇವಸ್ಥಾನದ ಮುಂಭಾಗವಿರುವ ಗದ್ದೆಯಲ್ಲಿ ಕುಳಿತು ತನ್ನೊಂದಿಗಿದ್ದ ಹಾವಿನ ಬುಟ್ಟಿಯನ್ನು ತೆಗೆದು, ಅದಕ್ಕೆ ಮುಚ್ಚಿದ್ದ ಬಿದಿರಿನ ಮುಚ್ಚಳವನ್ನು ತೆರೆದು ಜನರೆದುರಿಗೆ ಇಟ್ಟ. ತನ್ನ ಜೋಳಿಗೆಯಿಂದ ಪುಂಗಿ ತೆಗೆದು ಊದಲಾರಂಭಿಸಿದ. ಹಾವಾಡಿಗ ಎಷ್ಟೇ ಪುಂಗಿ ಊದಿದರೂ ಹಾವು ಏಳುವ ಲಕ್ಷಣವೇ ಕಾಣಿಸಲಿಲ್ಲ. ಇದರಿಂದ ಸಿಟ್ಟುಗೊಂಡ ಆತ ಮತ್ತಷ್ಟು ಜೋರಾಗಿ ಪುಂಗಿ ಊದಲಾರಂಭಿಸಿದ. ಆತ ಎಷ್ಟು ಶಕ್ತಿ ಹಾಕಿ ಪುಂಗಿ ಊದುತ್ತಿದ್ದನೆಂದರೆ ಶಬ್ದಕ್ಕೆ ಆತನ ತಲೆಗೂದಲು ನೆಟ್ಟಗಾಗಿತ್ತು. ಆದರೆ ಹಾವು ಮಾತ್ರ ಏಳಲೇ ಇಲ್ಲ. ಬದಲಾಗಿ ಹಾವು ಇದ್ದ ಬುಟ್ಟಿಯ ಪಕ್ಕದಲ್ಲಿದ್ದ ಬಳ್ಳಿಯೊಂದು ಪುಂಗಿಯ ಶಬ್ದಕ್ಕೆ ಹೆಡೆ ಎತ್ತಿ ನಿಂತಿತ್ತು!



ಟ್ವೆಂಟಿ-20 ಮ್ಯಾಚ್

ಇಲ್ಲಿರುವ ಅಕ್ಷರಗಳನ್ನು ಸೂಕ್ತವಾದ ಪದಕ್ಕೆ ಜೋಡಿಸಿ

1	ವ	A	ಗುರು
2	ಚಂ	B	ಮಾರ
3	ಕ	C	ರಣ
4	ನ	D	ಗತ್ತು
5	ತೋ	E	ಬರಿ
6	ಗ	F	ಮನ
7	ವಾ	G	ಜರಿ
8	ಜ	H	ಸಂತ
9	ದ	I	ಮಡಿ
10	ವ	J	ಗರ
11	ಗು	K	ಮರ
12	ಉ	L	ದನ
13	ಸ	M	ಜಡ
14	ದ	N	ವಡೆ
15	ಚಿ	O	ರಣ
16	ಅ	P	ಜನ
17	ಕಿ	Q	ರತಿ
18	ಕು	R	ದರ
19	ಗಾ	S	ವನ
20	ಜಂ	T	ಕರ

ಅದಲು-ಬದಲು

ಇಂಗ್ಲಿಷ್‌ನಲ್ಲಿ ಅನಾಗ್ರ್ಯಾಂ ಎಂಬ ಹೆಸರಿನ ಒಂದು ಆಟವಿದೆ. ಒಂದು ಪದದ ಅವೇ ಅಕ್ಷರಗಳನ್ನು ಮರುಜೋಡಿಸಿ ಅರ್ಥಬದ್ಧ ಹೊಸಪದ ಮಾಡುವುದೇ ಈ ಆಟ. (ಸೂಚನೆ: ಯಾವೊಂದು ಅಕ್ಷರವನ್ನೂ ಬಿಡುವಂತಿಲ್ಲ; ಹೊಸ ಅಕ್ಷರ ಸೇರಿಸುವಂತಿಲ್ಲ)

ಉದಾ:

CHARM = MARCH

ಪ್ರಯತ್ನಿಸಿ

DYNAMO =

ROME =

INDICATORY =

LEMON =

MARRIED =

LEADER =

ಅದಲು ಬದಲು ಕಂಚಿ ಕದಲು...

ಇಲ್ಲಿ ಕೊಟ್ಟಿರುವ ಪದಗಳ ಅಕ್ಷರಗಳನ್ನು ಮರು ಜೋಡಿಸಿ ಅಷ್ಟೇ ಅಕ್ಷರಗಳ ಮತ್ತೊಂದು ಪದಮಾಡಿ

1. ಬರಿ ಸಮರ: ____________
2. ಸಸ್ಯದಹಾರ: ____________
3. ಗುಟ್ಟುಮುರಿ: ____________
4. ಗುರುತಿನ: ____________



ಪುಟಾಣಿ ಪದಬಂಧ



ಸುಳಿವು					
1			ಗಂ	ಡ	ಗಂಡ ಅಲ್ಲ, ಒಂದು ರೋಗದ ಹೆಸರು
2			ಬ	ರ	ಬರ ಬಿದ್ದಾಗ ಕಂಡ ಸತ್ತ ಶರೀರ
3			ದೇ	ವಿ	ದೇವಿಯಲ್ಲ; ಕೊಡುಕೊಳ್ಳುವಿಕೆ
4			ರಾ	ಣಿ	ರಾಣಿಯಲ್ಲ, ಒಂದು ಸಸ್ಯದ ಹೆಸರು
5			ಕ	ತ್ತು	ಕತ್ತು ಹಿಡಿದು ಮಾಡಿದ ಅಡೆತಡೆ

ಎಂಟು 8ರ ಆಟ

ಇಲ್ಲಿ ಕೊಟ್ಟಿರುವ ಎಂಟು 8ರ ನಡುವೆ ನಾಲ್ಕು + ಚಿಹ್ನೆ ಸೇರಿಸಿ ಮೊತ್ತ 1000ಕ್ಕೆ ಸಮಮಾಡಿ

8 8 8 8 8 8 8 8 = 1,000

ಚೂರು-ಮುರಿ

UNTRUTHFUL

ಇಲ್ಲಿ U ಸಮಾಂತರದಲ್ಲಿವೆ. ಆದ್ದರಿಂದ ಇದೊಂದು ಸಮಾಂತರಪದ.

ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಕಳೆದ ಸಂಚಿಕೆಯ ಸರಿ ಉತ್ತರಗಳು

ಪುಟಾಣಿ ಪದಬಂಧ

1.ದಸ್ತಗಿರಿ 2.ಮೂರಾಬಟ್ಟೆ 3.ತಳವಾರ 4.ಅಪವಾದ 5.ಹರತಾಳ

ಅದಲು ಬದಲು ಕಂಚಿ ಕದಲು

1.ಹತ್ತಿರಅಳೆ 2.ಮದನಾರಿ 3.ಆಪಾದನೆ 4.ಪಟ್ಟುಹಿಡಿ

ಅಕ್ಷರ ಆಟ

1.ಸ್ವ 2.ನ್ವ 3.ನಾ 4.ಗೋ 5.ಣಿ 6.ಪ 7.ಸ 8.ಧಾ 9.ತಾ 10.ಸಾ

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ಅಕ್ಷರ ಎಂ.ಎಸ್. ಮೈಸೂರು




ನಚಿಕೇತ್ ಜಿ. ರಾಯಚೂರು



ಆಯುಷ್ ಎಸ್. ಭಾರದ್ವಾಜ್, ಬೆಂಗಳೂರು



ಸಾಕ್ಷಿ ಹರ್ಲಾಪೂರ ಅಣ್ಣಿಗೇರಿ



ದತ್ತು ಎಲ್. ದೇವದುರ್ಗ



ಮಲ್ಲಿಕಾರ್ಜುನ ಸುನಿಲ ಕೊಣ್ಣೂರ ಬನಹಟ್ಟಿ

ಎರಡನೇ ಏಕದಿನ ಪಂದ್ಯ: ಇಶಾನ್ ಅರ್ಧಶತಕ; ವಿಂಡೀಸ್ ಶಿಸ್ತಿನ ಬೌಲಿಂಗ್

ಭಾರತ ಸಾಧಾರಣ ಮೊತ್ತ

ಬಾರ್ಬಡೋಸ್ (ಪಿಟಿಐ): ವೆಸ್ಟ್ ಇಂಡೀಸ್ ಬೌಲರ್‌ಗಳ ಪರಿಣಾಮಕಾರಿ ದಾಳಿಗೆ ಪರದಾಡಿದ ಭಾರತ ತಂಡ, ಎರಡನೇ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಸಾಧಾರಣ ಮೊತ್ತ ಪೇರಿಸಿದೆ.

ಶನಿವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಭಾರತ, 40.5 ಓವರ್‌ಗಳಲ್ಲಿ 181 ರನ್‌ಗಳಿಗೆ ಆಲೌಟಾಯಿತು. ಅನುಭವಿಗಳಾದ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರಿಗೆ ವಿಶ್ರಾಂತಿ ನೀಡಿದ ನಿರ್ಧಾರ ಹಿನ್ನಡೆ ಉಂಟುಮಾಡಿತು. ಇಶಾನ್ ಕಿಶನ್ (55 ರನ್, 55 ಎ., 4X6, 6X1) ಹೊರತುಪಡಿಸಿ ಇತರ ಬ್ಯಾಟರ್‌ಗಳು ವಿಫಲರಾದರು.

ಟಾಸ್ ಗೆದ್ದ ವಿಂಡೀಸ್ ತಂಡದ ನಾಯಕ ಶಾಯ್ ಹೋಪ್, ಬೌಲಿಂಗ್ ಮಾಡಲು ನಿರ್ಧರಿಸಿದರು. ಸರಣಿ ಗೆಲುವಿನ ಕನಸಿನೊಂದಿಗೆ ಆಡಲಿಳಿದ ಭಾರತ ತಂಡಕ್ಕೆ ಇಶಾನ್ ಮತ್ತು ಶುಭಮನ್ ಗಿಲ್ (34 ರನ್, 49 ಎ., 4X5) ಮೊದಲ ವಿಕೆಟ್‌ಗೆ 90 ರನ್ ಸೇರಿಸಿ ಉತ್ತಮ ಆರಂಭ ಒದಗಿಸಿದರು. ಗಿಲ್ ಅವರನ್ನು ಔಟ್ ಮಾಡಿದ ಗುಡಾಕೇಶ್ ಮೋತಿ ಈ ಜತೆಯಾಟ ಮುರಿದರು. ರನ್ ವೇಗ ಹೆಚ್ಚಿಸಲು ಸಿಕ್ಸರ್ ಹೊಡೆಯುವ ಪ್ರಯತ್ನದಲ್ಲಿ ಗಿಲ್, ಅಲ್ಜಾರಿ ಜೋಸೆಫ್‌ಗೆ ಕ್ಯಾಚ್ ಕೊಟ್ಟರು.

ಈ ವಿಕೆಟ್ ಬಿದ್ದ ಬಳಿಕ ಭಾರತದ ಅಗ್ರ ಕ್ರಮಾಂಕ ಹಠಾತ್ ಕುಸಿತ ಕಂಡಿತು. 7.2 ಓವರ್‌ಗಳ ಅಂತರದಲ್ಲಿ 23 ರನ್‌ಗಳಿಗೆ 5 ವಿಕೆಟ್‌ಗಳು ಪತನಗೊಂಡವು. ಆತಿಥೇಯ ತಂಡದ ವೇಗಿಗಳು 'ಶಾರ್ಟ್ ಬಾಲ್' ತಂತ್ರದ ಮೂಲಕ ಎದುರಾಳಿ ಬ್ಯಾಟರ್‌ಗಳನ್ನು ಕಾಡಿದರು.

ಉತ್ತಮವಾಗಿ ಆಡುತ್ತಿದ್ದ ಇಶಾನ್, ಸತತ ಎರಡನೇ ಅರ್ಧಶತಕ ಗಳಿಸಿ ರೊಮಾರಿಯೊ ಶೆಫರ್ಡ್‌ಗೆ ವಿಕೆಟ್ ಒಪ್ಪಿಸಿದರು. ಸಂಜು ಸ್ಯಾಮ್ಸನ್ (9) ಮತ್ತು ಅಕ್ಷರ್ ಪಟೇಲ್ (1), ತಮಗೆ ದೊರೆತ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳುವಲ್ಲಿ ವಿಫಲರಾದರು. ಹಾರ್ದಿಕ್


ಅರ್ಧಶತಕ ಗಳಿಸಿದ ಇಶಾನ್ ಕಿಶನ್ –ಎಎಫ್‌ಪಿ ಚಿತ್ರ

ಪಾಂಡ್ಯ (7) ಕೂಡಾ ಬೇಗನೇ ಔಟಾದ ಕಾರಣ ಭಾರತ ಒತ್ತಡಕ್ಕೆ ಸಿಲುಕಿತು.

ಸೂರ್ಯಕುಮಾರ್ ಯಾದವ್ (24 ರನ್, 25 ಎ.) ಮತ್ತು ರವೀಂದ್ರ ಜಡೇಜ (10 ರನ್, 21 ಎ.) ಅವರು ತಂಡವನ್ನು ಕುಸಿತದಿಂದ ಪಾರು ಮಾಡಲು ನಡೆಸಿದ ಯತ್ನವೂ ವಿಫಲವಾಯಿತು. ಎರಡು ರನ್‌ಗಳ ಅಂತರದಲ್ಲಿ ಇವರಿಬ್ಬರು ಪೆವಿಲಿಯನ್‌ಗೆ ಮರಳಿದರು.

ರೊಮಾರಿಯೊ ಶೆಫರ್ಡ್ (37ಕ್ಕೆ 2) ಮತ್ತು ಅಲ್ಜಾರಿ ಜೋಸೆಫ್ (35ಕ್ಕೆ 2) ಅವರು ಬೌನ್ಸರ್‌ಗಳನ್ನು ಪರಿಣಾಮಕಾರಿಯಾಗಿ ಬಳಸಿದರೆ, ಎಡಗೈ ಸ್ಪಿನ್ನರ್ ಗುಡಾಕೇಶ್ ಮೋತಿ (36ಕ್ಕೆ 3) ಕೈಚಳಕ ಮೆರೆದರು.

ಭಾರತದ ಇನಿಂಗ್ಸ್ ವೇಳೆ ಮಳೆಯಿಂದಾಗಿ ಎರಡು ಸಲ ಆಟ ಅಲ್ಪಹೊತ್ತು ಸ್ಥಗಿತಗೊಂಡಿತು. ಮೊದಲ ಏಕದಿನ ಪಂದ್ಯವನ್ನು ಐದು ವಿಕೆಟ್‌ಗಳಿಂದ ಗೆದ್ದಿರುವ ಪ್ರವಾಸಿ ತಂಡ, ಸರಣಿಯಲ್ಲಿ 1–0 ಯಿಂದ ಮುನ್ನಡೆಯಲ್ಲಿದೆ. ಅಂತಿಮ ಪಂದ್ಯ ಮಂಗಳವಾರ ನಡೆಯಲಿದೆ.

ಸಂಕ್ಷಿಪ್ತ ಸ್ಕೋರ್: ಭಾರತ 40.5 ಓವರ್‌ಗಳಲ್ಲಿ 181 (ಇಶಾನ್ ಕಿಶನ್ 55, ಶುಭಮನ್ ಗಿಲ್ 34, ಸಂಜು ಸ್ಯಾಮ್ಸನ್ 9, ಸೂರ್ಯಕುಮಾರ್ ಯಾದವ್ 24, ರವೀಂದ್ರ ಜಡೇಜ 10, ಶಾರ್ದೂಲ್ ಠಾಕೂರ್ 16, ರೊಮಾರಿಯೊ ಶೆಫರ್ಡ್ 37ಕ್ಕೆ 3, ಗುಡಾಕೇಶ್ ಮೋತಿ 36ಕ್ಕೆ 3, ಅಲ್ಜಾರಿ ಜೋಸೆಫ್ 35ಕ್ಕೆ 2)

ರೋಹಿತ್, ಕೊಹ್ಲಿಗೆ ವಿಶ್ರಾಂತಿ

ಭಾರತ ತಂಡದ ನಾಯಕ ರೋಹಿತ್ ಶರ್ಮಾ ಮತ್ತು ಬ್ಯಾಟರ್ ವಿರಾಟ್ ಕೊಹ್ಲಿ ಅವರಿಗೆ ವಿಶ್ರಾಂತಿ ನೀಡಲಾಗಿದ್ದು, ಈ ಪಂದ್ಯದಲ್ಲಿ ಆಡಲಿಲ್ಲ. ರೋಹಿತ್ ಅನುಪಸ್ಥಿತಿಯಲ್ಲಿ ಹಾರ್ದಿಕ್ ಪಾಂಡ್ಯ ತಂಡವನ್ನು ಮುನ್ನಡೆಸಿದರು.

'ತಂಡದ ಸಂಯೋಜನೆಗೆ ಸಂಬಂಧಿಸಿದಂತೆ ಕೆಲವೊಂದು ಪ್ರಶ್ನೆಗಳಿಗೆ ಉತ್ತರ ಸಿಗಬೇಕಿದೆ. ಅದಕ್ಕಾಗಿ ವಿರಾಟ್ ಮತ್ತು ರೋಹಿತ್‌ಗೆ ವಿಶ್ರಾಂತಿ ನೀಡಲಾಗಿದೆ' ಎಂದು ಹಾರ್ದಿಕ್ ಹೇಳಿದರು. ಸಂಜು ಸ್ಯಾಮ್ಸನ್ ಮತ್ತು ಅಕ್ಷರ್ ಪಟೇಲ್ ಅವರಿಗೆ ಅಂತಿಮ ಇಲೆವೆನ್‌ನಲ್ಲಿ ಸ್ಥಾನ ನೀಡಲಾಯಿತು.

ಮುಂದಿನ ವರ್ಷ ಜೂನ್‌ನಲ್ಲಿ ಟಿ20 ವಿಶ್ವಕಪ್ ಟೂರ್ನಿ

ನವದೆಹಲಿ (ಪಿಟಿಐ): ವೆಸ್ಟ್‌ಇಂಡೀಸ್ ಮತ್ತು ಅಮೆರಿಕದ ಜಂಟಿ ಆತಿಥ್ಯದಲ್ಲಿ ನಡೆಯಲಿರುವ ಮುಂಬರುವ ಟಿ20 ವಿಶ್ವಕಪ್ ಟೂರ್ನಿಯನ್ನು 2024ರ ಜೂನ್ 4 ರಿಂದ 30ರ ವರೆಗೆ ಆಯೋಜಿಸಲು ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ) ಯೋಚಿಸಿದೆ.

ಅಮೆರಿಕದಲ್ಲಿ ವಿಶ್ವಕಪ್ ಪಂದ್ಯಗಳು ನಡೆಯುವ ಕ್ರೀಡಾಂಗಣಗಳಲ್ಲಿ ನಡೆದಿರುವ ಸಿದ್ಧತೆಗಳ ಪರಿಶೀಲನೆಯನ್ನೂ ಐಸಿಸಿ ನಡೆಸಿದೆ. ವಿಶ್ವಕಪ್ ಟೂರ್ನಿಯ ಆತಿಥ್ಯಕ್ಕೆ ಅಮೆರಿಕದಲ್ಲಿ ನಡೆದಿರುವ ಸಿದ್ಧತೆಗಳ ಬಗ್ಗೆ ಊಹಾಪೋಹಗಳು ಎದ್ದಿದ್ದವು. ಆದರೆ ಐಸಿಸಿ ನಿಯೋಗದ ಭೇಟಿ ಅಂತಹ ಅನುಮಾನಗಳನ್ನು ದೂರ ಮಾಡಿದೆ.

ಐಸಿಸಿ ನಿಯೋಗವು ಲಾಡೆರ್‌ಹಿಲ್, ಫ್ಲಾರಿಡಾ, ನ್ಯೂಯಾರ್ಕ್, ಡಲ್ಲಾಸ್ ಮತ್ತು ಮಾರಿಸ್‌ವಿಲ್‌ನ ಕ್ರೀಡಾಂಗಣಗಳಿಗೆ ಭೇಟಿ ನೀಡಿ ಸಿದ್ಧತೆಯನ್ನು ಪರಿಶೀಲಿಸಿದೆ. ಈ ತಾಣಗಳಲ್ಲಿ ಲಾಡೆರ್‌ಹಿಲ್‌ನಲ್ಲಿ ಈಗಾಗಲೇ ಅಂತರರಾಷ್ಟ್ರೀಯ ಪಂದ್ಯಗಳು ನಡೆದಿವೆ. ಭಾರತ ಮತ್ತು ವೆಸ್ಟ್ ಇಂಡೀಸ್ ನಡುವಣ ಎರಡು ಟಿ20 ಪಂದ್ಯಗಳು (ಆ.12 ಮತ್ತು 13) ಇಲ್ಲಿ ನಡೆಯಲಿವೆ. ಡಲ್ಲಾಸ್ (ಗ್ರಾಂಡ್ ಪ್ರೇರಿ ಕ್ರೀಡಾಂಗಣ) ಮತ್ತು ಮಾರಿಸ್‌ವಿಲ್ (ಚರ್ಚ್ ಸ್ಟ್ರೀಟ್ ಪಾರ್ಕ್) ಕ್ರೀಡಾಂಗಣಗಳು ಮೇಜರ್ ಲೀಗ್ ಕ್ರಿಕೆಟ್ ಟೂರ್ನಿಯ ಪಂದ್ಯಗಳಿಗೆ ಆತಿಥ್ಯ ವಹಿಸಿವೆ. ಆದರೆ ಇವೆರಡು ಕ್ರೀಡಾಂಗಣಗಳು ಮತ್ತು ನ್ಯೂಯಾರ್ಕ್‌ನ ಕ್ರೀಡಾಂಗಣಕ್ಕೆ ಐಸಿಸಿ 'ಅಂತರರಾಷ್ಟ್ರೀಯ ಕ್ರೀಡಾಂಗಣ' ಮಾನ್ಯತೆ ಇನ್ನೂ ಲಭಿಸಿಲ್ಲ. ಮುಂಬರುವ ಟಿ20 ವಿಶ್ವಕಪ್‌ನಲ್ಲಿ ಒಟ್ಟು 20 ತಂಡಗಳು ಪಾಲ್ಗೊಳ್ಳಲಿವೆ.

ವಿಶ್ವಕಪ್ ಪಂದ್ಯಗಳಿಗೆ ಕ್ರೀಡಾಂಗಣದ ಸಿದ್ಧತೆ ಪರಿಶೀಲನೆ

ಬೆಂಗಳೂರಿಗೆ ಐಸಿಸಿ ನಿಯೋಗ ಭೇಟಿ

ಬೆಂಗಳೂರು (ಪಿಟಿಐ): ಈ ವರ್ಷದ ಅಕ್ಟೋಬರ್– ನವೆಂಬರ್‌ನಲ್ಲಿ ನಡೆಯಲಿರುವ ಏಕದಿನ ವಿಶ್ವಕಪ್‌ಗೆ ಪೂರ್ವಭಾವಿಯಾಗಿ, ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್‌ನ ನಿಯೋಗ, ವಿಶ್ವಕಪ್ ಪಂದ್ಯ ನಡೆಯುವ ಸ್ಥಳಗಳಲ್ಲಿ ಸಿದ್ಧತೆಯ ಬಗ್ಗೆ ಪರಿಶೀಲನೆ ನಡೆಸಿದೆ.

ಪ್ರಸ್ತುತ ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿರುವ ನಿಯೋಗವು ದಕ್ಷಿಣ ಭಾರತದ ಮೂರು ಕ್ರೀಡಾಂಗಣಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿತು. ಬೆಂಗಳೂರು, ಚೆನ್ನೈ, ತಿರುವನಂತಪುರದ ಜೊತೆಗೆ ಮುಂಬೈನ ವಾಂಖೆಡೆ ಕ್ರೀಡಾಂಗಣಗಳಿಗೆ ತಂಡ ಭೇಟಿ ಕೊಟ್ಟಿದೆ. ತಿರುವನಂತಪುರದಲ್ಲಿ ಅಭ್ಯಾಸ ಪಂದ್ಯಗಳು ಮಾತ್ರ ನಡೆಯಲಿವೆ.

'ಐಸಿಸಿಯ ತಂಡ ಶುಕ್ರವಾರ ಭೇಟಿ ನೀಡಿದ್ದು, ಇಲ್ಲಿರುವ ವ್ಯವಸ್ಥೆ, ನಡೆಸಿರುವ ಸಿದ್ಧತೆಗಳ ಬಗ್ಗೆ ತೃಪ್ತಿ ವ್ಯಕ್ತಪಡಿಸಿದೆ. ನಾವು ದುಲೀಪ್ ಟ್ರೋಫಿಯ ಆತಿಥ್ಯ ವಹಿಸಿದ್ದೆವು. ನಾವು ವಿಶ್ವಕಪ್ ಪಂದ್ಯಗಳಿಗೂ ಸಜ್ಜಾಗಿದ್ದೇವೆ' ಎಂದು ಕೆಎಸ್‌ಸಿಎ ಪದಾಧಿಕಾರಿಯೊಬ್ಬರು ಪಿಟಿಐಗೆ ತಿಳಿಸಿದರು.

ಬೆಂಗಳೂರಿನ ಕ್ರೀಡಾಂಗಣವು ಭಾರತ– ನೆದರ್ಲೆಂಡ್ಸ್ ಪಂದ್ಯವೂ ಸೇರಿ ಐದು ಪಂದ್ಯಗಳ ಆತಿಥ್ಯ ವಹಿಸಲಿದೆ. ಪಾಕಿಸ್ತಾನ ತಂಡ ಇಲ್ಲಿ ಎರಡು ಪಂದ್ಯಗಳನ್ನು (ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್) ಆಡಲಿದೆ.

ಭಾರತ ತನ್ನ ಮೊದಲ ಪಂದ್ಯವನ್ನು ಅಕ್ಟೋಬರ್ 8ರಂದು ಐದು ಬಾರಿಯ ಚಾಂಪಿಯನ್ ಆಸ್ಟ್ರೇಲಿಯಾ ವಿರುದ್ಧ ಚೆನ್ನೈನ ಎಂ.ಎ.ಚಿದಂಬರಂ ಕ್ರೀಡಾಂಗಣದಲ್ಲಿ ಆಡಲಿದೆ. ಚಿಪಾಕ್‌ನಲ್ಲಿ ಪಾಕಿಸ್ತಾನ ತಂಡ ಎರಡು ಪಂದ್ಯಗಳನ್ನು (ದಕ್ಷಿಣ ಆಫ್ರಿಕಾ ಮತ್ತು ಅಫ್ಗಾನಿಸ್ತಾನ ವಿರುದ್ಧ) ಆಡಲಿದೆ. ಐಸಿಸಿ ನಿಯೋಗವು ಮೂರು ದಿನಗಳ ಹಿಂದೆ (ಜುಲೈ 26) ಈ ಕ್ರೀಡಾಂಗಣಕ್ಕೆ ಭೇಟಿ ನೀಡಿದೆ.

ತಿರುವನಂತಪುರಂನಲ್ಲಿ ವಿಶ್ವಕಪ್ ಟೂರ್ನಿಯ ಪಂದ್ಯಗಳು ನಡೆಯುವುದಿಲ್ಲ. ಆದರೆ ಕೆಲವು ಅಭ್ಯಾಸ ಪಂದ್ಯಗಳಿಗೆ ಈ ಕ್ರೀಡಾಂಗಣ ಆತಿಥ್ಯ ನೀಡಲಿದೆ. ಇಲ್ಲಿ ಶ್ರೀಲಂಕಾ ವಿರುದ್ಧ ಈ ವರ್ಷದ ಆರಂಭದಲ್ಲಿ ಏಕದಿನ ಪಂದ್ಯ ನಡೆದಿತ್ತು. ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಟಿ–20 ಪಂದ್ಯವೂ ಇಲ್ಲಿ ನಡೆದಿತ್ತು.

ನಿಯೋಗವು ಕ್ರೀಡಾಂಗಣದೊಳಗೆ ಸುರಕ್ಷತಾ ವ್ಯವಸ್ಥೆ, ಪ್ರಸಾರ ತಂಡಗಳಿಗೆ ಇರುವ ವ್ಯವಸ್ಥೆ ಮತ್ತಿತರ ಏರ್ಪಾಡುಗಳ ಬಗ್ಗೆ ಮುಖ್ಯವಾಗಿ ಗಮನಹರಿಸುತ್ತದೆ.

ಆ್ಯಷಸ್ ಟೆಸ್ಟ್: ಆತಿಥೇಯರಿಗೆ 377 ರನ್‌ಗಳ ಮುನ್ನಡೆ

ಇಂಗ್ಲೆಂಡ್ ನೆರವಿಗೆ ಜೋ–ಜಾನಿ

ಲಂಡನ್ (ಎಎಫ್‌ಪಿ): ಮಧ್ಯಮ ಕ್ರಮಾಂಕದಲ್ಲಿ ಜೋ ರೂಟ್ ಮತ್ತು ಜಾನಿ ಬೇಸ್ಟೊ ಅವರ ಬಿರುಸಿನ ಬ್ಯಾಟಿಂಗ್ ನೆರವಿನಿಂದ ಇಂಗ್ಲೆಂಡ್ ತಂಡ ಆ್ಯಷಸ್ ಸರಣಿಯ ಐದನೇ ಹಾಗೂ ಅಂತಿಮ ಟೆಸ್ಟ್ ಪಂದ್ಯದ ಮೂರನೇ ದಿನವಾದ ಶನಿವಾರ ಕುಸಿತದಿಂದ ಪಾರಾಯಿತು.

ದಿ ಓವಲ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ದಿನದಾಟದ ಅಂತ್ಯಕ್ಕೆ ಆತಿಥೇಯರು 80 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 389 ರನ್ ಗಳಿಸಿದ್ದಾರೆ. ಬೆನ್ ಸ್ಟೋಕ್ಸ್ ಬಳಗ 377 ರನ್‌ಗಳ ಮುನ್ನಡೆ ಸಾಧಿಸಿದೆ. ಇನ್ನೂ ಎರಡು ದಿನಗಳ ಆಟ ಇದ್ದು, ಪಂದ್ಯದಲ್ಲಿ ಸ್ಪಷ್ಟ ಫಲಿತಾಂಶ ಬರುವುದು ನಿಚ್ಚಳ ಎನಿಸಿದೆ.

ಒಂದು ಹಂತದಲ್ಲಿ ಆತಿಥೇಯ ತಂಡ 4 ವಿಕೆಟ್‌ಗಳನ್ನು 222 ರನ್‌ಗಳಾಗುಷ್ಟರಲ್ಲಿ ಕಳೆದುಕೊಂಡಿತ್ತು. ಆದರೆ 9 ರನ್‌ಗಳಿಂದ ಶತಕ ಕಳೆದುಕೊಂಡ ಜೋ ರೂಟ್ ಮತ್ತು ಜಾನಿ ಬೇಸ್ಟೊ (78 ರನ್,103 ಎ., 4X11) ಅವರು ಐದನೇ ವಿಕೆಟ್‌ಗೆ 110 ರನ್ ಸೇರಿಸಿ ಕುಸಿತ ತಡೆಗಟ್ಟಿದರು.

ರೂಟ್ 106 ಎಸೆತಗಳನ್ನೆದುರಿಸಿ ಒಂದು ಸಿಕ್ಸರ್, 11 ಬೌಂಡರಿಗಳಿದ್ದ 91 ರನ್ ಬಾರಿಸಿದರು. ಇದಕ್ಕೆ ಮೊದಲು, 12 ರನ್ ಹಿನ್ನಡೆಯೊಂದಿಗೆ ಎರಡನೇ ಇನಿಂಗ್ಸ್ ಆರಂಭಿಸಿದ ಇಂಗ್ಲೆಂಡ್ ತಂಡಕ್ಕೆ ಜಾಕ್ ಕ್ರಾಲಿ (73) ಮತ್ತು ಬೆನ್ ಡಕೆಟ್ (42) ಅವರು 17 ಓವರುಗಳಲ್ಲಿ 79 ರನ್ ಸೇರಿಸಿ ಉತ್ತಮ ಅಡಿಪಾಯ ಹಾಕಿಕೊಟ್ಟರು. ಹಾಲಿ ಸರಣಿಯಲ್ಲಿ ಮಿಂಚಿರುವ ಕ್ರಾಲಿ, 9 ಇನಿಂಗ್ಸ್‌ಗಳಿಂದ 480 ರನ್ ಕಲೆಹಾಕಿದ್ದಾರೆ.

ಮೂರನೇ ಕ್ರಮಾಂಕದಲ್ಲಿ ಆಡಿದ ನಾಯಕ ಬೆನ್ ಸ್ಟೋಕ್ಸ್ 42 ರನ್ ಹೊಡೆದು ಲಂಚ್ ನಂತರ ನಿರ್ಗಮಿಸಿದರು.

ಸ್ಕೋರುಗಳು: ಮೊದಲ ಇನಿಂಗ್ಸ್: ಇಂಗ್ಲೆಂಡ್: 283; ಆಸ್ಟ್ರೇಲಿಯಾ: 295; ಎರಡನೇ ಇನಿಂಗ್ಸ್: ಇಂಗ್ಲೆಂಡ್: 80 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 389 ((ಕ್ರಾಲಿ 73, ಡಕೆಟ್ 42, ಸ್ಟೋಕ್ಸ್ 42, ರೂಟ್ 91, ಬೇಸ್ಟೊ 78, ಮೊಯೀನ್ ಅಲಿ 29, ಮಿಚೆಲ್ ಸ್ಟಾರ್ಕ್ 94ಕ್ಕೆ 4, ಟಾಡ್ ಮರ್ಫಿ 110ಕ್ಕೆ 3)


ಜೋ ರೂಟ್ ಬ್ಯಾಟಿಂಗ್ ವೈಖರಿ – ಎಎಫ್‌ಪಿ ಚಿತ್ರ

ಆ್ಯಷಸ್ ಬಳಿಕ ನಿವೃತ್ತಿ: ಬ್ರಾಡ್

ಲಂಡನ್: ಆ್ಯಷಸ್ ಟೆಸ್ಟ್ ಸರಣಿಯ ಐದನೇ ಪಂದ್ಯದ ಬಳಿಕ ಕ್ರಿಕೆಟ್‌ನ ಎಲ್ಲ ಮಾದರಿಗಳಿಂದ ನಿವೃತ್ತಿಯಾಗುವುದಾಗಿ ಇಂಗ್ಲೆಂಡ್ ತಂಡದ ವೇಗದ ಬೌಲರ್ ಸ್ಟುವರ್ಟ್ ಬ್ರಾಡ್ ಹೇಳಿದ್ದಾರೆ.

'ಭಾನುವಾರ ಅಥವಾ ಸೋಮವಾರ ನನ್ನ ಕ್ರಿಕೆಟ್ ವೃತ್ತಿಜೀವನದ ಕಡೆಯ ದಿನ ಆಗಲಿದೆ' ಎಂದು ಬ್ರಾಡ್ ಹೇಳಿದರು.

ಇಟಲಿ ಮೇಲೆ ಗೆದ್ದ ಸ್ವೀಡನ್ ನಾಕೌಟ್‌ಗೆ

ವೆಲಿಂಗ್ಟನ್ (ಎಎಫ್‌ಪಿ): ಇಟಲಿ ತಂಡದ ಮೇಲೆ 5–0 ಗೋಲುಗಳ ದೊಡ್ಡ ಅಂತರದ ಜಯಗಳಿಸಿದ ಸ್ವೀಡನ್ ತಂಡದವರು ಮಹಿಳಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ಪ್ರಿ-ಕ್ವಾರ್ಟರ್‌ಫೈನಲ್‌ಗೆ ಲಗ್ಗೆಯಿಟ್ಟರು.

ಫ್ರಾನ್ಸ್ ತಂಡ ಬ್ರಿಸ್ಬೇನ್‌ನಲ್ಲಿ ಶನಿವಾರ ನಡೆದ 'ಎಫ್' ಗುಂಪಿನ ಬಲಿಷ್ಠ ತಂಡಗಳ ನಡುವಣ ಪಂದ್ಯದಲ್ಲಿ ಬ್ರೆಜಿಲ್ ತಂಡವನ್ನು 2–1 ಗೋಲುಗಳಿಂದ ಸೋಲಿಸಿ ನಾಕೌಟ್ ಹಂತದ ದಾರಿಯನ್ನು ಹೆಚ್ಚುಕಮ್ಮಿ ಸುಗಮಗೊಳಿಸಿತು.

ಮೂರನೇ ಕ್ರಮಾಂಕದ ಸ್ವೀಡನ್, 'ಜಿ' ಗುಂಪಿನಲ್ಲಿ ಇನ್ನೂ ಒಂದು ಪಂದ್ಯ ಉಳಿದಿರುವಂತೆ ನಾಕೌಟ್‌ಗೆ ಸ್ಥಾನ ಖಾತರಿಪಡಿಸಿದೆ. ಪ್ರಶಸ್ತಿಗೆ ನೆಚ್ಚಿನ ತಂಡವಾಗಿರುವ ಸ್ಪೇನ್, ಮಾಜಿ ಚಾಂಪಿಯನ್ ಜಪಾನ್ ತಂಡಗಳೂ ನಾಕೌಟ್‌ಗೆ ಮುನ್ನಡೆದಿವೆ. ಹೊಂದಾಣಿಕೆ ಮತ್ತು ಕರಾರುವಾಕ್ ಪಾಸ್‌ಗಳೊಡನೆ ಆಡಿದ ಸ್ವೀಡನ್ ಪೂರ್ವಾರ್ಧದ ಮೊದಲ 7 ನಿಮಿಷದಲ್ಲೇ 3 ಗೋಲುಗಳನ್ನು ಗಳಿಸಿದ್ದು, ಇಟಲಿಯನ್ನು ದಂಗುಬಡಿಸಿತು.

ಅಮಂಡಾ ಇಲೆಸ್ಟೆಡ್ 'ಹೆಡರ್' ಮೂಲಕ ಎರಡು ಗೋಲುಗಳನ್ನು ಗಳಿಸಿದರೆ, ಫಿಡ್ರೊಲಿನಾ ರೋಲ್ಫೊ, ಸ್ಟಿನಾ ಬ್ಲ್ಯಾಕ್‌ಸ್ಟಿನಿಯಸ್ ಮತ್ತು ರೆಬೆಕಾ ಬ್ಲೊಮ್‌ಕ್ವಿಸ್ಟ್ ಒಂದೊಂದು ಗೋಲುಗಳನ್ನು ಗಳಿಸಿದರು. ಸ್ವೀಡನ್ ಮೊದಲ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡದ ಮೇಲೆ 2–1 ರಿಂದ ಜಯಗಳಿಸಿತ್ತು. ಆದರೆ ಇಟಲಿ ತಂಡದ ಎದುರೇ ಸುಲಲಿತವಾಗಿ ಆಡಿತು.

ಫ್ರಾನ್ಸ್‌ಗೆ ಜಯ: ಸುಮಾರು 49,000 ಪ್ರೇಕ್ಷಕರೆದುರು ನಡೆದ ಪಂದ್ಯದಲ್ಲಿ ಫ್ರಾನ್ಸ್ ತಂಡ ಜಯಗಳಿಸಿ ನಿಟ್ಟುಸಿರಿಟ್ಟಿತು. ಮೊದಲ ಪಂದ್ಯದಲ್ಲಿ ಫ್ರಾನ್ಸ್, ಜಮೈಕಾ ವಿರುದ್ಧ ಗೋಲಿಲ್ಲದೇ ಡ್ರಾ ಮಾಡಿಕೊಂಡು ನಿರಾಸೆ ಅನುಭವಿಸಿತ್ತು. ಫ್ರಾನ್ಸ್ ಗುಂಪಿನಲ್ಲಿ ತನ್ನ ಕೊನೆಯ ಪಂದ್ಯವನ್ನು, ವಿಶ್ವಕಪ್‌ನಲ್ಲಿ ಮೊದಲ ಬಾರಿ ಪಾಲ್ಗೊಂಡಿರುವ ಪನಾಮಾ ವಿರುದ್ಧ ಆಡಲಿದೆ.

ಫ್ರಾನ್ಸ್ ತಂಡಕ್ಕೆ ಅನುಭವಿ ದಾಳಿಗಾರ್ತಿ ಯುಜೆನಿ ಲಿ ಸೊಮರ್ ಬೇಗನೇ ಲೀಡ್ ದೊರಕಿಸಿಕೊಟ್ಟರು. ಆದರೆ ದ್ವಿತೀಯಾರ್ಧದಲ್ಲಿ ಡೆಬಿನ್ಹಾ ಗೋಲು ಗಳಿಸಿದ್ದರಿಂದ ಬ್ರೆಜಿಲ್ 1–1 ಸಮಮಾಡಿಕೊಂಡಿತು. ಆದರೆ 83ನೇ ನಿಮಿಷ ಫ್ರಾನ್ಸ್ ನಾಯಕಿ ವೆಂಡೀ ರೆನಾರ್ಡ್ ಅವರು ಕಾರ್ನರ್ ಮೂಲಕ ಬಂದ ಚೆಂಡನ್ನು ಹೆಡ್ ಮಾಡಿ ಗೆಲುವಿನ ಗೋಲು ಗಳಿಸಿದರು.


ಇಟಲಿ ವಿರುದ್ಧ ಗೋಲು ಗಳಿಸಿದ ಸ್ವೀಡನ್ ತಂಡದ ಅಮಂಡಾ ಇಲೆಸ್ಟೆಡ್ (ಮಧ್ಯ) ಅವರು ಸಹ ಆಟಗಾರ್ತಿಯರ ಜತೆ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ಹಾಕಿ: ಕೆನರಾ ಬ್ಯಾಂಕ್ ತಂಡಕ್ಕೆ ಸುಲಭ ಜಯ

ಬೆಂಗಳೂರು: ಕೆನರಾ ಬ್ಯಾಂಕ್ ತಂಡವು 7ನೇ ಆವೃತ್ತಿಯ ಹಾಕಿ ಕರ್ನಾಟಕ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ ಕರ್ನಾಟಕ ರಾಜ್ಯ ಪೊಲೀಸ್ ತಂಡವನ್ನು 5–0 ಯಿಂದ ಮಣಿಸಿತು.

ಶನಿವಾರ ನಡೆದ ಪಂದ್ಯದಲ್ಲಿ ಎಂ.ಕೆ. ಚೇತನ್ (4, 50 ನಿ), ಜಿ.ಎನ್. ಪೃಥ್ವಿರಾಜ್ (36 ನಿ), ವರ್ಗಿಸ್ ಜಾನ್ (40 ನಿ) ಮತ್ತು ಯತೀಶ್ ಕುಮಾರ್ (58 ನಿ) ಗೋಲು ದಾಖಲಿಸಿದರು.

ವಿಶ್ವ ಯೂನಿವರ್ಸಿಟಿ ಗೇಮ್ಸ್: ಭಾರತಕ್ಕೆ 3 ಚಿನ್ನ

ನವದೆಹಲಿ (ಪಿಟಿಐ): ಚೀನಾದ ಚೆಂಗ್ಡುವಿನಲ್ಲಿ ನಡೆಯುತ್ತಿರುವ ವಿಶ್ವ ಯೂನಿವರ್ಸಿಟಿ ಗೇಮ್ಸ್‌ನಲ್ಲಿ ಭಾರತ ತಂಡ ಪದಕದ ಖಾತೆ ತೆರೆದಿದ್ದು, ಶನಿವಾರ ಮೂರು ಚಿನ್ನ ಹಾಗೂ ಒಂದು ಕಂಚು ಜಯಿಸಿದೆ.

ಒಲಿಂಪಿಯನ್ ಶೂಟರ್ ಇಳವೇನಿಲ್ ವಾಳರಿವನ್, ಮಹಿಳೆಯರ 10 ಮೀ. ಏರ್ ರೈಫಲ್ ವಿಭಾಗದಲ್ಲಿ ಚಿನ್ನ ಗೆದ್ದು, ಭಾರತಕ್ಕೆ ಮೊದಲ ಪದಕ ತಂದಿತ್ತರು. ಮನು ಭಾಕರ್ ಮಹಿಳೆಯರ 10 ಮೀ. ಏರ್ ಪಿಸ್ತೂಲ್ ವಿಭಾಗದಲ್ಲಿ ಚಿನ್ನ ಗೆದ್ದರು. ಮನು ಆ ಬಳಿಕ ಯಶಸ್ವಿನಿ ಸಿಂಗ್ ಮತ್ತು ಅಭಿಜ್ಞಾ ಅಶೋಕ್ ಪಾಟೀಲ್ ಅವರೊಂದಿಗೆ 10 ಮೀ. ಏರ್ ಪಿಸ್ತೂಲ್ ತಂಡ ವಿಭಾಗದಲ್ಲಿ ಚಿನ್ನ ಜಯಿಸಲು ನೆರವಾದರು.

ಭಾರತಕ್ಕೆ ಇನ್ನೊಂದು ಪದಕ ಜೂಡೊದಲ್ಲಿ ಲಭಿಸಿತು. ಯಾಮಿನಿ ಮೌರ್ಯ ಅವರು ಮಹಿಳೆಯರ 57 ಕೆ.ಜಿ. ವಿಭಾಗದಲ್ಲಿ ಕಂಚು ಜಯಿಸಿದರು.

ಭಾರತದ ಆರ್ಚರಿ ಸ್ಪರ್ಧಿಗಳು ಈ ಕೂಟದಲ್ಲಿ ಎಂಟು ಪದಕಗಳನ್ನು ಖಚಿತಪಡಿಸಿಕೊಂಡಿದ್ದಾರೆ

ವಿಶ್ವ ಈಜು ಚಾಂಪಿಯನ್‌ಷಿಪ್: ಕೇಟಿ ಎರಡು ವಿಶ್ವದಾಖಲೆ

ಫುಕೊವೊಕಾ (ಜಪಾನ್) (ಎಎಫ್‌ಪಿ/ಎಪಿ): ವಿಶ್ವದ ಶ್ರೇಷ್ಠ ಈಜುಗಾರ್ತಿ ಎಂಬ ಖ್ಯಾತಿಯನ್ನು ಸಾಬೀತುಪಡಿಸುವ ರೀತಿಯಲ್ಲಿ ಅಮೆರಿಕದ ಕೇಟಿ ಲೆಡೆಕಿ ಶನಿವಾರ ವಿಶ್ವ ಈಜು ಚಾಂಪಿಯನ್‌ಷಿಪ್‌ನ 800 ಮೀಟರ್ ಫ್ರೀಸ್ಟೈಲ್‌ನಲ್ಲಿ ಚಿನ್ನವನ್ನು ಗೆದ್ದರು. ಜೊತೆಗೆ ಎರಡು ದಾಖಲೆಗಳಿಗೂ ಅವರು ಒಡತಿಯಾದರು.

26 ವರ್ಷದ ಲೆಡೆಕಿ ಅವರು ವಿಶ್ವ ಚಾಂಪಿಯನ್‌ಷಿಪ್‌ಗಳಲ್ಲಿ ಒಂದೇ ಸ್ಪರ್ಧೆಯನ್ನು ಆರು ಬಾರಿ ಗೆದ್ದ ಮೊದಲ ಈಜುಗಾರ್ತಿ ಎಂಬ ಹೆಗ್ಗಳಿಕೆಗೆ ಪಾತ್ರವಾದರು. ಜತೆಗೆ ವೈಯಕ್ತಿಕ ವಿಭಾಗದಲ್ಲಿ 16ನೇ ಚಿನ್ನ ಗೆದ್ದು, ಅಮೆರಿಕದ ಮೈಕೆಲ್ ಫೆಲ್ಪ್ಸ್ ಅವರ ಹೆಸರಿನಲ್ಲಿದ್ದ ದಾಖಲೆಯನ್ನು ಮುರಿದರು. ಅವರು 8 ನಿಮಿಷ 8.87 ಸೆಕೆಂಡ್‌ನಲ್ಲಿ ಗುರಿಮುಟ್ಟಿದರೆ, ಚೀನಾದ ಲಿ ಬಿಂಗ್ಜಿ (8ನಿ.13.31ಸೆ), ಆಸ್ಟ್ರೇಲಿಯಾದ ಅರಿಯಾರ್ನೆ ಟಿಟ್ಮಸ್ (8ನಿ.13. 59ಸೆ) ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು.

ಸಾರಾ ವಿಶ್ವದಾಖಲೆ: ಸ್ವೀಡನ್‌ನ ಈಜುಗಾರ್ತಿ ಸಾರಾ ಸ್ಜೋಸ್ಟ್ರೋಮ್ ಅವರು 50 ಮೀಟರ್ ಫ್ರೀಸ್ಟೈಲ್‌ನಲ್ಲಿ ವಿಶ್ವದಾಖಲೆಯೊಂದಿಗೆ ಚಿನ್ನ ಗೆದ್ದರು.

ಸೆಮಿಫೈನಲ್ ಸುತ್ತಿನಲ್ಲಿ 23.61 ಸೆಕೆಂಡ್‌ನಲ್ಲಿ ಗುರಿ ಮುಟ್ಟಿ, 2017ರಲ್ಲಿ ತಾವೇ ಸ್ಥಾಪಿಸಿದ್ದ (23.67 ಸೆ) ದಾಖಲೆಯನ್ನು ಮುರಿದರು. ಅವರು ವಿಶ್ವ ಈಜು ಚಾಂಪಿಯನ್‌ಷಿಪ್‌ಗಳಲ್ಲಿ 11 ಚಿನ್ನ ಸೇರಿದಂತೆ 20 ವೈಯಕ್ತಿಕ ಪದಕ ಗೆದ್ದಿದ್ದಾರೆ.

ಸರಿಗಟ್ಟಿದ ದಾಖಲೆ: ಲಿಥುವೇನಿಯಾದ ರುತಾ ಮಿಲುಟೈಟ್ ಅವರು ಮಹಿಳೆಯರ 50 ಮೀ. ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ ಚಿನ್ನದ ಪದಕದೊಂದಿಗೆ ದಾಖಲೆ ಸರಿಗಟ್ಟಿದರು.

ಅವರು 29.30 ಸೆಕೆಂಡ್‌ನಲ್ಲಿ ಗುರಿಮುಟ್ಟಿ, 2021ರಲ್ಲಿ ಇಟಲಿಯ ಬೆನೆಡೆಟ್ಟಾ ಪಿಲಾಟೊ ಸ್ಥಾಪಿಸಿದ ವಿಶ್ವ-ದಾಖಲೆಯನ್ನು ಸರಿಗಟ್ಟಿದರು. ಅವರು ವಾರದ ಹಿಂದೆ 100 ಮೀ. ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ ಚಿನ್ನ ಗೆದ್ದಿದ್ದರು.


ಕೇಟಿ ಲೆಡೆಕಿ– ಎಎಫ್‌ಪಿ ಚಿತ್ರ

ಕುಬ್ಜರ ಕ್ರೀಡಾಕೂಟ; ತುಳಸೀಧರಗೆ ಚಿನ್ನ

ಹುಬ್ಬಳ್ಳಿ: ಜರ್ಮನಿಯಲ್ಲಿ ನಡೆಯುತ್ತಿರುವ ಕುಬ್ಜರ ಎಂಟನೇ ವಿಶ್ವ ಕ್ರೀಡಾಕೂಟದ ಮೊದಲ ದಿನವಾದ ಶನಿವಾರ ಭಾರತದ ಕ್ರೀಡಾಪಟುಗಳು ತಲಾ ಒಂದು ಚಿನ್ನ ಮತ್ತು ಬೆಳ್ಳಿ ಪದಕ ಗೆದ್ದರು

ಪವರ್‌ಲಿಫ್ಟಿಂಗ್ ಸ್ಪರ್ಧೆಯಲ್ಲಿ (75 ಕೆಜಿ ವಿಭಾಗ) 97.5 ಕೆ.ಜಿ ಭಾರ ಎತ್ತಿದ ಬೆಂಗಳೂರಿನ ತುಳಸೀಧರ ಜಿ.ಎಚ್ ಚಿನ್ನದ ಪದಕ ಮುಡಿಗೇರಿಸಿಕೊಂಡರು.

ಇದೇ ಸ್ಪರ್ಧೆಯ 45 ಕೆ.ಜಿ ವಿಭಾಗದಲ್ಲಿ ಕೋಲಾರ ಜಿಲ್ಲೆಯ ಕೆಜಿಎಫ್ ತಾಲ್ಲೂಕಿನ ಕದ್ರಿಪುರ ಗ್ರಾಮದ ನಾಗೇಶ್ ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು. ನಾಗೇಶ್ 68 ಕೆಜಿ ಭಾರ ಎತ್ತಿದರು.

ವಾಲಿಬಾಲ್ ಸ್ಪರ್ಧೆಯ ಲೀಗ್ ಹಂತದಲ್ಲಿ ಭಾರತ ಪುರುಷರ ತಂಡವು ನೆದರ್ಲೆಂಡ್ಸ್ ವಿರುದ್ಧ 2–0 ಯಿಂದ ಗೆಲುವು ಸಾಧಿಸಿತು. ಜರ್ಮನಿ ವಿರುದ್ಧ 0–2 ಮತ್ತು ಸ್ಪೇನ್ ಎದುರು 1–2 ರಿಂದ ಸೋಲನುಭವಿಸಿತು.

ಟಿಟಿ: ತನಿಷ್ಕಾ, ರೆಯಾನ್ಶ್‌ಗೆ ಪ್ರಶಸ್ತಿ

ಬೆಂಗಳೂರು: ರೆಯಾನ್ಶ್ ಜಲನ್ ಮತ್ತು ತನಿಷ್ಕಾ ಕಪಿಲ್ ಕಾಲಭೈರವ್ ಅವರು ಮಲ್ಲೇಶ್ವರದ ಕೆನರಾ ಯೂನಿಯನ್ ಆಶ್ರಯದಲ್ಲಿ ನಡೆಯುತ್ತಿರುವ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ 13 ವರ್ಷದೊಳಗಿನವರ ಬಾಲಕ ಮತ್ತು ಬಾಲಕಿಯರ ವಿಭಾಗದಲ್ಲಿ ಪ್ರಶಸ್ತಿ ಗೆದ್ದರು.

ಬಾಲಕರ ಫೈನಲ್ ಪಂದ್ಯದಲ್ಲಿ ರೆಯಾನ್ಶ್ ಅವರು ಅಮನ್ ಜಾರ್ಜ್ ಥಾಮಸ್ ಅವರನ್ನು 11-9, 11-7, 7-11, 11-6ರಿಂದ ಸೋಲಿಸಿದರು. ಸೆಮಿಯಲ್ಲಿ ಅಮನ್ ಅವರು ವೇದಾಂತ್ ವಶಿಷ್ಠ ಅವರನ್ನು ಮತ್ತು ರೆಯಾನ್ಶ್ ಅವರು ತಮೋಘ್ನರನ್ನು ಸೋಲಿಸಿದ್ದರು.

ಬಾಲಕಿಯರ ಫೈನಲ್ ಪಂದ್ಯದಲ್ಲಿ ತನಿಷ್ಕಾ ಅವರು ರಾಶಿ ವಿ.ರಾವ್ ಅವರನ್ನು 11-6, 11-5, 11-8 ರಿಂದ ಮಣಿಸಿದರು. ಸೆಮಿಫೈನಲ್‌ನಲ್ಲಿ ತನಿಷ್ಕಾ ಅವರು ಅದಿತಿ ಹೊರಟ್ಟಿ ಅವರನ್ನು ಮತ್ತು ರಾಶಿ ಅವರು ಐರಿನ್ ಅನ್ನಾ ಸುಭಾಷ್ ಅವರನ್ನು ಸೋಲಿಸಿದರು.

ಇನ್ನಷ್ಟು ಕ್ರೀಡಾ ಸುದ್ದಿಗಳು | 7